ಶನಿವಾರ, ಸೆಪ್ಟೆಂಬರ್ 30, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ಮುಂಬೈನಲ್ಲಿ ನಡೆದ 'ಥಾಂಕ್ಯು ಫಾರ್ ಕಮಿಂಗ್' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಟಿ ಸೋನಂ ಕಪೂರ್





BANGALORE CITY DISTRIBUTOR: Mercury Impex: 080-41499222, Rajesh: 7259035100, Balu: 8073243012, Raju Nayak: 9902040499, Roshan: 8123212509, Arjun: 9513985746, Paramesh: 9448536604
FOR TRADE & INSTITUTIONAL ENQUIRY CONTACT: Shyamlal: 9742277106, Abhishek: 8197683550, Vikram: 9844178000
BANGALORE RURAL DISTRICT DISTRIBUTOR: Subhash Distributors Limited: 9980723577, 9742277101, Venkatesh: 7259035093, Lambodhar: 9513442613, Narasappa: 9019023570
FOR TRADE & INSTITUTIONAL ENQUIRY CONTACT: Venkatesh (ASM): 7259035093

ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ನಾದ ನದಿಯಲ್ಲಿ ಮಹಿಳೆಯರ ಮೊಹರು



ಪ್ರಜಾವಾಣಿ@75 ಬಹು ಆಯಾಮಗಳ ಅಂಕಣ–ಒಳಾಂಗಣ
ಹೆಚ್ಚಿನ ಪಿಂಚಣಿ: ವೇತನದ ಮಾಹಿತಿ ಸಲ್ಲಿಕೆಗೆ ಡಿ.31ರವರೆಗೆ ಅವಕಾಶ 16
2029ರಿಂದ ಏಕಕಾಲಕ್ಕೆ ಚುನಾವಣೆ? 13

ಸೆನ್ಸೆಕ್ಸ್	ನಿಫ್ಟಿ	₹/$
65,828 ▲	19,638 ▲	83.13 ▲

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸ್ಪಂದನೆ • ಬೆಂಗಳೂರಿನಲ್ಲಿ ಯಶಸ್ವಿ

ಕಾವೇರಿ ಕಣಿವೆಯಲ್ಲಷ್ಟೇ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವುದನ್ನು ವಿರೋಧಿಸಿ ಕೊಡಗು ಹೊರತುಪಡಿಸಿ ಕಾವೇರಿ ಕಣಿವೆಯ ಜಿಲ್ಲೆಗಳಲ್ಲಿ ಶುಕ್ರವಾರ ಸಂಪೂರ್ಣ ಬಂದ್ ನಡೆಯಿತು. ರಾಜ್ಯದ ಬಹುತೇಕ ಭಾಗಗಳಲ್ಲಿ ಪ್ರತಿಭಟನೆ, ಮೆರವಣಿಗೆ ಮೂಲಕ ಬಂದ್‌ಗೆ ಸ್ಪಂದನೆ ವ್ಯಕ್ತವಾಯಿತು.

ಕಾವೇರಿ ಕಣಿವೆಯ ಜಿಲ್ಲೆಗಳು ಹಾಗೂ ರಾಜ್ಯ ರಾಜಧಾನಿಯ ಜನರು ಬಂದ್ ಕರೆಗೆ ಸಂಪೂರ್ಣ ಬೆಂಬಲ ನೀಡಿದರು. ಬಂದ್ ಬಹುತೇಕ ಶಾಂತಿಯುತವಾಗಿ ನಡೆದಿದ್ದು, ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ.

ಮಂಗಳವಾರವಷ್ಟೇ ಬೆಂಗಳೂರು, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಲ್ಲಿ ಬಂದ್ ನಡೆದಿತ್ತು. ಶುಕ್ರವಾರದ ಬಂದ್‌ಗೆ ಕನ್ನಡಪರ ಸಂಘಟನೆಗಳು, ರೈತ ಸಂಘಟನೆಗಳು, ಕಾರ್ಮಿಕ, ವಾಹನ ಚಾಲಕರ ಒಕ್ಕೂಟಗಳು ಸೇರಿದಂತೆ 200ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ನೀಡಿದ್ದವು. ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಕೂಡ ಬಂದ್‌ಗೆ ಸಂಪೂರ್ಣ ಬೆಂಬಲ ನೀಡಿದ್ದವು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಸೇರಿದಂತೆ ಕಾವೇರಿ ಕಣಿವೆಯ ಬಹುತೇಕ ಜಿಲ್ಲೆಗಳಲ್ಲಿ ವ್ಯಾಪಾರ ವಹಿವಾಟು, ವಾಹನ ಸಂಚಾರ ಸ್ತಬ್ಧ-ಗೊಂಡಿತ್ತು. ಕೊಡಗು ಜಿಲ್ಲೆಯಲ್ಲಿ ಮಾತ್ರ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ ಬಹುತೇಕ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದವು. ಈ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು, ವಾಹನ ಸಂಚಾರ ಮಾಮೂಲಿನಂತೆಯೇ ಇತ್ತು.

ರಾಜ್ಯ ರಾಜಧಾನಿಯಲ್ಲಿ ಬಿಎಂಟಿಸಿ ಬಸ್‌ಗಳ ಸಂಚಾರ ವಿರಳವಾಗಿತ್ತು. ಓಲಾ, ಉಬರ್ ಟ್ಯಾಕ್ಸಿಗಳ ಸೇವೆಯೂ ಇರಲಿಲ್ಲ. ಅತಿ ವಿರಳವಾಗಿ ಆಟೊಗಳು ಕಂಡುಬಂದವು. ಮೆಟ್ರೊ ಸೇವೆ ಎಂದಿನಂತಿತ್ತು. ಆದರೆ, ಮಧ್ಯಾಹ್ನದ-ವರೆಗೂ ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು. ನಗರದ ಬಹುತೇಕ ಅಂಗಡಿ, ಮುಂಗಟ್ಟುಗಳು, ಹೋಟೆಲ್‌ಗಳು, ಮಾರುಕಟ್ಟೆಗಳು ಇಡೀ ದಿನ ಬಂದ್ ಆಗಿದ್ದವು.

785 ಮಂದಿ ವಶಕ್ಕೆ: ಅನುಮತಿ ಪಡೆಯದೇ ಪುರಭವನದ ಆವರಣದಿಂದ ಪ್ರತಿಭಟನಾ ಮೆರವಣಿಗೆ ನಡೆಸಲು ಪ್ರಯತ್ನಿಸಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದರು. ಎಚ್ಚರಿಕೆ ಉಲ್ಲಂಘಿಸಿ ಪ್ರತಿಭಟನೆಗೆ ಮುಂದಾದ ಆರೋಪದ ಮೇಲೆ 785 ಮಂದಿಯನ್ನು ವಶಕ್ಕೆ ಪಡೆದಿದ್ದು, ನಂತರ ಬಿಡುಗಡೆ ಮಾಡಲಾಯಿತು.

ಸ್ವಾತಂತ್ರ್ಯ ಉದ್ಯಾನದ ಆವರಣದಲ್ಲಿ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಸಾವಿರಾರು ಮಂದಿ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಚಿತ್ರರಂಗದ ಬೆಂಬಲ: ಬಂದ್ ಕರೆಯನ್ನು ಬೆಂಬಲಿಸಿ ಕನ್ನಡ ಚಿತ್ರರಂಗದವರು ನಟ ಶಿವರಾಜ್ ಕುಮಾರ್ ನೇತೃತ್ವದಲ್ಲಿ ಶಿವಾನಂದ ವೃತ್ತದಲ್ಲಿರುವ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಬಳಿ ಬೃಹತ್ ಪ್ರತಿಭಟನೆ ನಡೆಸಿದರು. ಕನ್ನಡ ಚಿತ್ರರಂಗದ ಹಲವು ನಟರು, ನಿರ್ದೇಶಕರು, ನಿರ್ಮಾಪಕರು, ವಿತರಕರು, ತಂತ್ರಜ್ಞರು ಮತ್ತು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿ ಕಾವೇರಿ ಪರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

12ನೇ ಪುಟ ನೋಡಿ



ಕರ್ನಾಟಕ ಬಂದ್ ಪರಿಣಾಮ ಕುಂಬಳಗೋಡು ಬಳಿ ಬೆಂಗಳೂರು– ಮೈಸೂರು ಹೆದ್ದಾರಿಯ ಮೇಲ್ಸೇತುವೆಯಲ್ಲಿ ಶುಕ್ರವಾರ ವಾಹನ ಸಂಚಾರ ವಿರಳವಾಗಿತ್ತು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

‘ಇಂದೇ ಮರು ಪರಿಶೀಲನಾ ಅರ್ಜಿ ಸಲ್ಲಿಕೆ’

ಬೆಂಗಳೂರು: ‘ನಮ್ಮ ಜಲಾಶಯಗಳಲ್ಲಿ ನೀರು ಲಭ್ಯವಿಲ್ಲದ ಕಾರಣದಿಂದ ತಮಿಳುನಾಡಿಗೆ ನಿತ್ಯ ಮೂರು ಸಾವಿರ ಕ್ಯೂಸೆಕ್ ನೀರು ಹರಿಸಬೇಕೆಂಬ ಆದೇಶವನ್ನು ಮರು ಪರಿಶೀಲಿಸುವಂತೆ ಕೋರಿ ಸುಪ್ರೀಂ ಕೋರ್ಟ್ ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಗಳಿಗೆ ಶನಿವಾರವೇ ಅರ್ಜಿ ಸಲ್ಲಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಾವೇರಿ ನದಿ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಕುರಿತು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ರಾಜ್ಯದ ಮಾಜಿ ಅಡ್ವೊಕೇಟ್ ಜನರಲ್‌ಗಳ ಜತೆ ಶುಕ್ರವಾರ ಸಂಜೆ ಸಭೆ ನಡೆಸಿದ ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

‘ರಾಜ್ಯದ ಜಲಾಶಯಗಳಲ್ಲಿ ನೀರಿನ ಸಂಗ್ರಹವಿಲ್ಲದ ಕಾರಣಕ್ಕೆ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ ಎಂದು ಹಿಂದೆಯೇ ವಾದ ಮಂಡಿಸಲಾಗಿತ್ತು. ಆದರೆ, ಹಿಂಬಾಕಿ ಇರುವ ನೀರನ್ನು ಹರಿಸುವಂತೆ ಆದೇಶ ನೀಡಲಾಗಿದೆ. ಈಗ ನಮ್ಮ ಬಳಿ ನೀರು ಲಭ್ಯವಿಲ್ಲದ ಕಾರಣದಿಂದ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ ಎಂಬುದನ್ನು ಮರು ಪರಿಶೀಲನಾ ಅರ್ಜಿಯಲ್ಲಿ ಹೇಳುತ್ತೇವೆ. ಸಭೆಯಲ್ಲೂ ಇದೇ ಸಲಹೆ ಬಂದಿದೆ’ ಎಂದರು.

12ನೇ ಪುಟ ನೋಡಿ

ಸಮಿತಿ ಶಿಫಾರಸಿಗೆ ಪ್ರಾಧಿಕಾರ ಮಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಕರ್ನಾಟಕವು ಅಕ್ಟೋಬರ್ 15ರ ವರೆಗೆ ಪ್ರತಿದಿನ 3,000 ಕ್ಯೂಸೆಕ್ ಕಾವೇರಿ ನೀರು ಬಿಡಬೇಕೆಂದು ಕಾವೇರಿ ನೀರು ನಿಯಂತ್ರಣ ಸಮಿತಿ ಮಾಡಿರುವ ಶಿಫಾರಸನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಶುಕ್ರವಾರ ಎತ್ತಿ ಹಿಡಿದಿದೆ. ರಾಜ್ಯದ ಮನವಿ ಹಾಗೂ ವಾದಕ್ಕೆ ಪ್ರಾಧಿಕಾರ ಈ ಸಲವೂ ಮನ್ನಣೆ ನೀಡಿಲ್ಲ.

ಪ್ರಾಧಿಕಾರದ ಅಧ್ಯಕ್ಷ ಸೌಮಿತ್ರ ಕುಮಾರ್ ಹಲ್ದಾರ್ ಅಧ್ಯಕ್ಷತೆಯಲ್ಲಿ ನಡೆದ ಪ್ರಾಧಿಕಾರದ 25ನೇ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಜಲಸಂಪನ್ಮೂಲ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು. ಕಾವೇರಿ ನೀರು ಬಿಡುಗಡೆ ವಿಷಯಕ್ಕೆ ಸಂಬಂಧಿಸಿದಂತೆ ಉಭಯ ರಾಜ್ಯಗಳ ಅಧಿಕಾರಿಗಳ ನಡುವೆ ವಾಗ್ವಾದವೂ ನಡೆಯಿತು.

12ನೇ ಪುಟ ನೋಡಿ



‘ಭಾರತ ಜತೆ ಬಾಂಧವ್ಯ ಗಟ್ಟಿಗೊಳಿಸಲು ಬದ್ಧ’

ಟೊರಂಟೊ (ಪಿಟಿಐ): ಭಾರತವು ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿರುವ ದೇಶವಾಗಿದ್ದು, ಆ ದೇಶದ ಜೊತೆ ಉತ್ತಮ ಬಾಂಧವ್ಯ ಹೊಂದುವುದನ್ನು ಕೆನಡಾ ಗಂಭೀರವಾಗಿ ಪರಿಗಣಿಸಿದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಹೇಳಿದ್ದಾರೆ. 13

ಜೋಳದ ದರ ₹6,500ಕ್ಕೆ ಏರಿಕೆ 16

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆಯೋಗದ ವರದಿ ಸಲ್ಲಿಕೆಗೆ ಒಂದು ತಿಂಗಳಷ್ಟೇ ಬಾಕಿ

7ನೇ ವೇತನ ಆಯೋಗದ ಜತೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಕುರಿತು ಏಳನೇ ವೇತನ ಆಯೋಗದ ಅಧ್ಯಕ್ಷರು, ಸದಸ್ಯರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಚರ್ಚೆ ನಡೆಸಿದರು.

ಮಾಜಿ ಮುಖ್ಯ ಕಾರ್ಯದರ್ಶಿ ಕೆ.ಸುಧಾಕರ್ ರಾವ್ ನೇತೃತ್ವದ 7ನೇ ವೇತನ ಆಯೋಗವನ್ನು ನವೆಂಬರ್‌ನಲ್ಲಿ ರಚಿಸಲಾಗಿತ್ತು. ಅಂದು ಸರ್ಕಾರ ಹೊರಡಿಸಿದ್ದ ಆದೇಶದಂತೆ 6 ತಿಂಗಳ ಒಳಗೆ ಆಯೋಗ ತನ್ನ ವರದಿ ನೀಡಬೇಕಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಆಯೋಗದ ಅವಧಿಯನ್ನು ಮತ್ತೆ 6 ತಿಂಗಳು ವಿಸ್ತರಿಸಿತ್ತು.

ವರದಿ ಸಲ್ಲಿಕೆಗೆ ಒಂದು ತಿಂಗಳಷ್ಟೆ ಬಾಕಿ ಇದ್ದು, ಆಯೋಗ ತನ್ನ ಕಾರ್ಯವನ್ನೂ ಬಹುತೇಕ ಪೂರ್ಣಗೊಳಿಸಿದೆ. ಶಿಫಾರಸಿಗೂ ಮೊದಲು ಮುಖ್ಯಮಂತ್ರಿ ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳು ಆಯೋಗದ ಜತೆ ಸಮಾಲೋಚನೆ ನಡೆಸಿದ್ದಾರೆ.

ಗ್ಯಾರಂಟಿ ಯೋಜನೆಗಳಿಗೆ ಹಣಕಾಸು ಹೊಂದಾಣಿಕೆ ಮಾಡುವ ಸವಾಲು ಎದುರಿಸುತ್ತಿರುವ ಸರ್ಕಾರ, ತಕ್ಷಣಕ್ಕೆ ತನ್ನ ನೌಕರರ ವೇತನ ಪರಿಷ್ಕರಣೆ ಮಾಡಿದರೆ ಆಗಬಹುದಾದ ಆರ್ಥಿಕ ಹೊರೆಯನ್ನು ನಿಭಾಯಿಸುವ ಮಾರ್ಗಗಳನ್ನು ಚರ್ಚಿಸಲಾಯಿತು. ಮಧ್ಯಮಾವಧಿ ವಿತ್ತೀಯ ಯೋಜನೆ ಪ್ರಕಾರ ವೇತನ ಪರಿಷ್ಕರಣೆಗೆ ವಾರ್ಷಿಕ ₹ 12 ಸಾವಿರ ಕೋಟಿಯಿಂದ ₹ 18 ಸಾವಿರ ಕೋಟಿ ಅಗತ್ಯವಿದೆ. ಸದ್ಯದ ಪರಿಸ್ಥಿತಿಯಲ್ಲಿ ಹಣ ಹೊಂದಾಣಿಕೆ ಸಾಧ್ಯವಾಗದಿದ್ದರೆ ಮತ್ತೆ ಆರು ತಿಂಗಳು ಆಯೋಗದ ಅವಧಿ ವಿಸ್ತರಿಸುವ ಕುರಿತೂ ಚಿಂತನೆ ನಡೆದವು ಎಂದು ಮೂಲಗಳು ತಿಳಿಸಿವೆ.

ಆಯೋಗದ ಸದಸ್ಯ ಪಿ.ಬಿ. ರಾಮಮೂರ್ತಿ, ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಮಾಜಿ ಪ್ರಧಾನ ನಿರ್ದೇಶಕ ಶ್ರೀಕಾಂತ್ ಬಿ. ವನಹಳ್ಳಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್. ಕೆ.ಅತೀಕ್, ಕಾರ್ಯದರ್ಶಿಗಳಾದ ಪಿ.ಸಿ. ಜಾಫರ್, ಎಂ.ಟಿ. ರೇಜು ಇದ್ದರು.


ಆಸ್ತಿ ನೋಂದಣಿ: 17 ಗಂಟೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿಗಳ ಪರಿಷ್ಕೃತ ಮಾರ್ಗಸೂಚಿ ದರಗಳು ಅ.1ರಿಂದ ಜಾರಿಯಾಗುತ್ತಿದ್ದು, ಹಳೆಯ ದರಗಳಲ್ಲಿ ನಡೆಯುತ್ತಿದ್ದ ನೋಂದಣಿ ಪ್ರಕ್ರಿಯೆ ಶನಿವಾರ ಮಧ್ಯಾಹ್ನ 12ಕ್ಕೆ ಕೊನೆಗೊಳ್ಳಲಿದೆ.

ಹೊಸದಾಗಿ ಸಿದ್ಧಪಡಿಸಿರುವ ಮಾನದಂಡಗಳ ಆಧಾರದಲ್ಲಿ ಶೇ 5ರಿಂದ ಶೇ 70ರವರೆಗೂ ಸ್ಥಿರಾಸ್ತಿಗಳ ಮೌಲ್ಯದಲ್ಲಿ ಹೆಚ್ಚಳವಾಗುತ್ತಿದ್ದು, ಹೊಸ ದರಕ್ಕೆ ವ್ಯವಸ್ಥೆ ಬದಲಾವಣೆಗೊಳ್ಳಬೇಕಿರುವ ಕಾರಣ ಸೆ.30ರಂದು ಮಧ್ಯಾಹ್ನ 12ಕ್ಕೆ ಪೋರ್ಟಲ್ ಸ್ಥಗಿತಗೊಳ್ಳಲಿದೆ. ಮತ್ತೆ ಅ.1ರಂದು ಬೆಳಿಗ್ಗೆ 5ರಿಂದ ಆರಂಭವಾಗಲಿದೆ. 17 ಗಂಟೆಗಳ ಈ ಅವಧಿಯಲ್ಲಿ ನೋಂದಣಿಯ ಯಾವುದೇ ಹೊಸ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿಲ್ಲ.

ಈಗಾಗಲೇ ಉಪ ನೋಂದಣಾಧಿಕಾರಿ ಪರಿಶೀಲನೆ ಮಾಡಿದ ಎಲ್ಲ ಅರ್ಜಿಗಳ ಪಾವತಿಯನ್ನೂ ಗ್ರಾಹಕರು ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಅರ್ಜಿಯನ್ನು ಮರು ಮೌಲ್ಯಮಾಪನಕ್ಕಾಗಿ ಉಪ ನೋಂದಣಾಧಿಕಾರಿಗೆ ಹಿಂದಿರುಗಿಸಲಾಗುತ್ತದೆ. ಹಳೇ ದರ ಪಾವತಿಸಿದವರು, ಹೊಸ ದರದ ವ್ಯತ್ಯಾಸದ ಮೊತ್ತವನ್ನು ಮತ್ತೊಮ್ಮೆ ತುಂಬಬೇಕು. ಸೆ.30ರ ನಂತರ ನೋಂದಾಯಿಸುವ ಯಾವುದೇ ದಾಸ್ತಾವೇಜುಗಳಿಗೆ ಹೊಸ ಮಾರ್ಗ ಸೂಚಿ ದರ ಅನ್ವಯವಾಗುತ್ತದೆ ಎಂದು ನೋಂದಣಿ ಮಹಾಪರಿವೀಕ್ಷಕಿ ಮತ್ತು ಮುದ್ರಾಂಕಗಳ ಆಯುಕ್ತೆ ಬಿ.ಆರ್. ಮಮತಾ ಹೇಳಿದ್ದಾರೆ.



41 ವಿ.ವಿ.: ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣರದ್ದೇ ಪ್ರಾಬಲ್ಯ

ಕುಲಪತಿ: ಪ್ರಬಲ ಜಾತಿಯವರ ಪಾರುಪತ್ಯ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯ ಸರ್ಕಾರದ ಅಧೀನದಲ್ಲಿರುವ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕಾತಿಯಲ್ಲಿ ಪ್ರಬಲ ಜಾತಿಯವರೇ ಹೆಚ್ಚಿನ ಪ್ರಾತಿನಿಧ್ಯ ಪಡೆದುಕೊಂಡಿದ್ದಾರೆ.

ರಾಜ್ಯದ 41 ವಿಶ್ವವಿದ್ಯಾಲಯಗಳ ಕುಲಪತಿಗಳ ಜಾತಿವಾರು ವಿವರಗಳನ್ನು ಒಳಗೊಂಡ ದಾಖಲೆ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಲಿಂಗಾಯತ, ಒಕ್ಕಲಿಗ ಹಾಗೂ ಬ್ರಾಹ್ಮಣ/ಸಾಮಾನ್ಯ ಸಮುದಾಯದವರೇ ಅಧಿಕ ಸಂಖ್ಯೆಯಲ್ಲಿ ಅವಕಾಶ ಪಡೆದಿದ್ದಾರೆ. ಹಾಗಾಗಿ, ಮುಂದಿನ ನೇಮಕಾತಿಗಳಲ್ಲಿ ಅವಕಾಶ ವಂಚಿತ ಸಮುದಾಯದ ಪ್ರಾಧ್ಯಾಪಕರಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ ಎಂದು ಗೊತ್ತಾಗಿದೆ.

ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ 32 ಸೇರಿದಂತೆ ರಾಜ್ಯದ 41 ವಿಶ್ವವಿದ್ಯಾಲಯಗಳಲ್ಲಿ ನಾಲ್ಕು ವಿಶ್ವವಿದ್ಯಾಲಯಗಳ ಕುಲಪತಿ ಸ್ಥಾನ ಖಾಲಿ ಇವೆ. ಹಾಲಿ ಇರುವ 37ರಲ್ಲಿ ಲಿಂಗಾಯತ, ಒಕ್ಕಲಿಗ ಹಾಗೂ ಬ್ರಾಹ್ಮಣ/ಸಾಮಾನ್ಯ ಸಮುದಾಯದ 25 ಕುಲಪತಿಗಳು, ಪರಿಶಿಷ್ಟರೂ ಸೇರಿದಂತೆ ರಾಜ್ಯದ ಇತರೆ ಎಲ್ಲ ಜಾತಿಗಳೂ ಸೇರಿ 12 ಕುಲಪತಿಗಳು ಇದ್ದಾರೆ. ನಾಲ್ಕು ವಿಶ್ವವಿದ್ಯಾಲಯಗಳಲ್ಲೂ ಕುಲಪತಿ ಹುದ್ದೆಗಳು ಖಾಲಿಯಾಗುವ ಮೊದಲು ಅದೇ ಮೂರು ಜಾತಿಗಳಿಗೆ ಸೇರಿದವರೇ ಕುಲಪತಿಗಳಾಗಿದ್ದರು.

ಪ್ರಜಾವಾಣಿ ವಿಶೇಷ

ಮುಸ್ಲಿಂ, ಕ್ರಿಶ್ಚಿಯನ್ನರಿಗಿಲ್ಲ ಒಂದೂ ಸ್ಥಾನ

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಸಮುದಾಯದ ಒಬ್ಬರಿಗೂ ಕುಲಪತಿ ಸ್ಥಾನ ದೊರೆತಿಲ್ಲ.

ರಾಜ್ಯದಲ್ಲಿ ಖಾಲಿ ಇರುವ ನಾಲ್ಕು ವಿಶ್ವವಿದ್ಯಾಲಯಗಳಲ್ಲಿ ಒಂದು ಸ್ಥಾನವನ್ನಾದರೂ ಸಮುದಾಯಕ್ಕೆ ನೀಡಬೇಕು ಎಂದು ಮುಸ್ಲಿಂ ಮುಖಂಡರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಹಿಂದೆ ಪರಿಶಿಷ್ಟರು, ಹಿಂದುಳಿದ ವರ್ಗದ ಪ್ರಾಧ್ಯಾಪಕರ ಕೊರತೆ ಇತ್ತು. ಈಗ ಸಾಕಷ್ಟು ಜನರು ಯುಜಿಸಿ ನಿಯಮಗಳಂತೆ ಅರ್ಹರಿದ್ದಾರೆ. ಸರ್ಕಾರ ಪರಿಗಣಿಸಬೇಕು

ಜೋಗನ್ ಶಂಕರ್, ವಿಶ್ರಾಂತ ಕುಲಪತಿ

ಕುಲಪತಿ ಹುದ್ದೆಗಳಲ್ಲೂ ಸಾಮಾಜಿಕ ನ್ಯಾಯ ಅನುಸರಣೆಗೆ ನಿಯಮ ರೂಪಿಸಬೇಕು. ರೋಸ್ಟರ್ ಪದ್ಧತಿ ಅಳವಡಿಸಿ ಎಲ್ಲ ಸಮುದಾಯಗಳಿಗೂ ಆದ್ಯತೆ ಕೊಡಬೇಕು

ಪಿ.ವಿ.ವೆಂಕಟರಾಮಯ್ಯ, ವಿಶ್ರಾಂತ ಕುಲಪತಿ

ಒಬಿಸಿ, ಪರಿಶಿಷ್ಟ ಜಾತಿ, ಪಂಗಡ ಹಾಗೂ ಮುಸ್ಲಿಂ ಸೇರಿದಂತೆ ತಳ ಸಮುದಾಯಗಳಿಗೆ ಕುಲಪತಿಗಳ ನೇಮಕಾತಿಯಲ್ಲಿ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ. ಈ ಸಮುದಾಯಗಳಿಗೆ ಪ್ರಾತಿನಿಧ್ಯ ಸಿಗಬೇಕು ಎಂಬ ಬೇಡಿಕೆಯೂ ಇದೆ.

12ನೇ ಪುಟ ನೋಡಿ



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಎಂ.ಎಸ್.ಸ್ವಾಮಿನಾಥನ್ ಅವರ ಭಾವಚಿತ್ರಕ್ಕೆ ಕುಲಪತಿ ಎಸ್.ವಿ.ಸುರೇಶ ಅವರು ಪುಷ್ಪ ನಮನ ಸಲ್ಲಿಸಿದರು.

‘ಆಹಾರ ಭದ್ರತೆಗೆ ಆದ್ಯತೆ ನೀಡಿದ್ದ ಸ್ವಾಮಿನಾಥನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘60 -70ರ ದಶಕದಲ್ಲಿ ದೇಶವು ಆಹಾರ ಬಿಕ್ಕಟ್ಟಿಗೆ ಸಿಲುಕಿದ್ದಾಗ ಹಸಿರು ಕ್ರಾಂತಿ ಮೂಲಕ ಆಹಾರ ಭದ್ರತೆ ನೀಡಿ ದೇಶದಲ್ಲಿ ಕೃಷಿ ಕ್ಷೇತ್ರದ ದೆಸೆಯನ್ನೇ ಬದಲಿಸಿದ ಹಸಿರುಕ್ರಾಂತಿ ಹರಿಕಾರ ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿ. ಸುರೇಶ ಹೇಳಿದರು.

ವಿ.ವಿಯಲ್ಲಿ ಶುಕ್ರವಾರ ಆಯೋಜಿಸಿದ್ದ ದಿವಂಗತ ಎಂ.ಎಸ್. ಸ್ವಾಮಿನಾಥನ್ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಚೆನ್ನೈನಲ್ಲಿ ಶ್ರೀಮಂತ ಕುಟುಂಬದಲ್ಲಿ ಸ್ವಾಮಿನಾಥನ್ ಜನಿಸಿದ್ದವರು. ಭೂದಾನ ಚಳವಳಿಯಿಂದ ಪ್ರೇರಣೆಗೊಂಡು ತಮ್ಮ 200 ಎಕರೆ ಜಮೀನಿನಲ್ಲಿ ಶೇ 75ರಷ್ಟು ಜಮೀನನ್ನು ರೈತರಿಗೆ ದಾನ ಮಾಡಿದ್ದರು’ ಎಂದು ನೆನಪಿಸಿಕೊಂಡರು.

‘ಆಹಾರ ಧಾನ್ಯ ಆಮದು ಮಾಡಿಕೊಳ್ಳುವುದೆಂದರೆ ವಿದೇಶಿ ರೈತರನ್ನು ಶ್ರೀಮಂತರನ್ನಾಗಿಸುವ ಕೆಲಸ ಎಂದು ಎಚ್ಚರಿಸಿದ್ದರು. 60ರ ದಶಕದಲ್ಲೇ ಹೆಚ್ಚು ಇಳುವರಿ ನೀಡುವ ಗೋಧಿ ಮತ್ತು ಭತ್ತದ ತಳಿಗಳ ಆವಿಷ್ಕಾರದ ಕಾರಣಕರ್ತರಾಗಿ ಆಹಾರ ಭದ್ರತೆಗೆ ನಾಂದಿ ಹಾಡಿದ್ದರು’ ಎಂದು ಸ್ಮರಿಸಿದರು.

‘2013ರಲ್ಲಿ ನಡೆದ ಕೃಷಿ ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಸ್ವಾಮಿನಾಥನ್ ಭಾಗವಹಿಸಿ ಕೃಷಿ ವಿಶ್ವವಿದ್ಯಾಲಯ ಕಾರ್ಯ ಚಟುವಟಿಕೆ ಶ್ಲಾಘಿಸಿದ್ದರು’ ಎಂದು ಹೇಳಿದರು.

ಅಧಿಸೂಚನೆಯ ನಂತರ ವಾರ್ಡ್‌ನಲ್ಲಿ ಕೆಲಸ ಶುರು: ಆಕಾಂಕ್ಷಿಗಳ ನಿರ್ಧಾರ

ಚುನಾವಣೆ: ಹೆಚ್ಚಿದ ಗೊಂದಲ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ಚುನಾವಣೆ ನಡೆಯುತ್ತದೆಯೇ? ಎರಡು ವರ್ಷಗಳಿಂದ ಆಗಾಗ್ಗೆ ಹೆಚ್ಚು ಕೇಳಲಾಗುವ ಈ ಪ್ರಶ್ನೆಗೆ ಇಂದಿಗೂ ಸ್ಪಷ್ಟ ಉತ್ತರ ಸಿಕ್ಕಿಲ್ಲ. 243 ವಾರ್ಡ್‌ಗಳನ್ನು 225ಕ್ಕೆ ಇಳಿಸಿ ಅಂತಿಮ ಅಧಿಸೂಚನೆ ಹೊರಡಿಸಿದ್ದರೂ ಗೊಂದಲ ಮತ್ತಷ್ಟು ಹೆಚ್ಚಾಗಿದೆ.

ಕಾಂಗ್ರೆಸ್– ಬಿಜೆಪಿ ಸೇರಿದಂತೆ ಕಾರ್ಪೊರೇಟರ್ ಆಕಾಂಕ್ಷಿಯಾಗಿರುವವರು ‘ಚುನಾವಣೆ ನಡೆಯುವ ಬಗ್ಗೆ ಫಿಫ್ಟಿ–ಫಿಫ್ಟಿ ಚಾನ್ಸ್ ಮಾತ್ರ ಇದೆ. ಮೊದಲು ವಿಧಾನಸಭೆ ಚುನಾವಣೆ ಎನ್ನಲಾಗುತ್ತಿತ್ತು. ಈಗ, ಲೋಕಸಭೆ ಚುನಾವಣೆ ಮುಗಿದ ಮೇಲೆ ಬಿಬಿಎಂಪಿ ಚುನಾವಣೆ ನಡೆಯಬಹುದು’ ಎನ್ನುತ್ತಿದ್ದಾರೆ.

ಕಳೆದ ಬಾರಿ 243 ವಾರ್ಡ್‌ಗಳಿಗೆ ಚುನಾವಣೆ ನಡೆಯುತ್ತದೆ ಎಂದು ಆಕಾಂಕ್ಷಿಗಳು ಸಾಕಷ್ಟು ಕೆಲಸಗಳನ್ನು, ವೆಚ್ಚಗಳನ್ನು ತಮ್ಮ ವ್ಯಾಪ್ತಿಯಲ್ಲಿ ಮಾಡಿದ್ದರು. ಆದರೆ, ‘ಈ ಬಾರಿ ಅಂತಹ ಸಾಹಸ ಮಾಡುವುದಿಲ್ಲ’ ಎಂಬುದು ಅವರ ಸ್ಪಷ್ಟ ಮಾತು.

‘ಚುನಾವಣೆ ನಡೆಯುವ ಬಗ್ಗೆ ಚುನಾವಣೆ ಆಯೋಗ ಅಧಿಸೂಚನೆ ಹೊರಡಿಸಿದ ಮೇಲೆ ವಾರ್ಡ್ ವ್ಯಾಪ್ತಿಯಲ್ಲಿ ಕೆಲಸ ಆರಂಭಿಸುತ್ತೇವೆ. ಅಲ್ಲಿಯವರೆಗೆ ನಮಗೆ ಯಾರ ಮೇಲೂ ನಂಬಿಕೆ ಇಲ್ಲ. ಬಿಬಿಎಂಪಿ ಚುನಾವಣೆಯನ್ನು ಮುಂದೂಡುವಲ್ಲಿ ನಗರದ ಎಲ್ಲ ಶಾಸಕರೂ ಒಂದಾಗಿಯೇ ಇರುತ್ತಾರೆ. ಒಂದಿಬ್ಬರನ್ನು ಬಿಟ್ಟರೆ ಉಳಿದ ಯಾವ ಶಾಸಕರಿಗೂ ಪಾಲಿಕೆ ಚುನಾವಣೆ ಸದ್ಯಕ್ಕೆ ಬೇಕಾಗಿಲ್ಲ’ ಎಂದು ಆಕಾಂಕ್ಷಿಗಳು ಹೇಳುತ್ತಾರೆ.

ವಾರ್ಡ್ ಗಡಿ ಗೊಂದಲ: ಬಿಜೆಪಿ ಅಧಿಕಾರದಲ್ಲಿದ್ದಾಗ ರಚಿಸಿದ್ದ 243 ವಾರ್ಡ್‌ಗಳನ್ನು ರದ್ದುಪಡಿಸಿ, 225 ವಾರ್ಡ್‌ಗಳನ್ನು ಕಾಂಗ್ರೆಸ್ ಸರ್ಕಾರ ಅಧಿಸೂಚಿಸಿದೆ. ‘ಕಾಂಗ್ರೆಸ್‌ನ ಆಕಾಂಕ್ಷಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಗಡಿಗಳನ್ನು ಬದಲಾಯಿಸಲಾಗಿದೆ’ ಎಂಬುದು ಬಿಜೆಪಿ ದೂರು. ‘ಈ ಹಿಂದೆ ನೀವು ಮಾಡಿಕೊಂಡಿದ್ದೂ ಅದೇ ಅಲ್ಲವೇ’ ಎಂಬುದು ಕಾಂಗ್ರೆಸ್ ಪ್ರಶ್ನೆ. ಹೀಗಾಗಿ, ಈ ಗಡಿ ಗೊಂದಲ ಮತ್ತೆ ನ್ಯಾಯಾಲಯದ ಮೆಟ್ಟಿಲೇರುವ ಸಂಭವವೇ ಹೆಚ್ಚಿದೆ.

ಮೀಸಲಾತಿ ಮತ್ತೆ ಗೊಂದಲ: ಬಿಬಿಎಂಪಿ ವ್ಯಾಪ್ತಿಯ 225 ವಾರ್ಡ್‌ಗಳ ಮೀಸಲಾತಿಯನ್ನು 10 ವರ್ಗಗಳಿಗೆ ನೀಡಬೇಕು. ಶೇ 24.10ರಷ್ಟು (54–55 ವಾರ್ಡ್) ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ, ಶೇ 34.17ರಷ್ಟು (77 ವಾರ್ಡ್) ಹಿಂದುಳಿದ ವರ್ಗ–ಎ ಪ್ರವರ್ಗ (ಬಿಸಿಎ) ಹಾಗೂ 11 ವಾರ್ಡ್‌ಗಳನ್ನು ಹಿಂದುಳಿದ ವರ್ಗ– ಬಿ ಪ್ರವರ್ಗಕ್ಕೆ ಮೀಸಲಿಡಬೇಕಾಗುತ್ತದೆ.

‘ವಾರ್ಡ್ ಮೀಸಲಾತಿಯನ್ನು ಅಂತಿಮಗೊಳಿಸಿ, ಅಧಿಸೂಚಿಸಬೇಕಿದೆ. ಇದನ್ನು ಸರ್ಕಾರ ನ್ಯಾಯಾಲಯಕ್ಕೆ ಸಲ್ಲಿಸುವ ಸಂದರ್ಭದಲ್ಲಿ ಅದನ್ನು ಪ್ರಮಾಣೀಕರಿಸಿ ನೀಡಬೇಕಾಗುತ್ತದೆ. ಈ ಜಾತಿಗಳು, ಉಪ ಪಂಗಡಗಳ ಬಗ್ಗೆ ತಯಾರಿಸಿರುವ ಜಾತಿ ವರದಿಯನ್ನು ಸರ್ಕಾರವೇ ಇನ್ನೂ ಒಪ್ಪಿಕೊಂಡಿಲ್ಲ. ಅದನ್ನು ಸಚಿವ ಸಂಪುಟದಲ್ಲಿ ಒಪ್ಪಿಕೊಂಡು, ನಂತರ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಅದನ್ನು ನ್ಯಾಯಾಲಯ ಒಪ್ಪಿಕೊಳ್ಳಬೇಕು. ಈ ಪ್ರಕ್ರಿಯೆಯೇ ತಿಂಗಳುಗಟ್ಟಲೆ ನಡೆಯುತ್ತದೆ’ ಎಂದು ತಜ್ಞರು ಹೇಳುತ್ತಾರೆ.

‘ಹಿಂದುಳಿದ ವರ್ಗಗಳಿಗೆ ಸೇರಿದ ಜಾತಿಗಳನ್ನು ಅಧಿಸೂಚಿಸಿ ಅದನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕಿದೆ. ಕರ್ನಾಟಕ ಸೇರಿದಂತೆ 17 ರಾಜ್ಯಗಳು ಇನ್ನೂ ಈ ವರದಿಯನ್ನು ಸಲ್ಲಿಸಿಲ್ಲ. ಕೇಂದ್ರ ಸಚಿವ ಸಂಪುಟ ಅದನ್ನು ಸ್ಥಿರೀಕರಿಸಿದ ಮೇಲೆ, ರಾಷ್ಟ್ರಪತಿಯವರು ಅಂಕಿತ ಹಾಕಬೇಕು. ಆಗಷ್ಟೇ ಗೊಂದಲ ಪರಿಹಾರವಾಗಲಿದೆ’ ಎಂದು ಮಾಹಿತಿ ನೀಡಿದರು.

ಡಿಸೆಂಬರ್ 13ರ ಗಡುವು!

ಲೋಕಸಭೆ ಚುನಾವಣೆ ನಡೆಯುವ ಆರು ತಿಂಗಳಿಗೆ ಮುನ್ನ ಹಾಗೂ ನಂತರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುವಂತಿಲ್ಲ ಎಂಬ ನಿಯಮವಿದೆ. ಹೀಗಾಗಿ, ಡಿಸೆಂಬರ್ 13ರೊಳಗೆ ಬಿಬಿಎಂಪಿ ಚುನಾವಣೆ ನಡೆದು, ಫಲಿತಾಂಶ ಪ್ರಕಟವಾಗಬೇಕಿದೆ.

‘ವಾರ್ಡ್ ವಿಂಗಡಣೆ, ಮೀಸಲಾತಿ ಬಗ್ಗೆ ಅವರು ಕೋರ್ಟ್‌ಗೆ ಹೋಗಬಹುದು’ ಎಂದು ಕಾಂಗ್ರೆಸ್– ಬಿಜೆಪಿ ಮುಖಂಡರು ಪರಸ್ಪರ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ.

‘2 ವಾರದಲ್ಲಿ ಮೀಸಲಾತಿ ಅಂತಿಮ’

‘ಬಿಬಿಎಂಪಿ ಚುನಾವಣೆಯನ್ನು ಡಿಸೆಂಬರ್ ಮೊದಲ ವಾರದೊಳಗೆ ನಡೆಸಲು ಸರ್ಕಾರ ಸಿದ್ಧವಿದೆ. ವಾರ್ಡ್‌ಗಳ ಮೀಸಲಾತಿಯನ್ನು ಇನ್ನೆರಡು ವಾರದಲ್ಲಿ ಅಂತಿಮಗೊಳಿಸಲಾಗುತ್ತದೆ. ಸರ್ಕಾರ ಸಾಕಷ್ಟು ಸೌಲಭ್ಯ ಹಾಗೂ ‘ಭಾಗ್ಯಗಳನ್ನು’ ಜನರಿಗೆ ನೀಡಿದೆ. ಅದರ ಫಲವನ್ನು ನಾವು ಪಡೆದುಕೊಂಡು ಬಿಬಿಎಂಪಿಯಲ್ಲಿ ಅಧಿಕಾರಕ್ಕೇರಲಿದ್ದೇವೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿ 2 ನಿಮಿಷ

ಸೀಳು ತುಟಿ: ಉಚಿತ ಶಸ್ತ್ರಚಿಕಿತ್ಸೆ

ಬೆಂಗಳೂರು: ವೈಟ್‌ಫೀಲ್ಡ್‌ನಲ್ಲಿರುವ ಕಿಂಡರ್ ಆಸ್ಪತ್ರೆಯು ನೂರಕ್ಕೂ ಅಧಿಕ ಮಕ್ಕಳಿಗೆ ಉಚಿತವಾಗಿ ಸೀಳು ತುಟಿ ಶಸ್ತ್ರ ಚಿಕಿತ್ಸೆ ನಡೆಸುವುದಾಗಿ ಪ್ರಕಟಿಸಿದೆ.

ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಿಂಡರ್ ಸಮೂಹದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಂಜಿತ್ ಕೃಷ್ಣನ್, ‘ಆಪರೇಷನ್ ಸ್ಮೈಲ್ ಮತ್ತು ಇಂಗಾ ಹೆಲ್ತ್ ಫೌಂಡೇಶನ್‌ನ ಸಹಯೋಗದಲ್ಲಿ ಈ ಕಾರ್ಯ ಹಮ್ಮಿಕೊಳ್ಳಲಾಗಿದೆ. ‘ದಿ ಫ್ಯೂಚರ್ ಆಫ್ ಸ್ಮೈಲ್ಸ್ ಮಿಷನ್’ ಅಡಿ ಶಸ್ತ್ರಚಿಕಿತ್ಸೆಗಳನ್ನು ನಡೆಸಿ, ಮಕ್ಕಳಲ್ಲಿ ಮಂದಹಾಸ ಮೂಡಿಸಲಾಗುತ್ತದೆ. ಅರ್ಹ ಮಕ್ಕಳು ಅ.7 ಮತ್ತು ಅ.8ರಂದು ಕಿಂಡರ್ ಆಸ್ಪತ್ರೆಯಲ್ಲಿ ನೋಂದಣಿ ಮಾಡಿಕೊಳ್ಳಬೇಕು’ ಎಂದು ಹೇಳಿದರು.

‘ಶಸ್ತ್ರಚಿಕಿತ್ಸೆ, ಸ್ಪೀಚ್ ಥೆರಪಿ, ಔಷಧ ಎಲ್ಲವೂ ಸಂಪೂರ್ಣ ಉಚಿತವಾಗಿ ಇರಲಿದೆ. ಅ.15ರವರೆಗೆ ಈ ಮಿಷನ್ ಅಡಿ ನೂರಕ್ಕೂ ಹೆಚ್ಚು ಮಕ್ಕಳಿಗೆ ಉಚಿತ ಸೀಳು ತುಟಿ ಶಸ್ತ್ರ ಚಿಕಿತ್ಸೆ ನಡೆಸಲಾಗುತ್ತದೆ. ಆರ್ಥಿಕವಾಗಿ ದುರ್ಬಲವಾಗಿರುವ ಮಕ್ಕಳಿಗೆ ನೆರವಾಗುವುದು ಈ ಯೋಜನೆಯ ಉದ್ದೇಶ’ ಎಂದರು.

ಆಪರೇಷನ್ ಸ್ಮೈಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಭಿಷೇಕ್ ಸೇನ್ ಗುಪ್ತ, ‘ಆಸ್ಪತ್ರೆ ಜತೆಗಿನ ಈ ಸಹಯೋಗದಡಿ ತಜ್ಞ ವೈದ್ಯರ ತಂಡವನ್ನು ರೂಪಿಸಲಾಗಿದೆ. ಶಸ್ತ್ರಚಿಕಿತ್ಸಕರು, ಅರಿವಳಿಕೆ ತಜ್ಞರು, ಮಕ್ಕಳ ವೈದ್ಯರು, ದಾದಿಯರು, ವಾಕ್ ಚಿಕಿತ್ಸಕರು ತಂಡದಲ್ಲಿ ಇರುತ್ತಾರೆ. ಹುಟ್ಟುವಾಗಲೇ ಸೀಳು ತುಟಿ ಹೊಂದಿರುವ ಮಕ್ಕಳು ಸಾಮಾಜಿಕವಾಗಿ ಮುಜುಗರವನ್ನು ಅನುಭವಿಸುತ್ತಾರೆ. ಕೆಲವರಿಗೆ ಇದರಿಂದ ಶೈಕ್ಷಣಿಕ ಹಿನ್ನಡೆ ಆಗುತ್ತದೆ. ಆದ್ದರಿಂದ ಈ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ’ ಎಂದು ಹೇಳಿದರು.

‘ಪರಿಶಿಷ್ಟ ಜಾತಿಗೆ ಕಾಟಿಕ್ ಸಮುದಾಯ: ಸದ್ಯವೇ ನಿರ್ಧಾರ’



ಬೆಂಗಳೂರು: ‘ಪರಿಶಿಷ್ಟ ಜಾತಿಗೆ ಕಾಟಿಕ್ ಸಮುದಾಯ ಸೇರ್ಪಡೆ ವಿಷಯವನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕಟುಕ, ಕಾಟಿಕ್ ಮುಂತಾದ ಹೆಸರಿಂದ ಕರೆಯುವ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡುವಂತೆ ಸಮುದಾಯದ ಮುಖಂಡ ಆರ್.ಕೆ.ಸಿದ್ರಾಮಣ್ಣ ನೇತೃತ್ವದ ನಿಯೋಗ ಶುಕ್ರವಾರ ಸಲ್ಲಿಸಿದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

‘ಕುರಿ, ಮೇಕೆ ಮಾಂಸ ಕಡಿಯುವುದು ಸಮಾಜದ ಕಸುಬು. ಹೀಗಾಗಿ, ಕಟುಕ ಎನ್ನುವ ಹೆಸರೂ ಸಮಾಜಕ್ಕೆ ಅಂಟಿಕೊಂಡಿದೆ. ಸಮುದಾಯ ಸಾಮಾಜಿಕವಾಗಿ ಹಿಂದುಳಿದಿದೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಗೆ ಕಾಟಿಕ್ ಸಮುದಾಯವನ್ನು ಸೇರಿಸಲಾಗಿದೆ. ದೆಹಲಿ, ರಾಜಸ್ಥಾನ, ಉತ್ತರಪ್ರದೇಶ, ಮಹಾರಾಷ್ಟ್ರದಲ್ಲಿಯೂ ಪರಿಶಿಷ್ಟ ಜಾತಿಗೆ ಸೇರಿಸಲಾಗಿದೆ’ ಎಂದು ಹೇಳಿದರು.

‘2012ರ ಕುಲಶಾಸ್ತ್ರೀಯ ಅಧ್ಯಯನದಲ್ಲಿಯೂ ಸಮುದಾಯದ ಸ್ಥಿತಿಗತಿಯನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ಕರ್ನಾಟಕದಲ್ಲಿ ಕಾಟಿಕ್ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಆಗಲೇ ಶಿಫಾರಸು ಮಾಡಲಾಗಿದೆ’ ಎಂದು ವಿವರಿಸಿದರು.

ಬಂದ್ ನಡುವೆಯೂ ಹೃದಯ ಜಾಗೃತಿ

ಸಾಂಕೇತಿಕವಾಗಿ ವಿಶ್ವ ಹೃದಯ ದಿನ ಆಚರಿಸಿದ ನಗರದ ಪ್ರಮುಖ ಆಸ್ಪತ್ರೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಶುಕ್ರವಾರ ಸಾಂಕೇತಿಕವಾಗಿ ವಿಶ್ವ ಹೃದಯ ದಿನವನ್ನು ಆಚರಿಸಿ, ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದವು.

ಕರ್ನಾಟಕ ಬಂದ್ ಇದ್ದರೂ ಆಸ್ಪತ್ರೆಗಳಿಗೆ ವೈದ್ಯರು, ಶುಶ್ರೂಷಕರು ಹಾಗೂ ವೈದ್ಯಕೀಯ ಸಿಬ್ಬಂದಿ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗಿದ್ದರು. ಇದರಿಂದಾಗಿ ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯವಾಗಲಿಲ್ಲ. ಆದರೆ, ಬಹುತೇಕ ಆಸ್ಪತ್ರೆಗಳಲ್ಲಿ ಹೊರ ರೋಗಿಗಳ ಪ್ರಮಾಣ ಶೇ 30ಕ್ಕಿಂತ ಕಡಿಮೆಯಿತ್ತು. ಸಾರ್ವಜನಿಕ ಕಾರ್ಯಕ್ರಮಗಳನ್ನು ರದ್ದುಪಡಿಸಿದ್ದ ಆಸ್ಪತ್ರೆಗಳು, ತಮ್ಮ ವ್ಯಾಪ್ತಿಯಲ್ಲಿಯೇ ರೋಗಿಗಳಿಗೆ ಅರಿವು ಮೂಡಿಸಿದವು.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ನಾರಾಯಣ ಹೆಲ್ತ್, ಆಸ್ಟರ್, ಮಣಿಪಾಲ್, ಫೋರ್ಟಿಸ್, ಅಪೋಲೊ ಸೇರಿ ನಗರದ ಪ್ರಮುಖ ಆಸ್ಪತ್ರೆಗಳು ಹೃದಯ ಸಮಸ್ಯೆ ಪತ್ತೆಗೆ ಆದ್ಯತೆ ನೀಡಿ, ರಕ್ತದಲ್ಲಿನ ಕೊಲೆಸ್ಟ್ರಾಲ್ ಮಟ್ಟ, ಇಸಿಜಿ, ಇಕೋ, ಟಿಎಂಟಿ ಪರೀಕ್ಷೆಗಳನ್ನು ನಡೆಸಿ, ನಿಯಮಿತವಾಗಿ ಹೃದಯ ತಪಾಸಣೆ ಮಾಡಿಸಿಕೊಳ್ಳುವಂತೆ ಮನವಿ ಮಾಡಿಕೊಂಡವು. ಬಂದ್ ಕಾರಣ ಆರೋಗ್ಯ ಇಲಾಖೆಯು ಶುಕ್ರವಾರ ವಿಶೇಷ ಕಾರ್ಯಕ್ರಮ, ಜಾಗೃತಿ ಜಾಥಾ ನಡೆಸಲಿಲ್ಲ.

ಕನ್ನಿಂಗ್‌ಹ್ಯಾಮ್ ಹಾಗೂ ನಾಗರಭಾವಿಯಲ್ಲಿನ ಫೋರ್ಟಿಸ್ ಆಸ್ಪತ್ರೆಯು ಕಟ್ಟಡದ 100 ಮೀಟರ್ ಉದ್ದಕ್ಕೂ ಪೇಪರ್‌ನಿಂದ ಹೃದಯ ಸರಪಳಿ ನಿರ್ಮಿಸಿತ್ತು. ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಹೃದಯ ಸರಪಳಿಯುದ್ದಕ್ಕೂ ನಿಂತು, ಹೃದಯ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದರು.

ಸ್ಪರ್ಶ್ ಆಸ್ಪತ್ರೆ ವತಿಯಿಂದ ‘ಹಾರ್ಟ್ ಹಾರ್ಮನಿ-ಯೋಗ ಫಾರ್ ಹೆಲ್ತ್’ ಎಂಬ ಜಾಗೃತಿ ಕಾರ್ಯಕ್ರಮ ನಡೆಸಿ, ಯೋಗಾಭ್ಯಾಸದ ಮೂಲಕ ಹೃದಯದ ಆರೋಗ್ಯಕ್ಕೆ ಆದ್ಯತೆ ನೀಡಲು ಮನವಿ ಮಾಡಿಕೊಳ್ಳಲಾಯಿತು.

ಮಣಿಪಾಲ್ ಆಸ್ಪತ್ರೆಗಳ ಸಮೂಹವು ನಗರದ ವಿವಿಧ ವೃತ್ತಗಳಲ್ಲಿ ತುರ್ತು ಸಹಾಯ (ಎಸ್‌ಒಎಸ್) ಕ್ಯೂಆರ್ ಕೋಡ್ ಫಲಕವನ್ನು ಅಳವಡಿಸಿತ್ತು. ಬಿಬಿಎಂಪಿ ಹಾಗೂ ಬೆಂಗಳೂರು ನಗರ ಸಂಚಾರ ಪೊಲೀಸರ ಸಹಯೋಗದಲ್ಲಿ ಸಂಚಾರ ದೀಪಗಳಲ್ಲಿ ಹೃದಯದ ಮಾದರಿ ಮೂಡಿಸುವ ಮೂಲಕವೂ ಜಾಗೃತಿ ಮೂಡಿಸಲಾಯಿತು.



ವಿಶ್ವ ಹೃದಯ ದಿನದ ಪ್ರಯುಕ್ತ ಫೋರ್ಟಿಸ್ ಆಸ್ಪತ್ರೆಯ ಸಿಬ್ಬಂದಿ ಹೃದಯದ ಮಾದರಿಯಲ್ಲಿ ನಿಂತು ಜಾಗೃತಿ ಮೂಡಿಸಿದರು.

ಭದ್ರತೆ ಕೋರಿ ಪ್ರಧಾನಿಗೆ ಅಲಿ ಪತ್ರ

ನವದೆಹಲಿ (ಪಿಟಿಐ): ಬಿಜೆಪಿ ಸದಸ್ಯ ರಮೇಶ್ ಬಿಧೂಡಿ ಅವರ ವರ್ತನೆಯನ್ನು ಖಂಡಿಸಿ ಸಾರ್ವಜನಿಕವಾಗಿ ಹೇಳಿಕೆ ನೀಡಬೇಕು ಮತ್ತು ಅವರಿಗೆ ಸೂಕ್ತ ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳಬೇಕು ಎಂದು ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಧಾನಿಗೆ ಪತ್ರ ಬರೆದಿರುವ ಅಲಿ, ‘ತಮ್ಮ ವಿರುದ್ಧ ಬೆದರಿಕೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಭದ್ರತೆ ಒದಗಿಸಬೇಕು’ ಎಂದೂ ಮನವಿ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸೂರ್ಯಕುಮಾರ್ ಪೋಸ್ಟ್‌ಗೆ ಮೆಚ್ಚುಗೆ



ಬೆಂಗಳೂರು: ಅಮೃತ್ ನೋನಿಯ ಉತ್ಪನ್ನ ‘ಅಮೃತ್ ನೋನಿ ಪೇನ್ ರಿಲೀಫ್ ಸ್ಪ್ರೇ’ಗೆ ರಾಯಭಾರಿಯಾಗಿರುವ ಖ್ಯಾತ ಕ್ರಿಕೆಟಿಗ ಸೂರ್ಯಕುಮಾರ್ ಯಾದವ್, ಇತ್ತೀಚೆಗೆ ಆ ಉತ್ಪನ್ನ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಡಿದ ಪೋಸ್ಟ್ ವೈರಲ್ ಆಗಿದ್ದು, ಜನರ ಮೆಚ್ಚುಗೆಗೆ ಪಾತ್ರವಾಗಿದೆ.

‘ಅಮೃತ್ ನೋನಿ ಕುಟುಂಬದ ಭಾಗವಾಗಲು ನನಗೆ ಸಂತೋಷವಾಗುತ್ತಿದೆ. ತ್ವರಿತ ನೋವು ನಿವಾರಣೆ ವಿಷಯದಲ್ಲಿ, ನಾನು ಅಮೃತ್ ನೋನಿ ಪೇನ್ ರಿಲೀಫ್ ಸ್ಪ್ರೇ’ಯನ್ನು ಹೆಚ್ಚು ನಂಬುತ್ತೇನೆ. ಇದರಲ್ಲಿರುವ ಪುರಾತನ ಆಯುರ್ವೇದ ಸೂತ್ರ ಮತ್ತು ಸಮೃದ್ಧ ಗಿಡಮೂಲಿಕೆಗಳ ಸಾರಗಳು ನಮಗೆ ಎಲ್ಲ ರೀತಿಯ ನೋವಿನಿಂದ ತ್ವರಿತ ಮತ್ತು ಪರಿಣಾಮಕಾರಿಯಾಗಿ ಪರಿಹಾರ ನೀಡುತ್ತವೆ’ ಎಂದು ಸೂರ್ಯಕುಮಾರ್ ಯಾದವ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಪೋಸ್ಟ್ ಅನ್ನು ಬಹಳಷ್ಟು ಮಂದಿ ಶೇರ್ ಮಾಡುತ್ತಿದ್ದಾರೆ.

ನಾಳೆ ‘ಸ್ವಚ್ಛತಾ ಹೀ ಸೇವಾ’ ಅಭಿಯಾನ

ಬೆಂಗಳೂರು: ಭವಿಷ್ಯ ನಿಧಿಯ ಬೆಂಗಳೂರು ಪ್ರಾದೇಶಿಕ ಆಯುಕ್ತರ ಕಚೇರಿ ವತಿಯಿಂದ ರಾಜರಾಜೇಶ್ವರಿನಗರದಲ್ಲಿ ಅ.1ರಂದು ‘ಸ್ವಚ್ಛತಾ ಹೀ ಸೇವಾ’ ಸ್ವಚ್ಛತಾ ಅಭಿಯಾನವನ್ನು ಆಯೋಜಿಸಲಾಗಿದೆ.

‘1ನೇ ತಾರೀಖು, ಒಂದು ಗಂಟೆ’ ಘೋಷವಾಕ್ಯದಲ್ಲಿ ಸ್ವಚ್ಛತಾ ಕಾರ್ಯವನ್ನು ನಡೆಸಲಾಗುತ್ತದೆ. ರಾಜರಾಜೇಶ್ವರಿ ನಗರದಲ್ಲಿರುವ ಪ್ರಾದೇಶಿಕ ಕಚೇರಿ ಸುತ್ತಮುತ್ತಲಿನ ರಸ್ತೆ, ಬಸ್ ನಿಲ್ದಾಣ, ರಾಜರಾಜೇಶ್ವರಿನಗರ ದೇವಸ್ಥಾನದ ಸುತ್ತಮುತ್ತ ಕಸ ಗುಡಿಸುವ, ತ್ಯಾಜ್ಯ ತೆಗೆಯುವ ಕಾರ್ಯ ಮಾಡಲಾಗುತ್ತದೆ. ಪ್ರಾದೇಶಿಕ ನಿರ್ದೇಶಕರಾದ ಇನಕೋಟಿ ಶ್ರೀದೇವಿ, ರಾಜೇಶ್‌ಚಂದ್ರ ಬೊಡ್ಡೆದ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಎಸ್‌ಆರ್ ಅನುದಾನ ವೆಚ್ಚಕ್ಕೆ ಅನುಮತಿ ಅಗತ್ಯ

ಬೆಂಗಳೂರು: ಕೈಗಾರಿಕಾ ಸಂಸ್ಥೆಗಳ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅನುದಾನದಡಿ ಕೈಗೊಳ್ಳುವ ಯಾವುದೇ ಕಾಮಗಾರಿಗೆ ಜಿಲ್ಲಾಡಳಿತದಿಂದ ಮೊದಲು ಅನುಮತಿ ಪಡೆದುಕೊಳ್ಳಬೇಕು ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುತ್ತೋಲೆ ಹೊರಡಿಸಿದ್ದಾರೆ.

ಜಿಲ್ಲಾಡಳಿತದಿಂದ ಪೂರ್ವಾನುಮತಿ ಪಡೆಯದೆ, ನಿಯಮ ಉಲ್ಲಂಘಿಸಿ ಸಿಎಸ್‌ಆರ್ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಂಡಿರುವುದು ಕಂಡುಬಂದಿದೆ. ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಅನುಮೋದನೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಆದ್ದರಿಂದ, ಇನ್ನು ಮುಂದೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದಿರುವ ಯಾವುದೇ ಕಾಮಗಾರಿ ಕೈಗೊಳ್ಳಬಾರದು ಎಂದು ಸೂಚಿಸಲಾಗಿದೆ.

ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್, ಬೆಂಗಳೂರು ದಕ್ಷಿಣ, ಉತ್ತರ, ಪೂರ್ವ, ಯಲಹಂಕ ಮತ್ತು ಆನೇಕಲ್ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 86 ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಈ ಸುತ್ತೋಲೆಯನ್ನು ರವಾನಿಸಲಾಗಿದೆ.

ಇಂಡೊನೇಷ್ಯಾದ ಜಕಾರ್ತದಲ್ಲಿ ನಡೆದ ಕರಾಟೆ ಚಾಂಪಿಯನ್‌ಶಿಪ್

ಚಿನ್ನ ಗೆದ್ದ ವಿದ್ಯಾರ್ಥಿಗೆ ₹ 50 ಸಾವಿರ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡೊನೇಷ್ಯಾದ ಜಕಾರ್ತದಲ್ಲಿ ನಡೆದ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗಳಿಸಿದ ಮೊಹಮ್ಮದ್ ತಾಹೀರ್ ಎಂಬ ವಿದ್ಯಾರ್ಥಿಗೆ ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ₹ 50 ಸಾವಿರ ಬಹುಮಾನ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಸಾರ್ವಜನಿಕ ಅಹವಾಲು ಸ್ವೀಕಾರ ಸಂದರ್ಭದಲ್ಲಿ ಮೊಹಮ್ಮದ್ ತಾಹೀರ್‌ಗೆ ನಗದು ಬಹುಮಾನ ನೀಡಿ ಸನ್ಮಾನಿಸಿದರು.

ಅಂತರರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಹಣವಿಲ್ಲ ಎಂದು ಮೊಹಮ್ಮದ್ ತಾಹೀರ್ ಅವರು ಒಂದು ತಿಂಗಳ ಹಿಂದೆ ಕೆಪಿಸಿಸಿ ಕಚೇರಿಗೆ ಬಂದು ಸಮಸ್ಯೆ ಹೇಳಿಕೊಂಡಿದ್ದರು. ಆಗ ಸಚಿವರು ವಿಮಾನಯಾನದ ವೆಚ್ಚವಾಗಿ ₹65 ಸಾವಿರ ಹಣವನ್ನು ಭರಿಸಿದ್ದರು.

ಹೆಬ್ಬಾಳದ ಕ್ರೆಸೆಂಟ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ತಾಹೀರ್ ಚಿನ್ನದ ಪದಕ ಗೆದ್ದು ಬಂದಿದ್ದಾನೆ. ಸಚಿವ ಜಮೀರ್ ಅಹಮದ್ ಅವರ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ತಾಹೀರ್ ಪೋಷಕರು ಹೇಳಿದರು. ಇದೇ ವೇಳೆ ಸಚಿವರಿಗೆ ಕೃತಜ್ಞತೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ 12:3 ಗ್ಲೋಬಲ್ ಆರ್ಗನೈಜೇಶನ್ ಸಂಸ್ಥೆಗೆ ಸಚಿವರು ವೈಯಕ್ತಿಕವಾಗಿ ₹ 2 ಲಕ್ಷ ನೆರವು ನೀಡಿದರು.

ಸಭೆಯಲ್ಲಿ ನೂರಾರು ಸಾರ್ವಜನಿಕರು ಅಹವಾಲು ಸಲ್ಲಿಸಿದರು. ಅರ್ಜಿಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು. ಆರೋಗ್ಯ ಮತ್ತು ಶಿಕ್ಷಣಕ್ಕೆ ಸಹಾಯ ಕೋರಿದವರಿಗೆ ಆರ್ಥಿಕ ನೆರವು ನೀಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ, ಮಾಜಿ ಮೇಯರ್ ರಾಮಚಂದ್ರಪ್ಪ, ಕೆಪಿಸಿಸಿ ಸಂವಹನ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶೇಖರ್, ಮುಖಂಡರಾದ ಜಿ.ಎ. ಬಾವಾ ಇದ್ದರು.



ಇಂಡೊನೇಷ್ಯಾದ ಜಕಾರ್ತದಲ್ಲಿ ನಡೆದ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗಳಿಸಿದ ಮೊಹಮ್ಮದ್ ತಾಹೀರ್ ಎಂಬ ವಿದ್ಯಾರ್ಥಿಗೆ ಪ್ರೀತಿಯಿಂದ ಮುತ್ತು ನೀಡಿದ ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್

ಸದ್ಯ ಇರುವ 3 ವಂದೇ ಭಾರತ್‌ಗೆ ಪ್ರಯಾಣಿಕರಿಂದ ಉತ್ತಮ ಸ್ಪಂದನೆ

ಮತ್ತೆ 9 ವಂದೇ ಭಾರತ್‌ಗೆ ಬೇಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಪ್ರಯಾಣಿಕರ ಆಯ್ಕೆಯಾಗಿರುವ 'ವಂದೇ ಭಾರತ್' ರೈಲಿಗೆ ರಾಜ್ಯದಲ್ಲಿ ಬೇಡಿಕೆ ಹೆಚ್ಚಿದೆ. ಈಗಾಗಲೇ 3 ರೈಲುಗಳು ಸಂಚರಿಸುತ್ತಿದ್ದು, ಇನ್ನೂ 9 ಮಾರ್ಗಗಳಿಂದ ಬೇಡಿಕೆ ಬಂದಿದೆ.

2022ರ ನವೆಂಬರ್‌ನಲ್ಲಿ ಮೈಸೂರು–ಬೆಂಗಳೂರು–ಚೆನ್ನೈ ನಡುವೆ ಮೊದಲ ವಂದೇ ಭಾರತ್ ಆರಂಭವಾಗಿತ್ತು. 2023ರ ಜೂನ್‌ನಲ್ಲಿ ಕೆಎಸ್‌ಆರ್ ಬೆಂಗಳೂರು– ಧಾರವಾಡ ಹಾಗೂ ವಾರದ ಹಿಂದೆ ಕಾಚಿಗುಡ– ಯಶವಂತಪುರ ನಡುವೆ 'ವಂದೇ ಭಾರತ್' ರೈಲು ಸಂಚಾರ ಆರಂಭಗೊಂಡಿವೆ. ಈ ಮೂರೂ ರೈಲುಗಳಿಗೆ ಪ್ರಯಾಣಿಕರಿಂದ ಉತ್ತಮ ಸ್ಪಂದನೆ ದೊರೆತಿದೆ.

ಮೈಸೂರು–ಚೆನ್ನೈ ವಂದೇ ಭಾರತ್‌ನಲ್ಲಿ ನಿತ್ಯ ಶೇ 87 ರಿಂದ ಶೇ 93ರಷ್ಟು ಆಸನಗಳು ಭರ್ತಿಯಾಗುತ್ತಿವೆ. ಕೆಎಸ್‌ಆರ್ ಬೆಂಗಳೂರು– ಧಾರವಾಡ ನಡುವೆ ಸಂಚರಿಸುವ 'ವಂದೇ ಭಾರತ್' ರೈಲಿನಲ್ಲಿ ಶೇ 90 ರಿಂದ ಶೇ 95ರಷ್ಟು ಜನ ಪ್ರಯಾಣಿಸುತ್ತಿದ್ದಾರೆ. ಕಾಚಿಗುಡ– ಯಶವಂತಪುರ 'ವಂದೇ ಭಾರತ್' ಕಳೆದ ಮೂರು ದಿನಗಳಲ್ಲಿ ಶೇ 96ರಿಂದ ಶೇ 100ರಷ್ಟು ಆಸನಗಳು ಭರ್ತಿಯಾಗಿದ್ದವು. ಗುರುವಾರ ಕರ್ನಾಟಕ ಬಂದ್ ಕಾರಣದಿಂದ ಪ್ರಯಾಣಿಕರ ಸಂಖ್ಯೆ ಶೇ 30ರಷ್ಟು ಕಡಿಮೆಯಾಗಿತ್ತು ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ರಾಜ್ಯದ ಇತರ ಭಾಗಗಳಲ್ಲಿಯೂ 'ವಂದೇ ಭಾರತ್' ರೈಲು ಸಂಚರಿಸಬೇಕು. ಉನ್ನತ ಸೌಲಭ್ಯಗಳಿರುವ ರೈಲು ಎಲ್ಲ ಭಾಗದ ಪ್ರಯಾಣಿಕರಿಗೆ ಲಭ್ಯವಾಗಬೇಕು ಎಂಬ ಕೂಗು ಎದ್ದಿದೆ.

ಬೆಂಗಳೂರಿನಿಂದ ಬೆಳಗಾವಿ, ಹೊಸಪೇಟೆ, ಕೊಯಮತ್ತೂರು, ತಿರುಪತಿ, ಮದುರೈ, ಪುದುಚೇರಿ, ಕಲಬುರಗಿ, ಶಿವಮೊಗ್ಗಕ್ಕೆ ಹಾಗೂ ಬೀದರ್-ಹುಬ್ಬಳ್ಳಿ ನಡುವೆ ವಂದೇ ಭಾರತ್ ಆರಂಭಿಸಿ ಎಂದು ಆಯಾ ಪ್ರದೇಶಗಳ ಪ್ರಯಾಣಿಕರು ರೈಲ್ವೆ ಇಲಾಖೆಯ ಮುಂದೆ ಬೇಡಿಕೆಯನ್ನಿಟ್ಟಿದ್ದಾರೆ.

'ಬೆಂಗಳೂರು ಮತ್ತು ಕರಾವಳಿ ನಡುವೆ ವಾಣಿಜ್ಯ ಸಂಬಂಧ ಜನರ ಸಂಚಾರ ಹೆಚ್ಚಿರುತ್ತದೆ. ಈ ಮಾರ್ಗದಲ್ಲಿ ವಂದೇ ಭಾರತ್ ಆರಂಭಿಸಬೇಕು. ಅದನ್ನು ಉಡುಪಿಯವರೆಗೆ ವಿಸ್ತರಿಸಬೇಕು. ಪಶ್ಚಿಮ ಘಟ್ಟದಲ್ಲಿ ರೈಲು ಸ್ವಲ್ಪ ನಿಧಾನವಾದರೂ ಉಳಿದ ಕಡೆಗಳಲ್ಲಿ ವೇಗವಾಗಿ ಸಂಚರಿಸಲು ಸಾಧ್ಯ. ನೈರುತ್ಯ ರೈಲ್ವೆ ಮತ್ತು ದಕ್ಷಿಣ ರೈಲ್ವೆ ಹೊಂದಾಣಿಕೆ ಮಾಡಿಕೊಂಡು ಈ ಮಾರ್ಗದಲ್ಲಿ ವಂದೇ ಭಾರತ್ ಆರಂಭಿಸಬೇಕು' ಎಂದು ಬ್ಯಾಂಕ್ ಉದ್ಯೋಗಿ ಕೆ. ರಾಘವೇಂದ್ರ ನಾಯರಿ ಒತ್ತಾಯಿಸಿದರು.

'ವಂದೇ ಭಾರತ್' ಅನ್ನು ಸಂಪರ್ಕ ಕೊಂಡಿಯಾಗಿ ವಿಸ್ತರಿಸಬೇಕು. ಉದಾಹರಣೆಗೆ ಬೆಂಗಳೂರಿನಿಂದ ಮಂಗಳೂರಿಗೆ 'ವಂದೇ ಭಾರತ್' ತಲುಪುವ ಹೊತ್ತಿಗೆ ಮಂಗಳೂರಿನಿಂದ ಕೊಚ್ಚಿನ್, ಮುಂಬೈ ಕಡೆಗಳಿಗೆ ವಂದೇ ಭಾರತ್ ಹೊರಡಲು ತಯಾರಾಗಬೇಕು. ಅದೇ ರೀತಿ ಕೊಂಕಣ ಮಾರ್ಗದಲ್ಲಿ ಕಾರವಾರಕ್ಕೆ 'ವಂದೇ ಭಾರತ್' ತಲುಪಿದಾಗ ಅಲ್ಲಿಂದ ಕಲಬುರಗಿ, ಬೀದರ್ ಕಡೆಗೆ ಇನ್ನೊಂದು ರೈಲು ಹೊರಡಬೇಕು. ಇದು ಕೊಂಕಣ–ಉತ್ತರ ಕರ್ನಾಟಕದ ಸಂಪರ್ಕಕ್ಕೆ ದಾರಿಯಾಗುತ್ತದೆ' ಎಂದು ಸಿಟಿಜನ್ಸ್ ಫಾರ್ ಸಿಟಿಜನ್ ಸಂಸ್ಥಾಪಕ ರಾಜಕುಮಾರ್ ದುಗರ್ ಸಲಹೆ ನೀಡಿದರು.

'ಎಲ್ಲ ಭಾಗಗಳಿಂದ ಬೇಡಿಕೆ'

ರಾಜ್ಯದ ವಿವಿಧ ಭಾಗಗಳಲ್ಲಿ 'ವಂದೇ ಭಾರತ್'ಗೆ ಬೇಡಿಕೆ ಇರುವುದು ನಿಜ. ಮಂಗಳೂರು, ಬೆಳಗಾವಿ, ಶಿವಮೊಗ್ಗ ಸಹಿತ ವಿವಿಧ ಕಡೆಗಳಲ್ಲಿ ಅಲ್ಲಿನ ಜನಪ್ರತಿನಿಧಿಗಳು, ರೈಲು ಪ್ರಯಾಣಿಕರು ಬೇಡಿಕೆ ಸಲ್ಲಿಸಿದ್ದಾರೆ. ರೈಲು ಮಾರ್ಗಗಳ ಗುಣಮಟ್ಟ, ಸೌಲಭ್ಯಗಳನ್ನು ನೋಡಿಕೊಂಡು ರೈಲ್ವೆ ಇಲಾಖೆ ನಿರ್ಧಾರ ಕೈಗೊಳ್ಳಲಿದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಧಾರ್ಮಿಕ ಪರಿಷತ್ತಿಗೆ ಸದಸ್ಯರ ನೇಮಕ

ಬೆಂಗಳೂರು: ಪ್ರಭಾವಿ ರಾಜಕಾರಣಿಗಳ ಜ್ಯೋತಿಷಿಯಾಗಿರುವ ಬೆಂಗಳೂರಿನ ಬಿ.ಎಸ್. ದ್ವಾರಕನಾಥ್ ಸೇರಿದಂತೆ ಎಂಟು ಸದಸ್ಯರನ್ನು ಕರ್ನಾಟಕ ಸರ್ಕಾರದ ಧಾರ್ಮಿಕ ಪರಿಷತ್ತಿಗೆ ನಾಮನಿರ್ದೇಶನ ಮಾಡಲಾಗಿದೆ.

ಹಿಂದಿನ ಬಿಜೆಪಿ ಸರ್ಕಾರವು ಪರಿಷತ್‌ಗೆ ನಾಮನಿರ್ದೇಶನ ಮಾಡಿದ್ದ ಸದಸ್ಯರ ಸದಸ್ಯತ್ವವನ್ನು ಹೊಸ ಸರ್ಕಾರ ಬಂದ ಬಳಿಕ ರದ್ದುಪಡಿಸಲಾಗಿತ್ತು. ರಾಜ್ಯ ಸರ್ಕಾರ ಶಿಫಾರಸಿನ ಅನುಸಾರ ರಾಜ್ಯಪಾಲರು ಈಗ ಹೊಸ ಸದಸ್ಯರನ್ನು ನೇಮಕ ಮಾಡಿದ್ದಾರೆ.

ನಿವೃತ್ತ ಜಿಲ್ಲಾ ನ್ಯಾಯಾಧೀಶ ಎನ್. ಶ್ರೀವತ್ಸ ಕೆದಿಲಾಯ (ನ್ಯಾಯಿಕ ಸದಸ್ಯ), ವೀರಾಪುರ ಹಿರೇಮಠದ ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ (ಆಗಮ), ಎ.ರಾಧಾಕೃಷ್ಣ ರಾಜು (ಹಿಂದುಳಿದ ವರ್ಗ), ಜಯನಗರ ಕನಕನಪಾಳ್ಯದ ಕೆ.ಎಂ. ನಾಗರಾಜು, ಬೈಲಹೊಂಗಲ ಬಸವನಗರ ಆರಾದ್ರಿಮಠದ ಮಹಂತೇಶ ಶಾಸ್ತ್ರಿ (ಸಾಮಾನ್ಯ), ಬಂಟ್ವಾಳದ ಮಲ್ಲಿಕಾ ಪ್ರಶಾಂತ ಪಕ್ಕಲಾ (ಮಹಿಳೆ), ಬೆಂಗಳೂರು ಹನುಮಂತನಗರದ ಚಂದ್ರಶೇಖರ್ (ಎಸ್‌ಸಿ) ಅಧಿಕಾರೇತರ ನಾಮನಿರ್ದೇಶಿತ ಸದಸ್ಯರಾಗಿದ್ದಾರೆ.

ಧಾರ್ಮಿಕ ಪರಿಷತ್‌ಗೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷರಾಗಿರುತ್ತಾರೆ. ಕಂದಾಯ ಇಲಾಖೆ (ಮುಜರಾಯಿ) ಪ್ರಧಾನ ಕಾರ್ಯದರ್ಶಿ ಉಪಾಧ್ಯಕ್ಷರಾಗಿ, ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ಪದನಿಮಿತ್ತ ಕಾರ್ಯದರ್ಶಿಗಳಾಗಿ ಇರುತ್ತಾರೆ.



ಭಾರತದ ಹಸಿರು ಕ್ರಾಂತಿಯ ಪಿತಾಮಹನಿಗೆ ನಮನಗಳು!



ಮೆಟ್ರೊ ನೇರಳೆ ಮಾರ್ಗದಲ್ಲಿ ವಿಸ್ತರಿತ ಕಾಮಗಾರಿಗಳ ಪರೀಕ್ಷೆಯನ್ನು ಮೆಟ್ರೊ ರೈಲ್ವೆ ಸುರಕ್ಷತಾ ಆಯುಕ್ತರು (ದಕ್ಷಿಣ ವೃತ್ತ) ಶುಕ್ರವಾರ ನಡೆಸಿದರು.

ಮೆಟ್ರೊ ರೈಲು: ನೇರಳೆ ಮಾರ್ಗ ಪರೀಕ್ಷೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದಲ್ಲಿ ವಿಸ್ತರಿತ ಕಾಮಗಾರಿಗಳ ಪರೀಕ್ಷೆ ಶುಕ್ರವಾರ ಯಶಸ್ವಿಯಾಗಿ ನಡೆದಿದೆ.

ಮೈಸೂರು ರಸ್ತೆ ನಿಲ್ದಾಣ–ಕೆಂಗೇರಿ ನಿಲ್ದಾಣ ಮತ್ತು ಕೃಷ್ಣರಾಜಪುರ– ಗರುಡಾಚಾರ್ ಪಾಳ್ಯ ನಡುವೆ ಮೆಟ್ರೊ ರೈಲ್ವೆ ಸುರಕ್ಷತಾ ಆಯುಕ್ತರು (ದಕ್ಷಿಣ ವೃತ್ತ) ಪರಿಶೀಲನೆ ನಡೆಸಿದರು. ನೇರಳೆ ಮಾರ್ಗದ ಎರಡೂ ತುದಿಗಳಲ್ಲಿ ಇರುವ ವಿಸ್ತರಿತ ಪ್ರದೇಶಗಳ ಪರೀಕ್ಷೆ ಮುಗಿದಿದೆ. ಸುರಕ್ಷತಾ ಆಯುಕ್ತರು ವರದಿ ಸಲ್ಲಿಸಿದ ಬಳಿಕ ರೈಲು ಸಂಚಾರಕ್ಕೆ ದಿನ ನಿಗದಿಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಎಂಎನ್‌ಡಿ: ಅ.3ರಿಂದ ಉಚಿತ ಸಮಾಲೋಚನೆ

ಪ್ರಜಾವಾಣಿ ವಾರ್ತೆ

Brains Super Speciality Hospital

ಬೆಂಗಳೂರು: ಮೋಟಾರ್ ನ್ಯೂರಾನ್ ಕಾಯಿಲೆ (ಎಂಎನ್‌ಡಿ) ಹಾಗೂ ಅಮಿಯೊಟ್ರೋಫಿಕ್ ಲ್ಯಾಟರಲ್ ಸ್ಲಿರಾಸಿಸ್ ಕಾಯಿಲೆಗೆ (ಎಎಲ್‌ಎಸ್) ಅ.3 ರಿಂದ ಅ.30ರವರೆಗೆ ಜಯನಗರದ ಬ್ರೈನ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉಚಿತ ಸಮಾಲೋಚನೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಬ್ರೈನ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಡಾ. ಶ್ಯಾಮ್ ನಾರಂಗ್ ಫೌಂಡೇಶನ್ ಎಂಎನ್‌ಡಿ ರೋಗಿಗಳಿಗೆ ವಿಶೇಷ ಕ್ಲಿನಿಕ್ ಸ್ಥಾಪಿಸುತ್ತಿದೆ. ಇದರ ಭಾಗವಾಗಿ ಉಚಿತ ತಪಾಸಣೆಯನ್ನು ಭಾನುವಾರ ಹೊರತುಪಡಿಸಿ ಉಳಿದ ದಿನ ಬೆಳಿಗ್ಗೆ 10.30ರಿಂದ ಸಂಜೆ 4 ಗಂಟೆಯವರೆಗೆ ನಡೆಸಲಾಗುತ್ತದೆ.

ಉಚಿತವಾಗಿ ವಂಶವಾಹಿ ಪರೀಕ್ಷೆ ಮಾಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಆನುವಂಶಿಕ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಶಿಬಿರದಲ್ಲಿ ಪಾಲ್ಗೊಳ್ಳುವ ರೋಗಿಗಳು ವೈದ್ಯಕೀಯ ದಾಖಲಾತಿಯೊಂದಿಗೆ ಬರಬೇಕು ಎಂದು ಬ್ರೈನ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಂಸ್ಥಾಪನಾಧ್ಯಕ್ಷ ಡಾ.ವೆಂಕಟರಮಣ ಎನ್.ಕೆ. ಹಾಗೂ ಡಾ. ಶ್ಯಾಮ್ ನಾರಂಗ್ ಫೌಂಡೇಶನ್‌ನ ಸಂಸ್ಥಾಪನಾ ಟ್ರಸ್ಟಿ ವಸಂತ್ ರಾವ್ ಯು.ಎ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9148080000 ಅಥವಾ 9483240925



ಎಂಎನ್‌ಡಿ, ಮಿದುಳು ಮತ್ತು ಬೆನ್ನುಹುರಿ ಸಂಪರ್ಕಿಸುವ ನರಗಳಿಗೆ ಸಂಬಂಧಿಸಿದ ಒಂದು ರೋಗ. ಈ ರೋಗದ ತಪಾಸಣೆ ವೆಚ್ಚ ತುಸು ದುಬಾರಿ. ಶಿಬಿರದಲ್ಲಿ ಉಚಿತವಾಗಿ ರೋಗ ತಪಾಸಣೆ ಮಾಡಲಾಗುತ್ತದೆ.

ಡಾ.ವೆಂಕಟರಮಣ ಎನ್.ಕೆ.,
ಸಂಸ್ಥಾಪನಾಧ್ಯಕ್ಷ, ಬ್ರೈನ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

'ಗಡಿ ಸಂಘರ್ಷಕ್ಕೆ ಪ್ರತ್ಯುತ್ತರ'

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನ ಗಡಿಯಲ್ಲಿ ಚೀನಾ ಯೋಧರೊಂದಿಗೆ ನಡೆದ ಸಂಘರ್ಷದ ವೇಳೆ ನಮ್ಮ ಸೈನಿಕರು ತೋರಿದ ದೃಢವಾದ ಪ್ರತಿರೋಧದಿಂದಾಗಿ ರಾಜಕೀಯ ಮತ್ತು ಮಿಲಿಟರಿ ವಿಚಾರವಾಗಿ ಭಾರತದ ಸಾಮರ್ಥ್ಯ ಹೊಸ ಎತ್ತರಕ್ಕೆ ಏರುತ್ತಿರುವುದನ್ನು ಜಗತ್ತು ಗಮನಿಸುವಂತಾಯಿತು ಎಂದು ಸೇನೆಯ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಶುಕ್ರವಾರ ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

'ಹವಾಮಾನ ವೈಪರೀತ್ಯ ತಡೆ ಅರಣ್ಯ ವಿಸ್ತರಣೆಯೇ ಪರಿಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಭೂ ಪ್ರದೇಶದಲ್ಲಿ ಶೇ 20ರಷ್ಟು ಅರಣ್ಯವಿದ್ದು, ಶೇ 33ಕ್ಕೆ ವಿಸ್ತರಣೆಯಾದಾಗ ಮಾತ್ರ ಹವಾಮಾನ ವೈಪರೀತ್ಯ ತಡೆಯಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅರಣ್ಯ ಇಲಾಖೆಯ ಶುಕ್ರವಾರ ಆಯೋಜಿಸಿದ್ದ ಸಮಾರಂಭದಲ್ಲಿ 50 ಅಧಿಕಾರಿಗಳು ಮತ್ತು ಸಿಬ್ಬಂದಿಗೆ 'ಮುಖ್ಯಮಂತ್ರಿ ಪದಕ' ಪ್ರದಾನ ಮಾಡಿ ಅವರು ಮಾತನಾಡಿದರು.

ಈ ವರ್ಷ ಮಳೆಯಿಲ್ಲದೇ ಹಲವು ಸಮಸ್ಯೆಗಳು ಎದುರಾಗಿವೆ. 40 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದ ಶೇ 50ರಷ್ಟು ಬೆಳೆ ಹಾನಿಯಾಗಿದೆ. ಅರಣ್ಯ ಪ್ರದೇಶದ ಹೆಚ್ಚಳವೇ ಇದಕ್ಕೆಲ್ಲ ಪರಿಹಾರ ಎಂದರು.

ಹುಲಿ, ಆನೆಗಳ ಸಂಖ್ಯೆಯ ಹೆಚ್ಚಳ ಸಂತೋಷದ ವಿಷಯವಾದರೂ, ಜನವಸತಿ ಪ್ರದೇಶಕ್ಕೆ ದಾಳಿ ಇಡುತ್ತಿರುವುದು ಆತಂಕಕಾರಿ. ಮಾನವ-ಕಾಡು ಪ್ರಾಣಿಗಳ ಸಂಘರ್ಷ ತಡೆಗೆ ಅನುಪಯುಕ್ತ ರೈಲ್ವೆ ಹಳಿ ಬಳಸಿ ಬೇಲಿ ನಿರ್ಮಿಸಲು ಅಗತ್ಯ ಅನುದಾನ ನೀಡುವಂತೆ ಅರಣ್ಯ ಇಲಾಖೆ ಪ್ರಸ್ತಾವ ಸಲ್ಲಿಸಿದೆ. ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ಕಾಡು ಪ್ರಾಣಿಗಳಿಗೆ ಅರಣ್ಯದ ಒಳಗೆ ಅಗತ್ಯ ಆಹಾರ, ನೀರು ದೊರಕಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಎರಡು ವರ್ಷಗಳಿಂದ ಪದಕ ವಿತರಣಾ ಸಮಾರಂಭ ನಡೆದಿಲ್ಲ. ಈಗ 2020 ಹಾಗೂ 2021ನೇ ಸಾಲಿನ ಪದಕ ವಿತರಿಸಲಾಗುತ್ತಿದೆ. ಪ್ರತಿ ವರ್ಷವೂ ಮುಖ್ಯಮಂತ್ರಿ ಪದಕ ಪ್ರದಾನ ಮಾಡಬೇಕು ಎಂದು ಸಲಹೆ ನೀಡಿದರು.

ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ, ವನ್ಯಜೀವಿ ಮತ್ತು ಅರಣ್ಯ ಸಂರಕ್ಷಣೆಯಲ್ಲಿ ರಾಜ್ಯ ಮುಂಚೂಣಿಯಲ್ಲಿದೆ. 6,395 ಆನೆಗಳು, 560 ಹುಲಿಗಳಿವೆ. ಬೆಂಗಳೂರಿನ ವೃಕ್ಷ ಹೊದಿಗೆ ಶೇ 6.81ರಷ್ಟಿದೆ. ಕಳೆದ 10 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಐದು ಚದರ ಕಿ.ಮೀ ಹಸಿರು ಹೊದಿಕೆ ಕಡಿಮೆಯಾಗಿದೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ರಾಜೀವ್ ರಂಜನ್ ಇದ್ದರು.

'ನಟ ಜಗ್ಗೇಶ್ ಆರೋಗ್ಯವಾಗಿದ್ದಾರೆ'

ಬೆಂಗಳೂರು: ನಟ ಜಗ್ಗೇಶ್ ಆರೋಗ್ಯವಾಗಿದ್ದಾರೆ. ಬೆನ್ನುನೋವಿನಿಂದ ಬಳಲುತ್ತಿರುವ ಅವರು ಸದ್ಯ ವಿಶ್ರಾಂತಿಯಲ್ಲಿದ್ದಾರೆ ಎಂದು ತೋತಾಪುರಿ-2 ಚಿತ್ರದ ನಿರ್ಮಾಪಕ ಕೆ.ಎ.ಸುರೇಶ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕಾವೇರಿ ವಿವಾದಕ್ಕೆ ಸಂಬಂಧಿಸಿ ಚಲನಚಿತ್ರ ವಾಣಿಜ್ಯ ಮಂಡಳಿ ಶುಕ್ರವಾರ ನಡೆಸಿದ ಸಾಂಕೇತಿಕ ಪ್ರತಿಭಟನೆಯಲ್ಲಿ ರಾಜ್ಯಸಭಾ ಸದಸ್ಯರೂ ಆಗಿರುವ ನಟ ಜಗ್ಗೇಶ್ ಭಾಗವಹಿಸಿರಲಿಲ್ಲ. ಗುರುವಾರ ಬಿಡುಗಡೆಯಾದ ಅವರ 'ತೋತಾಪುರಿ-2' ಚಿತ್ರದ ಪ್ರಚಾರ ಕಾರ್ಯದಲ್ಲಿಯೂ ಭಾಗಿಯಾಗಿರಲಿಲ್ಲ. ಇದರ ಬೆನ್ನಲ್ಲೇ ಜಗ್ಗೇಶ್ ಸಿಟಿ ಸ್ಕ್ಯಾನ್‌ಗೆ ಒಳಪಟ್ಟಿರುವ ಚಿತ್ರವನ್ನು ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಶುಕ್ರವಾರ ಸಂಜೆ ಹಂಚಿಕೊಂಡಿದ್ದಾರೆ.

'ಉತ್ತರ ಭಾರತ ಪ್ರವಾಸದಲ್ಲಿರುವ ನಾನು ಬೆನ್ನುನೋವಿನಿಂದ ಬಳಲುತ್ತಿದ್ದು ದೆಹಲಿಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದೆ. ಈಗ ವಿಶ್ರಾಂತಿಯಲ್ಲಿರುವೆ' ಎಂದು ಜಗ್ಗೇಶ್ ಬರೆದುಕೊಂಡಿದ್ದಾರೆ.

'ಆತಂಕಪಡುವ ಅಗತ್ಯವಿಲ್ಲ. ಆಯಾಸಗೊಂಡಿರುವುದರಿಂದ ವಿಶ್ರಾಂತಿಯಲ್ಲಿದ್ದಾರೆ' ಎಂದು ಸುರೇಶ್ ಹೇಳಿದರು.

PROPERTY CORNER ಕ್ಲಾಸಿಫೈಡ್ಸ್



The California Holiday Village

RK ENTERPRISES

ಅತ್ಯಂತ ಕಡಿಮೆ ಬೆಲೆ ಇರುವ ನಿವೇಶನಗಳ ಮೇಲೆ ಹೂಡಿಕೆ ಮಾಡಿ

ACTUAL PRICE Rs. ~~499/-~~ Per Sft

OFFER PRICE Rs. 349/-* Per Sft

*for Sites in Phase-2 only

DTCP APPROVED Residential Sites

ಚಿಕ್ಕಬಳ್ಳಾಪುರ

ಈಶಾ ಫೌಂಡೇಶನ್‌ನಿಂದ ಕೇವಲ 15 ನಿಮಿಷಗಳ ಪ್ರಯಾಣ

- ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ.
- 100% ಕಾನೂನಾತ್ಮಕ ದಾಖಲೆ ಪತ್ರಗಳು
- ಅಭಿವೃದ್ಧಿಪಡಿಸಿದ ಲೇಔಟ್
- ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : •ನೀರು •ಬೀದಿ ದೀಪ •ರಸ್ತೆಗಳು •ಪಾರ್ಕ್ •ವಿದ್ಯುತ್ •ಅಂಡರ್ ಗ್ರೌಂಡ್ ವಾಟರ್ ಲೈನ್ಸ್

Site dimension: 30x40 onwards

ಸೈಟ್ ಭೇಟಿಗಾಗಿ ಕರೆ ಮಾಡಿ : **8880665577**

OM SRI INFRASTRUCTURE

ಓಂ ಶ್ರೀ ಇನ್ಫ್ರಾಸ್ಟ್ರಕ್ಚರ್

BHOOMI SKANDA

OM SRI PRISTINE

ನೀವು ಸೈಟು ಖರೀದಿ ಮಾಡಿದಾಗ, ಭವಿಷ್ಯದಲ್ಲಿ ನಿಮಗೆ ಆಸರೆಯಾಗಬೇಕಲ್ಲವೇ ?
ಬಿಎಂಆರ್‌ಡಿಎ ಮತ್ತು ರೇರಾ ಮಾನ್ಯತೆ ಪಡೆದ ನಿವೇಶನವನ್ನೇ ಖರೀದಿಸಿ

BMRDA & RERA Approved Premium Villa Sites @Nelamangala Town



APPROVED PLAN NO. NPA/LAO/36/2021-2022 Date 06-05-2023

Individual 'E' Khata ('A' Khata)

APPROVED AUTHORITY BMRDA

UPTO 90% LOANS AVAILABLE FROM ICICI Bank Home Loans, IDBI BANK, SBI, HDFC BANK, LIC HFL

RERA APPROVED PRM/KA/RERA/1251/309/PR/091122/005427

CONTACT FOR SITE VISIT & BOOKING

953 881 1119

omsripristine@gmail.com

www.omsriinfrastructure.com

PRM/KA/RERA/RA/1251/309/PR/091122/005427

Sri M. Huchegowda 98450 40942

Sri H.Yogesh 94481 29005

- Ready For Registration & Construction
- Developed Layout
- 100% Release Sites
- 100% Clear Title
- World Class Amenities

AMENITIES: Arch & Entrance Gate, Asphalted Roads, Solar Street Lights, Developed Parks-5, All Round Compound Wall, CC Camera, S.T.P, Children's Play Area, Rain Harvesting Plant, Over Head Water Tanks, 24 hrs Security

OM SRI INFRASTRUCTURE : #87, 1st Floor, Above Pizza Hut, Siddhaiah Puranik Road, LIC Colony, 1st Block, Near Chord Road Hospital, 3rd Stage, Basaveshwaranagar, Bangalore-560 079

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH STAGE- ANJANAPURA BDA- Available/ Wanted 20x30 30x40 40x60 50x80 Sites 'BRINDAVAN ASSOCIATES'- 9980863245

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

BANASHANKARI 6TH Stage, 40x60, 60' Road. 20x30,30x40,North Near 100' Road .RV College :9916817739

Electronic City

"ELECTRONIC-CITY 30X40 DC.conversion Gated Community 38sites Sale-total 1.5acres with-Basic Amenities,Bank Loan Available,near VIBGYOR School, 1.75kms from Hosa Road, Metro Station. 9108283841/ 9448670671"

Kanakapura Road

KANAKAPURA ROAD Attached to Narayananagar 1St Block Bagegowda Layout 30x50, North,And South,BBMP A'khata Rs.12600/- 9845704509

40X60 EAST Facing Site Sale, Nitesh Rio (Adjacent to Vakil Garden City). Kanakapura Road. 9901244511.

Kempegowda Layout

NADAPRABHU KEMPEGOWDA LAYOUT and Vishweshwaraiah Layout BDA Sites Buying, Selling 20x30, 30x40, 40x60. 9742568746, 9538499143.

Mysore Road

SITE FOR SALE 30x50 North Facing, auction site KHB Nethaji layout Bidadi, Contact : 9845152808

Nagarabhavi

BDA PLOT Sale 2400Sqft EF, Opp. MPM Park, Ambedkar College, Nagarabavi Rs.12000/Sqft. Genuine Buyers: 9845165177

DH DECCAN HERALD Classifieds More value, more impact

ಪ್ರಜಾವಾಣಿ REAL ESTATE

The 1st thing to do when Selling/Buying your Property

#1 PLACE YOUR AD HERE

REAL ESTATE

www.dhclassifieds.com BOOK NOW

Book your ad with us now!

For more details contact:
+91 9731810277 | +91 9900428036 |
+91 9845114560 | +91 9886213331 |
+91 9901641752 | 080- 45557163/164

Nelamangala

CNR Infocity Building Future
READY TO BUILD PLOTS FOR EVERY DREAM HOME
BMRDA Approved Sites available @ NEELAMANGALA
CALL 87222 27780 87222 27711

Out-Station

WANTED EXPERIENCED Marketing Associates to sell open Plots in Government Approved Layouts as Investment at most happening city on the Planet @Hyderabad. Attractive buy back scheme also available. Send your CV to investorshubhyd2727 @gmail.com

Vishweshwariah Layout

BDA SITE SALE VISHWESHWARAIAH LAYOUT 1ST BLOCK 30X40 NORTH 9000, 5th BLOCK EAST FACE 11500 NEGOTIABLE CONTACT: 8892901567

VISHWESHWARAIAH LAYOUT BDA 6TH BLOCK 40x60 NORTH FACING NEAR KLE LAW COLLEGE GOOD LOCATION: 9980860138

BDA EAST-SOUTH Corner Site Sale, Opp40 feet Road, Behind 100-feet Road,Vishveswaraiah Layout. 7411994069

BDA COMMERCIAL Site for Sale SMVL 6th Block 50X80 North facing 80ft Road. Contact: 9980433004/ 9901905999

AVAILABLE BDA SITE 30X40 Visveswaraiah Layout 2nd Block 7500/- Psft AND 6th Block 8500/- 9844603127

Flat

Banashankari

"POORNAPRAGNA LAYOUT, 3BHK Luxury Flat, Ready to occupy 2100 Sq.ft Teakwood, Italian-marble, 'A' katha, 1.50 crore. Call: 9845286505"

Basaveshwaranagar

"MAGADI MAIN Road 2BHK Flat Ready to occupy with occupancy certificate A-Katha. Call: 9845286505"

Isro Layout

3/4 BHK New Luxurious Flats Sale, Fully Furnished, Italian Marble, Cauvery, Security, Car parking. 70L/90L. 9945224058, 6360501159.

Jayanagar

SALE SPACIOUS 3BHK FLAT 1600sft in Ragi Gudda close to Metro-Wooddys JAYANAGAR 9845027192

SALE 4-BHK FLAT East Facing as per Vastu Near 4th Block Telephone Exchange 2 Car-Parking Call:9611844667 8123515830

Wilson Garden

2 BR 975 sft G Flr Wilson Manor. With car park. 70L. Call 9900086288

West

3BHK, FLAT for sale, west, 4th floor, gated community beside MVJ Engg college, Channa Sandra main road, Kadugodi 9393023536.

House

Banashankari

SALE BDA OLD HOUSE, 40x60 SF KHATRIGUPPE WATER TANK 40FT ROAD, BANASHANKARI 3RD STAGE: 9845969165

Double Road

900 SQFT Independent House for Sale in Shanthinagar, Close to Double Road (K.H. Road) Bangalore. Owner 9916333410

Commercial Building

Mahalakshmi Layout

FOR SALE COMMERCIAL BUILDING South West Corner Ground 1st 2nd Mahalakshmi Layout Main Road:7975463324

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call: 9663001940/ 9845358544.

Commerical

Basaweshwaranagar

COMMERCIAL NORTH East Corner Site, Fully Developed Area, 2230Sft. Near Pushpanjali Theatre, Shivanagar, Bangalore 9343782958

ಸೈಟುಗಳು ಮಾರಾಟಕ್ಕಿವೆ

ನೆಲಮಂಗಲ ಹತ್ತಿರ 20x30 ಕೇವಲ ರೂ. 8 ಲಕ್ಷಕ್ಕೆ

DC CONVERSION

ಮಾಗಡಿ ರೋಡ್, ಕಿತ್ತನಹಳ್ಳಿ ಹತ್ತಿರ 20x30 ರೂ. 7.60 ಲಕ್ಷಕ್ಕೆ

ಸಂಪರ್ಕಿಸಿ: 8880660099

ಜಮೀನು ಮಾರಾಟಕ್ಕೆ

1.9 ಎಕರೆ (6 ಗುಂಟೆ ಖರಾಬು)

ನೆಲಮಂಗಲ ಹತ್ತಿರ

ಲೀಲಾವತಿ ಎಸ್ಟೇಟ್ ಸಮೀಪ

100 ಮರಗಳು, 2 ಬೋರ್ ವೆಲ್ ಇದೆ

ಸಂಪರ್ಕಿಸಿ: 80730 92897

READY TO MOVE IN

₹ 39* Lacs 2 BHK FLAT FULLY FURNISHED including AC & WARDROBE

* All inclusive except Registration Loan upto 90%

RENTAL POTENTIAL RS. 20,000 P.M FOR THIS APARTMENT

Chandapura, Near Narayana Hrudayalaya & Metro Station, on Hosur Main Road

NISARGA BUILDERS Call for site visit 6366 864 500

RERA No.PRM/KA/RERA/1250/307/PR/240723/006089

RERA-BMRDA-NPA APPROVED

Residential Sites @T.Begur Nelamangala

1.3 km from NH4, B'lore-Tumkur Road

₹1699/- per sft Bank Loan Available

Call: 8956 412 000

Residential/ Commercial

Koramangala

7200 SQFT family owned plot of prime real estate in Koramangala, Sarjapura Road, Bangalore-34. On main road/mutation corridor, 100ft frontage, encumbrance free. Ideal for both residential and automatic commercial use. No brokers, Direct Sale. Contact owner's representative at +91 9167126690 (Pradyuman)

Farm House/ Land/ Resorts

Out-Station

NILIGRIS. TEA ESTATE @ 60L/ BUNGLOW @ 55L. 10 mins from Town. Ct. 7604939393

Villas/Bunglows

Magadi Road

INDEPENDANT VILLA for Sale Spacious 6600 sq.ft. villa, built on 3600 sq.ft. East facing corner Site. 6 bedroom, 6 bathroom,Servant House, surrounded by garden on two Sides. Carpark. gated community with all amenities. No.5, Rashi Residency Located on 4 lane Magadi Road, Kadabagere Cross, Bangalore. Call: 9972300999

Joint Development

Devanahalli

REQUIRE LAND FOR JD/ PURCHASE FOR LAYOUT & APARTMENTS. AGENTS, PLEASE EXCUSE. CONTACT 9663614614

RENTAL PROPERTIES

Accommodation Available

Service Apartments

RENT 2BHK- 4Houses, 1BHK Suitable for Service Apt/ PG/ Company employees, Airport Road Yelahanka:8880974545

Accommodation Wanted

Commercial

WANTED WAREHOUSE for RENT, area of 30000 sqft. Near Peenya, Nagasandra, Makali, Adakamaranahalli. Surrounding. 7483790887 9164656894

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Industrial & Factory

Multiple Locations

WANTED INDUSTRIAL lands with minimum 60 ft road width connecting to National highways Owners: 8618987855

MORE Classifieds Ads on Subsequent Pages

ವಾಟರ್ಸ್, ಟೆರಾಡೈನ್ ಉತ್ಪಾದನಾ ಘಟಕಗಳಿಗೆ ಸಚಿವ ಎಂ.ಬಿ. ಪಾಟೀಲ ನಿಯೋಗ ಭೇಟಿ

ಬೆಂಗಳೂರಿನಲ್ಲಿ 'ಕೆಪಾಬಿಲಿಟಿ ಸೆಂಟರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಮತ್ತು ಔಷಧ ತಯಾರಿಕೆ ಕ್ಷೇತ್ರದ ದಿಗ್ಗಜ ಕಂಪನಿ 'ವಾಟರ್ಸ್', ಬೆಂಗಳೂರಿನಲ್ಲಿ ಕೆಪಾಬಿಲಿಟಿ ಸೆಂಟರ್ ಸ್ಥಾಪಿಸಲು ಮುಂದಾಗಿದೆ.

ಅಮೆರಿಕ ಪ್ರವಾಸದಲ್ಲಿ ಇರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂ.ಬಿ ಪಾಟೀಲ ನಿಯೋಗವು ಈ ಬಗ್ಗೆ ಕಂಪನಿ ಜೊತೆಗೆ ಚರ್ಚೆ ನಡೆಸಿದೆ. ಬೆಂಗಳೂರಿನ ಆರ್.ಎಂ.ಜೆಡ್ ಇಕೋವರ್ಲ್ಡ್ ಸಂಕೀರ್ಣದಲ್ಲಿ 16 ಮಿಲಿಯನ್ ಡಾಲರ್ ಕೋಟಿ ವೆಚ್ಚದಲ್ಲಿ ಕೆಪಾಬಿಲಿಟಿ ಸೆಂಟರ್ ಸ್ಥಾಪನೆಯಾಗಲಿದೆ ಎಂದು ಸಚಿವ ಎಂ.ಬಿ ಪಾಟೀಲ ತಿಳಿಸಿದ್ದಾರೆ.

'ಉತ್ಕೃಷ್ಟ ಗುಣಮಟ್ಟದ ಔಷಧಗಳು ನಮ್ಮಲ್ಲೇ ತಯಾರಾಗಬೇಕು. ರಾಜ್ಯದಲ್ಲಿ ಸಕ್ರಿಯವಾಗಿರುವ ಔಷಧ ತಯಾರಿಕೆ ಕಂಪನಿಗಳೊಂದಿಗೆ ವಾಟರ್ಸ್ ಕಂಪನಿಯ ಸಹಭಾಗಿತ್ವಕ್ಕೆ ಈ ಕೆಪಾಬಿಲಿಟಿ ಸೆಂಟರ್ ಸ್ಥಾಪನೆ ಅಗತ್ಯ. ಔಷಧೋತ್ಪನ್ನಗಳನ್ನು ರಫ್ತು ಮಾಡುವ ಮಟ್ಟಕ್ಕೆ ರಾಜ್ಯ ಬೆಳೆಯಬೇಕು. ಸರ್ಕಾರ ಮತ್ತು ಕಾಲೇಜುಗಳ ಸಹಭಾಗಿತ್ವದಲ್ಲಿ ಪರಿಣಿತ ಸಿಬ್ಬಂದಿಯನ್ನು ಸಜ್ಜುಗೊಳಿಸುವ ಬಗ್ಗೆ ಕಂಪನಿಯ ಉನ್ನತಾಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ' ಎಂದು ಸಚಿವರು ಹೇಳಿದ್ದಾರೆ.

ಸಚಿವರ ನೇತೃತ್ವದ ನಿಯೋಗವು ವಾಟರ್ಸ್ ಕಂಪನಿಯ ಉತ್ಪಾದನಾ ಘಟಕಕ್ಕೂ ಭೇಟಿ ನೀಡಿತು.

ಮಾತುಕತೆಯಲ್ಲಿ ಕಂಪನಿಯ ಸಿಇಒ ಮತ್ತು ಅಧ್ಯಕ್ಷ ಉದಿತ್ ಬಾತ್ರಾ, ಸಿಎಫ್‌ಒ ಅನ್ಮೋಲ್ ಚೌಬಾಲ್, ಸಿಐಒ ಬ್ರೂಕ್ ಕೊಲ್ಯಾಂಜೆಲೋ ಮತ್ತು ಉಪಾಧ್ಯಕ್ಷ ಕ್ರಿಸ್ಟಿನ್ ಗಾರ್ವಿ ಇದ್ದರು.

ರಾಜ್ಯ ಸರ್ಕಾರದ ನಿಯೋಗದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್ ಮತ್ತು ಆಯುಕ್ತರಾದ ಗುಂಜನ್ ಕೃಷ್ಣ ಇದ್ದರು.



ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂ.ಬಿ ಪಾಟೀಲ ನೇತೃತ್ವದ ನಿಯೋಗವು ವಾಟರ್ಸ್ ಕಂಪನಿಯ ಉತ್ಪಾದನಾ ಘಟಕಕ್ಕೆ ಭೇಟಿ ನೀಡಿತು. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಇದ್ದರು.

ಟೆರಾಡೈನ್ ಜೊತೆಗೂ ಮಾತುಕತೆ

ರೊಬೋಟಿಕ್ಸ್ ತಂತ್ರಜ್ಞಾನದ ಮೂಲಕ ಆಟೋಮೇಷನ್ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಟೆರಾಡೈನ್ ಕಂಪನಿಯೊಂದಿಗೂ ರಾಜ್ಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ತಯಾರಿಕೆ ಸಂಬಂಧವರ್ಧನೆ ಕುರಿತು ವಿಚಾರ ವಿನಿಮಯ ನಡೆಸಲಾಗಿದೆ ಎಂದು ಸಚಿವ ಪಾಟೀಲ ತಿಳಿಸಿದ್ದಾರೆ.

ಟೆರಾಡೈನ್ ಕಂಪನಿಯು ಸೆಮಿಕಂಡಕ್ಟರ್ ಜತೆಗೆ ರಕ್ಷಣೆ ಮತ್ತು ವೈಮಾಂತರಿಕ್ಷ ಸಾಧನಗಳು, ಮೆಮೋರಿ ಟೆಸ್ಟಿಂಗ್ ವಲಯಗಳಲ್ಲೂ ದೊಡ್ಡ ಮಟ್ಟದಲ್ಲಿ ಸಾಧನೆ ಮಾಡಿದೆ. ರಾಜ್ಯದಲ್ಲಿ ಸೆಮಿಕಂಡಕ್ಟರ್ ವಲಯದ ಉತ್ತೇಜನೆಗೆ ಸರ್ಕಾರವು ರೂಪಿಸಿರುವ ಉಪಕ್ರಮ ಮತ್ತು ನೀತಿಗಳನ್ನು ವಿವರಿಸಿ, ಹೂಡಿಕೆ ಮಾಡಲು ಆಹ್ವಾನಿಸಲಾಗಿದೆ ಎಂದು ಹೇಳಿದ್ದಾರೆ.

ಟೆರಾಡೈನ್ ಕಂಪನಿಯ ಉನ್ನತಾಧಿಕಾರಿ ಪರೇಶ್ ಬರ್ಖಾಡ ಮತ್ತು ಸ್ಯಾಮ್ ರೋಸೆನ್ ಅವರು ಮಾತುಕತೆ ವೇಳೆ ಉಪಸ್ಥಿತರಿದ್ದರು.

ಜಿ.ಆರ್. ವೈದ್ಯ ಕಾಲೇಜು: ಪರ್ಯಾಯ ವ್ಯವಸ್ಥೆ

ಬೆಂಗಳೂರು: 'ಮಂಗಳೂರಿನ ಜಿ.ಆರ್.ವೈದ್ಯಕೀಯ ಕಾಲೇಜಿನ 99 ವಿದ್ಯಾರ್ಥಿಗಳನ್ನು 2023-24ನೇ ಸಾಲಿನ ಎಂಬಿಬಿಎಸ್ ಪದವಿ ಪ್ರವೇಶವು ಅಕ್ರಮ ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗ ಘೋಷಿಸಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಮತ್ತೊಂದು ಕಾಲೇಜಿನಲ್ಲಿ ಪ್ರವೇಶ ಸೌಲಭ್ಯ ಕಲ್ಪಿಸಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ನಾವು, 2023-24ನೇ ಸಾಲಿನ ಎಂಬಿಬಿಎಸ್ ಕೋರ್ಸ್‌ಗೆ ಪಡೆದಿರುವ ಪ್ರವೇಶಾತಿಯನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗವು ಅಕ್ರಮ ಎಂದು ಸಾರಿದೆ. ಹೀಗಾಗಿ, ನಮ್ಮನ್ನು ಬೇರೊಂದು ಸರ್ಕಾರಿ ವೈದ್ಯಕೀಯ ಕಾಲೇಜಿಗೆ ವರ್ಗಾಯಿಸಬೇಕು ಮತ್ತು ಇದೇ ಅಕ್ಟೋಬರ್‌ನಿಂದ ಆರಂಭವಾಗಲಿರುವ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಡಿ.ಎಸ್. ಧಾತ್ರಿ ಸೇರಿದಂತೆ ಕಾಲೇಜಿನ 99 ವಿದ್ಯಾರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಕೀಲರು, 'ಕೋಟಾದ ಪ್ರಕಾರ ಬೇರೊಂದು ಖಾಸಗಿ ಕಾಲೇಜಿನಲ್ಲಿ ಪ್ರವೇಶ ಕಲ್ಪಿಸಲಾಗುವುದು. ಸೀಟು ಮರು ವಿತರಣೆ ಪ್ರಕ್ರಿಯೆ ಪೂರ್ಣಗೊಳಿಸಲು ಸ್ವಲ್ಪ ಕಾಲಾವಕಾಶಬೇಕಿದೆ' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ಪೀಠ, 'ವಿದ್ಯಾರ್ಥಿಗಳ ಸೀಟು ಮರು ವಿತರಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಮುಂದಿನ ವಿಚಾರಣೆಯ ಒಳಗೆ ವಿದ್ಯಾರ್ಥಿಗಳ ಹೆಸರು, ಅವರನ್ನು ಯಾವ ಕಾಲೇಜಿಗೆ ವರ್ಗಾಯಿಸಲಾಗುತ್ತದೆ ಎಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಬೇಕು' ಎಂದು ರಾಜ್ಯ ವೈದ್ಯಕೀಯ ಶಿಕ್ಷಣ ಇಲಾಖೆಗೆ ನಿರ್ದೇಶಿಸಿತು. ಅಕ್ಟೋಬರ್ 3ಕ್ಕೆ ವಿಚಾರಣೆ ಮುಂದೂಡಲಾಗಿದೆ.



ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ರೈಲ್ವೆ ಆಸ್ಪತ್ರೆಯಲ್ಲಿ ಗುರುವಾರ ರಕ್ತದಾನ ಶಿಬಿರ ನಡೆಯಿತು.

ನೈರುತ್ಯ ರೈಲ್ವೆ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ರೈಲ್ವೆ ಆಸ್ಪತ್ರೆಯಲ್ಲಿ ಗುರುವಾರ ರಕ್ತದಾನ ಶಿಬಿರ ನಡೆಯಿತು.

ಮಲ್ಲೇಶ್ವರಂ ವಾಲಂಟರಿ ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರವನ್ನು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೀಶ್ ಮೋಹನ್ ಉದ್ಘಾಟಿಸಿದರು. ರೈಲ್ವೆ ಆಸ್ಪತ್ರೆಯ ಮುಖ್ಯ ವೈದ್ಯಕೀಯ ಅಧೀಕ್ಷಕಿ ಡಾ. ಶೋಭಾ ಜಗನ್ನಾಥ್ ಇದ್ದರು.

ವೈದ್ಯಾಧಿಕಾರಿಗಳು, ರೈಲ್ವೆ ಆಸ್ಪತ್ರೆಯ ಸಿಬ್ಬಂದಿ, ಇತರ ವಿಭಾಗಗಳ ಸಿಬ್ಬಂದಿ, ಗುತ್ತಿಗೆ ಸಿಬ್ಬಂದಿ ಮತ್ತು ಆಸ್ಪತ್ರೆಯ ಸಂದರ್ಶಕರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು.

ಕೆಲವು ಸ್ವಯಂಸೇವಕರು ಯಕೃತ್, ಮೂತ್ರಪಿಂಡ, ಕಣ್ಣು ಸಹಿತ ಪ್ರಮುಖ ಅಂಗಾಂಗಗಳನ್ನು ದಾನ ಮಾಡಲು ವಾಗ್ದಾನ ಮಾಡಿದರು. ದಾನಿಗಳಿಗೆ ಅಂಗದಾನ ಪ್ರತಿಜ್ಞೆ ಪ್ರಮಾಣಪತ್ರಗಳು ಮತ್ತು ರಕ್ತದಾನ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ವಿಮಾನಕ್ಕೆ ಎದುರಾದ ಡ್ರೋನ್!

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟದ ವೇಳೆ ಡ್ರೋನ್ ಎದುರಾಗಿ ಆತಂಕ ತಂದೊಡ್ಡಿತ್ತು. ಡ್ರೋಣ್ ಆಪರೇಟರ್ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ಇಂಡಿಗೊ ಸಂಸ್ಥೆಗೆ ಸೇರಿದ ಎರಡು ವಿಮಾನಗಳು, ಮಂಗಳವಾರ ಟೇಕಾಫ್ ವೇಳೆ ಡ್ರೋನ್ ಎದುರಾಗಿತ್ತು. ವಿಮಾನಕ್ಕೆ ಅಪಾಯಕಾರಿ ರೀತಿಯಲ್ಲಿ ಡ್ರೋಣ್ ಹಾದು ಹೋಗಿತ್ತು.

ಎರಡೂ ವಿಮಾನಗಳ ಪೈಲಟ್‌ಗಳು ವಾಯು ಸಂಚಾರ ನಿಯಂತ್ರಣ (ಎಟಿಸಿ) ವಿಭಾಗಕ್ಕೆ ಡ್ರೋನ್ ತಂದೊಡ್ಡುತ್ತಿದ್ದ ಅಪಾಯದ ಬಗ್ಗೆ ಮಾಹಿತಿ ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ತನಿಖೆ ಆರಂಭಿಸಲಾಗಿದೆ. ಇದು ಯಾವ ಬಗೆಯ ಸಾಧನ ಎನ್ನುವುದನ್ನು ಪತ್ತೆ ಮಾಡಲು ಸಿಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ. ಯಾವ ದಿಕ್ಕಿನಿಂದ ಬಂದಿದೆ. ಎರಡು ವಿಮಾನಗಳಿಗೆ ಎಷ್ಟು ಹತ್ತಿರ ಈ ಡ್ರೋನ್ ಹಾರಾಟ ನಡೆಸಿದೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ ಎಂದು ಹೇಳಿದರು.



ರೈತ ಮುಖಂಡರ ಕಾರುಗಳಿಗೆ ಅಳವಡಿಸಿದ್ದ ಹಸಿರು ಟಾಪ್ ಲೈಟ್ ಹಾಗೂ ಸಂಘಟನೆಯ ಹೆಸರಿದ್ದ ನಾಮಫಲಕವನ್ನು ಪೊಲೀಸರು ತೆರವುಗೊಳಿಸಿದರು.

ಕಾರುಗಳ ನಾಮಫಲಕ, ಹಸಿರು ಲೈಟ್ ತೆರವು

ಕೆ.ಆರ್.ಪುರ: ರೈತ ಮುಖಂಡರು ತಮ್ಮ ಕಾರುಗಳಿಗೆ ನಿಯಮ ಬಾಹಿರವಾಗಿ ಅಳವಡಿಸಿದ್ದ ಸಂಘಟನೆ ಹೆಸರಿದ್ದ ನಾಮಫಲಕ ಹಾಗೂ ಹಸಿರು ಲೈಟ್ (ಕಾರಿನ ಮೇಲ್ಭಾಗದಲ್ಲಿ ಇದ್ದ) ಅನ್ನು ವೈಟ್‌ಫಿಲ್ಡ್ ವಿಭಾಗದ ಪೊಲೀಸರು, ಶುಕ್ರವಾರ ತೆರವುಗೊಳಿಸಿದರು.

ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಕಾವೇರಿ ಹೋರಾಟಕ್ಕೆ ರತ್ನ ಭಾರತ ರೈತ ಸಮಾಜದ ರಾಜ್ಯ ಅಧ್ಯಕ್ಷ ಲಕ್ಷ್ಮಣ್ ನೇತೃತ್ವದಲ್ಲಿ ಹೋರಾಟಗಾರರು ಕಾರುಗಳಲ್ಲಿ ಬರುತ್ತಿದ್ದರು.

ತಮ್ಮ ವಾಹನಗಳ ಮೇಲೆ ಹಸಿರು ಲೈಟ್ ಹಾಗೂ ಸಂಘಟನೆ ಹೆಸರು ಬರೆಯಲಾಗಿತ್ತು. ಇದನ್ನು ಗಮನಿಸಿದ ವೈಟ್‌ಫೀಲ್ಡ್ ವಿಭಾಗದ ಎಸಿಪಿ ಮಹಮ್ಮದ್ ಬಾಬು ಅವರು ವಾಹನ ತಡೆದು ನೋಂದಣಿ ನಾಮಫಲಕ ಮತ್ತು ಟಾಪ್‌ಲೈಟ್ ತೆಗೆಯುವಂತೆ ಸಲಹೆ ನೀಡಿದರು. ತೆರವು ಮಾಡಲು ಒಪ್ಪದಿದ್ದಾಗ ಪೊಲೀಸರೇ ತೆರವುಗೊಳಿಸಿದರು. ಕೆ.ಆರ್. ಪುರ ಸಂಚಾರ ಠಾಣೆಗೆ ವಾಹನ ಕೊಂಡೊಯ್ಯಲಾಯಿತು.

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಮಹಾಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ 2022-23ನೇ ಸಾಲಿನ 117ನೇ ವರ್ಷದ ಮಹಾಸಭೆಯು ಬ್ಯಾಂಕ್ ಅಧ್ಯಕ್ಷ ಆವಲಹಳ್ಳಿ ಚಂದ್ರಪ್ಪ ಆರ್. ಅಧ್ಯಕ್ಷತೆಯಲ್ಲಿ ನಡೆಯಿತು.

ಬ್ಯಾಂಕ್ ₹ 95 ಕೋಟಿಗೂ ಅಧಿಕ ಷೇರು ಬಂಡವಾಳ ಹೊಂದಿದೆ. ₹ 445 ಕೋಟಿ ಅಪದ್ಧನ ಮತ್ತು ಇತರೆ ನಿಧಿ ಹೊಂದಿದೆ. ₹ 2,264 ಕೋಟಿ ಠೇವಣಿ ಇದೆ. ₹ 1,448 ಕೋಟಿ ಸಾಲ ನೀಡಲಾಗಿದೆ. ₹ 1,181 ಕೋಟಿಯನ್ನು ರಾಜ್ಯ, ಕೇಂದ್ರ ಸರ್ಕಾರಗಳ ಸಾಲ ಪತ್ರ ಇತ್ಯಾದಿಗಳಲ್ಲಿ ಹೂಡಿಕೆ ಮಾಡಲಾಗಿದೆ. ತೆರಿಗೆ ಪೂರ್ವ ₹ 91 ಕೋಟಿ ಲಾಭ ಗಳಿಸಿದೆ. ತೆರಿಗೆ ನಂತರ ₹ 28 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಅಧ್ಯಕ್ಷರು ವಿವರಿಸಿದರು.

ಚಂದ್ರಯಾನ-3 ಯೋಜನೆಯಲ್ಲಿ ಭಾಗಿಯಾಗಿರುವ, ವಿಜ್ಞಾನಿಗಳೂ, ಬ್ಯಾಂಕ್ ಸದಸ್ಯರೂ ಆಗಿರುವ ರೇವಣ್ಣ ಕೆ., ಮುನಿರಾಜ ಎಸ್. ಎಂ, ರಾಮಚಂದ್ರ ಅವರನ್ನು ಗೌರವಿಸಲಾಯಿತು. ಶೈಕ್ಷಣಿಕ ವರ್ಷದಲ್ಲಿ ವಿವಿಧ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಯಿತು.



ಚಂದ್ರಯಾನ3 ಯೋಜನೆಯ ವಿಜ್ಞಾನಿ, ಬ್ಯಾಂಕ್ ಸದಸ್ಯರೂ ಆಗಿರುವ ರೇವಣ್ಣ ಕೆ., ಮುನಿರಾಜ ಎಸ್‌ಎಂ, ರಾಮಚಂದ್ರ ಅವರನ್ನು ಗೌರವಿಸಲಾಯಿತು.

ಮೇಲ್ಮನವಿ ಅವಕಾಶ: ಪ್ರಾಸಿಕ್ಯೂಷನ್, ಸಂತ್ರಸ್ತರಿಗೆ ಪ್ರತ್ಯೇಕ

ಬೆಂಗಳೂರು: 'ಅಪರಾಧ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸುವಾಗ ಪ್ರಕರಣದ ಸಂತ್ರಸ್ತರು ಮತ್ತು ಪ್ರಾಸಿಕ್ಯೂಷನ್, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಅಡಿ ಲಭ್ಯವಿರುವ ಪ್ರತ್ಯೇಕ ಕಲಂಗಳ ಅಡಿಯಲ್ಲೇ ವ್ಯವಹರಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಚಿಕ್ಕಮಗಳೂರು ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಅಪರಾಧ ಪ್ರಕರಣವೊಂದರ ಆರೋಪಿಗಳನ್ನು ಖುಲಾಸೆ ಮಾಡಿದ್ದನ್ನು ಪ್ರಶ್ನಿಸಿ, ರಾಜ್ಯ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಮತಪತ್ರ ಕದ್ದು ಪರಾರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಹುಳ್ಳೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯ ಮತಪತ್ರ ಇತರೆ ಸಾಮಗ್ರಿಗಳನ್ನು ಕದ್ದು ಪರಾರಿಯಾಗಿದ್ದ ಮೂವರನ್ನು ಕುಣಿಕಲ್ ಸಮೀಪ ಶುಕ್ರವಾರ ಬಂಧಿಸಿರುವ ಪೊಲೀಸರು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಹುಳ್ಳೇನಹಳ್ಳಿಯ ದಾಸೇಗೌಡ, ಮನು ಗೌಡ, ಶ್ರೀನಿವಾಸ ಅಲಿಯಾಸ್ ಸೀನ ಬಂಧಿತರು. ಇತರ ಆರೋಪಿಗಳಾದ ಬಲರಾಮ್ ಅಲಿಯಾಸ್ ಅರವಿಂದ ಮತ್ತು ಹೇಮಂತ್ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಸಹಕಾರ ಸಂಘಕ್ಕೆ 12 ವರ್ಷಗಳಿಂದಲೂ ಚುನಾವಣೆ ನಡೆದಿಲ್ಲ. ಆಡಳಿತಾಧಿಕಾರಿ ನೇಮಕದಲ್ಲಿಯೇ ಆಡಳಿತ ನಡೆ ದಿದೆ. ಸಂಘದಲ್ಲಿ ಒಟ್ಟು 174 ಷೇರುದಾರರು ಇದ್ದರು. ಅವರಲ್ಲಿ ಕೆಲವರು ನಿಧನರಾಗಿದ್ದು, ನಿಧನರಾಗಿರುವವರ ಸಂಬಂಧಿಕರನ್ನು ಷೇರುದಾರರನ್ನಾಗಿ ಮರು ನೇಮಕ ಮಾಡಬೇಕಿತ್ತು. ಕೆಲವು ಷೇರುದಾರರು ಚುನಾವಣೆ ನಡೆಸುವಂತೆ ನ್ಯಾಯಾಲಯದಿಂದ ಆದೇಶ ತಂದಿದ್ದರು.

'ಚುನಾವಣೆಯನ್ನು ಮುಂದೂಡುವ ಉದ್ದೇಶದಿಂದ ಆರೋಪಿಗಳು, ಚುನಾವಣೆ ನಡೆಸಲು ತೆರಳುತ್ತಿದ್ದಾಗ ಚುನಾ ವಣಾಧಿಕಾರಿಗಳ ಕಾರು ಅಡ್ಡಗಟ್ಟಿ ಲ್ಯಾಪ್‌ಟಾಪ್, ಮತಪತ್ರ, ಮೊಬೈಲ್‌ಗಳನ್ನು ಕದ್ದು ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.







1. ತಮಿಳುನಾಡು ಗಡಿ ಪ್ರದೇಶವಾದ ಅತ್ತಿಬೆಲೆ ಬಳಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು 2. ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಯುವಕರೊಬ್ಬರು ನೀರಿನ ಬಾಟಲಿಗಳನ್ನು ಕಟ್ಟಿದ್ದ ಸೈಕಲ್ ಸವಾರಿ ಮಾಡಿ ಗಮನ ಸೆಳೆದರು 3. ಬಂದ್ ಹಿನ್ನೆಲೆಯಲ್ಲಿ ನಿಗದಿತ ಸಮಯಕ್ಕೂ ಮುಂಚೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದ ಪ್ರಯಾಣಿಕರು ತಮ್ಮ ವಿಮಾನಕ್ಕಾಗಿ ಕಾದು ಕುಳಿತಿದ್ದರು – ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌ಜಿ/ಜನಾರ್ದನ್ ಬಿ.ಕೆ

ಶೇ 80ರಷ್ಟು ಅಂಗಡಿ, ಮಳಿಗೆ, ಕೈಗಾರಿಕೆಗಳು ಬಂದ್ • ಸ್ಟಾಲಿನ್ ಪ್ರತಿಕೃತಿ ದಹನಕ್ಕೆ ಯತ್ನ • ಆಟೊ–ಕ್ಯಾಬ್ ಸಿಗದೆ ಪ್ರಯಾಣಿಕರ ಪರದಾಟ

ಕಾವೇರಿ ಹೋರಾಟ: ವ್ಯಾಪಾರ–ವಹಿವಾಟು ಸ್ತಬ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸಬಾರದು' ಎಂದು ಒತ್ತಾಯಿಸಿ ರಾಜ್ಯದಾದ್ಯಂತ ಶುಕ್ರವಾರ ಕರೆ ನೀಡಿದ್ದ ಬಂದ್‌ಗೆ ನಗರದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಬಹುತೇಕ ವ್ಯಾಪಾರಿಗಳು ಹಾಗೂ ಉದ್ಯಮಿಗಳು, ತಮ್ಮ ವ್ಯಾಪಾರ–ವಹಿವಾಟು ಸ್ಥಗಿತಗೊಳಿಸಿ ಬಂದ್‌ಗೆ ಬೆಂಬಲ ಸೂಚಿಸಿದರು.

ಆಟೊಗಳು, ಓಲಾ– ಉಬರ್ ಸೇರಿದಂತೆ ಇತರೆ ಮೊಬೈಲ್ ಆ್ಯಪ್ ಆಧರಿತ ಕ್ಯಾಬ್‌ಗಳು, ಮ್ಯಾಕ್ಸಿ ಕ್ಯಾಬ್‌ಗಳು, ಶಾಲೆ– ಕಾಲೇಜು ವಿದ್ಯಾರ್ಥಿಗಳ ವಾಹನಗಳು, ಸರಕು ಸಾಗಣೆ ವಾಹನಗಳು ರಸ್ತೆಗಿಳಿಯಲಿಲ್ಲ.

ಮೈಸೂರು ರಸ್ತೆ, ತುಮಕೂರು ರಸ್ತೆ, ಕನಕಪುರ ರಸ್ತೆ, ಬನ್ನೇರುಘಟ್ಟ ರಸ್ತೆ, ಬಳ್ಳಾರಿ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳು, ಒಳ ರಸ್ತೆಗಳಲ್ಲಿ ವಾಹನಗಳ ಸಂಚಾರ ಕಡಿಮೆ ಇತ್ತು. ಬುಧವಾರ ಹಾಗೂ ಗುರುವಾರ ವಿಪರೀತ ದಟ್ಟಣೆ ಉಂಟಾಗಿದ್ದ ರಸ್ತೆಗಳು, ಶುಕ್ರವಾರ ಖಾಲಿ ಖಾಲಿ ಆಗಿದ್ದವು. ಬಂದ್ ಹಿನ್ನೆಲೆಯಲ್ಲಿ ಜನರೂ ರಸ್ತೆಗೆ ಬರಲಿಲ್ಲ. ಶಾಲಾ–ಕಾಲೇಜುಗಳಿಗೆ ರಜೆ ನೀಡಿದ್ದರಿಂದ, ವಿದ್ಯಾರ್ಥಿಗಳು ಮನೆಯೊಳಗೆ ಹಾಗೂ ಮನೆಯ ಅಂಗಳದಲ್ಲಿ ದಿನಕಳೆದರು. ರಸ್ತೆಯಲ್ಲಂತೂ ಜನರ ಓಡಾಟವೇ ವಿರಳವಾಗಿತ್ತು.

ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ರೈಲು–ಬಸ್ಸಿನಲ್ಲಿ ನಗರಕ್ಕೆ ಬಂದಿದ್ದ ಜನ, ನಿಗದಿತ ಸ್ಥಳಕ್ಕೆ ಹೋಗಲು ಆಟೊ–ಕ್ಯಾಬ್ ಸಿಗದೇ ಪರದಾಡಿದರು. ಮೆಜೆಸ್ಟಿಕ್, ಗಾಂಧಿ ನಗರ, ಯಶವಂತಪುರ, ಸ್ಯಾಟ್‌ಲೈಟ್ ಬಸ್ ನಿಲ್ದಾಣ ಹಾಗೂ ಸುತ್ತಮುತ್ತ ಪ್ರದೇಶಗಳ ರಸ್ತೆಬದಿಯಲ್ಲಿ ಜನರು ಲಗೇಜು ಸಮೇತ ಕುಳಿತಿದ್ದ ದೃಶ್ಯಗಳು ಕಂಡುಬಂದವು. ರಾಜಾಜಿನಗರದ ನವರಂಗ ವೃತ್ತ, ಯಶವಂತಪುರ, ಮೆಜೆಸ್ಟಿಕ್‌ಗಳಲ್ಲಿ ನಸುಕಿನಲ್ಲಿ ಆಟೊಗಳ ಸಂಚಾರವಿತ್ತು. 6 ಗಂಟೆಯ ನಂತರ ಆಟೊ ಸಂಚಾರ ಬಂದ್ ಆಯಿತು.



ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಓಡಾಟ ವಿರಳವಾಗಿತ್ತು – ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಕನ್ನಡ ಒಕ್ಕೂಟದ ನೇತೃತ್ವದಲ್ಲಿ ಕರೆ ನೀಡಿದ್ದ ಬಂದ್‌ಗೆ 200ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ನೀಡಿದ್ದವು. ಬೆಳಿಗ್ಗೆಯಿಂದಲೇ ಸಂಘಟನೆಗಳ ಕಾರ್ಯಕರ್ತರು, ಅಂಗಡಿ–ಮಳಿಗೆಗಳನ್ನು ಮುಚ್ಚುವಂತೆ ಮನವಿ ಮಾಡಿದರು. ಬಹುತೇಕ ವ್ಯಾಪಾರಿಗಳು, ಸ್ವಯಂಪ್ರೇರಿತವಾಗಿ ಅಂಗಡಿ–ಮಳಿಗೆಗಳನ್ನು ಬಂದ್ ಮಾಡಿದ್ದರು. ಕೆಲವರು, ಅಂಗಡಿ ಎದುರು ಕನ್ನಡ ಬಾವುಟ ಕಟ್ಟಿದ್ದರು.

ಕೈಗಾರಿಕೆಗಳು, ಹೋಟೆಲ್‌ಗಳು, ಆಟೊಮೊಬೈಲ್ಸ್ ಮಳಿಗೆಗಳು, ದಿನಸಿ ಅಂಗಡಿಗಳು, ಶಾಪಿಂಗ್ ಮಾಲ್‌ಗಳು, ಗ್ಯಾರೇಜ್‌ಗಳು, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು, ಬೇಕರಿಗಳು, ಮೀನು ಮತ್ತು ಮಾಂಸ ಮಾರಾಟ ಮಳಿಗೆ, ತರಕಾರಿ ಅಂಗಡಿಗಳು, ಮೊಬೈಲ್ ಅಂಗಡಿಗಳು, ಗೃಹೋಪಯೋಗಿ–ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಮಳಿಗೆಗಳು, ಪೀಠೋಪಕರಣ ಮಳಿಗೆ, ಸ್ಟೇಷನರಿ ಅಂಗಡಿಗಳು ಬಂದ್ ಆಗಿದ್ದವು.

ಎಪಿಎಂಸಿ ವರ್ತಕರು ಹಾಗೂ ಕಾರ್ಮಿಕರು ಬಂದ್‌ಗೆ ಬೆಂಬಲ ನೀಡಿದ್ದರು. ಆರ್‌ಎಂಸಿ ಯಾರ್ಡ್‌ನಲ್ಲಿ ವ್ಯಾಪಾರ ಸ್ಥಗಿತಗೊಂಡಿತ್ತು. ಆದರೆ, ಯಶವಂತಪುರ ಮಾರುಕಟ್ಟೆಯಲ್ಲಿ ಬೆಳಿಗ್ಗೆ ತರಕಾರಿ ಮಾರಾಟ ಯಥಾ–ಪ್ರಕಾರವಿತ್ತು. ಬೆಳಿಗ್ಗೆ 9 ಗಂಟೆ ನಂತರ ಅಂಗಡಿಗಳು ಬಂದ್ ಆದವು.

ಆಟೊ ಹಾಗೂ ಕ್ಯಾಬ್ ಚಾಲಕರು, ನಾಯಂಡನಹಳ್ಳಿಯಿಂದ ಪುರಭ–ವನದವರೆಗೆ ಪ್ರತಿಭಟನೆ ನಡೆಸಲು ಮುಂದಾಗಿದ್ದರು. ಅದನ್ನು ಪೊಲೀಸರು ತಡೆದಿದ್ದರು. ಇದರಿಂದಾಗಿ ಮಾತಿನ ಚಕಮಕಿ ನಡೆಯಿತು. ನಂತರ, ಆಟೊ ಹಾಗೂ ಕ್ಯಾಬ್‌ನಲ್ಲಿ ಪುರಭವನಕ್ಕೆ ಹೋಗಲು ಪೊಲೀಸರು ಅನುಮತಿ ನೀಡಿದರು.

ಚಿತ್ರಮಂದಿರಗಳ ಮಾಲೀಕರೂ ಬಂದ್‌ಗೆ ಬೆಂಬಲ ಸೂಚಿಸಿದ್ದರು. ಇದರಿಂದಾಗಿ, ನಗರದ ಎಲ್ಲ ಚಿತ್ರ–ಮಂದಿರಗಳಲ್ಲಿ ಸಿನಿಮಾ ಪ್ರದರ್ಶನ ರದ್ದಾಗಿತ್ತು.

ಮೆಟ್ರೊ, ಬಸ್ ಹಾಗೂ ರೈಲುಗಳ ಸಂಚಾರ ಎಂದಿನಂತಿತ್ತು. ಮೆಜೆಸ್ಟಿಕ್‌ನಲ್ಲಿರುವ ಬಸ್ ಹಾಗೂ ರೈಲು ನಿಲ್ದಾ–ಣಗಳಲ್ಲಿ ಜನರ ಸಂಖ್ಯೆ ವಿರಳವಾಗಿತ್ತು. ಮೆಟ್ರೊ ನಿಲ್ದಾಣಗಳಲ್ಲೂ ಪ್ರಯಾಣಿಕರು ಕಡಿಮೆ ಸಂಖ್ಯೆಯಲ್ಲಿದ್ದರು.

ಬೆಳಿಗ್ಗೆಯಿಂದಲೇ ನಿಗದಿತ ಸ್ಥಳಗಳಿಗೆ ಬಸ್‌ಗಳ ಸಂಚಾರ ಆರಂಭವಾಗಿತ್ತು. ಪ್ರಯಾಣಿಕರ ಸಂಖ್ಯೆ ಕಡಿಮೆ ಇದ್ದಿದ್ದರಿಂದ, ಸಮಯ ಕಳೆದಂತೆ ಬಸ್‌ಗಳ ಸಂಖ್ಯೆಗಳಲ್ಲೂ ಇಳಿಕೆ ಕಂಡುಬಂತು. ಸಂಜೆಯ ನಂತರ, ಜನರ ಓಡಾಟ ಪುನಃ ಆರಂಭವಾಯಿತು. ಇದರಿಂದಾಗಿ ಬಸ್‌ಗಳ ಓಡಾಟವೂ ಹೆಚ್ಚಾಯಿತು.

ರೈಲು ನಿಲ್ದಾಣಕ್ಕೆ ಮುತ್ತಿಗೆ ಹಾಕಲು ಕೆಲ ಸಂಘಟನೆಗಳ ಕಾರ್ಯಕರ್ತರು ಸಿದ್ಧತೆ ಮಾಡಿಕೊಂಡಿದ್ದರು. ಮೆಜೆಸ್ಟಿಕ್, ಯಶವಂತಪುರ, ಕಂಟೋನ್ಮೆಂಟ್ ನಿಲ್ದಾಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭದ್ರತೆಗೆ ಪೊಲೀಸರನ್ನು ನಿಯೋಜಿಸ–ಲಾಗಿತ್ತು. ಪೊಲೀಸರು, ಶಸ್ತ್ರ ಸಜ್ಜಿತವಾಗಿ ಕಾವಲು ಕಾಯುತ್ತಿದ್ದರು. ಪ್ರತಿಭಟ–ನಾಕಾರರು ನಿಲ್ದಾಣಗಳತ್ತ ಸುಳಿಯಲಿಲ್ಲ.

ಮೆಟ್ರೊ ರೈಲಿನ ಪ್ರತಿ ನಿಲ್ದಾಣದಲ್ಲಿ–ಯೂ ಆಯಾ ಠಾಣೆಯ ಸಿಬ್ಬಂದಿಯನ್ನು ಭದ್ರತೆ ನಿಯೋಜಿಸಲಾಗಿತ್ತು. ಪ್ರಯಾಣಿಕರನ್ನು ಹೊರತುಪಡಿಸಿ, ಸಂಘಟನೆಗಳ ಕಾರ್ಯಕರ್ತರು ಒಳಗೆ ಹೋಗದಂತೆ ಸಿಬ್ಬಂದಿ ನೋಡಿಕೊಂಡರು.

ಕೇರಳ ಸಾರಿಗೆ ಬಸ್‌ಗಳ ಸಂಚಾರವೂ ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸ್ಥಗಿತಗೊಂ–ಡಿತ್ತು. ಮುಂಗಡವಾಗಿ ಕಾಯ್ದಿರಿಸಿದ್ದ ಟಿಕೆಟ್‌ಗಳನ್ನು ರದ್ದುಪಡಿಸಲಾಗಿತ್ತು. ಕೇರಳದ ಎಲ್ಲ ಬಸ್‌ಗಳನ್ನು ಸ್ಯಾಟ್‌ಲೈಟ್ ಬಸ್ ನಿಲ್ದಾಣದಲ್ಲಿ ನಿಲ್ಲಿಸಲಾಗಿತ್ತು.

₹ 400 ಕೋಟಿ ನಷ್ಟ

'ಬಂದ್‌ನಿಂದಾಗಿ ಶೇ 80ರಷ್ಟು ವ್ಯಾಪಾರ–ವಹಿವಾಟು ಸ್ಥಗಿತವಾಗಿತ್ತು. ₹ 400 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ' ಎಂದು ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಾಹೋಟಿ ತಿಳಿಸಿದರು.

'ಈ ವಾರದಲ್ಲಿ ನಡೆದ ಎರಡನೇ ಬಂದ್ ಇದು. ನಾಡು, ನುಡಿ, ನೆಲ, ಜಲದ ಪ್ರಶ್ನೆ ಬಂದಾಗ ಎಲ್ಲರೂ ಒಂದಾಗಬೇಕು. ನಾವೆಲ್ಲರೂ ನೀರನ್ನು ಸಂರಕ್ಷಿಸಬೇಕು. ಮುಂದಿನ ದಿನಗಳಲ್ಲಿ ಎರಡು ರಾಜ್ಯದವರು ಪರಸ್ಪರ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು' ಎಂದರು.

ಜಯನಗರದಲ್ಲಿ ಹೆಚ್ಚಿನ ಭದ್ರತೆ

ಸೆ. 26ರಂದು ನಡೆದಿದ್ದ ಬಂದ್ ವೇಳೆ ಜಯನಗರದಲ್ಲಿ ಹೋಟೆಲ್‌ಗಳಿಗೆ ನುಗ್ಗಿ ಗಲಾಟೆ ಮಾಡಲಾಗಿತ್ತು. ಬೈಕ್ ರ‍್ಯಾಲಿ ನಡೆಸಲು ಮುಂದಾಗಿದ್ದ ಸ್ಥಳೀಯ ಶಾಸಕ ಸಿ.ಕೆ. ರಾಮಮೂರ್ತಿ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಶುಕ್ರವಾರ ಬಂದ್ ವೇಳೆ ಅಹಿತಕರ ಘಟನೆಗಳು ನಡೆಯುವ ಮುನ್ಸೂಚನೆ ಅರಿತಿದ್ದ ಪೊಲಿಸರು,ಭದ್ರತೆಯನ್ನು ಬಿಗಿಗೊಳಿಸಿದ್ದರು.

ಕೆಲ ಸಂಘಟನೆಗಳ ಕಾರ್ಯಕರ್ತರು ರಾಜಾಜಿನಗರದಲ್ಲೂ ಮೆರವಣಿಗೆ ನಡೆಸಿದರು. ಅದನ್ನು ತಡೆದ ಪೊಲೀಸರು, ಮೆರವಣಿಗೆಗೆ ಅವಕಾಶವಿಲ್ಲ–ವೆಂದು ಹೇಳಿದರು. ಇದರಿಂದಾಗಿ ವಾಗ್ವಾದ ನಡೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಬಳಿಕ, ಪ್ರತಿಭಟನಾಕಾರರಿಗೆ ತೆರೆದ ವಾಹನದಲ್ಲಿ ನೇರವಾಗಿ ಸ್ವಾತಂತ್ರ್ಯ ಉದ್ಯಾನಕ್ಕೆ ಹೋಗಲು ಪೊಲೀಸರು ಅನುಮತಿ ನೀಡಿದರು.

ಸ್ಟಾಲಿನ್ ಪ್ರತಿಕೃತಿ ದಹನಕ್ಕೆ ಯತ್ನ: ಮಲ್ಲೇಶ್ವರದ ಕುವೆಂಪು ವೃತ್ತದಲ್ಲಿ ಸೇರಿದ್ದ ಪ್ರತಿಭಟನಕಾರರು, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪ್ರತಿಕೃತಿ ದಹಿಸಲು ಯತ್ನಿಸಿದರು. ಅದನ್ನು ತಡೆದ ಪೊಲೀಸರು, ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಬಸ್‌ನಲ್ಲಿ ಕರೆದೊಯ್ದರು.



ಆಟೊ–ಕ್ಯಾಬ್ ಸಿಗದಿದ್ದರಿಂದ ವಿಧಾನಸೌಧ ಬಳಿ ಪ್ರಯಾಣಿಕರು ಲಗೇಜು ಸಮೇತ ನಡೆದುಕೊಂಡು ಹೋದರು – ಪ್ರಜಾವಾಣಿ ಚಿತ್ರ



ತಮಿಳುನಾಡಿನಿಂದ ಬಂದಿದ್ದ ವಾಹನಗಳನ್ನು ಅತ್ತಿಬೆಲೆ ಬಳಿ ತಡೆದಿದ್ದರಿಂದ, ಪ್ರಯಾಣಿಕರು ನಡೆದುಕೊಂಡು ಕರ್ನಾಟಕದ ಗಡಿ ಪ್ರವೇಶಿಸಿದರು – ಪ್ರಜಾವಾಣಿ ಚಿತ್ರ

ಪೊರಕೆ, ಕೊಡ ಹಿಡಿದು ಆಕ್ರೋಶ • ಮೆರವಣಿಗೆಗೆ ಪೊಲೀಸರ ತಡೆ • 785 ಮಂದಿ ವಶಕ್ಕೆ

ಸ್ವಾತಂತ್ರ್ಯ ಉದ್ಯಾನದಲ್ಲಿ ಮೊಳಗಿದ 'ಕಾವೇರಿ ಕಹಳೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ಶುಕ್ರವಾರ ನಡೆದ ಕರ್ನಾಟಕ ಬಂದ್ ವೇಳೆ ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆಯನ್ನು ತಡೆದ ಪೊಲೀಸರು, ಹೋರಾಟಗಾರರನ್ನು ವಶಕ್ಕೆ ಪಡೆದು ಬಸ್‌ಗಳಲ್ಲಿ ಸ್ವಾತಂತ್ರ್ಯ ಉದ್ಯಾನಕ್ಕೆ ಬಿಟ್ಟರು. ಉದ್ಯಾನದಲ್ಲಿ ಸೇರಿದ್ದ ಹೋರಾಟಗಾರರು, ಮಧ್ಯಾಹ್ನದವರೆ–ಗೂ ಪ್ರತಿಭಟನೆ ನಡೆಸಿದರು.

ಬಂದ್ ಅಂಗವಾಗಿ ಬೃಹತ್ ಮೆರವಣಿಗೆ ನಡೆಸಲು ಸಜ್ಜಾಗಿದ್ದ ಹೋರಾಟಗಾರರು, ಬೆಳಿಗ್ಗೆ 8 ಗಂಟೆಯಿಂದಲೇ ಪುರಭವನ ಎದುರು ಸೇರುತ್ತಿದ್ದರು. ಭದ್ರತೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿ–ಸಲಾಗಿತ್ತು. 20ಕ್ಕೂ ಹೆಚ್ಚು ಬಸ್‌ಗಳನ್ನು ಸ್ಥಳಕ್ಕೆ ಕರೆಸಲಾಗಿತ್ತು. ಪೊಲೀಸ್ ಕಮಿಷನರ್ ಬಿ. ದಯಾನಂದ್ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು.

ನಗರದ ನಾನಾ ಭಾಗಗಳಿಂದ ಪಾದಯಾತ್ರೆ ಹಾಗೂ ವಾಹನಗಳ ಮೂಲಕ ಹೋರಾಟಗಾರರು ಪುರಭವನ ಎದುರು ಬಂದು ಸೇರಿದರು. 'ಕಾವೇರಿ ನಮ್ಮ ಜನ್ಮಸಿದ್ಧ ಹಕ್ಕು' ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಗುಂಪು ಗುಂಪಾಗಿ ಸೇರಿದ್ದ ಕಾರ್ಯಕರ್ತರು, ಉರುಳು ಸೇವೆ ಮಾಡಿದರು. ಕೈಯಲ್ಲಿ ಪೊರಕೆ ಹಾಗೂ ಕೊಡ ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ಬೆಳಿಗ್ಗೆ 11 ಗಂಟೆ ಸುಮಾರಿಗೆ ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದತ್ತ ಮೆರವಣಿಗೆ ಹೊರಡಲು ಸಜ್ಜಾಗಿದ್ದ ಪ್ರತಿಭಟನಕಾರರನ್ನು ಪೊಲೀಸರು ತಡೆದರು. 'ಪ್ರತಿಭಟನೆ ಹಾಗೂ ಮೆರವಣಿಗೆಗೆ ಅವಕಾಶವಿಲ್ಲ' ಎಂದು ತಿಳಿಸಿದರು. ಇದೇ ವಿಚಾರವಾಗಿ ಪ್ರತಿಭಟನಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಸೇರಿದಂತೆ ಹಲವು ಹೋರಾಟಗಾರರನ್ನು ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ಗಳಲ್ಲಿ ಅವರನ್ನು ಸ್ವಾತಂತ್ರ್ಯ ಉದ್ಯಾನಕ್ಕೆ ತಂದು ಬಿಟ್ಟರು. ನಗರದ ವಿವಿಧ ಭಾಗಗಳಲ್ಲಿ ಪ್ರತ್ಯೇಕವಾಗಿ ಮೆರವಣಿಗೆ ಮಾಡುತ್ತಿದ್ದ–ವರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಅವರನ್ನೂ ಉದ್ಯಾನಕ್ಕೆ ಕರೆತಂದಿದ್ದರು. ಇದರಿಂದಾಗಿ, ಉದ್ಯಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟಗಾರರು ಸೇರಿದ್ದರು.

ಕೆಲ ಕಾರ್ಯಕರ್ತರು, ಶುದ್ಧ ಕುಡಿಯುವ ನೀರನ್ನು ಮೈ ಮೇಲೆ ಎರಚಿಕೊಂಡು ಉರುಳು ಸೇವೆ ಮಾಡಿದರು. ಖಾಲಿ ಬಾಟಲಿ ಹಾಗೂ ಕೊಡಗಳನ್ನು ಪ್ರದರ್ಶಿಸಿ, 'ಅಯ್ಯ ಸಿದ್ರಾಮಯ್ಯ, ನೀರು ಕೊಡಯ್ಯ' ಎಂದು ಕೂಗಿದರು. ಘೋಷಣಾ ಫಲಕಗಳನ್ನು ಪ್ರದರ್ಶಿಸಿ, 'ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸಬಾರದು' ಎಂದು ಆಗ್ರಹಿಸಿದರು.

ಮಂಡ್ಯದಿಂದ ಬಂದಿದ್ದ ಗೋಪಿನಾಥ್ ಹಾಗೂ ಕುಟುಂಬದವರು, ರ‍್ಯಾಂಬೊ ಹೆಸರಿನ ಶ್ವಾನದ ಜೊತೆ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭಾವಚಿತ್ರವನ್ನು ಬಾಯಿಯಲ್ಲಿ ಕಚ್ಚಿ ಹಿಡಿದಿದ್ದ ಶ್ವಾನ, ಪ್ರತಿಭಟನೆಯಲ್ಲಿ ಅತ್ತಿತ್ತ ಓಡಾಡಿ ಗಮನ ಸೆಳೆಯಿತು.

ಶಾಂತಿಯುತ ಪ್ರತಿಭಟನೆ: 'ನಗರದಲ್ಲಿ ಬಂದ್ ಶಾಂತಿಯುತವಾಗಿ ನಡೆದಿದೆ. ಮುಂಜಾಗ್ರತಾ ಕ್ರಮವಾಗಿ ಬಂಧಿಸಿದ್ದ ಎಲ್ಲರನ್ನೂ ಬಿಡುಗಡೆ ಮಾಡಲಾಗಿದೆ. ಅಹಿತಕರ ಘಟನೆಗಳು ನಡೆದ ಬಗ್ಗೆ ಎಲ್ಲಿಯೂ ವರದಿಯಾಗಿಲ್ಲ' ಎಂದು ಕಮಿಷನರ್ ಬಿ. ದಯಾನಂದ್ ಹೇಳಿದರು.

ಕಪ್ಪುಬಟ್ಟೆ ದಿರಿಸಿನಲ್ಲಿ ವಾಟಾಳ್



ಕಪ್ಪು ದಿರಿಸು ಧರಿಸಿ ತಲೆ ಮೇಲೆ ಕೊಡ ಹೊತ್ತಿದ್ದ ವಾಟಾಳ್ ನಾಗರಾಜ್

ಮೈತುಂಬಾ ಕಪ್ಪು ದಿರಿಸು ಧರಿಸಿ ಖಾಲಿ ಕೊಡವನ್ನು ತಲೆ ಮೇಲಿಟ್ಟುಕೊಂಡು ಡಾಲರ್ಸ್ ಕಾಲೊನಿಯಲ್ಲಿರುವ ತಮ್ಮ ಮನೆ ಎದುರು ಪ್ರತಿಭಟನೆ ನಡೆಸಿದ ವಾಟಾಳ್ ನಾಗರಾಜ್, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾನು ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿದ್ದೇನೆ. ಈ ಕಪ್ಪು ಬಟ್ಟೆಯನ್ನು, ನ್ಯಾಯದೇವತೆ ಸಂದೇಶ ಹಾಗೂ ಮಹಿಳೆಯರ ಗೌರವದ ಸಂಕೇತ ಸಾರುವ ಬಟ್ಟೆ ಎಂದು ಧರಿಸಿದ್ದೇನೆ' ಎಂದರು.

'ಬಂದ್ ಹತ್ತಿಕ್ಕುತ್ತಿರುವ ಸರ್ಕಾರ, ಹೋರಾಟಗಾರರನ್ನು ಬಂಧಿಸಲು ಪೊಲೀಸರನ್ನು ನಿಯೋಜಿಸಿದೆ. ಶಾಂತಿಯುತವಾಗಿ ಪ್ರತಿಭಟನೆ ಹಾಗೂ ಮೆರವಣಿಗೆ ನಡೆಸಲು ಮುಂದಾಗಿರುವ ನಮ್ಮ ಮೇಲೆ ಪೊಲೀಸರು ದೌರ್ಜನ್ಯ ಎಸಗುತ್ತಿದ್ದಾರೆ' ಎಂದು ದೂರಿದರು.

ನೆಲಮಂಗಲದಲ್ಲಿ ಬಂದ್ ಯಶಸ್ವಿ

ನೆಲಮಂಗಲ: ತಾಲ್ಲೂಕಿನಾದ್ಯಂತ ಬಂದ್ ಭಾಗಶಃ ಯಶಸ್ವಿಯಾಗಿದೆ.

ವರ್ತಕರು ಅಂಗಡಿ-ಮುಂಗಟ್ಟುಗಳನ್ನು ಮುಚ್ಚಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದರು. ಅಗತ್ಯ ವಸ್ತುಗಳಾದ ಹಣ್ಣು, ಹೂವು, ಔಷಧ, ಆಸ್ಪತ್ರೆ, ಹಾಲಿನ ಅಂಗಡಿಗಳು, ಕೆಲವು ಹೋಟೆಲ್‌ಗಳು ಮಾತ್ರ ತೆರೆದಿದ್ದವು. ವಾಹನ ಸಂಚಾರ ಎಂದಿನಂತೆ ಇರಲಿಲ್ಲ. ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ. ಸರ್ಕಾರಿ ಕಚೇರಿಗಳು ಕಾರ್ಯ ನಿರ್ವಹಿಸಿದವು.

ಕರ್ನಾಟಕ ರಕ್ಷಣಾ ವೇದಿಕೆ, ಜಯಕರ್ನಾಟಕ, ಕನ್ನಡ ಸಾಂಸ್ಕೃತಿಕ ರಂಗ, ಕರ್ನಾಟಕ ಜನಸೈನ್ಯ, ಕನ್ನಡ ಸಾಹಿತ್ಯ ಪರಿಷತ್ ಸೇರಿದಂತೆ ಹಲವು ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಕೆಲ ಸಮಯ ರಾಷ್ಟ್ರೀಯ ಹೆದ್ದಾರಿ ತಡೆಯಲಾಯಿತು.

ನಟ ವಿನೋದ್‌ರಾಜ್ ಮಾತನಾಡಿ, ಬರಗಾಲ ಬರುವ ಮುನ್ಸೂಚನೆಗಳಿದ್ದು, ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ತೊಂದರೆ ಉಂಟಾಗುವ ಸ್ಥಿತಿಯಿದೆ. ರೈತರು ಸಂಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಬಿಡುತ್ತಿರುವುದು ಖಂಡನೀಯ ಎಂದರು.

ವಿಮಾನ ನಿಲ್ದಾಣಕ್ಕೆ ಮುತ್ತಿಗೆ ಗಡಿಯಲ್ಲಿ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮುತ್ತಿಗೆ ಹಾಕಲು ಸಂಘಟನೆಗಳ ಕಾರ್ಯಕರ್ತರು ಯತ್ನಿಸಿದರು. ತಮಿಳುನಾಡಿನ ಗಡಿ ಪ್ರದೇಶದಲ್ಲಿ (ಅತ್ತಿಬೆಲೆ) ಪ್ರತಿ ಭಟನೆ ನಡೆಸಿದ್ದರಿಂದ, ಪ್ರಯಾಣಿಕರು ತೊಂದರೆ ಅನುಭವಿಸಿದರು.

ವಿಮಾನ ನಿಲ್ದಾಣದ ಟರ್ಮಿನಲ್‌ಗೆ ಹೋಗಿದ್ದ ಪ್ರತಿಭಟನಕಾರರು, ಒಳಗೆ ನುಗ್ಗಲು ಯತ್ನಿಸಿದ್ದರು. ಅವರನ್ನು ತಡೆದಿದ್ದ ಪೊಲೀಸರು, ಸ್ಥಳದಿಂದ ಹೊರಟು ಹೋಗುವಂತೆ ಎಚ್ಚರಿಕೆ ನೀಡಿದ್ದರು. ಅದಕ್ಕೆ ಒಪ್ಪದ ಪ್ರತಿಭಟನ–ಕಾರರು, ನಿಲ್ದಾಣಕ್ಕೆ ಮುತ್ತಿಗೆ ಹಾಕಲು ಮುಂದಾಗಿದ್ದರು. ಈ ವೇಳೆ 12 ಪ್ರತಿ–ಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು ಬಸ್‌ಗಳಲ್ಲಿ ಕರೆದೊಯ್ದರು.

'ಟರ್ಮಿನಲ್ ಹೊರಗೆ ಸೇರಿದ್ದ ಪ್ರತಿಭಟನಕಾರರು, ಒಳಗೆ ನುಗ್ಗಲು ಯತ್ನಿಸಿದ್ದರು. ಅವರನ್ನು ವಶಕ್ಕೆ ಪಡೆದು ಕ್ರಮ ಜರುಗಿಸಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಬಿ.ಎಂ. ಲಕ್ಷ್ಮಿಪ್ರಸಾದ್ ತಿಳಿಸಿದರು.

ಗಡಿಯಲ್ಲಿ ಪರದಾಟ: ಅತ್ತಿಬೆಲೆಯಲ್ಲಿ ರಸ್ತೆ ಬಂದ್ ಮಾಡಿದ್ದವರನ್ನು ವಶಕ್ಕೆ ಪಡೆದರು. ಮುಂಜಾಗ್ರತಾ ಕ್ರಮ ಕೈಗೊಂಡಿದ್ದ ಪೊಲೀಸರು, ತಮಿಳುನಾಡಿನ ವಾಹನಗಳನ್ನು ಬೆಂಗಳೂರಿಗೆ ಬಿಡಲಿಲ್ಲ. ಬೆಂಗಳೂರಿನಿಂದ ಬಂದಿದ್ದ ವಾಹನಗಳನ್ನು ತಮಿಳುನಾಡಿಗೆ ಕಳುಹಿಸಲಿಲ್ಲ. ಇದರಿಂದ ಜನರು ಪರದಾಡುವಂತಾಯಿತು.

ರಸ್ತೆ ತಡೆ

ದಾಬಸ್‌ಪೇಟೆ: ಸೋಂಪುರ ಹೋಬಳಿಯಲ್ಲಿ ಭಾಗಶಃ ಬಂದ್ ವಾತಾವರಣ ಕಂಡುಬಂತು.

ಅಂಗಡಿ–ಮುಂಗಟ್ಟುಗಳು ಸ್ವಯಂ ಪ್ರೇರಿತವಾಗಿ ಮುಚ್ಚಲಾಗಿತ್ತು. ಆದರೆ, ಸೋಂಪುರ ಕೈಗಾರಿಕಾ ಪ್ರದೇಶದಲ್ಲಿ ಬಹುತೇಕ ಕಂಪನಿಗಳು ಕಾರ್ಯ ನಿರ್ವಹಿಸಿದವು. ಜಯ ಕರ್ನಾಟಕ, ಭಾರತ ರಕ್ಷಣಾ ವೇದಿಕೆ ಬಂದ್‌ಗೆ ಬೆಂಬಲ ಘೋಷಿಸಿ, ರಾಷ್ಟ್ರೀಯ ಹೆದ್ದಾರಿ 207ರಲ್ಲಿ ಖಾಲಿ ಬಿಂದಿಗೆಯಿಟ್ಟು ಪ್ರತಿಭಟನೆ ನಡೆಸಿದವು. ರಾಜ್ಯ ರೈತ ಸಂಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘ, ನೆಲಮಂಗಲ ತಾಲ್ಲೂಕು ಘಟಕದಿಂದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ರಸ್ತೆತಡೆದು ಪ್ರತಿಭಟನೆ ಮಾಡಲಾಯಿತು.

ಶಾಸಕ ನಾರಾಯಣಸ್ವಾಮಿ ವಿರುದ್ಧವೂ ಪ್ರಕರಣ

ಮುನಿಸ್ವಾಮಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಮುನಿಸ್ವಾಮಿ

ಕೋಲಾರ: ನಗರದಲ್ಲಿ ಸೆ.25ರಂದು ಹಮ್ಮಿಕೊಂಡಿದ್ದ ಜನತಾ ದರ್ಶನದಲ್ಲಿ ನಡೆದ ಜಟಾಪಟಿ ಸಂಬಂಧ ಬಿಜೆಪಿ ಸಂಸದ ಎಸ್.ಮುನಿಸ್ವಾಮಿ ವಿರುದ್ಧ ಗಲ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಂಗಾರಪೇಟೆ ಕಾಂಗ್ರೆಸ್ ಶಾಸಕ ಎಸ್.ಎನ್.ನಾರಾಯಣಸ್ವಾಮಿ ನೀಡಿದ ದೂರಿನ ಮೇಲೆ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ.

'ಸಂಸದ ಮುನಿಸ್ವಾಮಿ ಕೂಡ ದೂರು ನೀಡಿದ್ದು, ಇದೇ ಠಾಣೆಯಲ್ಲಿ ಎಸ್.ಎನ್.ನಾರಾಯಣಸ್ವಾಮಿ ವಿರುದ್ಧವೂ ಪ್ರಕರಣ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆದರೆ, ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದರು.

ನಾರಾಣಸ್ವಾಮಿ ದೂರಿನಲ್ಲೇನಿದೆ: 'ಜನತಾ ದರ್ಶನದಲ್ಲಿ ಮುನಿಸ್ವಾಮಿ ನನ್ನತ್ತ ಕೈ ತೋರಿಸಿ ಸಚಿವರನ್ನು ನೋಡುತ್ತಾ, 'ಅಕ್ಕಪಕ್ಕದಲ್ಲಿ ಭೂಗಳ್ಳರನ್ನು ಕೂರಿಸಿಕೊಂಡು ನೀನೇನು ಮಾಡಲು ಸಾಧ್ಯ' ಎಂದು ವ್ಯಂಗ್ಯವಾಗಿ ಮತ್ತು ದರ್ಪದಿಂದ ಅವಮಾನ ಮಾಡುವ ರೀತಿ ಮಾತನಾಡಿದ್ದಾರೆ' ಎಂದು ದೂರಿನಲ್ಲಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

'ಆರೋಪ ಸಾಬೀತುಪಡಿಸಲು ಹೇಳಿದಾಗ, 'ನಿನ್ನನ್ನು ಇವತ್ತು ಮುಗಿಸುತ್ತೇನೆ' ಎಂದು ಆಕ್ರೋಶ ಭರಿತರಾಗಿ ಅಲ್ಲಿದ್ದ ಸಿಬ್ಬಂದಿಯನ್ನು ಪಕ್ಕಕ್ಕೆ ತಳ್ಳಿ ಹೊಡೆಯಲು ಮುನ್ನುಗ್ಗಿ ರುತ್ತಾರೆ. ಆಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪರಿಸ್ಥಿತಿಯನ್ನು ಅವಲೋಕಿಸಿ ತಕ್ಷಣ ಆಗಬಹುದಾದ ಅನಾಹುತ ತಡೆದಿದ್ದಾರೆ. ಜಿಲ್ಲಾ ಸಚಿವರು ಎದ್ದು ನಿಂತು ಸಂಸದರಿಂದ ಆಗಬಹುದಾದ ಮಾರಣಾಂತಿಕ ಹಲ್ಲೆಯಿಂದ ತಪ್ಪಿಸಿದ್ದಾರೆ. ಸಂಸದರು ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಾಣ ಬೆದರಿಕೆವೊಡ್ಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ನೇತೃತ್ವದಲ್ಲಿ ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಜನತಾ ದರ್ಶನ ನಡೆದಿತ್ತು.

ರಾಜ್ಯದ ಹಿತಕ್ಕೆ ಡಿಎಂಕೆ ಸ್ನೇಹ ಬಳಸಲಿ: ತೇಜಸ್ವಿ ಸೂರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರವು ತಮಿಳುನಾಡಿನಲ್ಲಿ ಅಧಿಕಾರದಲ್ಲಿರುವ ಡಿಎಂಕೆ ಪಕ್ಷದ ಜತೆಗಿನ ಸ್ನೇಹವನ್ನು ರಾಜ್ಯದ ಒಳಿತಿಗಾಗಿ ಬಳಸಬೇಕು. ಸ್ನೇಹವನ್ನು ಬಳಸಿಕೊಂಡು ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ನಿರಾಕ್ಷೇಪಣಾ ಪತ್ರ ಪಡೆಯಬೇಕು' ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಆಗ್ರಹಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಜತೆಗಿನ ಸ್ನೇಹವನ್ನು ಮೇಕೆದಾಟು ಯೋಜನೆ ಆರಂಭಕ್ಕೆ ಪೂರಕವಾಗಿ ಬಳಸಿಕೊಳ್ಳಬೇಕು. ವಿರೋಧ ಪಕ್ಷಗಳ ಮೇಲೆ ಆರೋಪ ಮಾಡುವುದನ್ನು ಬಿಟ್ಟು ರಾಜ್ಯದ ಹಿತರಕ್ಷಿಸಲು ಕೆಲಸ ಮಾಡಬೇಕು' ಎಂದು ಒತ್ತಾಯಿಸಿದರು.

'ಬಿಜೆಪಿಯ ಸಂಸದರು ಕಾವೇರಿ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುತ್ತಿಲ್ಲ ಎಂಬ ಸುಳ್ಳು ಆರೋಪವನ್ನು ಕಾಂಗ್ರೆಸ್ ಮಾಡುತ್ತಿದೆ. ಹಲವು ಬಾರಿ ನಾವು ಕೇಂದ್ರ ಸಚಿವರನ್ನು ಭೇಟಿಮಾಡಿ ಚರ್ಚಿಸಿದ್ದೇವೆ. ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಮತ್ತು ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲೇ ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಭೇಟಿಮಾಡಿ ರಾಜ್ಯಕ್ಕೆ ನ್ಯಾಯ ಒದಗಿಸಲು ಮನವಿ ಮಾಡಿದ್ದೇವೆ. ಕಾಂಗ್ರೆಸ್ ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳಲು ಬಿಜೆಪಿ ಸಂಸದರ ವಿರುದ್ಧ ಆರೋಪ ಮಾಡುತ್ತಿದೆ' ಎಂದರು.

ಸಂಸದ ಪಿ.ಸಿ.ಮೋಹನ್, ರಾಜ್ಯ ಸಭಾ ಸದಸ್ಯ ನಾರಾಯಣ್, ಶಾಸಕರಾದ ಎಸ್.ಮುನಿರಾಜು, ಸಿ.ಕೆ.ರಾಮಮೂರ್ತಿ ಪತ್ರಿಕಾಗೋಷ್ಠಿಯಲ್ಲಿದ್ದರು.

ರಾಮನಗರ ಭಾಗಶಃ ಬಂದ್

ಪ್ರಜಾವಾಣಿ ವಾರ್ತೆ

ರಾಮನಗರ: ಕಾವೇರಿ ಕೊಳ್ಳದ ಜಿಲ್ಲೆ–ಗಳಲ್ಲೊಂದಾದ ರಾಮನಗರದಲ್ಲಿ ಶುಕ್ರವಾರ ಭಾಗಶಃ ಬಂದ್ ಆಗಿತ್ತು. ಚನ್ನಪಟ್ಟಣ, ಕನಕಪುರ ಹಾಗೂ ಹಾರೋಹಳ್ಳಿ ತಾಲ್ಲೂಕು ಬಹುತೇಕ ಸ್ತಬ್ಧವಾಗಿದ್ದವು. ಮಾಗಡಿ ತಾಲ್ಲೂಕಿನಲ್ಲಿ ಮಾತ್ರ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮಾಗಡಿ ಮತ್ತು ಕುದೂರಿನಲ್ಲಿ ಪ್ರತಿಭಟ–ನೆಗಷ್ಟೇ ಬಂದ್ ಸೀಮಿತವಾಗಿತ್ತು.

ನಾಲ್ಕು ತಾಲ್ಲೂಕುಗಳಲ್ಲಿ ಬೆಳಿಗ್ಗೆಯಿಂದಲೇ ಅಂಗಡಿಗಳು ಮುಚ್ಚಿದ್ದವು. ವ್ಯಾಪಾರ ವಹಿವಾಟು ಸಂಜೆವರೆಗೆ ಬಂದ್ ಆಗಿತ್ತು. ಸರ್ಕಾರಿ ಬಸ್ ಓಡಾಟವಿದ್ದರೂ, ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು. ಖಾಸಗಿ ವಾಹನಗಳ ಸಂಚಾರವೂ ಎಂದಿನಂತಿರಲಿಲ್ಲ.

ಬಂದ್ ಅಂಗವಾಗಿ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಕನ್ನಡಪರ, ರೈತ ಸಂಘಟನೆ, ವಿವಿಧ ಸಂಘ–ಸಂಸ್ಥೆಗಳು ಹಾಗೂ ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಮೆರವಣಿಗೆ ಮಾಡಿದರು. ಪ್ರಮುಖ ರಸ್ತೆಯನ್ನು ಕೆಲ ಹೊತ್ತು ತಡೆದು ಪ್ರತಿಭಟಿಸಿದರು. ರಾಮನಗರ ಮತ್ತು ಚನ್ನಪಟ್ಟಣದಲ್ಲಿ ಬೆಂಗಳೂರು–ಮೈಸೂರು ರಸ್ತೆ ಮತ್ತು ಕನಕಪುರದಲ್ಲಿ ಬೆಂಗಳೂರು–ಕನಕಪುರ ರಸ್ತೆ ತಡೆಯಲಾಗಿತ್ತು.



ಕನಕಪುರದಲ್ಲಿ ಕರ್ನಾಟಕ ಯುವಶಕ್ತಿ ವೇದಿಕೆಯ ಶ್ರೀನಿವಾಸ್ ತಲೆ ಬೋಳಿಸಿಕೊಂಡು ಪ್ರತಿಭಟನೆ ನಡೆಸಿದರು

ಕನಕಪುರದಲ್ಲಿ ಯುವಶಕ್ತಿ ವೇದಿಕೆ ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್ ಮುಕ್ಕಾಲು ಕಿಲೋ ಮೀಟರ್ ಉರುಳುಸೇವೆ ಮಾಡಿ, ತಲೆ ಬೋಳಿಸಿಕೊಂಡು ಪ್ರತಿಭಟಿಸುವ ಮೂಲಕ ಗಮನ ಸೆಳೆದರು. ರಾಮನ–ಗರದಲ್ಲಿ ಸಂಘಟನೆಗಳ ಮುಖಂಡರು ಸಂಸದರ ಭಾವಚಿತ್ರಗಳೊಂದಿಗೆ, ಖಾಲಿ ಮಡಿಕೆ ಹಿಡಿದು, ಎಮ್ಮೆ ಮೆರವಣಿಗೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಎಲ್ಲಿಯೂ ಅಹಿತಕರ ಘಟನೆಗಳು ನಡೆದಿಲ್ಲ. ತುರ್ತು ಸೇವೆಗಳು ಅಬಾಧಿತವಾಗಿದ್ದವು.

ಆದಿಚುಂಚನಗಿರಿ ಸೊಸೈಟಿ ನಿವೇಶನ ಹಂಚಿಕೆ ಪ್ರಕರಣ: ಗ್ರಾಹಕರ ವ್ಯಾಜ್ಯಗಳ ಆಯೋಗದ ತೀರ್ಪು

ನಿವೇಶನ ನೀಡದ್ದಕ್ಕೆ ₹10 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿವೇಶನ ನೀಡುವುದಾಗಿ ಹಣ ಪಡೆದು, ಹೇಳಿದ್ದ ಅಳತೆಯ ನಿವೇಶನ ಹಂಚಿಕೆ ಮಾಡದೆ ಬೇರೊಂದು ಅಳತೆಯ ನಿವೇಶನ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ, 'ಶ್ರೀ ಆದಿಚುಂಚನಗಿರಿ ಗೃಹ ನಿರ್ಮಾಣ ಸಹಕಾರ ಸಂಘ'ವು ಪ್ರಕರಣದಲ್ಲಿನ ದೂರುದಾರರಿಗೆ ₹ 10 ಲಕ್ಷ ಮೊತ್ತವನ್ನು ಪರಿಹಾರ ರೂಪದಲ್ಲಿ ಪಾವತಿಸಬೇಕು' ಎಂದು ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ.

ಈ ಕುರಿತಂತೆ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಆದಿ ಚುಂಚನಗಿರಿ ಕ್ಷೇತ್ರದ, 'ಶ್ರೀ ಆದಿ ಚುಂಚನಗಿರಿ ಗೃಹ ನಿರ್ಮಾಣ ಸಹಕಾರ ಸಂಘ' ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಆಯೋಗದ ನ್ಯಾಯಾಂಗ ಸದಸ್ಯ ರವಿಶಂಕರ್ ಮತ್ತು ಸದಸ್ಯೆ ಸುನೀತಾ ಸಿ.ಬಾಗೇವಾಡಿ ಅವರಿದ್ದ ಹೆಚ್ಚುವರಿ ವಿಭಾಗೀಯ ಪೀಠವು, ಮೇಲ್ಮನವಿಯನ್ನು ವಜಾಗೊಳಿಸಿದೆ.

'ಸೊಸೈಟಿಯು, ದೂರುದಾರ ಕೆ.ಎಸ್. ಪಾಪೇಗೌಡ ಅವರಿಗೆ ಪರಿಹಾರ ರೂಪದಲ್ಲಿ ₹ 10 ಲಕ್ಷ ಪರಿಹಾರ ಮತ್ತು ವ್ಯಾಜ್ಯದ ವೆಚ್ಚವಾಗಿ ₹ 25 ಸಾವಿರ ನೀಡಬೇಕು. ಈ ಆದೇಶ ಹೊರಬಿದ್ದ 45 ದಿನಗಳ ಒಳಗಾಗಿ ಪಾಪೇಗೌಡರ ಹೆಸರಿಗೆ ಎಲ್ಲ ಮೂಲಸೌಕರ್ಯ ಅಭಿವೃದ್ಧಿಪಡಿಸಿದ 60X40 ಚದರ ಅಡಿಯ ನಿವೇಶನವನ್ನು ನೋಂದಣಿ ಮಾಡಿಸಿಕೊಡಬೇಕು. ಈ ಆದೇಶ ಪಾಲನೆ ಮಾಡಲು ತಪ್ಪಿದಲ್ಲಿ, ಪರಿಹಾರದ ಮೊತ್ತಕ್ಕೆ ಶೇ 12ರ ಬಡ್ಡಿ ದರದಲ್ಲಿ ಹಣ ಪಾವತಿ ಮಾಡಬೇಕಾಗುತ್ತದೆ' ಎಂದು ಎಚ್ಚರಿಸಿದೆ. ದೂರುದಾರ ಪಾಪೇಗೌಡರ ಪರ ವಾದ ಮಂಡಿಸಿದ್ದ ಹೈಕೋರ್ಟ್ ವಕೀಲ ಪ್ರಶಾಂತ್ ಟಿ.ಪಂಡಿತ್ ಅವರ ವಾದವನ್ನು ಪುರಸ್ಕರಿಸಿದೆ.

ಪ್ರಕರಣವೇನು?: ಮೈಸೂರು ಜಿಲ್ಲೆ ವರುಣ ಹೋಬಳಿಯ ವಾಜಮಂಗಲದ ಸರ್ವೆ ನಂಬರ್ 205/1ರಲ್ಲಿ ಮೂಲ ಸೌಕರ್ಯ ಕಲ್ಪಿಸಿ ಅಭಿವೃದ್ಧಿಪಡಿಸಿದ 60X40 ಚದರ ಅಡಿಯ ನಿವೇಶನ ಪಡೆಯಲು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯ ಮುತ್ತುರಾಯ ಸ್ವಾಮಿ ಲೇಔಟ್ ನಿವಾಸಿಯಾದ ಕೆ.ಎಸ್.ಪಾಪೇಗೌಡ (69) 2006ರಿಂದ ಸೊಸೈಟಿಗೆ ಒಟ್ಟು ₹ 11.40 ಲಕ್ಷ ಮೊತ್ತವನ್ನು ಪಾವತಿ ಮಾಡಿದ್ದರು.

ಆದರೆ, ಸೊಸೈಟಿಯು ನಿವೇಶನ ಹಂಚಿಕೆ ಮಾಡಿರಲಿಲ್ಲ. ನಂತರ ಪಾಪೇಗೌಡರಿಗೆ ಸೂಚನೆಯೊಂದನ್ನು ನೀಡುವ ಮೂಲಕ, 'ಸೊಸೈಟಿ ವತಿಯಿಂದ ನಿಮಗೆ 60X40 ಚದರ ಅಡಿ ನಿವೇಶನ ಹಂಚಿಕೆ ಮಾಡಲು ಆಗುತ್ತಿಲ್ಲ. ಇದರ ಬದಲಿಗೆ 30x50ರ ನಿವೇಶನವನ್ನು ₹ 6,90,175ರ ಮೊತ್ತಕ್ಕೆ ನೀಡಲಾಗುವುದು' ಎಂದು ತಿಳಿಸಿತ್ತು. ಇದನ್ನು ಒಪ್ಪದ ಪಾಪೇಗೌಡ, 'ನನಗೆ 60X40 ಚದರ ಅಡಿ ನಿವೇಶನವನ್ನೇ ನೀಡಬೇಕು' ಎಂದು ಕೋರಿದ್ದರು. ಆದರೆ, ಈ ಕೋರಿಕೆಯನ್ನು ಸೊಸೈಟಿ ಒಪ್ಪದೇ ಇದ್ದಾಗ ಜಿಲ್ಲಾ ಗ್ರಾಹಕರ ನ್ಯಾಯಾಲಯಕ್ಕೆ ದೂರು ನೀಡಿದ್ದರು.

ದೂರಿನ ವಿಚಾರಣೆ ನಡೆಸಿದ್ದ ಮಂಡ್ಯ ಜಿಲ್ಲಾ ಗ್ರಾಹಕರ ನ್ಯಾಯಾಲಯ 2022ರ ಡಿಸೆಂಬರ್ 3ರಂದು, 'ಸೊಸೈಟಿಯು 2011ರ ಮೇ 3ರಿಂದ 2019ರ ಜುಲೈ 3ರವರೆಗೆ ಬಾಕಿ ₹ 4,56,000 ಮೊತ್ತವನ್ನು ಶೇ 9ರ ಬಡ್ಡಿ ದರದಲ್ಲಿ ಪಾಪೇಗೌಡರಿಗೆ ನೀಡಬೇಕು. ಅಂತೆಯೇ, ₹ 1.50 ಲಕ್ಷವನ್ನು ವ್ಯಾಜ್ಯದ ವೆಚ್ಚವಾಗಿ ಪಾವತಿಸಬೇಕು' ಎಂದು ಆದೇಶಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿದ್ದ ಸೊಸೈಟಿ ರಾಜ್ಯ ಆಯೋಗದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಯನ್ನು ವಜಾಗೊಳಿಸಿರುವ ಆಯೋಗವು, 'ಪಾಪೇಗೌಡರು ಸೊಸೈಟಿ ಆದೇಶದ ಅನುಸಾರ 60X40 ಚದರ ಅಡಿಯ ಅಭಿವೃದ್ಧಿಪಡಿಸಿದ ನಿವೇಶನ ಪಡೆಯಲು ಸಂಪೂರ್ಣ ಹಣವನ್ನು ಸಕಾಲದಲ್ಲಿ ಭರ್ತಿ ಮಾಡಿದ್ದಾರೆ. ಆದರೆ, ಸೊಸೈಟಿ ತನ್ನ ಸಾಮಾನ್ಯ ಸಭೆಯಲ್ಲಿ ಪಾಪೇಗೌಡರಿಗೆ ನೀಡಬೇಕಾದ 60X40 ಚದರ ಅಡಿಯ ನಿವೇಶನ ಹಂಚಿಕೆಯನ್ನು ರದ್ದುಪಡಿಸಿರುವುದಾಗಿ ತಿಳಿಸಿದೆ. ಇದು ನ್ಯಾಯಯುತವಲ್ಲ' ಎಂದು ಹೇಳಿದೆ.

'ಪಾಪೇಗೌಡ ಹಿರಿಯ ನಾಗರಿಕರಿದ್ದು, ಸೊಸೈಟಿಗೆ 2006ರ ಅಕ್ಟೋಬರ್‌ನಲ್ಲಿ ಆರಂಭಿಕ ₹ 1.75 ಲಕ್ಷ ಮೊತ್ತವನ್ನು ಪಾವತಿಸಿ ತದನಂತರ ಕಾಲಕಾಲಕ್ಕೆ ಸೊಸೈಟಿ ಸೂಚನೆಯ ಅನುಸಾರ ಒಟ್ಟು ₹ 11.40 ಲಕ್ಷ ಮೊತ್ತವನ್ನು ಕಂತಿನಲ್ಲಿ ಪಾವತಿಸಿದ್ದಾರೆ. ಆದರೆ, ಸೊಸೈಟಿ 60X40 ಚದರ ಅಡಿಯ ನಿವೇಶನ ನೀಡದೆ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡಿದೆ. ಈ ಕುರಿತಂತೆ ಪಾಪೇಗೌಡ ಸಲ್ಲಿಸಿದ್ದ ದೂರನ್ನು ವಿಚಾರಣೆ ನಡೆಸಿದ ಜಿಲ್ಲಾ ಗ್ರಾಹಕರ ನ್ಯಾಯಾಲಯ ನೀಡಿರುವ ಆದೇಶದಲ್ಲಿ ನ್ಯೂನತೆ ಕಂಡು ಬರುತ್ತಿದೆ. ಹೀಗಾಗಿ, ಈ ಆದೇಶವನ್ನು ಮಾರ್ಪಾಡು ಮಾಡಲಾಗುತ್ತಿದೆ' ಎಂದು ತಿಳಿಸಿದೆ.

₹ 10 ಸಾವಿರ ಲಂಚ ಪಡೆದ ಬಿಬಿಎಂಪಿ ಎಆರ್‌ಒ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿಯ ಖಾತೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲು ₹ 10,000 ಲಂಚ ಪಡೆದ ಬಿಬಿಎಂಪಿ ಹೆಗ್ಗನಹಳ್ಳಿ ವಿಭಾಗದ ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಚಂದ್ರಪ್ಪ ಬೀರಜ್ಜನವರ್ ಅವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಹೆಗ್ಗನಹಳ್ಳಿ ನಿವಾಸಿ ವಿ. ಸೋಮಶೇಖರ್ ಎಂಬುವವರು ತಮ್ಮ ಆಸ್ತಿಯ ಖಾತೆಯ ದಾಖಲೆಗಳನ್ನು ಒದಗಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ದಾಖಲೆ ಒದಗಿಸಲು ₹ 60,000 ಲಂಚ ನೀಡುವಂತೆ ಎಆರ್‌ಒ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ದೂರು ಸಲ್ಲಿಸಿದ್ದರು.

'₹ 10,000ವನ್ನು ಶುಕ್ರವಾರ ತಲುಪಿಸುವಂತೆ ಆರೋಪಿ ಸೂಚಿಸಿದ್ದರು. ಆ ಪ್ರಕಾರ ಸೋಮಶೇಖರ್ ಹಣ ತಲುಪಿಸಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತದ ಬೆಂಗಳೂರು ನಗರ ವಿಭಾಗದ ಇನ್‌ಸ್ಪೆಕ್ಟರ್ ಅಂಜನ್ ಕುಮಾರ್ ಮತ್ತು ತಂಡ, ಆರೋಪಿಯನ್ನು ಬಂಧಿಸಿತು. ದೂರುದಾರರ ಅರ್ಜಿ ಮತ್ತು ಅದಕ್ಕೆ ಸಂಬಂಧಿಸಿದ ಕಡತವನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ಮನೆಯಲ್ಲೂ ಶೋಧ: ಆರೋಪಿ ಚಂದ್ರಪ್ಪ ಅವರ ಮನೆಯ ಮೇಲೂ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಮನೆಯಲ್ಲಿ ₹ 5 ಲಕ್ಷ ನಗದು, ರಾಣೆಬೆನ್ನೂರಿನಲ್ಲಿ 6 ಎಕರೆ ಜಮೀನು, ಒಂದು ನಿವೇಶನ ಹಾಗೂ ಬೆಂಗಳೂರಿನ ಕೆ.ಆರ್.ಪುರದಲ್ಲಿ ಮೂರು ಮಹಡಿಯ ಕಟ್ಟಡ ಹೊಂದಿರುವ ದಾಖಲೆಗಳು ಪತ್ತೆಯಾಗಿವೆ ಎಂದು ಲೋಕಾಯುಕ್ತದ ಅಧಿಕಾರಿಗಳು ಮಾಹಿತಿ ನಿಡಿದ್ದಾರೆ.

ಪ್ರಶ್ನಿಸಿದ್ದಕ್ಕೆ ಕೊಲೆ ಮಾಡಿದ್ದ ಪ್ರಕರಣ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಅರ್ಬಾಜ್ (26) ಕೊಲೆ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಕಾಸೀಫ್, ಶಬ್ಬೀರ್, ಶಫಿ, ಅರ್ಮಾನ್ ಬಂಧಿತರು. ಸೆ. 22ರಂದು ಅರ್ಬಾಜ್ ಕೊಲೆ ನಡೆದಿತ್ತು. ನಾಲ್ವರನ್ನೂ ಬಂಧಿಸಲಾಗಿದೆ. ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಸವನಗುಡಿಯ ಖಾಜಿ ಸ್ಟ್ರೀಟ್ ನಿವಾಸಿ ಅರ್ಬಾಜ್ ಹಾಗೂ ಆರೋಪಿಗಳು, ಹಲವು ವರ್ಷಗಳ ಸ್ನೇಹಿತರು. ನಾಲ್ವರೂ ಅಪರಾಧ ಹಿನ್ನೆಲೆಯುಳ್ಳವರು. ಇವರ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.'

'ಅರ್ಬಾಜ್ ಇತ್ತೀಚೆಗೆ ಆರೋಪಿಗಳಿಂದ ಅಂತರ ಕಾಯ್ದುಕೊಂಡಿದ್ದರು. ಹೆಚ್ಚು ಭೇಟಿಯಾಗುತ್ತಿರಲಿಲ್ಲ. ಇದೇ ವೇಳೆ ಆರೋಪಿಗಳು, ಬೇರೊಂದುಕಡೆ ಕಳ್ಳತನ ಎಸಗಿದ್ದರು. ನಾಲ್ವರನ್ನೂ ಪೊಲೀಸರು ಬಂಧಿಸಿದ್ದರು. ಅರ್ಬಾಜ್‌ನನ್ನು ಪ್ರಕರಣದಲ್ಲಿ ಸಿಲುಕಿಸಲು ಮುಂದಾಗಿದ್ದ ಆರೋಪಿಗಳು, 'ನಮ್ಮ ಕಳ್ಳತನದಲ್ಲಿ ಅರ್ಬಾಜ್ ಭಾಗಿಯಾಗಿದ್ದಾನೆ' ಎಂಬುದಾಗಿ ಹೇಳಿಕೆ ನೀಡಿದ್ದರು. ಅರ್ಬಾಜ್‌ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣದಲ್ಲಿ ಸುಳ್ಳು ಹೇಳಿ ಸಿಲುಕಿಸಿದ್ದನ್ನು ಪ್ರಶ್ನಿಸಿದ್ದ ಅರ್ಬಾಜ್, ನಾಲ್ವರು ಆರೋಪಿಗಳ ಮೇಲೆ ಹಲ್ಲೆ ಮಾಡಿದ್ದರು. ಇದರಿಂದ ಸಿಟ್ಟಾದ ಆರೋಪಿಗಳು, ಸಂಚು ರೂಪಿಸಿ ಅರ್ಬಾಜ್ ಅವರನ್ನೇ ಕೊಲೆ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

20 ಬಾರಿ ಇರಿದು ರೌಡಿ ಕೊಲೆ

ಬೆಂಗಳೂರು: ದೇವರ ಜೀವನಹಳ್ಳಿ (ಡಿ.ಜೆ. ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಸಯ್ಯದ್ ಸುಹೇಲ್ ಅಲಿಯಾಸ್ ಪಪ್ಪಾಯಿಯನ್ನು (18) ದುಷ್ಕರ್ಮಿಗಳು ಕೊಲೆ ಮಾಡಿ, ಪರಾರಿಯಾಗಿದ್ದಾರೆ.

'ಅಪರಾಧ ಹಿನ್ನೆಲೆಯುಳ್ಳ ಸುಹೇಲ್, ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಈತನ ಹೆಸರು ರೌಡಿಪಟ್ಟಿಯಲ್ಲಿತ್ತು. ಜನ್ಮದಿನವಾಗಿದ್ದ ಗುರುವಾರವೇ (ಸೆ. 28) ಈತನ ಕೊಲೆಯಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಥಳೀಯ ನಿವಾಸಿ ಸುಹೇಲ್, ಗುರುವಾರ ರಾತ್ರಿ ತನ್ನ ಮನೆಯಲ್ಲಿದ್ದ. ಇದೇ ವೇಳೆ ಮನೆಗೆ ಬಂದಿದ್ದ ಆರೋಪಿಗಳು, ಮಾತನಾಡಬೇಕೆಂದು ಹೇಳಿ ಸುಹೇಲ್‌ನನ್ನು ಕರೆದೊಯ್ದಿದ್ದರು. ಮನೆ ಸಮೀಪದ ಸ್ಥಳವೊಂದಕ್ಕೆ ಕರೆದೊಯ್ದಿದ್ದ ಆರೋಪಿಗಳು, ಜಗಳ ತೆಗೆದು ಸುಹೇಲ್‌ಗೆ ಚಾಕುವಿನಿಂದ 20 ಬಾರಿ ಇರಿದಿದ್ದರು.'

'ತೀವ್ರ ಗಾಯಗೊಂಡಿದ್ದ ಸುಹೇಲ್‌ನನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಹಳೇ ವೈಷಮ್ಯದಿಂದಾಗಿ ಪರಿಚಯಸ್ಥರೇ ಕೃತ್ಯ ಎಸಗಿರುವ ಮಾಹಿತಿ ಇದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಮಣ್ಣಿನಲ್ಲಿ ಕರಗುವ ನೀರಿನ ಬಾಟಲಿ

ಪ್ಲಾಸ್ಟಿಕ್ ಬಾಟಲ್ ಬಳಕೆ ತಡೆಗೆ ಡಿಎಫ್‌ಆರ್‌ಎಲ್‌ನಿಂದ ಹೊಸ ತಂತ್ರಜ್ಞಾನ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯವು (ಡಿಎಫ್‌ಆರ್‌ಎಲ್), ಪರಿಸರಕ್ಕೆ ಮಾರಕವಾಗಿ ಪರಿಣಮಿಸಿರುವ ಪ್ಲಾಸ್ಟಿಕ್ ಬಾಟಲಿಗಳ ಬಳಕೆ ತಡೆಯುವ ಉದ್ದೇಶದಿಂದ 'ಮಣ್ಣಿನಲ್ಲಿ ಕರಗುವ ನೀರಿನ ಬಾಟಲಿ' ತಯಾರಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸಿದೆ.

'ಇದೇ ಮೊದಲ ಬಾರಿಗೆ ಇಂತಹ ಬಾಟಲಿ ಸಂಶೋಧನೆ ನಡೆಸಲಾಗಿದೆ' ಎಂದು ಡಿಎಫ್‌ಆರ್‌ಎಲ್ ತಿಳಿಸಿದೆ. ಈ ಬಾಟಲಿಯನ್ನು ರಕ್ಷಣಾ ಹಾಗೂ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ಅಜಯ್ ಭಟ್ ಶುಕ್ರವಾರ ಬಿಡುಗಡೆ ಮಾಡಿದರು.

'ಮಿಲಿಟರಿ ಪಡಿತರ ಮತ್ತು ನಿರ್ದಿಷ್ಟ ಪೌಷ್ಟಿಕಾಂಶದ ಅವಶ್ಯಕತೆಗಳಿಗಾಗಿ ಸಿರಿಧಾನ್ಯಗಳು' ಕುರಿತು ಇಲ್ಲಿ ಆಯೋಜಿಸಿರುವ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಉದ್ಘಾಟನೆ ಕಾರ್ಯಕ್ರಮದಲ್ಲಿ ಬಾಟಲಿಯ ವಿಶೇಷಗಳನ್ನು ತಿಳಿಸಲಾಯಿತು.

'ಇಂಜೆಕ್ಷನ್ ಬ್ಲೋ ಮೌಲ್ಡಿಂಗ್ ಟೆಕ್ನಿಕ್' ಬಳಸಿ 'ಪಾಲಿ ಲಾಕ್ಟಿಕ್ ಆ್ಯಸಿಡ್'ನಿಂದ 250 ಮಿ.ಲೀ. ಸಾಮರ್ಥ್ಯದ ಬಾಟಲಿಯನ್ನು ಮಂಗಳೂರಿನ ಕೊಂಕಣ್ ಸ್ಪೆಷಾಲಿಟಿ ಪಾಲಿ ಪ್ರಾಡಕ್ಟ್ ಕಂಪನಿ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಅದನ್ನು ಬಳಸಿದರೆ ಪ್ಲಾಸ್ಟಿಕ್ ಬಾಟಲಿಗಳಿಗೆ ವಿದಾಯ ಹೇಳಬಹುದು' ಎನ್ನುತ್ತದೆ ಡಿಎಫ್‌ಆರ್‌ಎಲ್.



'ಮಣ್ಣಿನಲ್ಲಿ ಕರಗುವ ನೀರಿನ ಬಾಟಲಿ'ಗಳನ್ನು ರಕ್ಷಣಾ ಖಾತೆ ರಾಜ್ಯ ಸಚಿವ ಅಜಯ್ ಭಟ್ ಶುಕ್ರವಾರ ಬಿಡುಗಡೆ ಮಾಡಿದರು. ಸೇನೆಯ ಪ್ರಧಾನ ಕಚೇರಿಯ ಎಡಿಜಿ ಎಸ್‌ಟಿ (ಎಸ್‌ಎಂ) ಮೇಜರ್ ಜನರಲ್ ಎಸ್.ಎಸ್. ಅಹ್ಲಾವತ್, ಡಿಆರ್‌ಡಿಒ (ಜೀವ ವಿಜ್ಞಾನ) ಮಹಾನಿರ್ದೇಶಕ ಉಪೇಂದ್ರ ಕುಮಾರ್ ಸಿಂಗ್ ಇದ್ದಾರೆ

'ಐಎಸ್‌ಒ 17088-2021 ಮತ್ತು ಐಎಸ್ 17899 ಟಿ-2022 ಪ್ರಮಾಣೀಕೃತವಾದ ಈ ಉತ್ಪನ್ನವು ಸಂಪೂರ್ಣ ಕರಗುವ ಗುಣಲಕ್ಷಣವನ್ನು ಹೊಂದಿದೆ. ನೀರು, ಇತರ ಪಾನೀಯಗಳನ್ನು ಹಾಕಲು ಸುರಕ್ಷಿತ. ಬಾಟಲಿಯ ಕ್ಯಾಪ್ ಹಾಗೂ ಲೇಬಲ್ ಕೂಡ ಮಣ್ಣಿನಲ್ಲಿ ಕರಗುತ್ತದೆ' ಎಂದು ಹೇಳಿದೆ.

'ವಾಣಿಜ್ಯ ಉದ್ದೇಶಕ್ಕಾಗಿ ಉತ್ಪಾದನೆ ಇನ್ನೂ ಶುರುವಾಗಿಲ್ಲ. ಬಾಟಲಿಯಲ್ಲಿರುವ ರಾಸಾಯನಿಕ ಪದಾರ್ಥ ನೀರಿಗೆ ಮಿಶ್ರವಾಗಬಹುದೇ ಎಂಬುದನ್ನು ಪರೀಕ್ಷಿಸಲಾಗಿದೆ. ಬಾಟಲಿಗೆ ನೀರು ತುಂಬಿ ಒಂದು ವರ್ಷದವರೆಗೆ ಇಡಲಾಗಿತ್ತು. ಆದರೆ, ಯಾವುದೇ ವ್ಯತಿರಿಕ್ತ ಫಲಿತಾಂಶ (ಲೀಚಿಂಗ್ ಎಫೆಕ್ಟ್ ಆಗಿಲ್ಲ) ಬಂದಿಲ್ಲ. ತಂತ್ರಜ್ಞಾನದ ವರ್ಗಾವಣೆಯಾದ ನಂತರ ಆಯಾ ಕಂಪನಿಗಳು ದರ ನಿಗದಿಪಡಿಸಲಿವೆ' ಎನ್ನುತ್ತಾರೆ ಡಿಎಫ್‌ಆರ್‌ಎಲ್ ಅಧಿಕಾರಿಗಳು.

ತಲವಾರ್: ಐವರ ವಿರುದ್ಧ ಎಫ್‌ಐಆರ್

ಕೋಲಾರ: ಈದ್ ಮಿಲಾದ್ ಹಬ್ಬದ ಅಂಗವಾಗಿ ಗುರುವಾರ ನಗರದ ಕ್ಲಾಕ್ ಟವರ್ ಬಳಿ ಅನುಮತಿ ಪಡೆಯದೆ ತಲವಾರ್ ಮಾದರಿಯನ್ನು ಅಳವಡಿಸಿದ ಆರೋಪದ ಮೇಲೆ ನಗರ ಪೊಲೀಸರು ಐವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

'ಯಾವುದೇ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಕಬ್ಬಿಣದ ಪೈಪುಗಳಿಂದ ಹೆಬ್ಬಾಗಿಲು ನಿರ್ಮಿಸಿ, ಅದರ ಮೇಲೆ ಸುಮಾರು 15 ಅಡಿ ಹಾಗೂ 200 ಕೆ.ಜಿಯ ಸ್ಟೀಲ್ ಖಡ್ಗದ ಆಕೃತಿಯನ್ನು ಪ್ರತಿಷ್ಠಾಪಿಸಿ ಸಾರ್ವಜನಿಕರಲ್ಲಿ ಆತಂಕದ ವಾತಾವರಣ ಮೂಡಿಸಲಾಗಿದೆ. ಈ ಸಂಬಂಧ ಅಸ್ಲಾಂ ಪಾಷ, ಮನ್ಸೂರ್ ಅಲಿ, ಚಾಂದ್ ಪಾಷ, ಸಾಧಿಕ್ ಪಾಷ ಹಾಗೂ ಮೊಹಮ್ಮದ್ ಬಿಲಾಲ್ ವಿರುದ್ಧ ಕಾನೂನು ಕ್ರಮ ವಹಿಸಲಾಗಿದೆ' ಎಂದು ಎಸ್.ಪಿ ಎಂ.ನಾರಾಯಣ ತಿಳಿಸಿದ್ದಾರೆ.

'ಈದ್ ಮಿಲಾದ್ ಮೆರವಣಿಗೆಯಲ್ಲಿ ಹರಿತವಾದ ಕತ್ತಿ ಜಳಪಿಸುತ್ತಾ, ಕುದುರೆ ಸವಾರಿ ಮಾಡಿದ ಸಗೀರ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ' ಎಂದಿದ್ದಾರೆ.

ಆಸ್ಪತ್ರೆ ಕಾಮಗಾರಿ ಪರಿಶೀಲನೆ

ರಾಜರಾಜೇಶ್ವರಿನಗರ: ಮಾಗಡಿ ರಸ್ತೆ ಬಳಿಯ ಉಲ್ಲಾಳು ಗ್ರಾಮದಲ್ಲಿ ಮೂರು ಎಕರೆ ಪ್ರದೇಶದಲ್ಲಿ ₹ 89 ಕೋಟಿ ವೆಚ್ಚದ 250 ಹಾಸಿಗೆಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಕಾಮಗಾರಿಯನ್ನು ಶಾಸಕ ಎಸ್.ಟಿ. ಸೋಮಶೇಖರ್ ಪರಿಶೀಲನೆ ನಡೆಸಿದರು.

ಆರೋಗ್ಯ ಮತ್ತು ಕುಟುಂಬ ಇಲಾಖೆ ವತಿಯಿಂದ ನಡೆಯುತ್ತಿರುವ ಎ, ಬಿ, ಸಿ ಮೂರು ಬ್ಲಾಕ್‌ಗಳ ಕಟ್ಟಡದಲ್ಲಿ ಪಾರ್ಕಿಂಗ್, ನೆಲ, ಮೂರು ಅಂತಸ್ತು ಮಹಡಿಗಳು ಬರಲಿವೆ. ಮೊದಲ ಮತ್ತು ಎರಡನೇ ಬ್ಲಾಕ್ ಕಾಮಗಾರಿ ಪ್ರಗತಿಯಲ್ಲಿದ್ದು ಮೂರನೇ ಬ್ಲಾಕ್ ಕಾಮಗಾರಿಯು ವೇಗವಾಗಿ ನಡೆಯಬೇಕು. ಗುಣಮಟ್ಟದಿಂದ ಕೂಡಿರಬೇಕು ಎಂದು ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ಅತ್ಯಾಧುನಿಕ ಸರ್ಕಾರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ತಲೆ ಎತ್ತಲಿದೆ. ಎಲ್ಲ ವಿಧದ ಚಿಕಿತ್ಸೆ, ಶಸ್ತ್ರಚಿಕಿತ್ಸೆ,ಎಲ್ಲ ಕಾಯಿಲೆಗಳಿಗೆ ಔಷಧ ಇಲ್ಲಿ ದೊರೆಯಲಿದೆ. ಅಪಘಾತ, ತುರ್ತು ಹರಿಗೆಗೆ ನಗರದ ದೊಡ್ಡ ಆಸ್ಪತ್ರೆಗಳಿಗೆ ತೆರಳಲು ಸಂಚಾರದಟ್ಟಣೆಯಿಂದ ವಿಳಂಬವಾಗಿ ರೋಗಿಗಳು ಪರದಾಡುವಂತಾಗುತ್ತಿತ್ತುಎಂದರು.

ಆರೋಗ್ಯ ಇಲಾಖೆಯ ಪ್ರಧಾನ ವ್ಯವಸ್ಥಾಪಕ ಸತ್ಯನಾರಾಯಣ, ನಗರ ಯೋಜನೆ ವ್ಯವಸ್ಥಾಪಕ ವೆಂಕಟೇಶ್, ತಾಲ್ಲೂಕುಪಂಚಾಯಿತಿ ಮಾಜಿಅಧ್ಯಕ್ಷಬಿ. ಅನಿಲ್‌ಕುಮಾರ್, ಮಹೇಂದ್ರಕಿರಣ್, ಕೇಬಲ್ ಹರೀಶ್ ಇದ್ದರು.

ಪುಣೆ ರೇಸ್

ಚಾಪಿನ್ ಗೆಲ್ಲುವ ನಿರೀಕ್ಷೆ

ಟೈಮ್ಸ್ ಆಫ್ ಇಂಡಿಯಾ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಚಾಪಿನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ನೆಲ್ಸನ್ ರಿವರ್ 2, ಮೊಮೆಂಟ್ ಆಫ್ ಮ್ಯಾಡ್‌ನೆಸ್ 6, ಸುಪ್ರೀಮ್ ಸ್ಪಿರಿಟ್ 1.
2ನೇ ರೇಸ್: ಮಾಸ್ಟೆರಿ 1, ಅಂಬರ್ ನೈಟ್ 3, ಪ್ರೀಸಿಯೊಸೊ 2.
3ನೇ ರೇಸ್: ಚಾಪಿನ್ 2, ಇನ್ ಕಂಟೆನ್ಷನ್ 3, ಪ್ರೈಡ್ಸ್ ಏಂಜಲ್ 6.
4ನೇ ರೇಸ್: ಬೇಬಿ ಬಜೂಕ 1, ಟೈಮ್ ಅಂಡ್ ಟೈಡ್ 8, ಐರಿಶ್ ಗೋಲ್ಡ್ 10.
5ನೇ ರೇಸ್: ಗಾರ್ಡನ್ ಆಫ್ ಡಾನ್ 12, ಕನ್ಯಾ ರಾಶಿ 2, ಲಿಟ್ಟೋರಿಯೊ 4.
6ನೇ ರೇಸ್: ಮೈಟಿ ಥಂಡರ್ 11, ಫ್ಯಾಶನ್ ಐಕಾನ್ 3, ಲಾರ್ಡ್ ಮರ್ಫಿ 3
7ನೇ ರೇಸ್: ಅಡಮಾಸ್ 4, ವಾಲ್ಕೈ 1, ಅಟ್ಟೈನ್ಸ್ 7.

ಉತ್ತಮ ಬೆಟ್: ಮಾಸ್ಟೆರಿ

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6



ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ನಡೆದ ಸಮಾರಂಭದಲ್ಲಿ ಗಡೇನಹಳ್ಳಿ ಗ್ರಾಮದ ರೈತ ಜೆ.ಸಿ. ಮುನೇಗೌಡ ಅವರಿಗೆ 'ಅತ್ಯುತ್ತಮ ದಾಳಿಂಬೆ ಬೆಳೆಗಾರ' ಪ್ರಶಸ್ತಿ ಪ್ರದಾನ ಮಾಡಲಾಯಿತು.



ಅರಣ್ಯ ಪ್ರದೇಶದಲ್ಲಿರುವ 'ಅಲಾರ ಲೇಕ್ ಹೌಸ್' ರೆಸಾರ್ಟ್

ಅಕ್ರಮ ರೆಸಾರ್ಟ್ ಜಪ್ತಿ

ಬೆಂಗಳೂರು: ಗೊಲ್ಲಹಳ್ಳಿ ಗುಡ್ಡ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ನಡೆಯುತ್ತಿದ್ದ 'ಅಲಾರ ಲೇಕ್ ಹೌಸ್' ರೆಸಾರ್ಟ್ ಅನ್ನು ಜಪ್ತಿ ಮಾಡಲಾಗಿದೆ.

'ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿಕೊಂಡಂತಿರುವ ಐದು ಎಕರೆ ಪ್ರದೇಶದಲ್ಲಿ ಮೂರು ವರ್ಷಗಳಿಂದ ಈ ಅಲಾರ ಲೇಕ್ ಹೌಸ್ ರೆಸಾರ್ಟ್ ಅಕ್ರಮವಾಗಿ ನಡೆಯುತ್ತಿತ್ತು. ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ, ಭೂಮಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ' ಎಂದು ಬೆಂಗಳೂರು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್. ರವೀಂದ್ರಕುಮಾರ್ ತಿಳಿಸಿದರು.

ಜೆಲ್ಲಿ ಕಲ್ಲು ತುಂಬಿದ ಟ್ರ್ಯಾಕ್ಟರ್, ಟ್ರಾಲಿ ಸೇರಿದಂತೆ ಕಟ್ಟಡ ನಿರ್ಮಾಣ ಉಪಕರಣಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಅರಣ್ಯ ಕಾಯ್ದೆ ಪ್ರಕಾರ, ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ನಲ್ಲಕ್ಕನದೊಡ್ಡಿಯಲ್ಲಿದ್ದ ಅಲಾರ ಲೇಕ್ ಹೌಸ್ ಮಾಲೀಕ ರಾಜೇಶ್ ಷಾ ಅವರ ಮೇಲೆ ಮೊಕದ್ದಮೆ ದಾಖಲಿಸಲಾಗಿದೆ. 2ನೇ ಎಸಿಜೆಎಂ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ ಎಂದು ಮಾಹಿತಿ ನೀಡಿದರು.

ಗುಳಕಮಲೆ ಸರ್ವೆ ನಂ.36ರಲ್ಲಿ ಇಂತಹದ್ದೇ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಅ.3ರಂದು ಪರಿಶೀಲನೆ ನಡೆಸಲಾಗುತ್ತದೆ ಎಂದು ರವೀಂದ್ರ ಕುಮಾರ್ ಹೇಳಿದರು.

'ಪೋಷಣ ಮಾಸಾಚರಣೆ'

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ರಾಷ್ಟ್ರೀಯ ಪೋಷಣ ಅಭಿಯಾನದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಗೋಪಾಲಪುರ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಗೋಪಾಲಪುರ ಗ್ರಾಮದಲ್ಲಿ ಪೋಷಣ ಮಾಸಾಚರಣೆ ಕಾರ್ಯಕ್ರಮ ನಡೆಯಿತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ಮಹಾನಂದ ಕುಂಬಾರ್ ಮಾತನಾಡಿ 'ಬಾಣಂತಿಯರು ಮನೆಯಲ್ಲಿಯೇ ಸಿಗುವ ನುಗ್ಗೆ ಸೊಪ್ಪು, ನುಗ್ಗೆಕಾಯಿ, ಕ್ಯಾರೆಟ್, ಬೀಟ್ರೂಟ್‌ನಂಥ ತರಕಾರಿಗಳನ್ನು ಹೆಚ್ಚು ಉಪಯೋಗಿಸಬೇಕು. ಗರ್ಭಿಣಿಯರ ಆಹಾರದಲ್ಲಿ ಎಲ್ಲಾ ಪೌಷ್ಟಿಕಾಂಶಯುಕ್ತ ಪದಾರ್ಥಗಳು ಒಳಗೊಂಡಿರಬೇಕು' ಎಂದರು.

'ಬಾಲ್ಯ ವಿವಾಹ ಮಾಡಬಾರದು. ಆ ಹಂತದಲ್ಲಿ ಅವರ ಗರ್ಭಕೋಶ ಬೆಳವಣಿಗೆ ಆಗಿರುವುದಿಲ್ಲ. ಒಂದು ವೇಳೆ ಬಾಲ್ಯಾವಸ್ಥೆಯಲ್ಲಿ ವಿವಾಹ ಮಾಡಿದರೆ ಅವರು ಗರ್ಭಕೋಶದ ಸೋಂಕಿಗೆ ತುತ್ತಾಗಿ ತಾಯಿ ಮತ್ತು ಮಗುವಿನ ಪ್ರಾಣಕ್ಕೆ ಕುತ್ತು ಎದುರಾಗುತ್ತದೆ' ಎಂದರು.



ಗೋಪಾಲಪುರ ಗ್ರಾಮದಲ್ಲಿ ಪೋಷಣ ಮಾಸಾಚರಣೆ ಕಾರ್ಯಕ್ರಮ ನಡೆಯಿತು

ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ಇದೇ ವೇಳೆ ಅವರು ತಿಳಿಸಿದರು.

ಗೋಪಾಲಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಿ.ರಾಮಸ್ವಾಮಿ ಮಾತನಾಡಿ, 'ಬಾಣಂತಿಯರು ಶುಚಿತ್ವ ಕಾಪಾಡಿ ಕೊಳ್ಳಬೇಕು. ಔಷಧಗಳನ್ನು ತಾವಾಗಿಯೇ ತೆಗೆದುಕೊಳ್ಳದೆ ವೈದ್ಯರ ಸಲಹೆ ಮೇರೆಗೆ ತೆಗೆದುಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ಗರ್ಭಿಣಿಯರು ಬಾಣಂತಿಯರು ಮತ್ತು ಮಕ್ಕಳಿಗೆ ಆರೋಗ್ಯ ಕೇಂದ್ರದಿಂದ ದೊರೆಯುವ ಚುಚ್ಚುಮದ್ದುಗಳು ಹಾಗೂ ಗರ್ಭಿಣಿಯರ ಆರೈಕೆ ಬಗ್ಗೆ ವೈದ್ಯಾಧಿಕಾರಿ ಸಚಿನ್ ಕೆ.ಎಸ್. ಮಾಹಿತಿ ನೀಡಿದರು.

ನಗರದಲ್ಲಿ ಇಂದು

ವಿಶ್ವ ಹೃದಯ ದಿನದ ಪ್ರಯುಕ್ತ ವಾಕಥಾನ್: ಅಧ್ಯಕ್ಷತೆ: ಸಿದ್ದರಾಮಯ್ಯ, ಚಾಲನೆ: ದಿನೇಶ್ ಗುಂಡೂರಾವ್, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಸಂತೋಷ್ ಲಾಡ್, ಆಯೋಜನೆ: ತಥಾಗತ ಆಸ್ಪತ್ರೆ: ಸ್ವಾತಂತ್ರ್ಯ ಉದ್ಯಾನದಿಂದ ಮಂತ್ರಿಮಾಲ್, ಬೆಳಿಗ್ಗೆ 8

'ಸೈನ್ಸ್ ಇನ್ ಆ್ಯಕ್ಷನ್' ಬೃಹತ್ ವಿಜ್ಞಾನ ಉತ್ಸವ: ಅಧ್ಯಕ್ಷತೆ: ಎಚ್.ಎನ್. ಸುಬ್ರಹ್ಮಣ್ಯ, ಮುಖ್ಯ ಅತಿಥಿ: ಶುಭಾ ವಿ., ಆಯೋಜನೆ ಹಾಗೂ ಸ್ಥಳ: ಬಿ.ವಿ. ಜಗದೀಶ್ ವಿಜ್ಞಾನ ಕೇಂದ್ರ, ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 9.30

ಸುರೇಶ್ ಸಿ.ಷಾ. ಅವರಿಗೆ ಗೌರವ ನಮನ: ನಾಲ್ಕು ಪುಸ್ತಕಗಳು ಲೋಕಾರ್ಪಣೆ: ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಮುಖ್ಯ ಅತಿಥಿ: ಮಲ್ಲೇಪುರಂ ಜಿ. ವೆಂಕಟೇಶ್, ಗೌರವ ಅತಿಥಿ: ರಾಜೇಶ್ ಮೆಹ್ತಾ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಹೋಟೆಲ್ ದಿ ಲಲಿತ್ ಅಶೋಕ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.15

ಅಂತರರಾಷ್ಟ್ರೀಯ ವಾಣಿಜ್ಯ ದಿನ ಆಚರಣೆ: ಮುಖ್ಯ ಅತಿಥಿ: ಮಹಾಬಲೇಶ್ವರ ತುಂಗ, ಉಪಸ್ಥಿತಿ: ಗುರುರಾಜ್ ಎಸ್., ಆಯೋಜನೆ ಹಾಗೂ ಸ್ಥಳ: ವಿದ್ಯಾ ಪೂರ್ಣ ಪ್ರಜ್ಞಾ ಪದವಿಪೂರ್ವ ಕಾಲೇಜು, ಬಾಗಲಗುಂಟೆ, ಬೆಳಿಗ್ಗೆ 10.30

ಬ್ಯಾರಿಸ್ ಸೌಹಾರ್ದ ಭವನ ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು: ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ: ಬಿ.ಎಂ. ಫಾರೂಖ್, ಆಯೋಜನೆ: ದಿ ಬ್ಯಾರಿಸ್ ವೆಲ್ಫೇರ್ ಅಸೋಸಿಯೇಷನ್, ಸ್ಥಳ: ಬ್ಯಾರಿಸ್ ಸೌಹಾರ್ದ ಭವನ, ಎಚ್‌ಬಿಆರ್ ಲೇಔಟ್, ಬೆಳಿಗ್ಗೆ 10.30

ಸಾಮೂಹಿಕ ಸತ್ಯನಾರಾಯಣ ಸ್ವಾಮಿ ಪೂಜೆ ಮತ್ತು ಧಾರ್ಮಿಕ ಸಭೆ: ಅಧ್ಯಕ್ಷತೆ: ಎಲ್.ಎ. ರವಿಸುಬ್ರಹ್ಮಣ್ಯ, ಮುಖ್ಯ ಅತಿಥಿಗಳು: ತೇಜಸ್ವಿ ಸೂರ್ಯ, ಅನಿಲ್ ಕುಮಾರ್, ಚಂದ್ರಶೇಖರ ಕಂಬಾರ, ಬಿ. ಜಯರಾಮ್ ನೆಲ್ಲಿತ್ತಾಯ, ಕೆ. ವೆಂಕಟೇಶ್, ಆಯೋಜನೆ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜೆ.ಸಿ. ಟ್ರಸ್ಟ್, ಸ್ಥಳ: ವೆಂಕಟಾದ್ರಿ ಕಲ್ಯಾಣ ಮಂಟಪ, ಕತ್ರಿಗುಪ್ಪೆ, ಬೆಳಿಗ್ಗೆ 11

ಜಿಯಾವುಲ್ಲಾ ಕೆ. ಹೊಸಹಳ್ಳಿ ಅವರ 'ದೆಸೆಯಿಂದ...' ಕವನ ಸಂಕಲನ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ರಘುನಾಥ್ ಚ.ಹ., ಮುಖ್ಯ ಅತಿಥಿ: ವಿಶ್ವನಾಥ ಹಿರೇಮಠ, ಕೃತಿ ಬಗ್ಗೆ ಮಾತು: ಯಲ್ಲಪ್ಪ ಟಿ., ಆಯೋಜನೆ: ಟೋಟಲ್ ಕನ್ನಡ ಪ್ರಕಾಶನ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಮಧ್ಯಾಹ್ನ 3



ಗೊ.ರು. ಚನ್ನಬಸಪ್ಪ

ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಿಗೆ ಸನ್ಮಾನ, ಗೊ.ರು. ಚನ್ನಬಸಪ್ಪ ಅವರ ಹೆಸರಿನಲ್ಲಿ ಏರ್ಪಡಿಸಿದ್ದ ಗೀತಗಾಯನ ಸ್ಪರ್ಧೆಯ ವಿಜೇತರಿಗೆ ಸನ್ಮಾನ: ಉದ್ಘಾಟನೆ: ಸಿದ್ದೇಗೌಡ, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಮುಖ್ಯ ಅತಿಥಿಗಳು: ಗೊ.ರು. ಚನ್ನಬಸಪ್ಪ, ಗುಬ್ಬಿಗೂಡು ರಮೇಶ್, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 4

ಸಿರಿಕಲಾ ಯಕ್ಷೋತ್ಸವ: ಯಕ್ಷಗಾನ ಪ್ರದರ್ಶನ: 'ಮಾಯಾಪುರಿ', 'ಮಾರುತಿ ಪ್ರತಾಪ', ಉಪಸ್ಥಿತಿ: ಎಲ್.ಎ. ರವಿಸುಬ್ರಹ್ಮಣ್ಯ, ಚಂದ್ರಶೇಖರ ಹೆಬ್ಬಾರ್, ಪಿ.ಸಿ. ರಾವ್, ಎಂ.ಆರ್. ಭಟ್, ಮಂಜುನಾಥ್ ಹತ್ವಾರ್, ರಾಘವೇಂದ್ರ ಹತ್ವಾರ್, ನೀಲಾವರ ಸಂಜೀವ ರಾವ್, ಶ್ರೀಪಾದ ಹೆಗಡೆ, ಜಿ.ಆರ್. ದೇವಾಡಿಗ, ಆಯೋಜನೆ: ಸಿರಿಕಲಾ ಮೇಳ, ಸ್ಥಳ: ಲಕ್ಷ್ಮೀನಾರಾಯಣ ವೇದಿಕೆ, ಹೋಟೆಲ್ ಅನ್ನ ಕುಟೀರ, ಕತ್ರಿಗುಪ್ಪೆ, ಸಂಜೆ 4

'ಏಕರೂಪ ನಾಗರಿಕ ಸಂಹಿತೆಯಾಚೆಗೆ ಲಿಂಗ ಸಮಾನತೆ' ವಿಷಯದ ಬಗ್ಗೆ ಚರ್ಚೆ: ಹಸೀನಾ ಖಾನ್, ಅನಿತಾ ಚೆರಿಯಾ, ಆರತಿ ಮುಂಡ್ಕುರ್, ಪೂರ್ಣಾ ರವಿಶಂಕರ್, ಸೌಮ್ಯಾ ಉಮಾ, ಭಯಾನಿಕ ಶಾ, ಆಯೋಜನೆ ಹಾಗೂ ಸ್ಥಳ: ಆಲ್ಟರ್‌ನೇಟಿವ್ ಲಾ ಫೋರಂ, ಇನ್ಫ್ಯಾಂಟ್ರಿ ರಸ್ತೆ, ಶಿವಾಜಿ ನಗರ, ಸಂಜೆ 4.15

ದಾಸರು ಕಂಡ ಕೃಷ್ಣ: ಪ್ರಸ್ತುತಿ: ರಕ್ಷಾ ಕಾರ್ತಿಕ್ ಮತ್ತು ಅವರ ವೃಂದ, ಮುಖ್ಯ ಅತಿಥಿಗಳು: ರಾಘವನ್, ರಾಧಾಕೃಷ್ಣ, ಕೆ.ಎಸ್. ನಾಗೇಶ್, ಕೆ. ಅಯ್ಯನಾರ್, ಎಸ್.ಷಡಕ್ಷರಿ, ವಿ. ಶ್ರೀನಿವಾಸ ರಾಜು, ನಟ್ಟುವಾಂಗ: ದೇವರಾಜು ಬಿ. ವಿ., ಗಾಯನ: ಬಾಲಸುಬ್ರಹ್ಮಣ್ಯ ಶರ್ಮ, ಮೃದಂಗ: ಶ್ರೀಹರಿ ರಂಗಸ್ವಾಮಿ, ವೀಣೆ: ಗೋಪಾಲ್ ವೆಂಕಟರಮಣ, ಕೊಳಲು: ಜಯರಾಮ ಕಿಕ್ಕೇರಿ, ರಿದಮ್ ಪ್ಯಾಡ್: ಪ್ರಸನ್ನ ಕುಮಾರ್, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡ್ಯಾನ್ಸ್, ಸ್ಥಳ: ಯುವಕ ಸಂಘ, ಯುವಪಥ 4, 11ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಸಂಜೆ 5



ಬಂಜಗೆರೆ ಜಯಪ್ರಕಾಶ್

'ಸನಾತನ' ಮಾತು-ಸಂವಾದ: ಬಂಜಗೆರೆ ಜಯಪ್ರಕಾಶ್, ಮುಖ್ಯ ಅತಿಥಿ: ಸಿ.ಬಿ. ಹೊನ್ನು ಸಿದ್ದಾರ್ಥ್, ಆಯೋಜನೆ: ಬಯಲು ಬಳಗ, ಸ್ಥಳ: ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಸಂಜೆ 4

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಶಂ.ಬಾ. ಜೋಶಿ ದತ್ತಿ ಉಪನ್ಯಾಸ: ವಿಷಯ: 'ಜನಪದ ಸಾಹಿತ್ಯದ ಸೊಬಗು', ಉಪನ್ಯಾಸಕ: ಮೀರಾಸಾಬಿಹಳ್ಳಿ ಶಿವಣ್ಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, 3ನೇ ಮುಖ್ಯ ರಸ್ತೆ, ಎನ್.ಆರ್. ಕಾಲೊನಿ, ಸಂಜೆ 5

ವಿರಾಟ್ ವಿಶ್ವಕರ್ಮ ಮಹೋತ್ಸವ, 'ವಿಶ್ವಕರ್ಮ ಶ್ರೀ' ಮತ್ತು 'ವಿಶ್ವಕರ್ಮ ಸೇವಾ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಶುಭ ನುಡಿ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರಶಸ್ತಿ ಪ್ರದಾನ: ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ, ಶಿವರಾಜ್ ತಂಗಡಗಿ, ಪುಷ್ಪಾರ್ಚನೆ: ಚಂದ್ರಶೇಖರ ಕಂಬಾರ, ಆಯೋಜನೆ: ವಿಶ್ವಕರ್ಮ ಸೇವಾ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5

ನೃತ್ಯ ನೀರಾಜನ: ನಯನ ಹರೀಶ್, ಪವಿತ್ರ ರಮೇಶ್, ತ್ರಿಶಾ ಶಿವಕುಮಾರ್, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಗಾಯನ ಸಮಾಜ ಸಭಾಂಗಣ, ಕೆ.ಆರ್. ರಸ್ತೆ, ಬಸವನಗುಡಿ, ಸಂಜೆ 5.30

'ಶೇಡ್ಸ್ ಆಫ್ ಬ್ಲೂ' ಪುಸ್ತಕ ಬಿಡುಗಡೆ: ಲೇಖಕರು: ಹರಿಣಿ ನಾಗೇಂದ್ರ, ಸೀಮಾ ಮುಂಡೋಳಿ, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಅಲಯನ್ಸ್ ಫ್ರಾಂಚೈಸ್ ಡೇ ಬೆಂಗಳೂರು, ವಸಂತನಗರ, ಸಂಜೆ 5.30

ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ 31ನೇ ಶ್ರದ್ಧಾಂಜಲಿ ಪ್ರಯುಕ್ತ ಭಕ್ತಿ ಸಮರ್ಪಣೆ: ಸಾನ್ನಿಧ್ಯ: ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಮುಖ್ಯ ಅತಿಥಿಗಳು: ಬಿ.ಎಸ್. ಯಡಿಯೂರಪ್ಪ, ಡಿ.ಕೆ. ಶಿವಕುಮಾರ್, ಎಸ್.ಎಸ್. ಮಲ್ಲಿಕಾರ್ಜುನ್, ಬೈರತಿ ಸುರೇಶ್, ಎಸ್.ಆರ್. ವಿಶ್ವನಾಥ್, ಜೆ.ಸಿ. ಮಾಧುಸ್ವಾಮಿ, ಬಿ.ಎಲ್. ಶಂಕರ್, ಶಂಕರ್ ಬಿದರಿ, ಗುರುವಂದನೆ: ಹಂ.ಪ. ನಾಗರಾಜಯ್ಯ, ಆಯೋಜನೆ ಹಾಗೂ ಸ್ಥಳ: ತರಳಬಾಳು ಕೇಂದ್ರ, ಆರ್.ಟಿ. ನಗರ, ಸಂಜೆ 5.30

'ರಣದುಂದುಭಿ' ನಾಟಕ ಪ್ರದರ್ಶನ: ಅಧ್ಯಕ್ಷತೆ: ಆನಂದ, ಉಪಸ್ಥಿತಿ: ರಾಜಾರಾಮ್, ವೆಂಕಟೇಶ್, ರಮೇಶ್, ಆಯೋಜನೆ: ಕಾವೇರಿ ಕಲಾ ಸಂಘ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6

5ನೇ ಸಂಗೀತ ಸಮ್ಮೇಳನ: ಗಾಯನ: ಭರತ್ ಸುಂದರ್, ಪಿಟೀಲು: ಎಚ್.ಎಂ.ಸ್ಮಿತಾ, ಮೃದಂಗ: ಬಿ.ಎಸ್. ಪ್ರಶಾಂತ್, ಘಟ: ಶ್ರೀನಿಧಿ ಕೌಂಡಿನ್ಯ, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

'ಮಲ್ಲಿಗೆ ತೋಟದಲ್ಲಿ ಮರ್ಡರ್' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ದೆ ನಟನೆ, ಸ್ಥಳ: ಕೆ.ಎಚ್. ಕಲಾಸೌಧ, ರಾಮಾಂಜನೇಯ ಗುಡ್ಡ, ಹನುಮಂತನಗರ, ಸಂಜೆ 7.30

'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ: ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಡಾ.ಸಿ. ಅಶ್ವತ್ಥ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 7.30

ವಿಮರ್ಶಕ ಎಸ್.ಆರ್. ವಿಜಯಶಂಕರ್ ಅಭಿಮತ


'ರಾಮ, ಕೃಷ್ಣ ಸಂಸ್ಕೃತಿಯ ಪ್ರತಿನಿಧಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸಂಸ್ಕೃತಿಯಲ್ಲಿ ರಾಮ ಮತ್ತು ಕೃಷ್ಣ ಮುಖ್ಯರಾಗುತ್ತಾರೆ. ರಾಮ ಧರ್ಮವನ್ನು ಸಂರಕ್ಷಿಸಿದರೆ, ಕೃಷ್ಣ ತನ್ನ ಮಹಿಮೆಯಿಂದ ಧರ್ಮವನ್ನು ತಿದ್ದಿದ' ಎಂದು ವಿಮರ್ಶಕ ಎಸ್.ಆರ್. ವಿಜಯಶಂಕರ್ ತಿಳಿಸಿದರು.

ಸಮನ್ವಿತ ತಂಡವು ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಎ.ವಿ. ಪ್ರಸನ್ನ ಅವರ 'ಕುಮಾರವ್ಯಾಸ ಕಂಡ ಶ್ರೀಕೃಷ್ಣ' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು. 'ರಾಮ ನಮಗೆ ಪ್ರಾರಂಭದಿಂದ ಕೊನೆಯವರೆಗೂ ಮನುಷ್ಯನಾಗಿ ಕಾಣಿಸುತ್ತಾನೆ. ರಾಮ ತಾನು ಒಪ್ಪಿಕೊಂಡ ಧರ್ಮವನ್ನು ಸಂರಕ್ಷಿಸಿ, ಬೆಳೆಸುತ್ತಾನೆ. ರಾಮನನ್ನು ಎಲ್ಲರ ದೃಷ್ಟಿಯಲ್ಲಿಯೂ ಒಂದೇ ರೀತಿ ಕಾಣಬಹುದು. ಆದರೆ, ಕೃಷ್ಣ ಬೇರೆ ಬೇರೆ ರೀತಿ ಕಾಣಿಸುತ್ತಾನೆ. ಕೃಷ್ಣನ ಮಹಿಮೆ ಅಪಾರ. ಆತ ಧರ್ಮವನ್ನು ತಿದ್ದುವ ಜತೆಗೆ ಸೃಷ್ಟಿಸುವ ಶಕ್ತಿ ಹೊಂದಿದ್ದ' ಎಂದು ಹೇಳಿದರು.

'ಭಕ್ತಿಗೆ ಒಂದು ಶೀಲವಿದೆ. ಅದು ಒಂದು ಭೋಳೇತನದ, ಜವಾಬ್ದಾರಿ ರಹಿತವಾದ ಭಟ್ಟಂಗಿತನವಲ್ಲ. ಕರ್ತವ್ಯ ನಿರತನಾಗಿ ಏನನ್ನು ಮಾಡಬೇಕೋ ಅದನ್ನು ಮನುಷ್ಯ ಪ್ರಯತ್ನವಾಗಿ ಮಾಡಿ, ಉಳಿದದ್ದನ್ನು ಮಾನುಷ ಪ್ರಯತ್ನಕ್ಕೆ ಬಿಡುವುದೇ ಭಕ್ತಿಯ ಶೀಲ.



ಕಾರ್ಯಕ್ರಮದಲ್ಲಿ 'ಕುಮಾರವ್ಯಾಸ ಕಂಡ ಶ್ರೀಕೃಷ್ಣ' ಪುಸ್ತಕವನ್ನು ಎಸ್.ಆರ್. ವಿಜಯಶಂಕರ್ ಬಿಡುಗಡೆ ಮಾಡಿದರು. ನಿರ್ಮಲಾ, ಎ.ವಿ. ಪ್ರಸನ್ನ ಹಾಗೂ ಸಮನ್ವಿತದ ರಾಧಾಕೃಷ್ಣ ಇದ್ದಾರೆ.

'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಶು ಕದಾಚನ' ಎಂಬುದರ ಅರ್ಥವೂ ಇದೇ ಆಗಿದೆ. ಕರ್ಮದಲ್ಲಿ ಲೋಪವಿಲ್ಲದೆ ನಿರ್ವಹಿಸಿ, ಫಲಾಫಲಗಳನ್ನು ದೈವಕ್ಕೆ ಬಿಡುವುದೇ ಭಕ್ತಿ' ಎಂದು ತಿಳಿಸಿದರು.

ಕೃತಿಯ ಲೇಖಕ ಎ.ವಿ. ಪ್ರಸನ್ನ, 'ಕುಮಾರವ್ಯಾಸ ತನ್ನ ಬಗ್ಗೆ ಎರಡು ಸಂಗತಿಗಳನ್ನು ಮಾತ್ರ ಹೇಳಿಕೊಂಡಿದ್ದಾನೆ. ಮೊದಲನೆಯದು ತಾನು ಗದುಗಿನ ವೀರನಾರಾಯಣ ಭಕ್ತ, ಎರಡನೆಯದು ತಾನು ವ್ಯಾಸರ ಮಾನಸಪುತ್ರ ಶುಕರೂಪ. ಅಪ್ರತಿಮ ಕೃಷ್ಣ ಭಕ್ತನಾಗಿರುವ ಇವನು, ಮಹಾಭಾರತವನ್ನು ಕೃಷ್ಣನ ಕಥೆಯನ್ನಾಗಿ ಪರಿವರ್ತಿಸಿದ ಬಗೆ ನಮ್ಮಲ್ಲಿ ವಿಸ್ಮಯವನ್ನು ಉಂಟುಮಾಡುತ್ತದೆ. ಕೃಷ್ಣನ ಬಗೆಗೆ ಬರೆದ ಲೇಖನಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ' ಎಂದು ಹೇಳಿದರು.

ಇದಕ್ಕೂ ಮೊದಲು ನಿರ್ಮಲಾ ಮತ್ತು ಪ್ರಸನ್ನ ದಂಪತಿಯಿಂದ ಕುಮಾರವ್ಯಾಸ ಭಾರತದ ಆಯ್ದ ಭಾಗಗಳ ಗಮಕ ವಾಚನ-ವ್ಯಾಖ್ಯಾನ ನಡೆಯಿತು.

ಪುಸ್ತಕ ಪರಿಚಯ
ಪುಸ್ತಕ: 'ಕುಮಾರವ್ಯಾಸ ಕಂಡ ಶ್ರೀಕೃಷ್ಣ'
ಲೇಖಕ: ಎ.ವಿ. ಪ್ರಸನ್ನ
ಪುಟಗಳು: 164
ಬೆಲೆ: ₹ 160
ಪ್ರಕಾಶನ: ಸಮನ್ವಿತ



ಪೂರ್ಣಿಮಾ ಭಟ್



ವೀಣಾ ಕಾಮತ್- ಮೀನಾಕ್ಷಿ ಕಾಮತ್



ಟ್ರಾಯ್ಲಿ ದತ್ತಾ-ಮೊಯ್ಸಿ ದತ್ತಾ

ನಾದನದಿಯಲ್ಲಿ ಮಹಿಳೆಯರ ಮೋಹರು

ಉಮಾ ಅನಂತ್

ಪುರುಷ ಪ್ರಧಾನ ವಾದ್ಯ ಎಂದು ಪರಿಗಣಿಸಲಾಗಿದ್ದ ಸಾಥಿ ವಾದ್ಯ ತಬಲಾ, ಪಕ್ಕವಾದ್ಯ ಮೃದಂಗ, ತಂತಿವಾದ್ಯ ಸರೋದ್, ಸಿತಾರ್, ಸುಷಿರ ವಾದ್ಯ ಕೊಳಲು, ಹಾರ್ಮೋನಿಯಂಗಳಲ್ಲಿ ಮಹಿಳೆಯರು ಮೂಡಿಸುತ್ತಿರುವ ಹೆಜ್ಜೆಗುರುತು ವಿಶಿಷ್ಟವಾದುದು.

ಗಾಯನ- ವಾದನಗಳಲ್ಲಿ ಮುಂಚೂಣಿಯಲ್ಲಿರುವ ಕೆಲ ಸಂಗೀತ ಸಾಧಕಿಯರ ಗಾನ-ಯಾನದ ಟಿಪ್ಪಣಿ, ನಾದಜಗತ್ತಿನಲ್ಲಿ ವಿಹರಿಸುವ ಸಹೃದಯರಿಗೆ ಒಂದಷ್ಟು ಮಾಹಿತಿ:

ಸರೋದ್ ಸಹೋದರಿಯರ ಯುಗಳ

ಮನೆಗಳೇ ಇಲ್ಲದ ತಂತಿವಾದ್ಯ ಸರೋದ್. ಪುರುಷರೇ ಈ ವಾದ್ಯದಲ್ಲಿ ಪರಿಣತರೆಂಬುದು ಹಲವರ ಭಾವನೆ. ಕೋಲ್ಕತ್ತದ ಸರೋದ್ ಸಹೋದರಿಯರು ಎಂದೇ ಖ್ಯಾತರಾದ ವಿದುಷಿ ಟ್ರೊಯ್ಲಿ ದತ್ತಾ- ವಿದುಷಿ ಮೊಯ್ಸಿಲಿ ದತ್ತಾ ಸರೋದ್ ವಾದನ ಕೇಳುಗರು ನಾದನದಿಯಲ್ಲಿ ಮಿಂದೇಳುವಂತೆ ಮಾಡುತ್ತದೆ. ಸೇನಿಯಾ-ಮೈಹಾರ್ ಘರಾಣೆಯಲ್ಲಿ ನುಡಿಸುವ ಈ ಇಬ್ಬರು ವಾದಕಿಯರು, ಉಸ್ತಾದ್ ಅಲಿ ಅಕ್ಬರ್ ಖಾನ್, ಪಂ. ಶ್ಯಾಮ ಗಂಗೂಲಿ ಹಾಗೂ ಪಂ. ಕಮಲ್ ಮಲ್ಲಿಕ್ ಅವರಿಂದ ಸರೋದ್ ನುಡಿಸಾಣಿಕೆ ಕಲಿತವರು. ಸದ್ಯ ಖ್ಯಾತ ಸರೋದ್ ವಾದಕ ಪಂ. ಪಾರ್ಥೊ ಸಾರಥಿ ಅವರ ಬಳಿ ಸರೋದ್‌ನ ಉನ್ನತ ಅಭ್ಯಾಸ ನಡೆಸುತ್ತಿರುವ ಇವರು, ಸರೋದ್ ವಾದನದಲ್ಲೂ ಸೈ ಎನಿಸಿ ಸಂಗೀತ ಕ್ಷೇತ್ರವನ್ನು ಧೀಮಂತಗೊಳಿಸಿದ ಭರವಸೆಯ ವಾದಕಿಯರು.

ಸಿತಾರ್ ಖಬರ್!

ತಂತಿವಾದ್ಯ ಸಿತಾರ್ ಕೇಳುವುದು ಎಂದಿಗೂ ಸಹೃದಯರಿಗೆ ಪರಮಾನಂದ. ಪಂ. ರವಿಶಂಕರ್ ಹಾದಿಯಲ್ಲಿ ಅನೌಷ್ಕಾ ಶಂಕರ್ ಸಿತಾರ್ ಅನ್ನು ಜನಪ್ರಿಯಗೊಳಿಸಿದರು. ಸಿತಾರ್‌ನಲ್ಲಿ ಗಮನಸೆಳೆಯುವ ವಾದಕಿಯರಲ್ಲಿ ವಿದುಷಿ ಸಹನಾ ಬ್ಯಾನರ್ಜಿ ಅವರ ಹೆಸರು ಕೂಡ ಕೇಳುಗರ ಮನದಾಳದಲ್ಲಿ ಇದ್ದೇ ಇದೆ. ರಾಂಪುರ ಸೇನಿಯಾ ಘರಾಣೆಯ ಸಹನಾ ಬ್ಯಾನರ್ಜಿ ಅವರದು ಮನೆತನವೇ ಸಂಗೀತದ್ದು. ಕೋಲ್ಕತ್ತದ ಖ್ಯಾತ ಸಿತಾರ್ ಹಾಗೂ ಸುರ್‌ಬಹಾರ್ ವಾದಕ ಸಂತೋಷ್ ಬ್ಯಾನರ್ಜಿ ಅವರ ಪುತ್ರಿ. ತಾಯಿ ಗಾಯಕಿ. ಸಹಜವಾಗಿಯೇ ಒಲಿದ ಸಂಗೀತ, ಸಹನಾ ಅವರನ್ನು ದೇಶದ ಮುಂಚೂಣಿಯಲ್ಲಿರುವ ಸಿತಾರ್ ವಾದಕಿಯಾಗಿ ರೂಪಿಸಿದೆ.

ಸಂವಾದಿನಿಯಲ್ಲಿ ಪಾರುಪತ್ಯ

ಗಾಯನಕ್ಕೆ ಅತ್ಯಂತ ಸನಿಹವಾದ ನಾದ ಕೊಡುವ 'ಪೇಟಿ'ಯಲ್ಲಿ ಮಹಿಳೆಯರ ಹೆಸರು ಕೇಳಿಬರುವುದೇ ಅಪರೂಪ. ದೆಹಲಿಯ ಪಾರೊಮಿತಾ ಮುಖರ್ಜಿ ಇದಕ್ಕೆ ಅಪವಾದವೆಂಬಂತೆ 'ಸಂವಾದಿನಿ'ಯಲ್ಲಿ ಸಾಧನೆಯ ಶಿಖರಕ್ಕೇರುತ್ತಿದ್ದಾರೆ. ಆಕಾಶವಾಣಿಯ ಎ ಶ್ರೇಣಿಯ ಕಲಾವಿದೆಯಾಗಿರುವ ಪಾರೊಮಿತಾ, ಪಂ. ಜಸರಾಜ್, ಪಂ. ರಾಜನ್–ಸಾಜನ್ ಮಿಶ್ರಾ, ಅಜಯ ಚಕ್ರವರ್ತಿ, ಪಂ. ರಶೀದ್ ಖಾನ್, ಪರ್ವೀನ್ ಸುಲ್ತಾನಾ ಅಶ್ವಿನಿ ಭಿಡೆ ಮುಂತಾದ ದೇಶದ ದಿಗ್ಗಜರ ಗಾಯನಗಳಿಗೆ ಹಾರ್ಮೋನಿಯಂ ಸಹಕಾರ ನೀಡಿ ಸೈ ಎನಿಸಿದವರು. ಹಾರ್ಮೋನಿಯಂ ಮಾತ್ರವಲ್ಲದೆ ಪಿಟೀಲಿನಲ್ಲೂ ಕೈಚಳಕ ತೋರಿಸಿರುವ ಈ ಕಲಾವಿದೆ, ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನೂ ಗಳಿಸಿದ್ದಾರೆ.

ತಬಲಾ–ಸಾವನಿ ಚಮತ್ಕಾರ

ಧಾ ಧಿನ್ ಧಿನ್ ಧಾ... ಲಯವಾದ್ಯ ತಬಲಾದಲ್ಲಿ ತೀನ್‌ತಾಲ್‌ನ ಈ ಬೋಲ್ ಕೇಳುವುದೆ ಖುಷಿ. ಪುರುಷ ಪ್ರಧಾನವಾದ ತಬಲಾ–ಡಗ್ಗಾಗಳನ್ನು ಮಹಿಳೆಯರು ಕೈಗೆತ್ತಿಕೊಂಡರೆ? ಅದು ತೀನ್‌ತಾಲ್ ಆಗಿರಲಿ, ರೂಪಕ್, ಏಕ್, ದಾದ್ರಾ.. ಯಾವುದೇ ತಾಳಗಳಾಗಿರಲಿ. ತಬಲಾ ಲಯದಲ್ಲಿ ತುಕುಡ, ಮುಕುಡ, ಚಕ್ರಧಾರ, ರೇಕಾ, ತಿಹಾಯ್ ಮಹಿಳೆಯರ ಬೆರಳುಗಳಲ್ಲಿ ಮಾರ್ದನಿಸುತ್ತಿವೆ. ಪುಣೆಯ ಸಾವನಿ ತಲ್ವಾಲ್‌ಕರ್ ತಬಲಾ ವಾದನದಲ್ಲಿ ತಮ್ಮ ಪ್ರಬುದ್ಧತೆ ತೋರಿಸುತ್ತಿದ್ದಾರೆ. ಸಂಗೀತಗಾರರ ಮನೆತನದಲ್ಲೇ ಜನಿಸಿದ ಸಾವನಿ ತಂದೆ ಪ್ರಸಿದ್ಧ ತಬಲಾ ವಾದಕ ಸುರೇಶ್ ತಲ್ವಾಲ್‌ಕರ್ ಮಾರ್ಗದರ್ಶನವಿದೆ. ತಂದೆ, ತಾಯಿ, ಅಣ್ಣನಸಂಗೀತ ಜ್ಞಾನ, ಸಾವನಿ ಅವರನ್ನೂ ಚಿಕ್ಕ ವಯಸ್ಸಿನಲ್ಲೇ ತಬಲಾ ವಾದಕಿಯನ್ನಾಗಿ ರೂಪಿಸುವಲ್ಲಿ ಸಫಲವಾಗಿದೆ. ತಬಲಾದಲ್ಲಿ ಸಾಥಿ, ಸೋಲೊ ಎರಡರಲ್ಲೂ ಸಾವನಿ ಚಾಕಚಕ್ಯತೆ ಅದ್ಭುತ.

'ಸೊಗಸುಗಾ ಮೃದಂಗ ತಾಳಮು...'

ಮೃದಂಗ ನಾದ ಕರ್ನಾಟಕ ಸಂಗೀತ ಪ್ರಿಯರನ್ನು ಎಂದಿಗೂ ತಟ್ಟುವಂಥದ್ದು. ಲಯ ಮಾಧುರ್ಯದಲ್ಲಿ ಮೃದಂಗ ಹೃದಯಕ್ಕೆ ಸನಿಹವಾದದ್ದು. ಈ ವಾದನದಲ್ಲೂ ಪುರುಷರೇ ಪ್ರಾಬಲ್ಯ ಮೆರೆದಿದ್ದರೂ ಮಹಿಳೆಯರು ಸರಿಸಮನಾಗಿ ಮೃದಂಗದಲ್ಲಿ ಕೇಳುಗರನ್ನು ದಂಗಾಗಿಸುತ್ತಿದ್ದಾರೆ. ಜ್ಯೋತ್ಸ್ನಾ ಹೆಬ್ಬಾರ ನಾಡಿನ ಭರವಸೆಯ ಮೃದಂಗ ವಾದಕಿ. ವಿದ್ವಾನ್ ಎಚ್.ಎಸ್. ಸುಧೀಂದ್ರ ಅವರ ಬಳಿ ಮೃದಂಗ ಅಭ್ಯಾಸ ಮಾಡಿದ ಇವರು ವೀಣಾವಾದನದಲ್ಲೂ ಪಳಗಿದವರು.

ರಾಗ ರುಚಿವರ್ಧನೆಯ ರುಚಿರಾ

ರುಚಿರಾ ಮೂಲತಃ ಪುಣೆಯವರಾದ ಈ ವಿದುಷಿ ಹತ್ತನೇ ವಯಸ್ಸಿಗೇ ತಂದೆ ದಿಲೀಪ ಕಾಳೆ ಅವರಿಂದ ಕಲಿಕೆ ಆರಂಭಿಸಿದರು. ಪುಣೆಯ ಅಲಕಾದೇವ್ ಮರೂಳ್ಕರ ಅವರಿಂದ ಆಳವಾದ ಸಂಗೀತ ಜ್ಞಾನ ಪಡೆದುಕೊಂಡರು. ಮುಂಚೂಣಿ ಗಾಯಕ ಉಲ್ಲಾಸ ಕಶಾಳ್ಕರ ಅವರಿಂದ ಹೆಚ್ಚಿನ ಮಾರ್ಗದರ್ಶನ ಪಡೆದ ಇವರ ಗಾಯನದಲ್ಲಿ ಮಿಂಚಿನ ಸೆಳೆತವಿದೆ. ಉತ್ತಮ ಮನೋಧರ್ಮ, ಆಕರ್ಷಕ ಕಂಠ, ಸ್ವರವಿಸ್ತಾರದಲ್ಲಿ ನೈಪುಣ್ಯ, ಅದ್ಭುತ ಉಸಿರು ನಿಯಂತ್ರಣ ಸಾಮರ್ಥ್ಯ, ತಾರಕ, ಅತಿತಾರಕ ಸ್ಥಾಯಿಗಳಲ್ಲಿ ಲೀಲಾಜಾಲವಾಗಿ ಹೊಮ್ಮುವ ಸ್ವರ, ಆಕಾರಗಳಿಂದ ಸಂಗೀತದಲ್ಲಿ 'ಗಟ್ಟಿಕುಳ'ವಾಗಿ ರೂಪುಗೊಂಡಿದ್ದಾರೆ. ❖

'ವಸುಂಧರಾ' ಸಂಗೀತ ಹಬ್ಬ

ಸಂಗೀತ ನಾದ ರಸದೌತಣ ಉಣಬಡಿಸಲು 'ವಸುಂಧರಾ' ಬೆಂಗಳೂರಿನಲ್ಲಿ ಸಜ್ಜಾಗಿದೆ. ಹಿಂದೂಸ್ತಾನಿ ಸಂಗೀತ ದಿಗ್ಗಜ ಪಂ. ಭೀಮಸೇನ ಜೋಶಿ ನೆನಪಿನ 'ಭೀಮಪಲಾಸ್' ನ ಮುಂದುವರಿದ ಭಾಗವಾಗಿ ಧಾರವಾಡದ 'ಜಿ.ಬಿ. ಜೋಶಿ ಮೆಮೋರಿಯಲ್ ಟ್ರಸ್ಟ್' ಹಾಗೂ ಹುಬ್ಬಳ್ಳಿಯ ಕ್ಷಮತಾ ಸಂಸ್ಥೆಗಳು ಮಹಿಳಾ ವಿದ್ವನ್ಮಣಿಗಳ ಸಂಗೀತ ಆಯೋಜನೆಗೊಂಡಿದೆ. ಅಕ್ಟೋಬರ್ 2ರಂದು ಬೆಂಗಳೂರಿನ ಜಯನಗರದ ಯುವಪಥ ಸಭಾಂಗಣದಲ್ಲಿ ಈ ಸಂಗೀತ ಹಬ್ಬವಿದೆ. ಕರ್ನಾಟಕ– ಹಿಂದೂಸ್ತಾನಿ ಎರಡೂ ಶೈಲಿಯ ಸಂಗೀತವನ್ನು ಒಂದೇ ವೇದಿಕೆಯಲ್ಲಿ ಕೇಳುವ ಸುಯೋಗ ಇಲ್ಲಿ ಒದಗಲಿದೆ. ಸಾಥಿದಾರರಾಗಿಯೂ ಮಹಿಳೆಯರೇ ಮಿಂಚಲಿರುವ ಈ ಹಬ್ಬದ ತಾರೆಯರ ಪರಿಚಯ ಇಲ್ಲಿದೆ.

ಧಾರವಾಡದ ಮನೋಹರ ಗ್ರಂಥ ಮಾಲಾ ಸಂಸ್ಥಾಪಕ ಜಿ.ಬಿ. ಜೋಶಿ ನೆನಪಿನಲ್ಲಿ ಸ್ಥಾಪಿಸಿರುವ 'ಜಿ.ಬಿ. ಜೋಶಿ ಮೆಮೋರಿಯಲ್ ಟ್ರಸ್ಟ್' ಸಾಹಿತ್ಯದ ಜೊತೆಗೆ ಸಂಗೀತವನ್ನು ಉಳಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. 'ಇದೀಗ 'ವಸುಂಧರಾ' ಸಂಗೀತ ಕಾರ್ಯಕ್ರಮ ಆಯೋಜಿಸಿ ಕೇಳುಗರಿಗೆ ಸಂಗೀತ ರಸದೌತಣ ನೀಡುವುದು ನಮಗೆ ಹೆಮ್ಮೆಯ ವಿಚಾರ' ಎನ್ನುತ್ತಾರೆ ಟ್ರಸ್ಟ್‌ನ ಮುಖ್ಯಸ್ಥ ಹುಬ್ಬಳ್ಳಿಯ ಸಮೀರ್ ಜೋಶಿ.



ಜ್ಯೋತ್ಸ್ನಾ ಹೆಬ್ಬಾರ್



ಪಾರೋಮಿತಾ



ಸಹನಾ ಬ್ಯಾನರ್ಜಿ



ರುಚಿರಾ ಕೇದಾರ್



ಸಾವನಿ ತಲ್ವಾಲ್ಕರ್



ಶ್ರೀದೇವಿ ಕಾಮತ್–ಗಂಗಾ ಕಾಮತ್

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

ವ್ಯಸನಗಳಿಂದ ಮುಕ್ತರಾಗುವುದು ಹೇಗೆ?

- **ನನಗೆ ವಿಪರೀತ ಕುಡಿತದ ಚಟವಿದೆ. ಮನುಷ್ಯನಾಗಿ ಒಳ್ಳೆಯವನೇ ಎಂದುಕೊಳ್ಳುವೆ. ಆದರೆ ಈ ಚಟ ನನ್ನೊಳಗೆ ನನ್ನ ಬಗ್ಗೆ ಕೀಳರಿಮೆ ಮೂಡಿಸಿದೆ. ಜೊತೆಗೆ ಆಗಾಗ್ಗೆ ಎದುರು ಸಿಕ್ಕ ಹೆಣ್ಣಿನ ದೇಹದ ಅಂಗಾಂಗಗಳನ್ನ ನೋಡುವ ಚಟವಿದೆ. ಇದಕ್ಕೆ ಪರಿಹಾರವೇನು?**

ಹೆಸರು ಊರು ತಿಳಿಸಿಲ್ಲ.

ನಿಮ್ಮ ವಯಸ್ಸು, ವೃತ್ತಿ, ಕುಟುಂಬದ ಸ್ಥಿತಿಗತಿಗಳು, ಮುಂತಾದ ವೈಯಕ್ತಿಕ ವಿವರಗಳಿದ್ದರೆ ಉತ್ತರಿಸಲು ಹೆಚ್ಚಿನ ಸಹಾಯವಾಗುತ್ತಿತ್ತು. ನಿಮ್ಮ ಪತ್ರದಲ್ಲಿ ಆತ್ಮಶೋಧನೆ ಮಾಡಿಕೊಳ್ಳುವ ಪ್ರಾಮಾಣಿಕತೆಯಿದೆ ಮತ್ತು ಬದಲಾಗಬೇಕೆನ್ನುವ ತುಡಿತವಿದೆ. ಇವೆರೆಡೂ ನಿಮ್ಮ ದೊಡ್ಡ ಆಸ್ತಿಗಳು. ಇವುಗಳನ್ನು ಬಳಸಿಕೊಂಡು ಬದಲಾಗುವುದು ಮತ್ತು ಬೆಳೆಯುವುದು ಹೇಗೆ ಎನ್ನುವುದನ್ನು ನೀವು ಕಲಿಯಬೇಕಾಗಿದೆ.

ನೀವು ಚಟ ಎನ್ನುವ ಶಬ್ದವನ್ನು ಎರಡು ಕಡೆ ಬಳಸಿದ್ದೀರಿ. ಇದು ಜನಸಾಮಾನ್ಯರು ಬಳಸುವ ಶಬ್ದ ಎನ್ನುವುದೇನೋ ನಿಜ. ಆದರೆ ಚಟ ಎನ್ನುವ ಶಬ್ದದಲ್ಲಿಯೇ ಕೀಳರಿಮೆಯ ಅಂಶವಿದೆ. ಹಾಗಾಗಿ ನಿಮಗೆ ನಿಮ್ಮ ಬಗ್ಗೆ ಕೀಳರಿಮೆ ಮೂಡುವುದು ಸಹಜವಲ್ಲವೇ? ಸದ್ಯಕ್ಕೆ ಇವುಗಳನ್ನು ನಿಮಗಿಷ್ಟವಾಗದ ಅಭ್ಯಾಸಗಳು ಎಂದುಕೊಳ್ಳಿ.

ಈ ಅಭ್ಯಾಸಗಳನ್ನು ಬದಲಾಯಿಸುವುದು ಹೇಗೆ? ಹೆಣ್ಣಿನ ಅಂಗಾಗಗಳನ್ನು ನೋಡುವುದು ನಿಮ್ಮೊಳಗೆ ಕಾಮಾಸಕ್ತಿ ಕೆರಳುತ್ತಿರುವುದರ ಸೂಚನೆ. ಇದು ಸರಿಯಾದ ಸ್ಥಳ ಸಂದರ್ಭಗಳಲ್ಲಿ, ಸೂಕ್ತವಾದ ವ್ಯಕ್ತಿಯೊಡನೆ ತೋರಿಸಬೇಕಾದ ವರ್ತನೆಯಲ್ಲವೇ? ಹಾಗೆ ಮಾಡಲು ಸಾಧ್ಯವಾಗದಿದ್ದಾಗ ಅದು ಅಸಭ್ಯ ವರ್ತನೆಯಾಗುತ್ತದೆ. ಈ ವಿವೇಚನೆಯನ್ನು ಬಳಸಲು ನೀವು ಕಷ್ಟಪಡುತ್ತಿದ್ದೀರಿ.

ಮದ್ಯಪಾನ ಮಾಡಿದಾಗ ನಿಮ್ಮ ಮಾತು ವರ್ತನೆಗಳು ಹಿಡಿತ ತಪ್ಪುತ್ತವೆ. ಹಾಗಾಗಿ ವಿವೇಚನೆ ಹಿಂದೆ ಸರಿಯುತ್ತದೆ. ನಿಮ್ಮ ಕಾಮಾಸಕ್ತಿಯನ್ನು ಪೂರೈಸಿಕೊಳ್ಳಲು ಸಾಮಾಜಿಕವಾಗಿ ಒಪ್ಪಿತವಾಗುವ ದಾರಿಗಳನ್ನು ಕಂಡುಕೊಳ್ಳಬೇಕು. ಮದ್ಯಪಾನದ ವ್ಯಸನವನ್ನು ಕೇವಲ ಧೃಡ ನಿರ್ಧಾರದಿಂದ ಹಿಡಿತಕ್ಕೆ ತರುವುದು ಸಾಧ್ಯವಿಲ್ಲ.

ಇಂಥ ವ್ಯಸನಗಳಿಗೆ ಅಂಟಿಕೊಳ್ಳುವ ಹಿಂದಿರುವ ಮನಸ್ಥಿತಿಯನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಮದ್ಯಪಾನ ಮಾಡಿದಾಗ ನಿಮಗೆ ಹೇಗೆನ್ನಿಸುತ್ತದೆ? ಎಲ್ಲದರಿಂದ ಮುಕ್ತವಾದಂತೆ? ಬಂಧನಗಳನ್ನು ಕಳಚಿಕೊಂಡಂತೆ? ನೀವು ನೀವಾಗಿರಲು ಸಾಧ್ಯವಾಗಿರುವಂತೆ? ಒತ್ತಡಗಳಿಂದ ಮುಕ್ತಿಪಡೆದಂತೆ? ಚಿಂತೆಗಳನ್ನು ಮರೆತಂತೆ? ಇಂತಹ ಪ್ರಶ್ನೆಗಳಿಗೆ ಉತ್ತರ ಹುಡುಕಿದಾಗ ನಿಮಗೆ ಜೀವನದಲ್ಲಿ ನಾನು ಸಹಜವಾಗಿ ಕಳೆದುಕೊಂಡದ್ದೇನು ಎಂದು ತಿಳಿಯುತ್ತದೆ.

ಸಿಗಲಾಗದ್ದನ್ನು ಸಹಜವಾಗಿ ಪಡೆದುಕೊಳ್ಳುವುದರ ಬದಲು ಮದ್ಯಪಾನದ ಮೂಲಕ ಅತೃಪ್ತಿ ಅಸಮಾಧಾನಗಳನ್ನು ಮರೆಯಲು ಪ್ರಯತ್ನ ಮಾಡಿದಾಗ ಅದು ವ್ಯಸನವಾಗಿ ಅಂಟಿಕೊಳ್ಳುತ್ತದೆ. ಇದರ ಅರ್ಥವೇನೆಂದರೆ ಇಂಥ ವ್ಯಸನಗಳು ನಮಗೆ ಸಮಸ್ಯೆಗಳಿಂದ ತಾತ್ಕಾಲಿಕವಾಗಿ ಓಡಿಹೋಗಿ ಸಮಾಧಾನ ಕಂಡುಕೊಳ್ಳುವ ಪ್ರವೃತ್ತಿಯನ್ನು ಕಲಿಸುತ್ತವೆ. ತಕ್ಷಣಕ್ಕೆ ಸಮಧಾನ ದೊರೆತರೂ ದೂರಗಾಮಿಯಾಗಿ ದುಷ್ಪರಿಣಾಮಗಳನ್ನು ಬೀರುತ್ತದೆ. ಆದರೆ ಮೂಲ ಸಮಸ್ಯೆಗಳು ಹಾಗೆಯೇ ಉಳಿದಿರುತ್ತದೆ. ನಾವು ಸಮಸ್ಯೆಗಳಿಂದ ಹೆಚ್ಚು ದೂರ ಓಡಲು ಪ್ರಯತ್ನಿಸಿದಂತೆ ವ್ಯಸನಗಳಿಂದ ಮುಕ್ತವಾಗುವುದು ಕಷ್ಟವಾಗುತ್ತದೆ.

ಮೊದಲು ಮದ್ಯಪಾನವನ್ನು ಚಟವೆಂದು ದ್ವೇಷಿಸದೆ ಅದು ನಿಮಗೆ ತಾತ್ಕಾಲಿಕವಾಗಿ ನೀಡುತ್ತಿರುವ ಸಮಾಧಾನಗಳೇನು ಎಂದು ಯೋಚಿಸಿ. ಅಂಥ ಸಂತೋಷ ಸಮಾಧಾನಗಳನ್ನು ಸಹಜವಾಗಿ ಸ್ನೇಹ ಪ್ರೀತಿ ಸಂಬಂಧಗಳ ಮೂಲಕ ಪಡೆದುಕೊಳ್ಳುವ ದಾರಿಗಳನ್ನು ಕಂಡುಕೊಳ್ಳಬೇಕು. ಆಗ ಮಾತ್ರ ತಾತ್ಕಾಲಿಕವಾಗಿ ಪರಿಹಾರ ನೀಡುತ್ತಾ ದೂರಗಾಮಿಯಾಗಿ ಅಪಾಯಗಳನ್ನು ಮಾಡುವ ಮದ್ಯಪಾನದ ವ್ಯಸನದಿಂದ ಮುಕ್ತವಾಗಲು ಸಾಧ್ಯ. ಗೆ ನಮ್ಮನ್ನು ನಾವು ಅರ್ಥಮಾಡಿಕೊಂಡು ಬದಲಾವಣೆಗಳಿಗೆ ಪ್ರಯತ್ನಿಸಲು ಇನ್ನೊಬ್ಬರ ಸಹಾಯದ ಅಗತ್ಯವಿದೆ. ಹತ್ತಿರದಲ್ಲಿ ತಜ್ಞ ಮನೋಚಿಕಿತ್ಸಕರಿದ್ದರೆ ಸಹಾಯ ಪಡೆಯಿರಿ. ಅಥವಾ ವ್ಯಸನ ಮುಕ್ತಿ ಕೇಂದ್ರಗಳಲ್ಲಿ(Deaddiction Centre) ಒಮ್ಮೆ ಚಿಕಿತ್ಸೆ ಪಡೆಯಿರಿ.

ವ್ಯಕ್ತಿಯಾಗಿ ನೀವು ಕೆಟ್ಟವರೇನಲ್ಲ ಎನ್ನುವ ನಿಮ್ಮ ಅನಿಸಿಕೆ ನಿಜ. ಆದರೆ ನಿಮ್ಮೊಳಗಿನ ಒಳ್ಳೆಯತನ ಹೊರಬರಬೇಕಾದರೆ ಮದ್ಯವ್ಯಸನದಿಂದ ಮುಕ್ತಿಪಡೆಯಬೇಕು. ಶುಭವಾಗಲಿ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಫ್ಯಾಷನ್ ಲೋಕದಲ್ಲಿ ಖಾದಿ ಖದರ್

ಕೃಷ್ಣಿ ಶಿರೂರ


ಖಾದಿ ಬೇಸಿಗೆಗೂ ಸೈ, ಚಳಿಗಾಲಕ್ಕೂ ಸೈ. ಈ ಖಾದಿ ವಿಶೇಷವೇ ಇದು. ಒಮ್ಮೆ ಒಪ್ಪಿಕೊಂಡವರು ಜೀವನಪೂರ್ತಿ ಅಪ್ಪಿಕೊಳ್ಳುವ ವಸ್ತ್ರ.

ಖಾದಿ ಇಂದು ಕಾಲೇಜು ಯುವತಿಯರಿಂದ ಕಾರ್ಪೊರೇಟ್ ಮಹಿಳೆಯರವರೆಗೂ ಮುದ್ದಿನ ದಿರಿಸಾಗಿ ಬದಲಾಗಿದೆ. ಯುವತಿಯರು ಜೀನ್ಸ್ ಮೇಲೆ ಖಾದಿ ಕುರ್ತಿ, ಟಾಪ್ ಧರಿಸಿ ಆತ್ಮವಿಶ್ವಾಸದ ಹೆಜ್ಜೆ ಇಟ್ಟರೆ, ಕಾರ್ಪೊರೇಟ್ ಮಹಿಳೆಯರು ಖಾದಿ ಸೀರೆಗೆ ಕಾಂಟ್ರಾಸ್ಟ್ ಮ್ಯಾಚಿಂಗ್ ಖಾದಿ ಬ್ಲೌಸ್ ತೊಟ್ಟು ಮಿಂಚುತ್ತಿದ್ದಾರೆ.

ಖಾದಿ ನೀಡುವ ಹಿತಾನುಭವ ಬೇರ್‍ಯಾವ ಬಟ್ಟೆಯೂ ನೀಡಲು ಸಾಧ್ಯವಿಲ್ಲ. ಖಾದಿ ಆತ್ಮವಿಶ್ವಾಸದ ಪ್ರತೀಕ ಎಂದೂ ತಮ್ಮ ಅನುಭವವನ್ನು ಹಂಚಿಕೊಂಡವರು ಖಾದಿಯನ್ನು ನೆಚ್ಚಿಕೊಂಡ ಧಾರವಾಡದ ಸುನಂದಾ ಭಟ್.

ಖಾದಿ ಬಟ್ಟೆ ತೊಳೆದ ನಂತರ ಅದಕ್ಕೆ ಸ್ಟಾರ್ಚ್ ಬಳಸಿ, ಇಸ್ತ್ರಿ ಮಾಡಿಯೇ ಉಡಬೇಕು. ಇಂದಿನ ಧಾವಂತದ ಬದುಕಿನಲ್ಲಿ ಇದು ಖಾದಿ ಬಳಕೆಗೆ ಸ್ವಲ್ಪ ಹಿನ್ನೆಡೆ ನೀಡಿದೆ ಎನ್ನುತ್ತಾರೆ ಅವರು.

ಇತ್ತೀಚೆಗೆ ಖಾದಿ ಸೀರೆಯನ್ನು ಅದರ ವಿಶೇಷತೆ ಅರಿತು ಇಷ್ಟಪಟ್ಟು ಉಡುವವರ ಜತೆಗೆ ಫ್ಯಾಷನ್‌ಗಾಗಿ ತೊಡುವವರ ಸಂಖ್ಯೆ ಹೆಚ್ಚುತ್ತಿದೆ. ಮ್ಯಾಚಿಂಗ್




ಕಿವಿಯೋಲೆ, ಕಂಠಹಾರ ಧರಿಸಿ ಸಮಾರಂಭಗಳಲ್ಲಿ ಕಾಣಿಸಿಕೊಳ್ಳುವವರ ಸಂಖ್ಯೆಯೂ ಏರುತ್ತಿದೆ.

ಖಾದಿ ವಸ್ತ್ರವೈವಿಧ್ಯದೊಟ್ಟಿಗೆ ಖಾದಿ ಆಭರಣಗಳೂ, ಪಾದರಕ್ಷೆಗಳೂ ಜತೆಯಾಗಿವೆ. ಲ್ಯಾಕ್ಮೆ ಏರ್ಪಡಿಸುವ ಫ್ಯಾಷನ್ ಷೋಗಳಲ್ಲಿ ಕೂಡ ಖಾದಿ ಕಾಯಂ ಜಾಗ ಗಿಟ್ಟಿಸಿಕೊಂಡಿದೆ. ಖಾದಿಗೆ ಉತ್ತೇಜನ ನೀಡಲು ಕೇಂದ್ರ ಜವಳಿ ಮಂತ್ರಾಲಯ ಕೂಡ ಫ್ಯಾಷನ್ ಷೋಗಳಲ್ಲಿ ಖಾದಿ ಷೋಅನ್ನು ಒಂದು ಭಾಗವಾಗಿಸಿ ಕಡ್ಡಾಯಗೊಳಿಸಿದೆ.

ವಿಶ್ವವಿದ್ಯಾಲಯಗಳಲ್ಲಿ ವಾರದಲ್ಲಿ ಒಂದು ದಿನ ಖಾದಿ ದಿರಿಸು ಧರಿಸಲು ಆದೇಶ ಹೊರಡಿಸಿದೆ. ವಿದ್ಯಾರ್ಥಿನಿಯರು ಕುರ್ತಿ, ಮಹಿಳಾ ಪ್ರಾಧ್ಯಾಪಕರು ಖಾದಿ ಸೀರೆಯುಟ್ಟು ಸಂಭ್ರಮಿಸುವಂತೆ ಮಾಡಿದೆ ಈ ಆದೇಶ. ಘಟಿಕೋತ್ಸವದಲ್ಲಿ ಕೂಡ ಗೌನ್ ಬದಲು ಖಾದಿ ವಸ್ತ್ರ, ಸೀರೆಯನ್ನೇ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ ಎನ್ನುತ್ತಾರೆ ಗಾಂಧಿ ಅನುಯಾಯಿಯಾಗಿರುವ ಧಾರವಾಡ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕ ಡಾ.ಬಶೆಟ್ಟಿ.

ಇತ್ತೀಚಿನ ವರ್ಷಗಳಲ್ಲಿ ಕಾರ್ಪೊರೇಟ್ ವುಮನ್ ಫ್ಯಾಷನ್ ಷೋಗಳಲ್ಲಿ ಖಾದಿ ಸೀರೆಯನ್ನೇ ಧರಿಸಲು ಒತ್ತು ನೀಡಲಾಗಿದೆ ಎನ್ನುತ್ತಾರೆ ಖಾದಿ ಕಸೂತಿಯಲ್ಲಿ ವಿಶೇಷ ಯೋಜನಾವರದಿ ಸಿದ್ಧ ಪಡಿಸಿದ ಹುಬ್ಬಳ್ಳಿಯ ವಸ್ತ್ರವಿನ್ಯಾಸಕಿ ಸೀಮಾ ಎಸ್. ಖಟಾವ್ಕರ್.



ಅ. 2 ಗಾಂಧಿ ಜಯಂತಿ. ಮಹಾತ್ಮನಿಗೆ ಉಡುಗೆಯಲ್ಲಿ ಖಾದಿ, ಊಟದಲ್ಲಿ ಬಡವರ ಬಾದಾಮಿ ಎಂದು ಕರೆದಿದ್ದ ಸೇಂಗಾ ಪ್ರಿಯವಾಗಿತ್ತು. ಉಂಡು–ಉಟ್ಟು ಸಹ ಗಾಂಧಿಯನ್ನು ಸ್ಮರಿಸಬಹುದು

ಖಾದಿಯಲ್ಲಿದೆ ನೈಸರ್ಗಿಕ ಬಣ್ಣ

ಖಾದಿಯಲ್ಲಿ ನೈಸರ್ಗಿಕ ಬಣ್ಣಗಳನ್ನು ಬಳಸಲಾಗುವುದರಿಂದ ಚರ್ಮದ ಆರೋಗ್ಯವನ್ನು ಕಾಯಲಿದೆ. ಅದರಲ್ಲೂ ವಿಶೇಷವಾಗಿ ಚರ್ಮದ ಕ್ಯಾನ್ಸರ್ ರೋಗಿಗಳು, ಸಂತ್ರಸ್ತರು, ಸೂಕ್ಷ್ಮ ಚರ್ಮಪ್ರಕೃತಿಯುಳ್ಳವರು ಖಾದಿ ವಸ್ತ್ರ ಬಳಸುವುದರಿಂದ ಆರೋಗ್ಯವನ್ನು ಹಾನಿಕಾರಕ ರಾಸಾಯನಿಕಗಳಿಂದ ರಕ್ಷಿಸಿಕೊಳ್ಳಬಹುದು ಎನ್ನುತ್ತಾರೆ ಸೀಮಾ ಎಸ್. ಖಟಾವ್ಕರ್.

ಖಾದಿ ಬಟ್ಟೆಗಳಲ್ಲಿ ನೈಸರ್ಗಿಕ ಬಣ್ಣಗಳನ್ನೇ ಬಳಸುತ್ತಿರುವುದು ವಿಶೇಷ. ಅಡಿಕೆ ತೊಗರು, ಇಂಡಿಗೊ, ದಾಳಿಂಬೆ ಸಿಪ್ಪೆ, ಮಂಜಿಷ್ಟಾ, ನೀಲಗಿರಿ ಎಲೆಗಳನ್ನು ಬಣ್ಣಕ್ಕಾಗಿ ಬಳಸುತ್ತಿದ್ದು, ಬಣ್ಣ ಸುದೀರ್ಘ ಕಾಲ ಬಾಳಿಕೆಯೊಂದಿಗೆ, ಚರ್ಮದ ಸ್ವಾಸ್ಥ್ಯವನ್ನು ಕಾಪಿಡಲಿವೆ ಎಂಬುದು ಅವರು ನೀಡುವ ವಿವರಣೆ.

ತ್ರಿವರ್ಣ ಧ್ವಜ ತಯಾರಿಕೆಯಲ್ಲಿ ಮೇಲಿನ ಪಂಕ್ತಿಯಲ್ಲಿರುವ ಹುಬ್ಬಳ್ಳಿಯ ಬೆಂಗೇರಿಯಲ್ಲಿರುವ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದಲ್ಲಿ ಖಾದಿ ವಸ್ತ್ರಗಳ ಭರಪೂರ ಸಂಗ್ರಹವಿದೆ. ಖಾದಿ ಸೀರೆಗಳ ಸಂಗ್ರಹವೂ ಇದೆ.

ವರ್ಷದಿಂದ ವರ್ಷಕ್ಕೆ ಖಾದಿ ಸೀರೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಬಿಳಿ, ಹಳದಿ ಸಮೇತ ತಿಳಿ ಬಣ್ಣಗಳಲ್ಲಿ ಸೀರೆಗಳು ಲಭ್ಯವಿವೆ. ಅಕ್ಟೋಬರ್ 2ರಿಂದ 45 ದಿನಗಳ ಕಾಲ ಖಾದಿ ಮೇಲೆ ಶೇ 35ರಷ್ಟು ರಿಯಾಯಿತಿ ಇರುವುದರಿಂದ ಆ ಸಮಯದಲ್ಲಿ ಸೀರೆಗಳ ಖರೀದಿ ಹೆಚ್ಚಿರಲಿದೆ ಎನ್ನುತ್ತಾರೆ ಸಂಘದ ಕಾರ್ಯದರ್ಶಿ ಶಿವಾನಂದ ಮಠಪತಿ ಅವರು. ❖

ಶೇಂಗಾ ಸವಿ

ಬಾದಾಮಿಯಲ್ಲಿ ಇರುವ ಎಲ್ಲಾ ಪೌಷ್ಟಿಕಾಂಶಗಳೂ ಕಡಲೆಕಾಯಿ (ನೆಲಗಡಲೆ, ಶೇಂಗಾ)ಯಲ್ಲಿದೆ. ರುಚಿಕರವೂ ಪೌಷ್ಟಿಕವೂ ಆಗಿರುವ ಬಡವರ ಬಾದಾಮಿ ಶೇಂಗಾ ಬಳಸಿ ಮಾಡಿದ ವಿವಿಧ ಖಾದ್ಯಗಳನ್ನು ನಳಿನ ಸೋಮಯಾಜಿ ಅವರು ಪರಿಚಯಿಸಿದ್ದಾರೆ.



ಕಡಲೆಕಾಯಿ - ನೆಲ್ಲಿಕಾಯಿ ಚಿತ್ರಾನ್ನ

ಬೇಕಾಗುವ ಪದಾರ್ಥಗಳು: 1/2 ಕಪ್ಪು ಕಡಲೆಕಾಯಿ, ನೆಲ್ಲಿಕಾಯಿ 2, ಹಸಿ ಮೆಣಸು 5 ರಿಂದ 6, ಶುಂಠಿ ಒಂದು ಇಂಚು, ಬೆಳ್ತಿಗೆ ಅನ್ನ ಒಂದು ಕಪ್ಪು, ತೆಂಗಿನ ತುರಿ, ಒಂದು ಕಪ್ಪು, ಉಪ್ಪು ರುಚಿಗೆ ತಕ್ಕಷ್ಟು, ತುಪ್ಪ ಒಂದು ದೊಡ್ಡ ಚಮಚೆ, ಒಗ್ಗರಣೆಗೆ ಉದ್ದಿನ ಬೇಳೆ ಒಂದು ಚಮಚೆ, ಸಾಸಿವೆ ಒಂದು ಚಮಚೆ, ಕರಿಬೇವು, ಎಣ್ಣೆ 2 ದೊಡ್ಡ ಚಮಚೆ, ತುಪ್ಪ 1ಚಮಚೆ.

ಮಾಡುವ ವಿಧಾನ: ಕಡಲೆಕಾಯಿ ನೆನೆಸಿ ತೊಳೆದು ನೆನೆಸಿ. (ನಾಲ್ಕು ಗಂಟೆ). ಮತ್ತೆ ತೊಳೆದು ಅದನ್ನು ಬೇಯಿಸಿಟ್ಟುಕೊಳ್ಳಿ. ಅನ್ನ ಮಾಡಿ ತಣ್ಣಗಾಗಲು ಬಿಡಿ. ಶುಂಠಿ, ತೆಂಗಿನ ಕಾಯಿ, ನೆಲ್ಲಿಕಾಯಿಯನ್ನು ಬೇರೆ ಬೇರೆಯಾಗಿ ತುರಿದಿಡಿ. ಹಸಿಮೆಣಸು ತೊಳೆದು ಸಣ್ಣದಾಗಿ ಹೆಚ್ಚಿಡಿ. ಈಗ ಬಾಣಲೆ ಬಿಸಿ ಮಾಡಿ ಎಣ್ಣೆ ಮತ್ತು ತುಪ್ಪ ಹಾಕಿ. ತುಪ್ಪ ಕರಗಿದಾಗ ಉದ್ದಿನಬೇಳೆ, ಸಾಸಿವೆ ಹಾಕಿ. ಸಾಸಿವೆ ಹೊಟ್ಟೆಯಿಂದ ನಂತರ ಹಸಿಮೆಣಸು ಸೇರಿಸಿ. ನಂತರ ಕರಿಬೇವು ಹಾಕಿ. ತುರಿದ ನೆಲ್ಲಿ ಕಾಯಿ ಸೇರಿಸಿ ಬಾಡಿಸಿ.
ಬೇಯಿಸಿದ ಕಡಲೆಕಾಯಿ ಹಾಕಿ.(ಬೇಯಿಸಿದಾಗ ನೀರಿದ್ದರೆ ಸೋಸಿ ತೆಗೆಯಿರಿ. ಇದಕ್ಕೆ ಸೇರಿಸಬಾರದು). ರುಚಿಗೆ ತಕ್ಕಷ್ಟು ಉಪ್ಪು, ಚಿಟಿಕೆ ಅರಿಶಿನ ಸೇರಿಸಿ ಮಿಶ್ರ ಮಾಡಿ ಈಗ ತಣ್ಣಗಾದ ಅನ್ನ ಹಾಗೂ ತೆಂಗಿನ ತುರಿ ಸೇರಿಸಿ ಎಲ್ಲವನ್ನೂ ಚೆನ್ನಾಗಿ ಮಿಶ್ರ ಮಾಡಿ. ಒಂದು ಮುಚ್ಚಳ ಮುಚ್ಚಿ. ಸಣ್ಣ ಉರಿಯಲ್ಲಿ ಒಂದು ನಿಮಿಷ ಇರಲಿ.
ನಂತರ ಮತ್ತೊಮ್ಮೆ ಮಿಶ್ರ ಮಾಡಿ ಬಡಿಸುವ ಪಾತ್ರೆಗೆ ಹಾಕಿ. ಮೊಸರಿನೊಂದಿಗೆ ತಿನ್ನಿ. ಕಡಲೆಕಾಯಿ - ನೆಲ್ಲಿಕಾಯಿ ಚಿತ್ರಾನ್ನ ಆರೋಗ್ಯಕರ ಹಾಗೂ ರುಚಿಯೂ ಹೌದು.



ಕಡಲೆಕಾಯಿ - ರವೆ ಮಿಠಾಯಿ

ಬೇಕಾಗುವ ಸಾಮಗ್ರಿಗಳು: ಕಡಲೆಕಾಯಿ 1 ಲೋಟ, ಪುಡಿ ಮಾಡಿದ ಬೆಲ್ಲ 1 1/2 ಲೋಟ, ಉಪ್ಪಿಟ್ಟು ರವೆ 1 ದೊಡ್ಡಚಮಚೆ, ತುಪ್ಪ 1ಚಿಕ್ಕ ಚಮಚೆ.

ಮಾಡುವ ವಿಧಾನ: ಕಡಲೆಕಾಯಿ ಹುರಿದು, ಸಿಪ್ಪೆ ಬಿಡಿಸಿ ಪುಡಿ ಮಾಡಿ, ರವೆ ಬೆರೆಸಿಟ್ಟುಕೊಳ್ಳಿ. ಒಲೆಯ ಮೇಲೆ ಬಾಣಲೆ ಇಟ್ಟು ಬೆಲ್ಲ ಹಾಕಿ ಮುಳುಗುವಷ್ಟು ನೀರು ಹಾಕಿ ಬೆಲ್ಲ ಕರಗಿಸಿ. ಒಂದೆಳೆ ಪಾಕಕ್ಕಿಂತ ಚೂರು ಗಟ್ಟಿಯಾದಾಗ, ಕಡಲೆಕಾಯಿ -ರವೆ ಮಿಶ್ರಣವನ್ನು ಹಾಕಿ ಚೆನ್ನಾಗಿ ಮೊಗಚಿ. ತಳ ಬಿಡಲು ಪ್ರಾರಂಭಿಸುತ್ತದೆ. ತುಪ್ಪ ಸೇರಿಸಿ ಇನ್ನಷ್ಟು ಮೊಗಚಿ. ತುಪ್ಪ ಬಿಡಲು ಪ್ರಾರಂಭಿಸಿದ ತಕ್ಷಣ, ತುಪ್ಪ ಸವರಿದ ತಟ್ಟೆಗೆ ಹಾಕಿ ಸಮತಟ್ಟು ಮಾಡಿ. ಸಂಪೂರ್ಣ ತಣ್ಣಗಾದ ಮೇಲೆ ಇದನ್ನು ಬೇಕಾದ ಆಕಾರದಲ್ಲಿ ಕತ್ತರಿಸಿದರೆ ಕಡಲೆ ಮಿಠಾಯಿ ತಯಾರು. (ರವೆ ಬೆರೆಸಿದ್ದರಿಂದ ಗಟ್ಟಿಯಾಗಲು ಹೆಚ್ಚು ಸಮಯ ಬೇಕಾಗುತ್ತದೆ).



ಕಡಲೆಕಾಯಿ ಪಡವಲಕಾಯಿ ರೋಲ್

ಬೇಕಾಗುವ ಸಾಮಗ್ರಿಗಳು: ಪಡವಲ ಕಾಯಿ 1 (ಮಧ್ಯಮಗಾತ್ರದ್ದು).
ಮಸಾಲೆಗೆ ಹುರಿದು ಪುಡಿಮಾಡಿದ ಕಡಲೆಕಾಯಿ 1/2 ಕಪ್ಪು. ಸಾರಿನ ಪುಡಿ 1. ಚಮಚೆ, ಕಡ್ಲೆಬೇಳೆ -ಉದ್ದಿನಬೆಳೆ ಚಟ್ನಿಪುಡಿ. (ಇಲ್ಲದಿದ್ದರೆ ಎರಡು ಬೇಳೆ ಒಂದೊಂದು ಚಮಚೆ ಹುರಿದು ಪುಡಿ ಮಾಡಿಕೊಳ್ಳಿ), ಗರಂ ಮಸಾಲೆ 1/2 ಚಮಚೆ, ಕೊಬ್ಬರಿ ತುರಿ 1ಕಪ್ಪು, ಹುಣಿಸೆ ರಸ 2 ರಿಂದ 3 ಚಮಚೆ, ಉಪ್ಪು ಸ್ವಲ್ಪ. ಒಗ್ಗರಣೆಗೆ ಎಣ್ಣೆ: ಎರಡರಿಂದ ಮೂರು ಚಮಚೆ, ಸಾಸಿವೆ , ಉದ್ದಿನ ಬೇಳೆ ಒಂದು ಚಮಚೆ, ಜೀರಿಗೆ ಅರ್ಧ ಚಮಚೆ, ಇಂಗು ಸ್ವಲ್ಪ, ಕರಿಬೇವು ಎಂಟರಿಂದ ಹತ್ತು.

ಮಾಡುವ ವಿಧಾನ: ಪಡವಲ ಕಾಯಿಯನ್ನು ತೊಳೆದು ವೃತ್ತಾಕಾರದಲ್ಲಿ (ಸರ್ಕಲ್ ಹಾಗೆ) ಹೆಚ್ಚಿ ಸ್ವಲ್ಪ ಬೇಯಿಸಿಡಿ. ಒಂದು ಪಾತ್ರೆಯಲ್ಲಿ ಸಾರಿನ ಪುಡಿ, ಕಡಲೆಕಾಯಿ ಪುಡಿ, ಗರಂ ಮಸಾಲೆ ಪುಡಿ, ಕೊಬ್ಬರಿ ತುರಿ, ಉಪ್ಪು ಹಾಕಿ ಬೆರೆಸಿ. ಹುಣಸೆ ರಸ ಸೇರಿಸಿ ಗಟ್ಟಿಯಾಗಿ ಕಲೆಸಿ. ಬೇಯಿಸಿದ ಪಡವಲ ಕಾಯಿಯ ಒಂದು ಬದಿ ಸೀಳಿ ಅದರ ಒಳಭಾಗದಲ್ಲಿ ಮಾಡಿಟ್ಟ ಚಟ್ನಿಯನ್ನು ಚೆನ್ನಾಗಿ ಹಚ್ಚಿ. (ಕೆಸುವಿನ ಎಲೆಗೆ ಹಿಟ್ಟು ಹಚ್ಚಿದಂತೆ). ಇದನ್ನು ಸುರುಳಿಯಾಗಿ ಸುತ್ತಿ. ಹೀಗೆ ಎಲ್ಲ ಪಡವಲ ತುಂಡಿಗೂ ಮಸಾಲೆ ಹಚ್ಚಿ ಸುರುಳಿ ಮಾಡಿಟ್ಟುಕೊಳ್ಳಿ. ಒಂದು ಅಗಲದ ಬಾಣಲೆಗೆ ಮೂರು ಚಮಚೆ ಎಣ್ಣೆ ಹಾಕಿ ಬಿಸಿಮಾಡಿ. ಉದ್ದಿನ ಬೇಳೆ, ಸಾಸಿವೆ, ಜೀರಿಗೆ, ಇಂಗು ಹಾಗೂ ಕರಿಬೇವಿನ ಒಗ್ಗರಣೆ ಮಾಡಿ, ಸುರುಳಿ ಮಾಡಿಟ್ಟ ಪಡವಲದ ಸುರುಳಿಗಳನ್ನು ಒಂದೊಂದಾಗಿ ಜೋಡಿಸಿ ಸಣ್ಣ ಉರಿಯಲ್ಲಿ ಎರಡೂ ಬದಿ ಬೇಯಿಸಿ. ಬೇಯುವಾಗ ಚೂರು ನೀರು ಚಿಮುಕಿಸಿ. ಈಗ ತುಂಬಿದ ಪಡವಲ ಪಲ್ಯ ತಯಾರು. ಅನ್ನ ಚಪಾತಿಯೊಂದಿಗೆ ಸವಿಯಬಹುದು.

ಕಡಲೆಕಾಯಿ ಸಜ್ಜಪ್ಪ. (ಸಿಹಿ ಕಚೋರಿ)

ಬೇಕಾಗುವ ಸಾಮಗ್ರಿಗಳು: ಹೂರಣಕ್ಕೆ ಹುರಿದು ಪುಡಿ ಮಾಡಿದ ಕಡಲೆಕಾಯಿ ಪುಡಿ 1/2 ಕಪ್ಪು, ಬೆಲ್ಲದ ಪುಡಿ 1 ಕಪ್ಪು, ಕೊಬ್ಬರಿ ತುರಿ 1 ಕಪ್ಪು, ರವೆ 1 ದೊಡ್ಡ ಚಮಚೆ, ಗಸಗಸೆ 1ಸಣ್ಣಚಮಚೆ, ಕಣಕ ಮಾಡಿಕೊಳ್ಳಲು ಗೋಧಿ ಹಿಟ್ಟು 1 ಕಪ್ಪು. ಸಣ್ಣ ರವೆ 1/4 ಕಪ್ಪು, ಉಪ್ಪು ರುಚಿಗೆ ತಕ್ಕಷ್ಟು, ಅರಿಶಿನ ಚಿಟಿಕೆ. ತುಪ್ಪ 1 ದೊಡ್ಡ ಚಮಚೆ. ಕರಿಯಲು ಎಣ್ಣೆ.

ಮಾಡುವ ವಿಧಾನ: ಮೊದಲು ಬಾಣಲೆಗೆ ಬೆಲ್ಲ, ಕೊಬ್ಬರಿ ತುರಿ ಹಾಕಿ ಹುರಿಯಿರಿ. ಅದಕ್ಕೆ ಗಸಗಸೆ, ಕಡಲೆಕಾಯಿ ಪುಡಿ, ರವೆ ಹಾಕಿ ಹುರಿಯಿರಿ. ಬೆಲ್ಲ ಎಲ್ಲಾ ಸಾಮಗ್ರಿಗಳೊಂದಿಗೆ ಬೆರೆಯಲಿ. ಎಲ್ಲವನ್ನೂ ಚೆನ್ನಾಗಿ ಮಿಶ್ರ ಮಾಡಿ ಒಂದು ಬಟ್ಟಲಿಗೆ ಹಾಕಿ. ಈಗ ಒಂದು ಅಗಲದ ಪಾತ್ರೆಗೆ ಗೋಧಿ ಹಿಟ್ಟು, ರವೆ, ತುಪ್ಪ, ಉಪ್ಪು ಮತ್ತು ಚಿಟಿಕೆ ಅರಿಶಿನ ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ. ಸ್ವಲ್ಪ ಸ್ವಲ್ಪವೇ ನೀರು ಸೇರಿಸುತ್ತಾ ಗಟ್ಟಿ ಹಿಟ್ಟು



ತಯಾರಿಸಿ. ಚೆನ್ನಾಗಿ ನಾದಿ ಕೊಳ್ಳಿ. ಒಂದು ಚಮಚೆ ಎಣ್ಣೆ ಮೇಲಿನಿಂದ ಹಾಕಿ. ಈಗ ಸಣ್ಣ ಸಣ್ಣ ಉಂಡೆ ಮಾಡಿ. ಸಣ್ಣ ಉಂಡೆಗಳನ್ನು ಪೂರಿಯಂತೆ ಲಟ್ಟಿಸಿ ಮಧ್ಯೆ ಒಂದು ದೊಡ್ಡ ಚಮಚೆ ಹೂರಣವಿಡಿ. ಲಟ್ಟಿಸಿದ ಪೂರಿಯ ತುದಿಗಳನ್ನು ಮಧ್ಯೆ ತಂದು ಪೂರಿಯನ್ನು ಮುಚ್ಚಿ ಮೆದುವಾಗಿ ಲಟ್ಟಿಸಿ. ಬಾಣಲೆಯಲ್ಲಿ ಎಣ್ಣೆ ಹಾಕಿ ಬಿಸಿ ಮಾಡಿ. ಕಾದ ಎಣ್ಣೆಯಲ್ಲಿ ಸಣ್ಣ ಉರಿಯಲ್ಲಿ ಎರಡೂ ಬದಿ ಕಾಯಿಸಿ. ಸಣ್ಣ ಉರಿಯಲ್ಲಿ ಕಾಯಿಸಿದಾಗ ಅದು ಕ್ರಿಸ್ಪಿ ಆಗುವುದು.

ಕಾಯ್ದೆಗೆ ತಿದ್ದುಪಡಿ ತರಲು ಸುಗ್ರೀವಾಜ್ಞೆ ಹೊರಡಿಸಿದ ಸರ್ಕಾರ

ಜಿಎಸ್‌ಟಿ ವ್ಯಾಪ್ತಿಗೆ ಆನ್‌ಲೈನ್ ಗೇಮಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಟ್ಟಿಂಗ್, ಕ್ಯಾಸಿನೊ, ಜೂಜು, ಕುದುರೆ ರೇಸಿಂಗ್, ಲಾಟರಿ, ಆನ್‌ಲೈನ್ ಮನಿ ಗೇಮಿಂಗ್‌ಗಳನ್ನು ರಾಜ್ಯದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರಲು ಕರ್ನಾಟಕ ಜಿಎಸ್‌ಟಿ ಕಾಯ್ದೆಗೆ ತಿದ್ದು-ಪಡಿಗಳನ್ನು ತರುವ ಸುಗ್ರೀವಾಜ್ಞೆಯನ್ನು ಶುಕ್ರವಾರ ಹೊರಡಿಸಲಾಗಿದೆ.

ಎಲ್ಲ ಬಗೆಯ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳಿಗೆ ಶೇಕಡ 28ರಷ್ಟು ಜಿಎಸ್‌ಟಿ ವಿಧಿಸಲು ಸರಕು ಮತ್ತು ಸೇವಾ ತೆರಿಗೆ ಮಂಡಳಿ (ಜಿಎಸ್‌ಟಿ ಕೌನ್ಸಿಲ್) ಆಗಸ್ಟ್ 2ರಂದು ನಡೆದ ಸಭೆಯಲ್ಲಿ ನಿರ್ಧರಿಸಿತ್ತು. ಭಾನುವಾರದಿಂದ (ಅಕ್ಟೋಬರ್ 1) ಈ ಕ್ರಮ ಜಾರಿಗೆ ಬರಲಿದೆ. ಅದಕ್ಕೆ ಪೂರಕವಾಗಿ ಎಲ್ಲ ರಾಜ್ಯಗಳಲ್ಲೂ ಜಿಎಸ್‌ಟಿ ಕಾಯ್ದೆಗೆ ತಿದ್ದುಪಡಿ ತರುವಂತೆ ಜಿಎಸ್‌ಟಿ ಮಂಡಳಿ ಸೂಚಿಸಿತ್ತು.

ತಕ್ಷಣದಿಂದಲೇ ತಿದ್ದುಪಡಿಯನ್ನು ಜಾರಿಗೊಳಿ-ಸಬೇಕಾದ ಕಾರಣ ಸುಗ್ರೀವಾಜ್ಞೆ ಹೊರಡಿಸಲಾಗಿದೆ. ಆರು ತಿಂಗಳೊಳಗೆ ಈ ತಿದ್ದುಪಡಿಗಳನ್ನು ಒಳಗೊಂಡ ಮಸೂದೆಯನ್ನು ವಿಧಾನಮಂಡಲದಲ್ಲಿ ಮಂಡಿಸಿ ಅಂಗೀಕಾರ ಪಡೆಯಬೇಕಿದೆ.

‘ಆನ್‌ಲೈನ್ ಮತ್ತು ವಿದ್ಯುನ್ಮಾನ ಸಂಪರ್ಕ ಜಾಲದಲ್ಲಿ ಆಟವಾಡಲು ಆಹ್ವಾನಿಸುವುದೂ ಸೇರಿದಂತೆ ಎಲ್ಲ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳು ಇನ್ನು ಮುಂದೆ ಜಿಎಸ್‌ಟಿ ವ್ಯಾಪ್ತಿಗೆ ಬರಲಿವೆ. ಆಟಗಳು ಕೌಶಲ ಅಥವಾ ಕಾರ್ಯಕ್ಷಮತೆಯನ್ನು ಆಧರಿಸಿರಲಿ ಅಥವಾ ಆಧರಿಸದೇ ಇರಲಿ ಎಲ್ಲವೂ ತೆರಿಗೆ ವ್ಯಾಪ್ತಿಗೆ ಬರುತ್ತವೆ. ವರ್ಚುವಲ್ ಡಿಜಿಟಲ್ ಕರೆನ್ಸಿಯೂ ಸೇರಿದಂತೆ ಹಣ ಅಥವಾ ಹಣದ ಮೌಲ್ಯವನ್ನು ಗೆಲ್ಲುವ ನಿರೀಕ್ಷೆಯಲ್ಲಿ ಹಣ ಅಥವಾ ಹಣದ ಮೌಲ್ಯವನ್ನು ಪಾವತಿಸಿ ಅಥವಾ ಠೇವಣಿಯಾಗಿಟ್ಟು ಆಡುವ ಆನ್‌ಲೈನ್‌ನ ಆಟಗಳು ತೆರಿಗೆ ವ್ಯಾಪ್ತಿಗೆ ಬರಲಿವೆ’ ಎಂಬ ಉಲ್ಲೇಖ ಸುಗ್ರೀವಾಜ್ಞೆಯಲ್ಲಿದೆ.

ಭಾರತದ ಹೊರಗಿನಿಂದ ದೇಶದೊಳಗೆ ನಡೆಸುವ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳಿಗೂ ಈ ತಿದ್ದುಪಡಿ ಅನ್ವಯವಾಗಲಿದೆ. ಈ ಸುಗ್ರೀವಾಜ್ಞೆಯು ಬೆಟ್ಟಿಂಗ್, ಕ್ಯಾಸಿನೊ, ಜೂಜು, ಕುದುರೆ ರೇಸಿಂಗ್, ಲಾಟರಿ ಅಥವಾ ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳನ್ನು ನಿಷೇಧಿಸುವ, ನಿರ್ಬಂಧಿಸುವ ಅಥವಾ ನಿಯಂತ್ರಿಸುವುದಕ್ಕಾಗಿ ಜಾರಿಯಲ್ಲಿರುವ ಯಾವ ಕಾನೂನುಗಳಿಗೂ ಅಡ್ಡಿಪಡಿಸುವುದಿಲ್ಲ. ತೆರಿಗೆ ವಿಧಿಸುವ ಸುಗ್ರೀವಾಜ್ಞೆಯು ಕ್ಯಾಸಿನೊ, ಕುದುರೆ ರೇಸಿಂಗ್ ಮತ್ತು ಆನ್‌ಲೈನ್ ಗೇಮಿಂಗ್ ಚಟುವಟಿಕೆಗಳನ್ನು ಕಾನೂನುಬದ್ಧಗೊಳಿಸುವುದಿಲ್ಲ ಎಂಬ ಅಂಶ ಸುಗ್ರೀವಾಜ್ಞೆಯಲ್ಲಿದೆ.

ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಗಡುವು

ಬೆಂಗಳೂರು: ಎಲ್ಲ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆರು ತಿಂಗಳ ಗಡುವು ನೀಡಿದೆ.

ಬೆಂಗಳೂರಿನ ಪಟ್ಟಂದೂರು ಅಗ್ರಹಾರದ ನಿವಾಸಿ ಎಂ. ಮಂಜುನಾಥ್ ಪ್ರಸಾದ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಬಿ. ವರಾಳೆ, ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ದಲಿತ ಸಮುದಾಯಗಳಿಗೆ ಮೀಸಲಾದ ಹುದ್ದೆಗಳನ್ನು ಭರ್ತಿ ಮಾಡದೆ ಉಳಿಸಿಕೊಳ್ಳುವುದು ಸಂವಿಧಾನದ ಆಶಯಗಳನ್ನು ನಿರಾಕರಿಸಿದಂತೆ. ಸರ್ಕಾರಿ ಉದ್ಯೋ-ಗಗಳಲ್ಲಿ ಅವರಿಗಿರುವ ಪ್ರಾತಿನಿಧ್ಯವನ್ನು ಕಸಿದುಕೊಂಡಂತೆ. ಎಲ್ಲ ಇಲಾಖೆಗಳಲ್ಲಿ ಖಾಲಿಯಿರುವ ಬ್ಯಾಕ್‌ಲಾಕ್ ಹುದ್ದೆಗಳ ನೇಮಕಾತಿಗೆ ಸರ್ಕಾರ ಅಧಿಸೂಚನೆ ಹೊರಡಿಸಿ, ಎಲ್ಲ ಪ್ರಕ್ರಿಯೆಗಳನ್ನೂ 6 ತಿಂಗಳಲ್ಲಿ ಪೂರ್ಣಗೊಳಿಸಬೇಕು‘ ಎಂದು ತಾಕೀತು ಮಾಡಿದೆ.

ಪೊಲೀಸ್ ತರಬೇತಿ ಕೇಂದ್ರಕ್ಕೆ ಅಲೋಕ್

ಬೆಂಗಳೂರು: ಬೆಂಗಳೂರು ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರನ್ನು ಪೊಲೀಸ್ ತರಬೇತಿ ಕೇಂದ್ರಕ್ಕೆ ವರ್ಗಾವಣೆ ಮಾಡಲಾಗಿದೆ.

ಪಿ. ರವೀಂದ್ರನಾಥ್ ಅವರ ನಿವೃತ್ತಿಯಿಂದ ತೆರವಾಗುವ ಹುದ್ದೆಗೆ ಈ ವರ್ಗಾವಣೆ ಮಾಡಲಾಗಿದೆ. ರಾಜ್ಯ ಪೊಲೀಸ್ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಡಿಜಿಪಿ ಕೆ.ರಾಮಚಂದ್ರ ರಾವ್ ಡಿಜಿಪಿಯಾಗಿ ಬಡ್ತಿ ನೀಡಿ, ಅದೇ ಹುದ್ದೆಯಲ್ಲಿ ಮುಂದುವರಿಸಲಾಗಿದೆ.

ಸುಧಾ, ಮಯೂರ ಓದಿರಿ...

ಗಲಭೆ ಸಂತ್ರಸ್ತರಿಗೆ ಗರಿಷ್ಠ ₹ 10 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಂಪು ಹತ್ಯೆ, ಗಲಭೆಗಳಲ್ಲಿ ಸಂತ್ರಸ್ತರಾದವರಿಗೆ, ಅವರ ಅವಲಂಬಿತ ಕುಟುಂಬ ವರ್ಗಕ್ಕೆ ನೀಡುವ ಪರಿಹಾರ ಮೊತ್ತವನ್ನು ರಾಜ್ಯ ಸರ್ಕಾರ ಹೆಚ್ಚಳ ಮಾಡಿದೆ.
5	ಸಹಾಯಕ ಮತದಾರರ ನೋಂದಣಾಧಿಕಾರಿ	ಸೋಮಶೇಖರ್.ಜಿ.ಎಸ್.	ಉಪ ಆಯುಕ್ತರು (ಆಡಳಿತ)	ಮೈಸೂರು ಮಹಾನಗರ ಪಾಲಿಕೆ, ನ್ಯೂ ಸಯ್ಯಾಜಿರಾವ್‌ರಸ್ತೆ ಮೈಸೂರು	0821-2418840 99020-06089	217-ಚಾಮರಾಜ
6	ಸಹಾಯಕ ಮತದಾರರ ನೋಂದಣಾಧಿಕಾರಿ	ರಂಗಸ್ವಾಮಿ ಬಿ	ಕೌನ್ಸಿಲ್ ಕಾರ್ಯದರ್ಶಿ	ಮೈಸೂರು ಮಹಾನಗರ ಪಾಲಿಕೆ, ನ್ಯೂ ಸಯ್ಯಾಜಿರಾವ್‌ರಸ್ತೆ ಮೈಸೂರು	0821-8418819 98860-12607	218- ನರಸಿಹರಾಜ
7	ಸಹಾಯಕ ಮತದಾರರ ನೋಂದಣಾಧಿಕಾರಿ	ರಕ್ಷಿತ್ ಹೆಚ್.ಆರ್	ಉಪ ವಿಭಾಗಾಧಿಕಾರಿಗಳು	ಮೈಸೂರು ಉಪ- ವಿಭಾಗ ಉಪವಿಭಾಗಾಧಿಕಾರಿಗಳ ಕಚೇರಿ ಮೈಸೂರುಜಿಲ್ಲೆ ಮೈಸೂರು	0821-2422100 89716-52652	214-ನಂಜನಗೂಡು 215-ಚಾಮುಂಡೇಶ್ವರಿ 219- ವರುಣಾ 220-ಟಿ ನರಸೀಪುರ
8	ಸಹಾಯಕ ಮತದಾರರ ನೋಂದಣಾಧಿಕಾರಿ	ರುಚಿ ಬಿಂದಾಲ್	ಉಪ ವಿಭಾಗಾಧಿಕಾರಿಗಳು	ಹುಣಸೂರು ಉಪ- ವಿಭಾಗ ಉಪವಿಭಾಗಾಧಿಕಾರಿಗಳ ಕಚೇರಿ ಹುಣಸೂರು ತಾಲ್ಲೂಕು, ಹುಣಸೂರು	08222-252073 96542-53130 96542-53130	210- ಪಿರಿಯಪಟ್ಟಣ 211-ಕೃಷ್ಣರಾಜನಗರ 212- ಹುಣಸೂರು 213- ಹೆಚ್.ಡಿ.ಕೋಟೆ
9	ಸಹಾಯಕ ಮತದಾರರ ನೋಂದಣಾಧಿಕಾರಿ	ಕುಂಞಅಹಮ್ಮದ್	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ ಪಿರಿಯಾಪಟ್ಟಣ ತಾಲ್ಲೂಕು, ಪಿರಿಯಾಪಟ್ಟಣ	08223-274175 9481772243	210-ಪಿರಿಯಾಪಟ್ಟಣ
10	ಸಹಾಯಕ ಮತದಾರರ ನೋಂದಣಾಧಿಕಾರಿ	ಪೂರ್ಣಿಮ. ಸಿ. ಎಸ್	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ ಕೃಷ್ಣರಾಜನಗರ ತಾಲ್ಲೂಕು, ಕೃಷ್ಣರಾಜನಗರ	08223-262234 96636-75073	211- ಕೃಷ್ಣರಾಜನಗರ (ಕೆ.ಆರ್.ನಗರ ವ್ಯಾಪ್ತಿ)
11	ಸಹಾಯಕ ಮತದಾರರ ನೋಂದಣಾಧಿಕಾರಿ	ಪೂರ್ಣಿಮ. ಸಿ.ಎಸ್	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ ಸಾಲಿಗ್ರಾಮ ತಾಲ್ಲೂಕು, ಸಾಲಿಗ್ರಾಮ	08223-262234 96636-75073	211- ಕೃಷ್ಣರಾಜನಗರ (ಸಾಲಿಗ್ರಾಮ ವ್ಯಾಪ್ತಿ)
12	ಸಹಾಯಕ ಮತದಾರರ ನೋಂದಣಾಧಿಕಾರಿ	ಲೆಫ್ಟ್‌ನೆಂಟ್ ಕರ್ನಲ್ ಡಾ ಅಶೋಕ್.ಎಸ್.ಯು	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ ಹುಣಸೂರು ತಾಲ್ಲೂಕು, ಹುಣಸೂರು	08222-252040 96865-69959	212- ಹುಣಸೂರು
13	ಸಹಾಯಕ ಮತದಾರರ ನೋಂದಣಾಧಿಕಾರಿ	ಸಣ್ಣರಾಮಪ್ಪ	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ ಹೆಚ್.ಡಿ.ಕೋಟೆ ತಾಲ್ಲೂಕು, ಹೆಚ್.ಡಿ.ಕೋಟೆ	08228-255325 99026-32958	213- ಹೆಚ್.ಡಿ.ಕೋಟೆ (ಹೆಚ್.ಡಿ.ಕೋಟೆ ವ್ಯಾಪ್ತಿ)
14	ಸಹಾಯಕ ಮತದಾರರ ನೋಂದಣಾಧಿಕಾರಿ	ಪರಶಿವಮೂರ್ತಿ ಎ.ಹೆಚ್.	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ ಸರಗೂರು ತಾಲ್ಲೂಕು, ಸರಗೂರು	08228-255325 96116-64058	213- ಹೆಚ್.ಡಿ.ಕೋಟೆ (ಸರಗೂರು ವ್ಯಾಪ್ತಿ)
15	ಸಹಾಯಕ ಮತದಾರರ ನೋಂದಣಾಧಿಕಾರಿ	ಶಿವಕುಮಾರ್ ಕಾಸನೂರು	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ ನಂಜನಗೂಡು ತಾಲ್ಲೂಕು, ನಂಜನಗೂಡು	08221-226252 70343-95051	214-ನಂಜನಗೂಡು 219- ವರುಣ (ನಂಜನಗೂಡು ವ್ಯಾಪ್ತಿ)
16	ಸಹಾಯಕ ಮತದಾರರ ನೋಂದಣಾಧಿಕಾರಿ	ಗಿರೀಶ್ ಬಿ.ಎನ್	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ ಮೈಸೂರು ತಾಲ್ಲೂಕು, ಮೈಸೂರು	0821-2414811 95913-99199	215-ಚಾಮುಂಡೇಶ್ವರಿ 219- ವರುಣ (ಮೈಸೂರು ವ್ಯಾಪ್ತಿ)
17	ಸಹಾಯಕ ಮತದಾರರ ನೋಂದಣಾಧಿಕಾರಿ	ಸುರೇಶ್ ಆಚಾರ್	ತಹಶೀಲ್ದಾರ್	ತಹಶೀಲ್ದಾರ್ ಕಛೇರಿ, ಟಿ. ನರಸೀಪುರ ತಾಲ್ಲೂಕು, ಟಿ. ನರಸೀಪುರ	08227-261233 80885-81332	220-ಟಿ. ನರಸೀಪುರ 219- ವರುಣ (ಟಿ.ನರಸೀಪುರ ವ್ಯಾಪ್ತಿ)
18	ನಿಯೋಜಿತ ಅಧಿಕಾರಿ	ದಾಕ್ಷಾಯಿಣಿ	ಚುನಾವಣೆ ಶಿರಸ್ತೇದಾರರು	ತಾಲ್ಲೂಕು ಕಛೇರಿ ಪಿರಿಯಾಪಟ್ಟಣ ತಾಲ್ಲೂಕು, ಪಿರಿಯಾಪಟ್ಟಣ	08223-274275 99023-82986	210-ಪಿರಿಯಾಪಟ್ಟಣ
19	ನಿಯೋಜಿತ ಅಧಿಕಾರಿ	ದೀಪಕ್	ಚುನಾವಣೆ ಶಿರಸ್ತೇದಾರರು	ತಾಲ್ಲೂಕು ಕಛೇರಿ ಕೆ.ಆರ್. ನಗರ ತಾಲ್ಲೂಕು, ಕೆ.ಆರ್. ನಗರ	08223-262234 8147550155	211- ಕೃಷ್ಣರಾಜನಗರ (ಕೆ.ಆರ್.ನಗರ ವ್ಯಾಪ್ತಿ)
20	ನಿಯೋಜಿತ ಅಧಿಕಾರಿ	ಶಿವಕುಮಾರ್	ಚುನಾವಣೆ ಶಿರಸ್ತೇದಾರರು	ತಾಲ್ಲೂಕು ಕಛೇರಿ, ಸಾಲಿಗ್ರಾಮ ತಾಲ್ಲೂಕು, ಸಾಲಿಗ್ರಾಮ	08223-262234 94482-56530	211- ಕೃಷ್ಣರಾಜನಗರ (ಸಾಲಿಗ್ರಾಮ ವ್ಯಾಪ್ತಿ)
21	ನಿಯೋಜಿತ ಅಧಿಕಾರಿ	ಎನ್‌ಕಿರಣ್‌ಕುಮಾರ್	ಚುನಾವಣೆ ಶಿರಸ್ತೇದಾರರು	ತಾಲ್ಲೂಕು ಕಛೇರಿ, ಹುಣಸೂರು ತಾಲ್ಲೂಕು, ಹುಣಸೂರು	08222-252040 94815-28680	212- ಹುಣಸೂರು
22	ನಿಯೋಜಿತ ಅಧಿಕಾರಿ	ಎಂ. ಕುಮಾರ್	ಚುನಾವಣೆ ಶಿರಸ್ತೇದಾರರು	ತಾಲ್ಲೂಕು ಕಛೇರಿ, ಹೆಚ್ ಡಿ ಕೋಟೆ ತಾಲ್ಲೂಕು, ಹೆಚ್ ಡಿ ಕೋಟೆ	08228-255325 73377-65995	213-ಹೆಚ್.ಡಿ.ಕೋಟೆ (ಹೆಚ್.ಡಿ.ಕೋಟೆ ವ್ಯಾಪ್ತಿ)
23	ನಿಯೋಜಿತ ಅಧಿಕಾರಿ	ಸುನಿಲ್ ಎಂ.ಎಸ್.	ಚುನಾವಣೆ ಶಿರಸ್ತೇದಾರರು	ತಾಲ್ಲೂಕುಕಛೇರಿ ಸರಗೂರುತಾಲ್ಲೂಕು, ಸರಗೂರು	08228-255325 9900731094	213- ಹೆಚ್.ಡಿ.ಕೋಟೆ (ಸರಗೂರು ವ್ಯಾಪ್ತಿ)
24	ನಿಯೋಜಿತ ಅಧಿಕಾರಿ	ಮಹದೇವ್ ಪ್ರಸಾದ್ ಜಿ	ಚುನಾವಣೆ ಶಿರಸ್ತೇದಾರರು	ತಾಲ್ಲೂಕು ಕಛೇರಿ, ನಂಜನಗೂಡು ತಾಲ್ಲೂಕು, ನಂಜನಗೂಡು	08221-226252 98802-80742	214-ನಂಜನಗೂಡು 219- ವರುಣ (ನಂಜನಗೂಡು ವ್ಯಾಪ್ತಿ)
25	ನಿಯೋಜಿತ ಅಧಿಕಾರಿ	ಲೋಕೇಶ್ ಟಿ.ಎನ್	ಚುನಾವಣೆ ಶಿರಸ್ತೇದಾರರು	ತಾಲ್ಲೂಕು ಕಛೇರಿ, ಮೈಸೂರು ತಾಲ್ಲೂಕು, ಮೈಸೂರು	08221-226252 99456-29993	215-ಚಾಮುಂಡೇಶ್ವರಿ 219- ವರುಣ (ಮೈಸೂರು ವ್ಯಾಪ್ತಿ)
26	ನಿಯೋಜಿತ ಅಧಿಕಾರಿ	ಮಹದೇಶ್ ಎಲ್.ಎಸ್	ಚುನಾವಣೆ ಶಿರಸ್ತೇದಾರರು	ತಾಲ್ಲೂಕು ಕಛೇರಿ, ಟಿ.ನರಸೀಪುರ ತಾಲ್ಲೂಕು, ಟಿ.ನರಸೀಪುರ	08227-261233 99869-93575	220-ಟಿ. ನರಸೀಪುರ 219-ವರುಣ (ಟಿ.ನರಸೀಪುರ ವ್ಯಾಪ್ತಿ)
27	ನಿಯೋಜಿತಅಧಿಕಾರಿ	ಕಲೀಂ ಪಾಶಾ	ಚುನಾವಣೆ ಶಿರಸ್ತೇದಾರರು	ಮೈಸೂರು ಮಹಾನಗರ ಪಾಲಿಕೆ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು	0821-2418819 99167-76388	216- ಕೃಷ್ಣರಾಜ 218-ನರಸಿಂಹರಾಜ
28	ನಿಯೋಜಿತ ಅಧಿಕಾರಿ	ಪ್ರಭುರಾಜ್.ಜೆ	ಚುನಾವಣೆ ಶಿರಸ್ತೇದಾರರು	ಮೈಸೂರು ಮಹಾನಗರ ಪಾಲಿಕೆ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು	0821-2418819 97409-79444	217- ಚಾಮರಾಜ 218-ನರಸಿಂಹರಾಜ

ಮಂಡ್ಯ ಜಿಲ್ಲೆ

1	ಸಹಾಯಕ ಮತದಾರರ ನೋಂದಣಾಧಿಕಾರಿ	ಡಾ.ಕುಮಾರ ಭಾ.ಆ.ಸೇ.	ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ	ಜಿಲ್ಲಾಧಿಕಾರಿಗಳ ಕಛೇರಿ	08232-224600 82778-63520	ಮಂಡ್ಯ ಜಿಲ್ಲೆ
2	ಸಹಾಯಕ ಮತದಾರರ ನೋಂದಣಾಧಿಕಾರಿ	ಎಂ.ಶಿವಮೂರ್ತಿ	ಉಪವಿಭಾಗಾಧಿಕಾರಿ ಮಂಡ್ಯ ಉಪವಿಭಾಗ	ಉಪವಿಭಾಗಾಧಿಕಾರಿಗಳ ಕಛೇರಿ, ಮಂಡ್ಯ	08232-224086 88845-04666	ಮಂಡ್ಯ ಉಪವಿಭಾಗ
3	ಸಹಾಯಕ ಮತದಾರರ ನೋಂದಣಾಧಿಕಾರಿ	ಎಂ.ಎಲ್.ನಂದೀಶ್	ಉಪವಿಭಾಗಾಧಿಕಾರಿ ಪಾಂಡವಪುರ ಉಪವಿಭಾಗ	ಉಪವಿಭಾಗಾಧಿಕಾರಿಗಳ ಕಛೇರಿ, ಪಾಂಡವಪುರ	08236-255129 94480-56860	ಪಾಂಡವಪುರ ಉಪವಿಭಾಗ
4	ಸಹಾಯಕ ಮತದಾರರ ನೋಂದಣಾಧಿಕಾರಿ	ಶಿವಕುಮಾರ್ ಬಿರಾದರ	ತಹಶೀಲ್ದಾರ್, ಮಂಡ್ಯ ತಾಲ್ಲೂಕು	ತಾಲ್ಲೂಕು ಕಛೇರಿ, ಮಂಡ್ಯ	08232-297131 9448018965	ಮಂಡ್ಯ ತಾಲ್ಲೂಕು
5	ಸಹಾಯಕ ಮತದಾರರ ನೋಂದಣಾಧಿಕಾರಿ	ಟಿ.ಎನ್.ನರಸಿಂಹಮೂರ್ತಿ	ತಹಶೀಲ್ದಾರ್, ಮದ್ದೂರು ತಾಲ್ಲೂಕು	ತಾಲ್ಲೂಕು ಕಛೇರಿ, ಮದ್ದೂರು	08232-298074 98455-80432	ಮದ್ದೂರುತಾಲ್ಲೂಕು
6	ಸಹಾಯಕ ಮತದಾರರ ನೋಂದಣಾಧಿಕಾರಿ	ಕೆ.ಎನ್.ಲೋಕೇಶ್	ತಹಶೀಲ್ದಾರ್, ಮಳವಳ್ಳಿ ತಾಲ್ಲೂಕು	ತಾಲ್ಲೂಕು ಕಛೇರಿ, ಮಳವಳ್ಳಿ	08231-242277 76249-99796	ಮಳವಳ್ಳಿ ತಾಲ್ಲೂಕು
7	ಸಹಾಯಕ ಮತದಾರರ ನೋಂದಣಾಧಿಕಾರಿ	ಎಸ್.ಸಂತೋಷ್	ತಹಶೀಲ್ದಾರ್, ಪಾಂಡವಪುರ ತಾಲ್ಲೂಕು	ತಾಲ್ಲೂಕುಕಛೇರಿ, ಪಾಂಡವಪುರ	08236-255128 90609-91155	ಪಾಂಡವಪುರ ತಾಲ್ಲೂಕು
8	ಸಹಾಯಕ ಮತದಾರರ ನೋಂದಣಾಧಿಕಾರಿ	ಜಿ.ಅಶ್ವಿನಿ	ತಹಶೀಲ್ದಾರ್, ಶ್ರೀರಂಗಪಟ್ಟಣ ತಾಲ್ಲೂಕು	ತಾಲ್ಲೂಕು ಕಛೇರಿ, ಶ್ರೀರಂಗಪಟ್ಟಣ	08236-252029 90192-42803	ಶ್ರೀರಂಗಪಟ್ಟಣ ತಾಲ್ಲೂಕು
9	ಸಹಾಯಕ ಮತದಾರರ ನೋಂದಣಾಧಿಕಾರಿ	ನಿಸರ್ಗ ಪ್ರಿಯಜೆ	ತಹಶೀಲ್ದಾರ್, ಕೆ.ಆರ್.ಪೇಟೆ ತಾಲ್ಲೂಕು	ತಾಲ್ಲೂಕು ಕಛೇರಿ, ಕೆ.ಆರ್.ಪೇಟೆ	08230-262227 9738654990	ಕೆ.ಆರ್.ಪೇಟೆತಾಲ್ಲೂಕು
10	ಸಹಾಯಕ ಮತದಾರರ ನೋಂದಣಾಧಿಕಾರಿ	ಆರ್.ನಯೀಂ ಉನ್ನೀಸಾ,	ತಹಶೀಲ್ದಾರ್, ನಾಗಮಂಗಲ ತಾಲ್ಲೂಕು	ತಾಲ್ಲೂಕುಕಛೇರಿ, ನಾಗಮಂಗಲ	08234-285045 9986139885	ನಾಗಮಂಗಲ ತಾಲ್ಲೂಕು
11	ನಿಯೋಜಿತ ಅಧಿಕಾರಿ	ಎಂ.ಜೆ.ವಸಂತಕುಮಾರ್	ತಹಶೀಲ್ದಾರ್ ಗ್ರೇಡ್-2	ತಾಲ್ಲೂಕು ಕಛೇರಿ, ಮಂಡ್ಯ	08232-22408 73386-80990	ಮಂಡ್ಯತಾಲ್ಲೂಕು
12	ನಿಯೋಜಿತ ಅಧಿಕಾರಿ	ಕುಮಾರ್ ಬಿ.ವಿ.	ತಹಶೀಲ್ದಾರ್ ಗ್ರೇಡ್-2	ತಾಲ್ಲೂಕು ಕಛೇರಿ, ಮಳವಳ್ಳಿ	08231-242277 96635-88072	ಮಳವಳ್ಳಿ ತಾಲ್ಲೂಕು
13	ನಿಯೋಜಿತ ಅಧಿಕಾರಿ	ವಿಖಾರ್‌ಅಹಮ್ಮದ್	ತಹಶೀಲ್ದಾರ್ ಗ್ರೇಡ್-2	ತಾಲ್ಲೂಕು ಕಛೇರಿ, ಕೆ.ಆರ್.ಪೇಟೆ	08230-262227 9482954821	ಕೆ.ಆರ್.ಪೇಟೆ ತಾಲ್ಲೂಕು
14	ನಿಯೋಜಿತ ಅಧಿಕಾರಿ	ರೂಪ ಹೆಚ್.	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ಮದ್ದೂರು	08232-298074 98455-80432	ಮದ್ದೂರುತಾಲ್ಲೂಕು
15	ನಿಯೋಜಿತ ಅಧಿಕಾರಿ	ವರುಣ್‌ಎಚ್.ಎಸ್.	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ಪಾಂಡವಪುರ	08236-255128 90609-91155	ಪಾಂಡವಪುರ ತಾಲ್ಲೂಕು
16	ನಿಯೋಜಿತ ಅಧಿಕಾರಿ	ನೇತ್ರಾವತಿ	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ಶ್ರೀರಂಗಪಟ್ಟಣ	08236-252029 90192-42803	ಶ್ರೀರಂಗಪಟ್ಟಣ ತಾಲ್ಲೂಕು
17	ನಿಯೋಜಿತ ಅಧಿಕಾರಿ	ಸ್ವಾಮಿ	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ನಾಗಮಂಗಲ	08234-285045 91641-27058	ನಾಗಮಂಗಲ ತಾಲ್ಲೂಕು

ಚಾಮರಾಜನಗರ ಜಿಲ್ಲೆ.

ಕ್ರಮ ಸಂಖ್ಯೆ	ಚುನಾವಣಾಧಿಕಾರಿಗಳ ವಿವರ	ಹೆಸರು	ಹುದ್ದೆ	ಕಛೇರಿ ವಿಳಾಸ	ದೂರವಾಣಿ ಸಂಖ್ಯೆ/ ಮೊಬೈಲ್ ಸಂಖ್ಯೆ	ವ್ಯಾಪ್ತಿ
1	ಸಹಾಯಕ ಮತದಾರರ ನೋಂದಣಾಧಿಕಾರಿ	ಶಿಲ್ಪಾ ನಾಗ್ ಭಾ.ಆ.ಸೇ	ಜಿಲ್ಲಾಧಿಕಾರಿ	ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ	08226-223170 Mob:9480010123	ಚಾಮರಾಜನಗರ ಜಿಲ್ಲೆ
2	ಸಹಾಯಕ ಮತದಾರರ ನೋಂದಣಾಧಿಕಾರಿ	ಮಹೇಶ್ ಬಿ.ಆರ್. ಕ.ಆ.ಸೇ.,	ಉಪ ವಿಭಾಗಾಧಿಕಾರಿ	ಕೊಳ್ಳೇಗಾಲ ಉಪ ವಿಭಾಗ, ಕೊಳ್ಳೇಗಾಲ	08224-253615 Mob: 8277863119	ಚಾಮರಾಜನಗರ ಜಿಲ್ಲೆ
3	ಸಹಾಯಕ ಮತದಾರರ ನೋಂದಣಾಧಿಕಾರಿ	ಬಸವರಾಜು ಐ.ಈ	ತಹಶೀಲ್ದಾರ್	ಚಾಮರಾಜನಗರ ತಾಲ್ಲೂಕು, ಚಾಮರಾಜನಗರ	08226-200254 Mob::8105204059	ಚಾಮರಾಜನಗರ ತಾಲ್ಲೂಕು
4	ಸಹಾಯಕ ಮತದಾರರ ನೋಂದಣಾಧಿಕಾರಿ	ಮಂಜುಳ ಎಂ	ತಹಶೀಲ್ದಾರ್	ಕೊಳ್ಳೇಗಾಲ ತಾಲ್ಲೂಕು, ಕೊಳ್ಳೇಗಾಲ	08224-254046 Mob:7892979473	ಕೊಳ್ಳೇಗಾಲ ತಾಲ್ಲೂಕು
5	ಸಹಾಯಕ ಮತದಾರರ ನೋಂದಣಾಧಿಕಾರಿ	ರಮೇಶ್‌ಬಾಬು ಟಿ.	ತಹಶೀಲ್ದಾರ್	ಗುಂಡ್ಲುಪೇಟೆ ತಾಲ್ಲೂಕು	08229-222225 Mob::9480168864	ಗುಂಡ್ಲುಪೇಟೆ ತಾಲ್ಲೂಕು
6	ಸಹಾಯಕ ಮತದಾರರ ನೋಂದಣಾಧಿಕಾರಿ	ಆರ್. ಜಯಪ್ರಕಾಶ್	ತಹಶೀಲ್ದಾರ್	ಯಳಂದೂರು ತಾಲ್ಲೂಕು	08226-240029 Mob:99161-51464	ಯಳಂದೂರು ತಾಲ್ಲೂಕು
7	ಸಹಾಯಕ ಮತದಾರರ ನೋಂದಣಾಧಿಕಾರಿ	ವೈ.ಕೆ. ಗುರುಪ್ರಸಾದ್	ತಹಶೀಲ್ದಾರ್	ಹನೂರು ತಾಲ್ಲೂಕು	08224-268032 Mob:9480950853	ಹನೂರು ತಾಲ್ಲೂಕು
8	ನಿಯೋಜಿತ ಅಧಿಕಾರಿ	ಪಿ.ಪ್ರಕಾಶ್	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ಚಾಮರಾಜನಗರ ತಾಲ್ಲೂಕು ಚಾಮರಾಜನಗರ	08226-200254 Mob:9481232312	ಚಾಮರಾಜನಗರ ತಾಲ್ಲೂಕು
9	ನಿಯೋಜಿತ ಅಧಿಕಾರಿ	ಕೃಪಾಕರ್	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ಕೊಳ್ಳೇಗಾಲ ತಾಲ್ಲೂಕು, ಕೊಳ್ಳೇಗಾಲ	08224-254046 Mob:9739597007	ಕೊಳ್ಳೇಗಾಲ ತಾಲ್ಲೂಕು
10	ನಿಯೋಜಿತ ಅಧಿಕಾರಿ	ಲಕ್ಷ್ಮೀನಾರಾಯಣ	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ಗುಂಡ್ಲುಪೇಟೆ ತಾಲ್ಲೂಕು, ಗುಂಡ್ಲುಪೇಟೆ	08224-254046 Mob:81472-26615	ಗುಂಡ್ಲುಪೇಟೆ ತಾಲ್ಲೂಕು
11	ನಿಯೋಜಿತ ಅಧಿಕಾರಿ	ಆರ್. ನಾಗರಾಜು	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ಯಳಂದೂರು ತಾಲ್ಲೂಕು ಯಳಂದೂರು	08226-240029 Mob:9008228637	ಯಳಂದೂರು ತಾಲ್ಲೂಕು
12	ನಿಯೋಜಿತ ಅಧಿಕಾರಿ	ನಾಗೇಂದ್ರ	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ, ಹನೂರು ತಾಲ್ಲೂಕು, ಹನೂರು	08224-268032 Mob:82176-89524	ಹನೂರು ತಾಲ್ಲೂಕು

ಹಾಸನ ಜಿಲ್ಲೆ

1	ಸಹಾಯಕ ಮತದಾರರ ನೋಂದಣಾಧಿಕಾರಿ	ಸಿ. ಸತ್ಯಭಾಮ ಭಾ.ಆ.ಸೇ	ಜಿಲ್ಲಾಧಿಕಾರಿ, ಹಾಸನ ಜಿಲ್ಲೆ, ಹಾಸನ	ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ, ಬಿ.ಎಂ. ರಸ್ತೆ, ಹಾಸನ	94839-63333	ಹಾಸನ ಜಿಲ್ಲೆ
2	ಸಹಾಯಕ ಮತದಾರರ ನೋಂದಣಾಧಿಕಾರಿ	ಕೆ ಟಿ ಶಾಂತಲ	ಅಪರ ಜಿಲ್ಲಾಧಿಕಾರಿ ಹಾಸನ ಜಿಲ್ಲೆ, ಹಾಸನ	ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ, ಬಿ.ಎಂ. ರಸ್ತೆ, ಹಾಸನ	99005-83999	ಹಾಸನ ಜಿಲ್ಲೆ
3	ಸಹಾಯಕ ಮತದಾರರ ನೋಂದಣಾಧಿಕಾರಿ	ಜೆ ಬಿ ಮಾರುತಿ	ಉಪ ವಿಭಾಗಾಧಿಕಾರಿ, ಹಾಸನ ಉಪ ವಿಭಾಗ, ಹಾಸನ	ಉಪ ವಿಭಾಗಾಧಿಕಾರಿಗಳ ಕಚೇರಿ, ಬಿ ಎಂ ರಸ್ತೆ, ಹಾಸನ	70227-90346	ಹಾಸನ ಉಪ ವಿಭಾಗ
4	ಸಹಾಯಕ ಮತದಾರರ ನೋಂದಣಾಧಿಕಾರಿ	ಡಾ: ಕೆ ಎಂ ಶೃತಿ	ಉಪ ವಿಭಾಗಾಧಿಕಾರಿ, ಸಕಲೇಶಪುರ ಉಪ ವಿಭಾಗ, ಸಕಲೇಶಪುರ	ಉಪ ವಿಭಾಗಾಧಿಕಾರಿಗಳ ಕಚೇರಿ, ಬಿ ಎಂ ರಸ್ತೆ, ಸಕಲೇಶಪುರ	95910-56238	ಸಕಲೇಶಪುರ ಉಪ ವಿಭಾಗ
5	ಸಹಾಯಕ ಮತದಾರರ ನೋಂದಣಾಧಿಕಾರಿ	ಎಂ ಮಮತ	ತಹಶೀಲ್ದಾರ್, ಆಲೂರು ತಾಲ್ಲೂಕು	ಮಿನಿವಿಧಾನಸೌಧ, ಬಿ.ಎಂ.ರಸ್ತೆ, ಆಲೂರು	08170-218222	ಆಲೂರುತಾಲ್ಲೂಕು
6	ಸಹಾಯಕ ಮತದಾರರ ನೋಂದಣಾಧಿಕಾರಿ	ಬಸವರೆಡ್ಡಪ್ಪರೋಣದ್	ತಹಶೀಲ್ದಾರ್, ಅರಕಲಗೂಡು ತಾಲ್ಲೂಕು	ಮಿನಿವಿಧಾನಸೌಧ, ಹಾಸನ ರಸ್ತೆ, ಅರಕಲಗೂಡು	84318-43814	ಅರಕಲಗೂಡು ತಾಲ್ಲೂಕು
7	ಸಹಾಯಕ ಮತದಾರರ ನೋಂದಣಾಧಿಕಾರಿ	ಎಂ.ಜಿ. ಸಂತೋಷ್‌ಕುಮಾರ್	ತಹಶೀಲ್ದಾರ್, ಅರಸೀಕೆರೆ ತಾಲ್ಲೂಕು	ಮಿನಿ ವಿಧಾನಸೌಧ, ಬಿ.ಎಚ್.ರಸ್ತೆ, ಅರಸೀಕೆರೆ	99640-63630	ಅರಸೀಕೆರೆ ತಾಲ್ಲೂಕು
8	ಸಹಾಯಕ ಮತದಾರರ ನೋಂದಣಾಧಿಕಾರಿ	ಎಂ ಮಮತ	ತಹಶೀಲ್ದಾರ್, ಬೇಲೂರು ತಾಲ್ಲೂಕು	ಮಿನಿ ವಿಧಾನ ಸೌಧ, ಚಿಕ್ಕಮಗಳೂರು ರಸ್ತೆ, ಬೇಲೂರು	98865-03074	ಬೇಲೂರು ತಾಲ್ಲೂಕು
9	ಸಹಾಯಕ ಮತದಾರರ ನೋಂದಣಾಧಿಕಾರಿ	ಗೀತಾ	ತಹಶೀಲ್ದಾರ್, ಚನ್ನರಾಯಪಟ್ಟಣ ತಾಲ್ಲೂಕು	ಮಿನಿ ವಿಧಾನಸೌಧ, ಬಿ ಎಂ ರಸ್ತೆ, ಚನ್ನರಾಯಪಟ್ಟಣ	720450069	ಚನ್ನರಾಯಪಟ್ಟಣ ತಾಲ್ಲೂಕು
10	ಸಹಾಯಕ ಮತದಾರರ ನೋಂದಣಾಧಿಕಾರಿ	ಎಸ್.ಶ್ವೇತ	ತಹಶೀಲ್ದಾರ್, ಹಾಸನ ತಾಲ್ಲೂಕು	ತಾಲ್ಲೂಕು ಕಚೇರಿ, ಎಂ.ಜಿ.ರಸ್ತೆ, ಹಾಸನ	99450-38500	ಹಾಸನ ತಾಲ್ಲೂಕು
11	ಸಹಾಯಕ ಮತದಾರರ ನೋಂದಣಾಧಿಕಾರಿ	ಕೆ ಕೆ ಕೃಷ್ಣಮೂರ್ತಿ	ತಹಶೀಲ್ದಾರ್, ಹೊಳೆನರಸೀಪುರ ತಾಲ್ಲೂಕು	ಮಿನಿ ವಿಧಾನಸೌಧ, ಹೊಳೆನರಸೀಪುರ	88618-68237	ಹೊಳೆನರಸೀಪುರ ತಾಲ್ಲೂಕು
12	ಸಹಾಯಕ ಮತದಾರರ ನೋಂದಣಾಧಿಕಾರಿ	ಮೇಘನ	ತಹಶೀಲ್ದಾರ್, ಸಕಲೇಶಪುರ ತಾಲ್ಲೂಕು	ಮಿನಿ ವಿಧಾನಸೌಧ, ಸಕಲೇಶಪುರ	94818-09860	ಸಕಲೇಶಪುರ ತಾಲ್ಲೂಕು

ಸಹಿ.-ಮತದಾರರ ನೋಂದಣಾಧಿಕಾರಿಗಳು, ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರ, ಹಾಗೂ ಪ್ರಾದೇಶಿಕ ಆಯುಕ್ತರು,ಮೈಸೂರು ವಿಭಾಗ, ಮೈಸೂರು

ಮೊದಲ ಅನುಸೂಚಿ

ಮತಕ್ಷೇತ್ರದ ಹೆಸರು: ಕರ್ನಾಟಕ ನೈರುತ್ಯ ಶಿಕ್ಷಕರ ಕ್ಷೇತ್ರ

ವ್ಯಾಪ್ತಿ: ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ದಾವಣಗೆರೆ ಜಿಲ್ಲೆ (ಹೊನ್ನಾಳಿ, ನ್ಯಾಮತಿ ಮತ್ತು ಚನ್ನಗಿರಿ ತಾಲ್ಲೂಕು)

ಕ್ರ ಸಂ.	ಚುನಾವಣಾಧಿಕಾರಿಗಳ ವಿವರ	ಹೆಸರು	ಹುದ್ದೆ	ಕಛೇರಿ ವಿಳಾಸ	ದೂರವಾಣಿ ಸಂಖ್ಯೆ	ವ್ಯಾಪ್ತಿ
1	ಮತದಾರರ ನೋಂದಣಾಧಿಕಾರಿಗಳು	ಡಾ.ಜಿ.ಸಿ.ಪ್ರಕಾಶ್, ಭಾ.ಆ.ಸೇ.,	ಪ್ರಾದೇಶಿಕ ಆಯುಕ್ತರು ಮೈಸೂರು ವಿಭಾಗ, ಮೈಸೂರು.	ಪ್ರಾದೇಶಿಕ ಆಯುಕ್ತರ ಕಛೇರಿ, "ಹೈವ್ಯೂ" ವಿನೋಬಾ ರಸ್ತೆ, ಮೈಸೂರು ವಿಭಾಗ, ಮೈಸೂರು–570 006.	0821–2516300	ಮೈಸೂರು ಮಂಡ್ಯ ಚಾಮರಾಜನಗರ ಹಾಸನ
ಕೊಡಗು ಜಿಲ್ಲೆ						
2	ಸಹಾಯಕ ಮತದಾರರ ನೋಂದಣಾಧಿಕಾರಿ	ವೆಂಕಟ್‌ರಾಜ, ಭಾ.ಆ.ಸೇ	ಜಿಲ್ಲಾಧಿಕಾರಿ	ಜಿಲ್ಲಾಧಿಕಾರಿಯವರ ಕಛೇರಿ, 3ನೇ ಮಹಡಿ, ಜಿಲ್ಲಾ ಆಡಳಿತ ಭವನ, ಮಡಿಕೇರಿ	9482628409	ಕೊಡಗು ಜಿಲ್ಲೆ
3	ಸಹಾಯಕ ಮತದಾರರ ನೋಂದಣಾಧಿಕಾರಿ	ಡಾ. ಯತೀಶ್ ಉಲ್ಲಾಳ್, ಕ.ಆ.ಸೇ (ಹಿ. ಶ್ರೇಣಿ)	ಉಪ ವಿಭಾಗಾಧಿಕಾರಿ	ಉಪವಿಭಾಗಾಧಿಕಾರಿಯವರ ಕಛೇರಿ, 2ನೇ ಮಹಡಿ, ಜಿಲ್ಲಾ ಆಡಳಿತ ಭವನ, ಮಡಿಕೇರಿ	9481253588	ಮಡಿಕೇರಿ ಉಪವಿಭಾಗ,
4	ಸಹಾಯಕ ಮತದಾರರ ನೋಂದಣಾಧಿಕಾರಿ	ಪ್ರವೀಣ್ ಕುಮಾರ್.ಪಿ.ಸಿ	ತಹಶೀಲ್ದಾರ್	ತಹಶೀಲ್ದಾರರ ಕಛೇರಿ, ಮಡಿಕೇರಿ ತಾಲ್ಲೂಕು	9448720118	ಮಡಿಕೇರಿ ತಾಲ್ಲೂಕು
5	ಸಹಾಯಕ ಮತದಾರರ ನೋಂದಣಾಧಿಕಾರಿ	ನರಗುಂದ್.ಎಸ್.ಎನ್	ತಹಶೀಲ್ದಾರ್	ತಹಶೀಲ್ದಾರರ ಕಛೇರಿ, ಸೋಮವಾರಪೇಟೆ ತಾಲ್ಲೂಕು	9986169260	ಸೋಮವಾರಪೇಟೆ ತಾಲ್ಲೂಕು
6	ಸಹಾಯಕ ಮತದಾರರ ನೋಂದಣಾಧಿಕಾರಿ	ಹೆಚ್.ಎನ್.ರಾಮಚಂದ್ರ	ತಹಶೀಲ್ದಾರ್	ತಹಶೀಲ್ದಾರರ ಕಛೇರಿ, ವಿರಾಜಪೇಟೆ ತಾಲ್ಲೂಕು	9480825704	ವಿರಾಜಪೇಟೆ ತಾಲ್ಲೂಕು
7	ಸಹಾಯಕ ಮತದಾರರ ನೋಂದಣಾಧಿಕಾರಿ	ಪ್ರಶಾಂತ್.ಎನ್.ಎಸ್	ತಹಶೀಲ್ದಾರ್	ತಹಶೀಲ್ದಾರರ ಕಛೇರಿ, ಪೊನ್ನಂಪೇಟೆ ತಾಲ್ಲೂಕು	9880822685	ಪೊನ್ನಂಪೇಟೆ ತಾಲ್ಲೂಕು
8	ಸಹಾಯಕ ಮತದಾರರ ನೋಂದಣಾಧಿಕಾರಿ	ಕಿರಣ್ ಗೌರಯ್ಯ	ತಹಶೀಲ್ದಾರ್	ತಹಶೀಲ್ದಾರರ ಕಛೇರಿ, ಕುಶಾಲನಗರ ತಾಲ್ಲೂಕು	9845283922	ಕುಶಾಲನಗರ ತಾಲ್ಲೂಕು
9	ನಿಯೋಜಿತ ಅಧಿಕಾರಿ	ಚಂದ್ರಶೇಖರ್.ಎನ್.ಜಿ	ಚುನಾವಣಾ ಶಿರಸ್ತೇದಾರರು	ತಹಶೀಲ್ದಾರರ ಕಛೇರಿ, ಮಡಿಕೇರಿ ತಾಲ್ಲೂಕು	9449614572	ಮಡಿಕೇರಿ ತಾಲ್ಲೂಕು
10	ನಿಯೋಜಿತ ಅಧಿಕಾರಿ	ವಿ.ಎನ್.ಲೋಹಿತ್ ಕುಮಾರ್	ಚುನಾವಣಾ ಶಿರಸ್ತೇದಾರರು	ತಹಶೀಲ್ದಾರರ ಕಛೇರಿ, ಸೋಮವಾರಪೇಟೆ ತಾಲ್ಲೂಕು	9986645732	ಸೋಮವಾರಪೇಟೆ ತಾಲ್ಲೂಕು
11	ನಿಯೋಜಿತ ಅಧಿಕಾರಿ	ಗಣೇಶ್ ಕುಮಾರ್	ಚುನಾವಣಾ ಶಿರಸ್ತೇದಾರರು	ತಹಶೀಲ್ದಾರರ ಕಛೇರಿ, ವಿರಾಜಪೇಟೆ ತಾಲ್ಲೂಕು	7022001234	ವಿರಾಜಪೇಟೆ ತಾಲ್ಲೂಕು
12	ನಿಯೋಜಿತ ಅಧಿಕಾರಿ	ರವಿಕುಮಾರ್.ಟಿ.ಡಿ	ಉಪ ತಹಶಿಲ್ದಾರರು	ತಹಶೀಲ್ದಾರರ ಕಛೇರಿ, ಪೊನ್ನಂಪೇಟೆ ತಾಲ್ಲೂಕು	9663887988	ಪೊನ್ನಂಪೇಟೆ ತಾಲ್ಲೂಕು
13	ನಿಯೋಜಿತ ಅಧಿಕಾರಿ	ಕೆ.ಜೆ.ಮಧುಸೂಧನ್	ಉಪ ತಹಶಿಲ್ದಾರರು	ತಹಶೀಲ್ದಾರರ ಕಛೇರಿ, ಕುಶಾಲನಗರ ತಾಲ್ಲೂಕು	9448588060	ಕುಶಾಲನಗರ ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ						
1	ಸಹಾಯಕ ಮತದಾರರ ನೋಂದಣಾಧಿಕಾರಿ	ಮೀನಾ ನಾಗರಾಜ್ ಸಿ ಎನ್. ಭಾ.ಆ.ಸೇ	ಜಿಲ್ಲಾಧಿಕಾರಿ	ಜಿಲ್ಲಾಧಿಕಾರಿಯವರ ಕಚೇರಿ ಚಿಕ್ಕಮಗಳೂರು ಜಿಲ್ಲೆ	94490 30402	ಚಿಕ್ಕಮಗಳೂರು ಜಿಲ್ಲೆ
2	ಸಹಾಯಕ ಮತದಾರರ ನೋಂದಣಾಧಿಕಾರಿ	ರಾಜೇಶ್ ಹೆಚ್.ಡಿ	ಉಪವಿಭಾಗಾಧಿಕಾರಿ	ಉಪವಿಭಾಗಾಧಿಕಾರಿಯವರ ಕಛೇರಿ ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು	87912 21368	ಚಿಕ್ಕಮಗಳೂರು ಉಪವಿಭಾಗ
3	ಸಹಾಯಕ ಮತದಾರರ ನೋಂದಣಾಧಿಕಾರಿ	ಕಾಂತರಾಜು ಕೆ ಜೆ	ಉಪವಿಭಾಗಾಧಿಕಾರಿ	ಉಪವಿಭಾಗಾಧಿಕಾರಿಯವರ ಕಛೇರಿ ತರೀಕರೆ ಉಪವಿಭಾಗ, ತರೀಕರೆ	96110 02697	ತರೀಕೆರೆ ಉಪವಿಭಾಗ
4	ಸಹಾಯಕ ಮತದಾರರ ನೋಂದಣಾಧಿಕಾರಿ	ಸುಮಂತ್ ಬಿ ಈ	ತಹಸೀಲ್ದಾರ್	ತಾಲ್ಲೂಕು ಕಛೇರಿ, ಚಿಕ್ಕಮಗಳೂರು ತಾಲ್ಲೂಕು	76763 53639	ಚಿಕ್ಕಮಗಳೂರು ತಾಲ್ಲೂಕು
5	ಸಹಾಯಕ ಮತದಾರರ ನೋಂದಣಾಧಿಕಾರಿ	ತಿಪ್ಪೇಸ್ವಾಮಿ ವೈ	ತಹಸೀಲ್ದಾರ್	ತಾಲ್ಲೂಕು ಕಛೇರಿ, ಮೂಡಿಗೆರೆ ತಾಲ್ಲೂಕು	8217566047	ಮೂಡಿಗೆರೆ ತಾಲ್ಲೂಕು
6	ಸಹಾಯಕ ಮತದಾರರ ನೋಂದಣಾಧಿಕಾರಿ	ಗೌರಮ್ಮ ಪಿ	ತಹಸೀಲ್ದಾರ್	ತಾಲ್ಲೂಕು ಕಛೇರಿ, ಶೃಂಗೇರಿ ತಾಲ್ಲೂಕು	84317 24583	ಶೃಂಗೇರಿ ತಾಲ್ಲೂಕು
7	ಸಹಾಯಕ ಮತದಾರರ ನೋಂದಣಾಧಿಕಾರಿ	ಮಂಜುಳ ಬಿ ಹೆಗಡಾಳ	ತಹಸೀಲ್ದಾರ್	ತಾಲ್ಲೂಕು ಕಛೇರಿ, ಕೊಪ್ಪ ತಾಲ್ಲೂಕು	73494 71269	ಕೊಪ್ಪ ತಾಲ್ಲೂಕು
8	ಸಹಾಯಕ ಮತದಾರರ ನೋಂದಣಾಧಿಕಾರಿ	ಮಂಜುನಾಥ ಎನ್ ಕೆ	ತಹಸೀಲ್ದಾರ್	ತಾಲ್ಲೂಕು ಕಛೇರಿ, ಕಳಸ ತಾಲ್ಲೂಕು	96117 70203	ಕಳಸ ತಾಲ್ಲೂಕು
9	ಸಹಾಯಕ ಮತದಾರರ ನೋಂದಣಾಧಿಕಾರಿ	ರಾಜೀವ್ ವಿ ಎಸ್	ತಹಸೀಲ್ದಾರ್	ತಾಲ್ಲೂಕು ಕಛೇರಿ, ತರೀಕರೆ ತಾಲ್ಲೂಕು	99866 24119	ತರೀಕೆರೆ ತಾಲ್ಲೂಕು
10	ಸಹಾಯಕ ಮತದಾರರ ನೋಂದಣಾಧಿಕಾರಿ	ತನುಜ ಟಿ ಸವದತ್ತಿ	ತಹಸೀಲ್ದಾರ್	ತಾಲ್ಲೂಕು ಕಛೇರಿ, ನರಸಿಂಹರಾಜಪುರ ತಾಲ್ಲೂಕು	78296 14615	ನರಸಿಂಹರಾಜಪುರ ತಾಲ್ಲೂಕು
11	ಸಹಾಯಕ ಮತದಾರರ ನೋಂದಣಾಧಿಕಾರಿ	ಕವಿರಾಜ್ ಎಂ ಪಿ	ತಹಸೀಲ್ದಾರ್	ತಾಲ್ಲೂಕು ಕಛೇರಿ, ಕಡೂರು ತಾಲ್ಲೂಕು	97436 32240	ಕಡೂರು ತಾಲ್ಲೂಕು
12	ಸಹಾಯಕ ಮತದಾರರ ನೋಂದಣಾಧಿಕಾರಿ	ರಾಜೀವ್ ವಿ ಎಸ್	ತಹಸೀಲ್ದಾರ್ (ಪ್ರಭಾರ)	ತಾಲ್ಲೂಕು ಕಛೇರಿ, ಅಜ್ಜಂಪುರ ತಾಲ್ಲೂಕು	99866 24119	ಅಜ್ಜಂಪುರ ತಾಲ್ಲೂಕು
13	ನಿಯೋಜಿತ ಅಧಿಕಾರಿ	ರವೀಶ್ ಹೆಚ್ ಸಿ	ಕ್ಷೇತ್ರ ಶೀಕ್ಷಣಾಧಿಕಾರಿಗಳು	ಕ್ಷೇತ್ರ ಶೀಕ್ಷಣಾಧಿಕಾರಿಗಳ ಕಛೇರಿ ಚಿಕ್ಕಮಗಳೂರು	9480695129	ಚಿಕ್ಕಮಗಳೂರು ತಾಲ್ಲೂಕು
14	ನಿಯೋಜಿತ ಅಧಿಕಾರಿ	ಹೇಮಂತ್ ರಾಜು	ಕ್ಷೇತ್ರ ಶೀಕ್ಷಣಾಧಿಕಾರಿಗಳು	ಕ್ಷೇತ್ರ ಶೀಕ್ಷಣಾಧಿಕಾರಿಗಳ ಕಛೇರಿ ಮೂಡಿಗೆರೆ	9480695132	ಮೂಡಿಗೆರೆ & ಕಳಸ ತಾಲ್ಲೂಕು
15	ನಿಯೋಜಿತ ಅಧಿಕಾರಿ	ರಾಘವೇಂದ್ರ	ಕ್ಷೇತ್ರ ಶೀಕ್ಷಣಾಧಿಕಾರಿಗಳು	ಕ್ಷೇತ್ರ ಶೀಕ್ಷಣಾಧಿಕಾರಿಗಳ ಕಛೇರಿ ಶೃಂಗೇರಿ	9480695134	ಶೃಂಗೇರಿ ತಾಲ್ಲೂಕು
16	ನಿಯೋಜಿತ ಅಧಿಕಾರಿ	ಜ್ಯೋತಿ	ಕ್ಷೇತ್ರ ಶೀಕ್ಷಣಾಧಿಕಾರಿಗಳು	ಕ್ಷೇತ್ರ ಶೀಕ್ಷಣಾಧಿಕಾರಿಗಳ ಕಛೇರಿ ಕೊಪ್ಪ	9480695131	ಕೊಪ್ಪ ತಾಲ್ಲೂಕು
17	ನಿಯೋಜಿತ ಅಧಿಕಾರಿ	ಗೋವಿಂದಪ್ಪ	ಕ್ಷೇತ್ರ ಶೀಕ್ಷಣಾಧಿಕಾರಿಗಳು	ಕ್ಷೇತ್ರ ಶೀಕ್ಷಣಾಧಿಕಾರಿಗಳ ಕಛೇರಿ ತರೀಕೆರೆ	9480695135	ತರೀಕೆರೆ & ಅಜ್ಜಂಪುರ ತಾಲ್ಲೂಕು
18	ನಿಯೋಜಿತ ಅಧಿಕಾರಿ	ಪುಷ್ಪ	ಕ್ಷೇತ್ರ ಶೀಕ್ಷಣಾಧಿಕಾರಿಗಳು	ಕ್ಷೇತ್ರ ಶೀಕ್ಷಣಾಧಿಕಾರಿಗಳ ಕಛೇರಿ ನರಸಿಂಹರಾಜಪುರ	9480695133	ನರಸಿಂಹರಾಜಪುರ ತಾಲ್ಲೂಕು ತಾಲ್ಲೂಕು
19	ನಿಯೋಜಿತ ಅಧಿಕಾರಿ	ಸಿದ್ದರಾಜುನಾಯ್ಕ	ಕ್ಷೇತ್ರ ಶೀಕ್ಷಣಾಧಿಕಾರಿಗಳು	ಕ್ಷೇತ್ರ ಶೀಕ್ಷಣಾಧಿಕಾರಿಗಳ ಕಛೇರಿ ಕಡೂರು	9480695130	ಕಡೂರು ತಾಲ್ಲೂಕು
20	ನಿಯೋಜಿತ ಅಧಿಕಾರಿ	ಗಂಗಾಧರ್ ಹೆಚ್	ಕ್ಷೇತ್ರ ಶೀಕ್ಷಣಾಧಿಕಾರಿಗಳು	ಕ್ಷೇತ್ರ ಶೀಕ್ಷಣಾಧಿಕಾರಿಗಳ ಕಛೇರಿ ಬೀರೂರು	9480695128	ಬೀರೂರು ವಲಯ
ದಕ್ಷಿಣ ಕನ್ನಡ ಜಿಲ್ಲೆ						
1	ಸಹಾಯಕ ಮತದಾರರ ನೋಂದಣಾಧಿಕಾರಿ	ಮುಲ್ಲೈ ಮುಹಿಲನ್ ಎಂ ಪಿ, ಭಾ.ಆ.ಸೇ	ಜಿಲ್ಲಾಧಿಕಾರಿ	ಜಿಲ್ಲಾಧಿಕಾರಿಯವರ ಕಛೇರಿ ಮಂಗಳೂರು	0824 2220590	ದಕ್ಷಿಣ ಕನ್ನಡ ಜಿಲ್ಲೆ
2	ಸಹಾಯಕ ಮತದಾರರ ನೋಂದಣಾಧಿಕಾರಿ	ಆನಂದ್ ಕೆ	ಆಯುಕ್ತರು ಮಂಗಳೂರು ಮಹಾನಗರ ಪಾಲಿಕೆ	ಆಯುಕ್ತರ ಕಛೇರಿ ಮಂಗಳೂರು ಮಹಾನಗರ ಪಾಲಿಕೆ ಮಂಗಳೂರು	8242220550	ಮಂಗಳೂರು ಮಹಾನಗರ ಪಾಲಿಕೆ ಮಂಗಳೂರು
3	ಸಹಾಯಕ ಮತದಾರರ ನೋಂದಣಾಧಿಕಾರಿ	ಜೆ ಹರ್ಷವರ್ದನ್	ಉಪವಿಭಾಗಾಧಿಕಾರಿ ಮಂಗಳೂರು ವಿಭಾಗ	ಸಹಾಯಕ ಆಯುಕ್ತರ ಕಛೇರಿ, ಮಂಗಳೂರು	0824 2220569	ಮಂಗಳೂರು ಉಪವಿಭಾಗ
4	ಸಹಾಯಕ ಮತದಾರರ ನೋಂದಣಾಧಿಕಾರಿ	ಗಿರೀಶ್ ನಂದನ್ ಎಂ	ಉಪವಿಭಾಗಾಧಿಕಾರಿ ಪುತ್ತೂರು ವಿಭಾಗ	ಸಹಾಯಕ ಆಯುಕ್ತರ ಕಛೇರಿ, ಪುತ್ತೂರು	08251 230357	ಪುತ್ತೂರು ಉಪವಿಭಾಗ
5	ಸಹಾಯಕ ಮತದಾರರ ನೋಂದಣಾಧಿಕಾರಿ	ಸುರೇಶ್ ಕುಮಾರ್ ಟಿ	ತಹಶೀಲ್ದಾರ್ ಬೆಳ್ತಂಗಡಿ	ಬೆಳ್ತಂಗಡಿ ತಾಲೂಕು ಕಛೇರಿ	08256 232047/ 233123	ಬೆಳ್ತಂಗಡಿ ತಾಲ್ಲೂಕು
6	ಸಹಾಯಕ ಮತದಾರರ ನೋಂದಣಾಧಿಕಾರಿ	ಪ್ರದೀಪ್ ಎಸ್ ಕುರುಡೇಕರ್ (ಪ್ರಭಾರ)	ತಹಶೀಲ್ದಾರ್ ಮೂಡಬಿದ್ರೆ	ಮೂಡಬಿದ್ರೆ ತಾಲೂಕು ಕಛೇರಿ	08258 238100/ 239900	ಮೂಡಬಿದ್ರೆ ತಾಲ್ಲೂಕು
7	ಸಹಾಯಕ ಮತದಾರರ ನೋಂದಣಾಧಿಕಾರಿ	ಪ್ರದೀಪ್ ಎಸ್ ಕುರುಡೇಕರ್	ತಹಶೀಲ್ದಾರ್ ಮುಲ್ಕಿ	ಮುಲ್ಕಿ ತಾಲೂಕು ಕಛೇರಿ	0824 2294496	ಮುಲ್ಕಿ ತಾಲ್ಲೂಕು
8	ಸಹಾಯಕ ಮತದಾರರ ನೋಂದಣಾಧಿಕಾರಿ	ಪ್ರಶಾಂತ್ ವಿ ಪಾಟೀಲ್	ತಹಶೀಲ್ದಾರ್ ಮಂಗಳೂರು	ಮಂಗಳೂರು ತಾಲೂಕು ಕಛೇರಿ	0824 2220587/596	ಮಂಗಳೂರು ತಾಲ್ಲೂಕು
9	ಸಹಾಯಕ ಮತದಾರರ ನೋಂದಣಾಧಿಕಾರಿ	ಪುಟ್ಟರಾಜು	ತಹಶೀಲ್ದಾರ್ ಉಳ್ಳಾಲ	ಉಳ್ಳಾಲ ತಾಲೂಕು ಕಛೇರಿ	0824 2204424	ಉಳ್ಳಾಲ ತಾಲ್ಲೂಕು
10	ಸಹಾಯಕ ಮತದಾರರ ನೋಂದಣಾಧಿಕಾರಿ	ಎಸ್ ಬಿ ಕೂಡಲಗಿ	ತಹಶೀಲ್ದಾರ್ ಬಂಟ್ವಾಳ	ಬಂಟ್ವಾಳ ತಾಲೂಕು ಕಛೇರಿ	08255 232120/232500	ಬಂಟ್ವಾಳ ತಾಲೂಕು
11	ಸಹಾಯಕ ಮತದಾರರ ನೋಂದಣಾಧಿಕಾರಿ	ಜೆ ಶಿವಶಂಕರ್	ತಹಶೀಲ್ದಾರ್ ಪುತ್ತೂರು	ಪುತ್ತೂರು ತಾಲೂಕು ಕಛೇರಿ	08251 230349/232799	ಪುತ್ತೂರು ತಾಲ್ಲೂಕು
12	ಸಹಾಯಕ ಮತದಾರರ ನೋಂದಣಾಧಿಕಾರಿ	ಜಿ ಮಂಜೂನಾಥ್ (ಪ್ರಭಾರ)	ತಹಶೀಲ್ದಾರ್ ಸುಳ್ಯ	ಸುಳ್ಯ ತಾಲೂಕು ಕಛೇರಿ	08257 231231/ 230330/ 298330	ಸುಳ್ಯ ತಾಲ್ಲೂಕು
13	ಸಹಾಯಕ ಮತದಾರರ ನೋಂದಣಾಧಿಕಾರಿ	ಪ್ರಭಾಕರ ಖಜೂರೆ	ತಹಶೀಲ್ದಾರ್ ಕಡಬ	ಕಡಬ ತಾಲೂಕು ಕಛೇರಿ	08251 260435	ಕಡಬ ತಾಲ್ಲೂಕು
14	ನಿಯೋಜಿತ ಅಧಿಕಾರಿ	ದೇವೇಂದ್ರಪ್ಪ ಪರಾರಿ	ಕಂದಾಯ ಅಧಿಕಾರಿ (ಪ್ರಭಾರ) ಮಂಗಳೂರು ಮಹಾನಗರ ಪಾಲಿಕೆ	ಆಯುಕ್ತರ ಕಛೇರಿ ಮಂಗಳೂರು ಮಹಾನಗರ ಪಾಲಿಕೆ	8242220550	ಮಂಗಳೂರು ಮಹಾನಗರ ಪಾಲಿಕೆ
15	ನಿಯೋಜಿತ ಅಧಿಕಾರಿ	ದಯಾನಂದ್	ಶಿರಸ್ತೇದಾರರು	ಬೆಳ್ತಂಗಡಿ ತಾಲೂಕು ಕಛೇರಿ	08256 232047/ 233123	ಬೆಳ್ತಂಗಡಿ ತಾಲೂಕು
16	ನಿಯೋಜಿತ ಅಧಿಕಾರಿ	ಬಾಲಚಂದ್ರ	ಶಿರಸ್ತೇದಾರರು	ಮೂಡಬಿದ್ರೆ ತಾಲೂಕು ಕಛೇರಿ	08258 238100/ 239900	ಮೂಡಬಿದ್ರೆ ತಾಲ್ಲೂಕು
17	ನಿಯೋಜಿತ ಅಧಿಕಾರಿ	ದಿಲೀಪ್ ರೋಡ್ಕರ್	ಶಿರಸ್ತೇದಾರರು	ಮುಲ್ಕಿ ತಾಲೂಕು ಕಛೇರಿ	0824 2294496	ಮುಲ್ಕಿ ತಾಲ್ಲೂಕು
18	ನಿಯೋಜಿತ ಅಧಿಕಾರಿ	ಶಿವಾನಂದ್	ಶಿರಸ್ತೇದಾರರು	ಮಂಗಳೂರು ತಾಲೂಕು ಕಛೇರಿ	0824 2220587/ 596	ಮಂಗಳೂರು ತಾಲ್ಲೂಕು
19	ನಿಯೋಜಿತ ಅಧಿಕಾರಿ	ನವನೀತ್ ಮಾಳವ	ಶಿರಸ್ತೇದಾರರು	ಉಳ್ಳಾಲ ತಾಲೂಕು ಕಛೇರಿ	0824 2204424	ಉಳ್ಳಾಲ ತಾಲ್ಲೂಕು
20	ನಿಯೋಜಿತ ಅಧಿಕಾರಿ	ನವೀನ್ ಕುಮಾರ್	ಶಿರಸ್ತೇದಾರರು	ಬಂಟ್ವಾಳ ತಾಲೂಕು ಕಛೇರಿ	08255 232120/ 232500	ಬಂಟ್ವಾಳ ತಾಲ್ಲೂಕು
21	ನಿಯೋಜಿತ ಅಧಿಕಾರಿ	ಸುಲೋಚನ ಪಿ ಕೆ	ಶಿರಸ್ತೇದಾರರು	ಪುತ್ತೂರು ತಾಲೂಕು ಕಛೇರಿ	08251 230349/ 232799	ಪುತ್ತೂರು ತಾಲ್ಲೂಕು
22	ನಿಯೋಜಿತ ಅಧಿಕಾರಿ	ಚಂದ್ರಕಾಂತ್	ಶಿರಸ್ತೇದಾರರು	ಸುಳ್ಯ ತಾಲೂಕು ಕಛೇರಿ	08257 231231/ 230330/ 298330	ಸುಳ್ಯ ತಾಲ್ಲೂಕು
23	ನಿಯೋಜಿತ ಅಧಿಕಾರಿ	ಮನೋಹರ್ ಟಿ	ಶಿರಸ್ತೇದಾರರು	ಕಡಬ ತಾಲೂಕು ಕಛೇರಿ	08251 260435	ಕಡಬ ತಾಲ್ಲೂಕು
ಉಡುಪಿ ಜಿಲ್ಲೆ						
1	ಸಹಾಯಕ ಮತದಾರರ ನೋಂದಣಾಧಿಕಾರಿ	ಡಾ. ಕೆ ವಿದ್ಯಾಕುಮಾರಿ, ಭಾ.ಆ.ಸೇ	ಜಿಲ್ಲಾಧಿಕಾರಿ	ಜಿಲ್ಲಾಧಿಕಾರಿಯವರ ಕಛೇರಿ, ರಜತಾದ್ರಿ– ಮಣಿಪಾಲ, ಉಡುಪಿ ಜಿಲ್ಲೆ, ಉಡುಪಿ	9480242600	ಉಡುಪಿ ಜಿಲ್ಲೆ
2	ಸಹಾಯಕ ಮತದಾರರ ನೋಂದಣಾಧಿಕಾರಿ	ರಶ್ಮಿ ಎಸ್ ಆರ್	ಸಹಾಯಕ ಆಯುಕ್ತರು	ಸಹಾಯಕ ಆಯುಕ್ತರ ಕಛೇರಿ, ಕುಂದಾಪುರ	8762823984	ಕುಂದಾಪುರ ಉಪ ವಿಭಾಗ
3	ಸಹಾಯಕ ಮತದಾರರ ನೋಂದಣಾಧಿಕಾರಿ	ಶ್ರೀಕಾಂತ ಎಸ್. ಹೆಗ್ಡೆ	ತಹಶೀಲ್ದಾರರು	ತಾಲೂಕು ಕಛೇರಿ, ಬೈಂದೂರು	9449170772	ಬೈಂದೂರು ತಾಲ್ಲೂಕು
4	ಸಹಾಯಕ ಮತದಾರರ ನೋಂದಣಾಧಿಕಾರಿ	ಶೋಭಾಲಕ್ಷ್ಮೀ ಹೆಚ್	ತಹಶೀಲ್ದಾರರು	ತಾಲೂಕು ಕಛೇರಿ, ಕುಂದಾಪುರ	9686555715	ಕುಂದಾಪುರ ತಾಲ್ಲೂಕು
5	ಸಹಾಯಕ ಮತದಾರರ ನೋಂದಣಾಧಿಕಾರಿ	ಶೋಭಾಲಕ್ಷ್ಮೀ ಹೆಚ್	ತಹಶೀಲ್ದಾರರು	ತಾಲ್ಲೂಕು ಕಛೇರಿ ಬ್ರಹ್ಮಾವರ	9686555715	ಬ್ರಹ್ಮಾವರ ತಾಲ್ಲೂಕು
6	ಸಹಾಯಕ ಮತದಾರರ ನೋಂದಣಾಧಿಕಾರಿ	ಭೀಮಸೇನ	ತಹಶೀಲ್ದಾರರು	ತಾಲ್ಲೂಕು ಕಛೇರಿ ಉಡುಪಿ	9482570530	ಉಡುಪಿ ತಾಲ್ಲೂಕು
7	ಸಹಾಯಕ ಮತದಾರರ ನೋಂದಣಾಧಿಕಾರಿ	ನಾಗರಾಜ ವಿ. ನಾಯ್ಕಡ	ತಹಶೀಲ್ದಾರರು	ತಾಲ್ಲೂಕು ಕಛೇರಿ ಕಾಪು	9449454147	ಕಾಪು ತಾಲ್ಲೂಕು
8	ಸಹಾಯಕ ಮತದಾರರ ನೋಂದಣಾಧಿಕಾರಿ	ಅನಂತ ಶಂಕರ	ತಹಶೀಲ್ದಾರರು	ತಾಲ್ಲೂಕು ಕಛೇರಿ ಕಾರ್ಕಳ	9902541695	ಕಾರ್ಕಳ ತಾಲ್ಲೂಕು
9	ಸಹಾಯಕ ಮತದಾರರ ನೋಂದಣಾಧಿಕಾರಿ	ಕೆ ಪುರಂದರ	ತಹಶೀಲ್ದಾರರು	ತಾಲ್ಲೂಕು ಕಛೇರಿ ಹೆಬ್ರಿ	9742444578	ಹೆಬ್ರಿ ತಾಲ್ಲೂಕು
10	ನಿಯೋಜಿತ ಅಧಿಕಾರಿ	ಭೀಮಪ್ಪ ಹೆಚ್ ಬಿಲ್ಲಾರ	ಶಿರಸ್ತೇದಾರರು	ತಾಲ್ಲೂಕು ಕಛೇರಿ ಬೈಂದೂರು	8105025695	ಬೈಂದೂರು ತಾಲ್ಲೂಕು
11	ನಿಯೋಜಿತ ಅಧಿಕಾರಿ	ಪ್ರಕಾಶ್ ಪೂಜಾರಿ	ಶಿರಸ್ತೇದಾರರು	ತಾಲ್ಲೂಕು ಕಛೇರಿ ಕುಂದಾಪುರ	9141513725	ಕುಂದಾಪುರ ಹೋಬಳಿ
12	ನಿಯೋಜಿತ ಅಧಿಕಾರಿ	ಶೈಲಜಾ ಎಸ್ ಹೆಗ್ಡೆ	ಶಿರಸ್ತೇದಾರರು	ನಾಡಕಛೇರಿ ವಂಡ್ಸೆ	9141544765	ವಂಡ್ಸೆ ಹೋಬಳಿ
13	ನಿಯೋಜಿತ ಅಧಿಕಾರಿ	ರವಿಶಂಕರ್	ಶಿರಸ್ತೇದಾರರು	ತಾಲ್ಲೂಕು ಕಛೇರಿ ಬ್ರಹ್ಮಾವರ	9731805988	ಬ್ರಹ್ಮಾವರ ಹೋಬಳಿ
14	ನಿಯೋಜಿತ ಅಧಿಕಾರಿ	ಭಾಗ್ಯಲಕ್ಷ್ಮೀ	ಶಿರಸ್ತೇದಾರರು	ನಾಡ ಕಛೇರಿ ಕೋಟ	9481144043	ಕೋಟ ಹೋಬಳಿ
15	ನಿಯೋಜಿತ ಅಧಿಕಾರಿ	ಸವಿತಾ	ಶಿರಸ್ತೇದಾರರು	ತಾಲ್ಲೂಕು ಕಛೇರಿ ಉಡುಪಿ	9686323903	ಉಡುಪಿ ತಾಲ್ಲೂಕು
16	ನಿಯೋಜಿತ ಅಧಿಕಾರಿ	ಅಶೋಕ್ ಎನ್.ಕೋಟೆಕಾರ್	ಶಿರಸ್ತೇದಾರರು	ತಾಲ್ಲೂಕು ಕಛೇರಿ ಕಾಪು	9964428336	ಕಾಪು ತಾಲ್ಲೂಕು
17	ನಿಯೋಜಿತ ಅಧಿಕಾರಿ	ಲಕ್ಷ್ಮೀ	ಶಿರಸ್ತೇದಾರರು	ತಾಲ್ಲೂಕು ಕಛೇರಿ ಕಾರ್ಕಳ	7760679181	ಕಾರ್ಕಳ ಹೋಬಳಿ
18	ನಿಯೋಜಿತ ಅಧಿಕಾರಿ	ನಮಿತಾ ಬಿ	ಶಿರಸ್ತೇದಾರರು	ನಾಡ ಕಛೇರಿ ಅಜೆಕಾರು	9740580747	ಅಜೆಕಾರು ಹೋಬಳಿ
19	ನಿಯೋಜಿತ ಅಧಿಕಾರಿ	ಕೆ. ರವಿಶಂಕರ್	ಶಿರಸ್ತೇದಾರರು	ತಾಲ್ಲೂಕು ಕಛೇರಿ ಹೆಬ್ರಿ	9886471301	ಹೆಬ್ರಿ ತಾಲ್ಲೂಕು
ಶಿವಮೊಗ್ಗ ಜಿಲ್ಲೆ						
1	ಸಹಾಯಕ ಮತದಾರರ ನೋಂದಣಾಧಿಕಾರಿ	ಡಾ. ಸೆಲ್ವಮಣಿ ಆರ್ , ಭಾ.ಆ.ಸೇ	ಜಿಲ್ಲಾಧಿಕಾರಿ ಶಿವಮೊಗ್ಗ ಜಿಲ್ಲೆ	ಜಿಲ್ಲಾಧಿಕಾರಿ ಶಿವಮೊಗ್ಗ	9481492999 08182–272282	ಶಿವಮೊಗ್ಗ ಜಿಲ್ಲಾ ವ್ಯಾಪ್ತಿ
2	ಸಹಾಯಕ ಮತದಾರರ ನೋಂದಣಾಧಿಕಾರಿ	ಕೆ ಮಾಯಣ್ಣ ಗೌಡ	ಆಯುಕ್ತರು ಮಹಾನಗರ ಪಾಲಿಕೆ, ಶಿವಮೊಗ್ಗ	ಮಹಾನಗರ ಪಾಲಿಕೆ, ಬಿ ಹೆಚ್ ರಸ್ತೆ, ಶಿವಮೊಗ್ಗ	9448045397	ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿ
3	ನಿಯೋಜಿತ ಅಧಿಕಾರಿ	ದೀಪಕ್ ಎ ಇ	ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ . ಶಿವಮೊಗ್ಗ	ಮಹಾನಗರ ಪಾಲಿಕೆ, ಬಿ ಹೆಚ್ ರಸ್ತೆ, ಶಿವಮೊಗ್ಗ	8073849689	ಶಿವಮೊಗ್ಗ ಮಹಾನಗರಪಾಲಿಕೆ ವ್ಯಾಪ್ತಿ
4	ಸಹಾಯಕ ಮತದಾರರ ನೋಂದಣಾಧಿಕಾರಿ	ಸತ್ಯನಾರಾಯಣ ಜಿ ಹೆಚ್	ಉಪ ವಿಭಾಗಾಧಿಕಾರಿ, ಶಿವಮೊಗ್ಗ ಉಪವಿಭಾಗ ಶಿವಮೊಗ್ಗ	ಉಪ ವಿಭಾಗಾಧಿಕಾರಿ, ಕಛೇರಿ ಬಾಲರಾಜ್ ಅರಸ್ ರಸ್ತೆ, ಶಿವಮೊಗ್ಗ	9008305426 08182–222204	ಶಿವಮೊಗ್ಗ ಕಂದಾಯ ಉಪವಿಭಾಗ (ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿ ಹೊರತುಪಡಿಸಿ)
5	ಸಹಾಯಕ ಮತದಾರರ ನೋಂದಣಾಧಿಕಾರಿ	ಪಲ್ಲವಿ ಸಾತೇನಹಳ್ಳಿ	ಉಪ ವಿಭಾಗಾಧಿಕಾರಿ,ಸಾಗರ ಉಪವಿಭಾಗ ಸಾಗರ	ಉಪ ವಿಭಾಗಾಧಿಕಾರಿ, ಕಛೇರಿ ಕೋರ್ಟ್ ರಸ್ತೆ, ಸಾಗರ	7019667299 08183–226601	ಸಾಗರ ಕಂದಾಯ ಉಪವಿಭಾಗ
6	ಸಹಾಯಕ ಮತದಾರರ ನೋಂದಣಾಧಿಕಾರಿ	ಪ್ರದೀಪ್ ಆರ್	ತಹಶೀಲ್ದಾರರು ಶಿವಮೊಗ್ಗ ತಾಲ್ಲೂಕು ಶಿವಮೊಗ್ಗ	ತಾಲ್ಲೂಕು ಕಛೇರಿ ಬಾಲರಾಜ್ ಅರಸ್ ರಸ್ತೆ, ಶಿವಮೊಗ್ಗ	9916201135 08182–279312	ಶಿವಮೊಗ್ಗ ತಾಲ್ಲೂಕು ವ್ಯಾಪ್ತಿ (ಶಿವಮೊಗ್ಗ ಮಹಾನಗರಪಾಲಿಕೆ ವ್ಯಾಪ್ತಿ ಹೊರತುಪಡಿಸಿ)
7	ಸಹಾಯಕ ಮತದಾರರ ನೋಂದಣಾಧಿಕಾರಿ	ನಾಗರಾಜ್ ಕೆ ಆರ್	ತಹಶೀಲ್ದಾರರು ಭದ್ರಾವತಿ ತಾಲ್ಲೂಕು ಶಿವಮೊಗ್ಗ	ತಾಲ್ಲೂಕು ಕಛೇರಿ, ಭದ್ರಾವತಿ ತಾಲ್ಲೂಕು ಶಿವಮೊಗ್ಗ	9980902154 08282–267283	ಭದ್ರಾವತಿ ತಾಲ್ಲೂಕು ವ್ಯಾಪ್ತಿ
8	ಸಹಾಯಕ ಮತದಾರರ ನೋಂದಣಾಧಿಕಾರಿ	ಲಿಂಗರಾಜು ಎಂ	ತಹಶೀಲ್ದಾರರು ತೀರ್ಥಹಳ್ಳಿ ತಾಲ್ಲೂಕು ಶಿವಮೊಗ್ಗ	ತಾಲ್ಲೂಕು ಕಛೇರಿ, ತೀರ್ಥಹಳ್ಳಿ ತಾಲ್ಲೂಕು ಶಿವಮೊಗ್ಗ	9448883279 08181–228239	ತೀರ್ಥಹಳ್ಳಿ ತಾಲ್ಲೂಕು ವ್ಯಾಪ್ತಿ
9	ಸಹಾಯಕ ಮತದಾರರ ನೋಂದಣಾಧಿಕಾರಿ	ರಾಕೇಶ್ ಫ್ರಾನ್ಸಿಸ್ ಬ್ರಿಟ್ಟೊ	ತಹಶೀಲ್ದಾರರು ಹೊಸನಗರ ತಾಲ್ಲೂಕು ಶಿವಮೊಗ್ಗ	ತಾಲ್ಲೂಕು ಕಛೇರಿ, ಹೊಸನಗರ ತಾಲ್ಲೂಕು ಶಿವಮೊಗ್ಗ	9900827292 08185–221235	ಹೊಸನಗರ ತಾಲ್ಲೂಕು ವ್ಯಾಪ್ತಿ
10	ಸಹಾಯಕ ಮತದಾರರ ನೋಂದಣಾಧಿಕಾರಿ	ಮಲ್ಲೇಶ್ ಬೀರಪ್ಪ ಪೂಜಾರ್	ತಹಶೀಲ್ದಾರರು ಶಿಕಾರಿಪುರ ತಾಲ್ಲೂಕು ಶಿವಮೊಗ್ಗ	ತಾಲ್ಲೂಕು ಕಛೇರಿ, ಶಿಕಾರಿಪುರ ತಾಲ್ಲೂಕು ಶಿವಮೊಗ್ಗ	8867124024 08187–222239	ಶಿಕಾರಿಪುರ ತಾಲ್ಲೂಕು ವ್ಯಾಪ್ತಿ
11	ಸಹಾಯಕ ಮತದಾರರ ನೋಂದಣಾಧಿಕಾರಿ	ಹೆಚ್ ಎ ಸರ್ಕವಾಸ್	ತಹಶೀಲ್ದಾರರು ಸೊರಬ ತಾಲ್ಲೂಕು ಶಿವಮೊಗ್ಗ	ತಾಲ್ಲೂಕು ಕಛೇರಿ, ಸೊರಬ ತಾಲ್ಲೂಕು ಶಿವಮೊಗ್ಗ	8904878091 08184–272241	ಸೊರಬ ತಾಲ್ಲೂಕು ವ್ಯಾಪ್ತಿ
12	ಸಹಾಯಕ ಮತದಾರರ ನೋಂದಣಾಧಿಕಾರಿ	ಚಂದ್ರಶೇಖರ್ ನಾಯ್ಕ್	ತಹಶೀಲ್ದಾರರು ಸಾಗರ ತಾಲ್ಲೂಕು ಶಿವಮೊಗ್ಗ	ತಾಲ್ಲೂಕು ಕಛೇರಿ, ಸಾಗರ ತಾಲ್ಲೂಕು ಶಿವಮೊಗ್ಗ	9731475177 08183–226074	ಸಾಗರ ತಾಲ್ಲೂಕು ವ್ಯಾಪ್ತಿ
13	ನಿಯೋಜಿತ ಅಧಿಕಾರಿ	ನಿಂಗೇಗೌಡ	ಉಪ ಆಯುಕ್ತರು,(ಅಭಿವೃದ್ಧಿ) ಮಹಾನಗರ ಪಾಲಿಕೆ, ಶಿವಮೊಗ್ಗ	ಮಹಾನಗರ ಪಾಲಿಕೆ ಕಛೇರಿ, ಬಿ ಹೆಚ್ ರಸ್ತೆ ಶಿವಮೊಗ್ಗ	9448045397	ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿ
14	ನಿಯೋಜಿತ ಅಧಿಕಾರಿ	ಡಿ ನಾಗೇಂದ್ರ	ಕಂದಾಯಾಧಿಕಾರಿ	ಮಹಾನಗರಪಾಲಿಕ ಕಛೇರಿ, ಬಿ ಹೆಚ್ ರಸ್ತೆ ಶಿವಮೊಗ್ಗ	9880396995	ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿ
15	ನಿಯೋಜಿತ ಅಧಿಕಾರಿ	ಬಿ ಜೆ ಬಸವರಾಜು	ಗ್ರೇಡ್–2 ತಹಶೀಲ್ದಾರ್ (ಪ್ರಭಾರ)	ತಾಲ್ಲೂಕು ಕಛೇರಿ, ಶಿವಮೊಗ್ಗ	9945521008	ಶಿವಮೊಗ್ಗ ತಾಲ್ಲೂಕು ವ್ಯಾಪ್ತಿ (ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿ ಹೊರತುಪಡಿಸಿ)
16	ನಿಯೋಜಿತ ಅಧಿಕಾರಿ	ರಂಗಮ್ಮ ವಿ	ತಹಶೀಲ್ದಾರ್ ಗ್ರೇಡ್ – 2	ತಾಲ್ಲೂಕು ಕಛೇರಿ, ಭದ್ರಾವತಿ	7760684448 08282–267283	ಭದ್ರಾವತಿ ತಾಲ್ಲೂಕು ವ್ಯಾಪ್ತಿ (ಭದ್ರಾವತಿ ನಗರಸಭೆ ವ್ಯಾಪ್ತಿ ಹೊರತುಪಡಿಸಿ)
17	ನಿಯೋಜಿತ ಅಧಿಕಾರಿ	ಮನುಕುಮಾರ್ ಹೆಚ್ ಎಂ	ಪೌರಾಯುಕ್ತರು ನಗರಸಭೆ, ಭದ್ರಾವತಿ	ನಗರ ಸಭೆ ತರೀಕೆರೆ ರಸ್ತೆ ಭದ್ರಾವತಿ	7760684448	ಭದ್ರಾವತಿ ನಗರಸಭೆ ವ್ಯಾಪ್ತಿ
18	ನಿಯೋಜಿತ ಅಧಿಕಾರಿ	ಸತ್ಯಮೂರ್ತಿ ಕೆ ಎಸ್	ಗ್ರೇಡ್–2 ತಹಶೀಲ್ದಾರ್ (ಪ್ರಭಾರ)	ತಾಲ್ಲೂಕು ಕಛೇರಿ, ತೀರ್ಥಹಳ್ಳಿ	9008305426 08181–228239	ತೀರ್ಥಹಳ್ಳಿ ತಾಲ್ಲೂಕು ವ್ಯಾಪ್ತಿ
19	ನಿಯೋಜಿತ ಅಧಿಕಾರಿ	ಸತೀಶ್ ಬಿ ಜಿ	ಚುನಾವಣಾ ಶಿರಸ್ತೇದಾರ್ ಹೊಸನಗರ	ತಾಲ್ಲೂಕು ಕಛೇರಿ, ಹೊಸನಗರ	9844075524 08185–221235	ಹೊಸನಗರ ತಾಲ್ಲೂಕು ವ್ಯಾಪ್ತಿ
20	ನಿಯೋಜಿತ ಅಧಿಕಾರಿ	ರವಿಕುಮಾರ್ ಎಸ್ ಎಲ್	ಗ್ರೇಡ್–2 ತಹಶೀಲ್ದಾರ್ (ಪ್ರಭಾರ)	ತಾಲ್ಲೂಕು ಕಛೇರಿ, ಶಿಕಾರಿಪುರ	9611978493 08187–222239	ಶಿಕಾರಿಪುರ ತಾಲ್ಲೂಕು ವ್ಯಾಪ್ತಿ
21	ನಿಯೋಜಿತ ಅಧಿಕಾರಿ	ನಾಗರಾಜ್ ಎನ್ ಜೆ	ಗ್ರೇಡ್–2 ತಹಶೀಲ್ದಾರ್ (ಪ್ರಭಾರ)	ತಾಲ್ಲೂಕು ಕಛೇರಿ, ಸೊರಬ	9742563751 08184–272241	ಸೊರಬ ತಾಲ್ಲೂಕು ವ್ಯಾಪ್ತಿ
22	ನಿಯೋಜಿತ ಅಧಿಕಾರಿ	ನಾಗಪ್ಪ ಹೆಚ್ ಕೆ	ಪೌರಾಯುಕ್ತರು ನಗರಸಭೆ, ಸಾಗರ	ನಗರ ಸಭೆ ಸಾಗರ	7975589803	ನಗರ ಸಭೆ ವ್ಯಾಪ್ತಿ ಸಾಗರ
23	ನಿಯೋಜಿತ ಅಧಿಕಾರಿ	ಕ್ರಿಸ್ಟೋಫರ್ ಪ್ರವೀಣ್ ಫರ್ನಾಂಡೀಸ್	ಚುನಾವಣಾ ಶಿರಸ್ತೇದಾರ್ ಸಾಗರ	ತಾಲ್ಲೂಕು ಕಛೇರಿ, ಸಾಗರ	9480073617 08183–226074	ಸಾಗರ ಕಂದಾಯ ವಿಭಾಗ (ಸಾಗರ ನಗರಸಭೆ ವ್ಯಾಪ್ತಿ ಹೊರತುಪಡಿಸಿ)
ದಾವಣಗೆರೆ ಜಿಲ್ಲೆ (ಹೊನ್ನಾಳಿ, ಚನ್ನಗಿರಿ ಮತ್ತು ನ್ಯಾಮತಿ ತಾಲ್ಲೂಕು)						
1	ಸಹಾಯಕ ಮತದಾರರ ನೋಂದಣಾಧಿಕಾರಿ	ಡಾ॥ ವೆಂಕಟೇಶ್.ಎಂ.ವಿ ಭಾ.ಆ.ಸೇ	ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ	ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ	08192–234640 ಮೊ.7259700555	ಹೊನ್ನಾಳಿ , ನ್ಯಾಮತಿ ತಾಲ್ಲೂಕು ಮತ್ತು ಚೆನ್ನಗಿರಿ ತಾಲ್ಲೂಕು
2	ಸಹಾಯಕ ಮತದಾರರ ನೋಂದಣಾಧಿಕಾರಿ	ಹುಲ್ಲುಮನಿ ತಿಮ್ಮಣ್ಣ, ಕ.ಆ.ಸೇ.	ಉಪವಿಭಾಗಾಧಿಕಾರಿ	ಹೊನ್ನಾಳಿ ಉಪವಿಭಾಗ, ಹೊನ್ನಾಳಿ	08192–272955 ಮೊ.9538302836	ಹೊನ್ನಾಳಿ, ನ್ಯಾಮತಿ ತಾಲ್ಲೂಕು ಮತ್ತು ಚೆನ್ನಗಿರಿ ತಾಲ್ಲೂಕು
3	ಸಹಾಯಕ ಮತದಾರರ ನೋಂದಣಾಧಿಕಾರಿ	ಪುಟ್ಟರಾಜಗೌಡ ಕ.ಆ.ಸೇ. ತಹಶೀಲ್ದಾರ್,	ತಹಶೀಲ್ದಾರ್	ಹೊನ್ನಾಳಿ ತಾಲ್ಲೂಕು ಹೊನ್ನಾಳಿ	08188–251025 ಮೊ.9480545472	ಹೊನ್ನಾಳಿ ತಾಲ್ಲೂಕು
4	ಸಹಾಯಕ ಮತದಾರರ ನೋಂದಣಾಧಿಕಾರಿ	ಗೋವಿಂದಪ್ಪ ಹೆಚ್.ಬಿ. ಕ.ಆ.ಸೇ	ತಹಶೀಲ್ದಾರ್	ನ್ಯಾಮತಿ ತಾಲ್ಲೂಕು	9916379351	ನ್ಯಾಮತಿ ತಾಲ್ಲೂಕು
5	ಸಹಾಯಕ ಮತದಾರರ ನೋಂದಣಾಧಿಕಾರಿ	ಎರ್ರಿಸ್ವಾಮಿ ಪಿ.ಎಸ್ ಕ.ಆ.ಸೇ.	ತಹಶೀಲ್ದಾರ್	ಚನ್ನಗಿರಿ ತಾಲ್ಲೂಕು ಚನ್ನಗಿರಿ	08189–228025 ಮೊ.8904406037	ಚನ್ನಗಿರಿ ತಾಲ್ಲೂಕು
6	ನಿಯೋಜಿತ ಅಧಿಕಾರಿ	ಟಿ.ಬಿ ರಫೀಸಬ್	ಚುನಾವಣಾ ಶಿರಸ್ತೇದಾರ್	ತಾಲ್ಲೂಕು ಕಛೇರಿ ಹೊನ್ನಾಳಿ	ಮೊ.7259200656	ಹೊನ್ನಾಳಿ ತಾಲ್ಲೂಕು
7	ನಿಯೋಜಿತ ಅಧಿಕಾರಿ	ಕೆಂಚಮ್ಮ ಎಂ.ಹೆಚ್.	ಶಿರಸ್ತೇದಾರ್	ತಾಲ್ಲೂಕು ಕಛೇರಿ ನ್ಯಾಮತಿ	9591310010	ನ್ಯಾಮತಿ ತಾಲ್ಲೂಕು
8	ನಿಯೋಜಿತ ಅಧಿಕಾರಿ	ಬಿ.ಎಸ್.ಅರುಣ್ ಕುಮಾರ್	ಚುನಾವಣಾಶಿರಸ್ತೇದಾರ್	ತಾಲ್ಲೂಕು ಕಛೇರಿ, ಚನ್ನಗಿರಿ	ಮೊ.7349411445	ಚನ್ನಗಿರಿ ತಾಲ್ಲೂಕು

ಸಹಿ/– ಮತದಾರರ ನೊಂದಣಾಧಿಕಾರಿಗಳು, ಕರ್ನಾಟಕ ನೈರುತ್ಯ ಶಿಕ್ಷಕರ ಕ್ಷೇತ್ರ ಹಾಗೂ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.

ಎರಡನೇ ಅನುಸೂಚಿ

[ನಮೂನೆ–19]

(31ನೇ ನಿಯಮ ನೋಡಿ)

ಭಾವಚಿತ್ರ

ಶಿಕ್ಷಕರ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವ ಬಗ್ಗೆ ಕೋರಿಕೆ.
ಇವರಿಗೆ,
ಮತದಾರರ ನೋಂದಣಾಧಿಕಾರಿ,
__________ (ಶಿಕ್ಷಕರ) ಚುನಾವಣಾ ಕ್ಷೇತ್ರ,

ಮಾನ್ಯರೆ,
ನನ್ನ ಹೆಸರನ್ನು ____________________ (ಶಿಕ್ಷಕರ) ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿಸಬೇಕೆಂದು ನಾನು ಕೋರುತ್ತೇನೆ.
ವಿವರಗಳು ಈ ಕೆಳಕಂಡಂತಿವೆ:–
ಪೂರ್ಣ ಹೆಸರು ____________________ ಲಿಂಗ: __________
ತಂದೆಯ/ ತಾಯಿಯ / ಗಂಡನ ಹೆಸರು (ಪೂರ್ಣವಾಗಿ) ____________________
ಮನೆ ವಿಳಾಸ (ಸಾಮಾನ್ಯವಾಗಿ ವಾಸವಾಗಿರುವ ಸ್ಥಳ) ____________________
ಮನೆ ಸಂಖ್ಯೆ ________ ಬೀದಿ/ ಮೊಹಲ್ಲಾ ________ ಪಟ್ಟಣ/ಗ್ರಾಮ ____________
ಅಂಚೆ ಕಚೇರಿ __________ ಪೊಲೀಸ್ ಠಾಣೆ/ ತಹಸೀಲ್/ ತಾಲ್ಲೂಕು/ ಮೌಜ್ ____________________
ಜಿಲ್ಲೆ __________ ರಾಜ್ಯ __________ ವಯಸ್ಸು __________ ವರ್ಷ/ ತಿಂಗಳು / ಜನ್ಮ ದಿನಾಂಕ: __________
ಅಂಗವೈಕಲ್ಯ, ಯಾವುದಾದರೂ ಇದ್ದರೆ (ಐಚ್ಛಿಕ)
ದೃಷ್ಟಿ ಮಾಂದ್ಯತೆ ☐ ವಾಕ್ ಮತ್ತು ಶ್ರವಣ ದೋಷ ☐ ಚಲನ–ವಲನ ವೈಕಲ್ಯ ☐ ಇತರೆ ☐
ಯಾವುದೇ ವಿಧಾನಸಭಾ ಕ್ಷೇತ್ರದಲ್ಲಿ ಮತದಾರನಾಗಿ ಹೆಸರನ್ನು ನೋಂದಾಯಿಸಲಾಗಿದೆಯೇ? ________
ಹೌದಾದಲ್ಲಿ, ಈ ಮುಂದಿನ ವಿವರಗಳನ್ನು ಒದಗಿಸಿ.
(ಎ) ವಿಧಾನಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು __________
(ಬಿ) ಭಾಗ/ ಮತಗಟ್ಟೆಯ ಸಂಖ್ಯೆ (ಗೊತ್ತಿದ್ದರೆ) __________
(ಸಿ) ಜನ್ಮ ದಿನಾಂಕ __________
(ಡಿ) ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ ಸಂಖ್ಯೆ (ಯಾವುದಾದರೂ ಇದ್ದರೆ)
ಆಧಾರ್ ವಿವರಗಳು– (ಸೂಕ್ತ ಚೌಕದಲ್ಲಿ ಗುರುತು ಮಾಡಿ)
(ಎ) ☐ ಆಧಾರ್ ಸಂಖ್ಯೆ ☐☐☐☐☐☐☐☐☐☐☐☐
(ಬಿ) ☐ ನಾನು ನನ್ನ ಆಧಾರ್ ಸಂಖ್ಯೆಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ನನ್ನ ಬಳಿ ಆಧಾರ್ ಸಂಖ್ಯೆ ಇಲ್ಲ.
ಸಂಪರ್ಕಿಸಬೇಕಾದ ಸಂಖ್ಯೆ: (i) ಮೊಬೈಲ್:__________ (ಐಚ್ಛಿಕ) (ii) ಸ್ಥಿರ ದೂರವಾಣಿ __________ ಇ–ಮೇಲ್ ವಿಳಾಸ (ಯಾವುದಾದರೂ ಇದ್ದರೆ) __________
2. ಕಳೆದ ಆರು ವರ್ಷಗಳ ಅವಧಿಯಲ್ಲಿ ನಾನು ಈ ಮುಂದಿನಂತೆ ಒಟ್ಟು ಮೂರು ವರ್ಷಗಳಿಗಿಂತ ಹೆಚ್ಚು ಅವಧಿಗೆ ಬೋಧನಾ ಕಾರ್ಯದಲ್ಲಿ ನಿರತನಾಗಿದ್ದೇನೆ.

ಶಿಕ್ಷಣ ಸಂಸ್ಥೆಯ ಹೆಸರು	ಇಂದ (ದಿನಾಂಕ)	ರವರೆಗೆ (ದಿನಾಂಕ)	ಅವಧಿ
1.			
2.			
3.			
4.			

ಮೇಲಿನದಕ್ಕೆ ಸಮರ್ಥನೆಯಾಗಿ ನಾನು ಇದರೊಂದಿಗೆ ಈ ಮುಂದಿನವುಗಳನ್ನು ಒಪ್ಪಿಸಿದ್ದೇನೆ ____________________

3. * ನನ್ನ ಹೆಸರು ಈ ಶಿಕ್ಷಕರ ಚುನಾವಣಾ ಕ್ಷೇತ್ರದ ಅಥವಾ ಇತರ ಯಾವುದೇ ಶಿಕ್ಷಕರ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲ

ಅಥವಾ

* ನನ್ನ ಹೆಸರು __________ ಶಿಕ್ಷಕರ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಕೆಳಗೆ ಕೊಡಲಾದ ವಿಳಾಸದಲ್ಲಿ ಸೇರ್ಪಡೆಯಾಗಿರುತ್ತದೆ ಮತ್ತು ಅದನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಬೇಕಾಗಿ ಕೋರುತ್ತೇನೆ.

4. ನಾನು ಭಾರತದ ಒಬ್ಬ ಪ್ರಜೆಯಾಗಿರುವುದನ್ನು ಮತ್ತು ಮೇಲೆ ಕೊಡಲಾದ ಎಲ್ಲಾ ವಿವರಗಳು ನಾನು ತಿಳಿದಿರುವಷ್ಟರ ಮಟ್ಟಿಗೆ ಮತ್ತು ನಂಬುವಷ್ಟರ ಮಟ್ಟಿಗೆ ಸತ್ಯವಾದುದು ಎಂದು ಘೋಷಿಸುತ್ತೇನೆ.
ಸ್ಥಳ __________
ದಿನಾಂಕ __________ ಕೋರಿಕೆದಾರನ ಸಹಿ.

ಸೂಚನೆ:– ಯಾವುದೇ ವ್ಯಕ್ತಿಯು, ಒಂದು ಸುಳ್ಳು ವಿವರಣೆಯನ್ನು ಅಥವಾ ಘೋಷಣೆಯನ್ನು ನೀಡಿದರೆ ಮತ್ತು ಅದು ಸುಳ್ಳೆಂದು ಆತನಿಗೆ ತಿಳಿದಿದ್ದರೆ ಅಥವಾ ಸುಳ್ಳೆಂದು ಆತನು ನಂಬಿದ್ದರೆ ಅಥವಾ ನಿಜವೆಂದು ನಂಬಿಲ್ಲವಾದರೆ ಜನತಾ/ ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 31ನೇ ಪ್ರಕರಣದ ಮೇರೆಗೆ ಶಿಕ್ಷಾರ್ಹನಾಗುತ್ತಾನೆ.
* ಅನ್ವಯಿಸದ ವಾಕ್ಯವೃಂದವನ್ನು ಹೊಡೆದುಹಾಕಿ

__________ (ಪ್ರತ್ಯೇಕಸಲು ಚುಚ್ಚುರಂಧ್ರ ಮಾಡುವುದು) __________

ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ.
__________ ವಿಳಾಸದಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ / ಕುಮಾರಿ __________ ಇವರು ನಮೂನೆ–19ರಲ್ಲಿ ಸಲ್ಲಿಸಿದ ಅರ್ಜಿಯನ್ನು–
(ಎ) ಅಂಗೀಕರಿಸಲಾಗಿದೆ ಮತ್ತು ಭಾಗ ಸಂಖ್ಯೆ __________ ರ ಕ್ರಮ ಸಂಖ್ಯೆ __________ ರಲ್ಲಿ ಶ್ರೀ/ಶ್ರೀಮತಿ/ಕುಮಾರಿ __________ ಇವರ ಹೆಸರನ್ನು ನೋಂದಾಯಿಸಲಾಗಿದೆ.
(ಬಿ) __________ ಕಾರಣಕ್ಕಾಗಿ ತಿರಸ್ಕರಿಸಲಾಗಿದೆ.

ದಿನಾಂಕ __________ ಮತದಾರರ ನೋಂದಣಾಧಿಕಾರಿಗಳು,
(ವಿಳಾಸ) __________

__________ (ಪ್ರತ್ಯೇಕಸಲು ಚುಚ್ಚುರಂಧ್ರ ಮಾಡುವುದು) __________

ಅರ್ಜಿಯ ಸ್ವೀಕೃತಿ
__________ * ವಿಳಾಸದಲ್ಲಿ ವಾಸವಾಗಿರುವ ಶ್ರೀ/ ಶ್ರೀಮತಿ / ಕುಮಾರಿ * __________ ಇವರು ನಮೂನೆ 19 ರಲ್ಲಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಲಾಗಿದೆ.
ದಿನಾಂಕ __________ ಮತದಾರರ ನೋಂದಣಾಧಿಕಾರಿ
(ವಿಳಾಸ) __________

* ಅರ್ಜಿದಾರನು ಭರ್ತಿ ಮಾಡಬೇಕು __________

ವಾಸಾಸಂಇ/ಉನಿ–ಸಿ.ಪಿ/1478/ಕೆಎಸ್ಎಂಸಿಎ/2023–24







ಮದ್ದೂರು ತಾಲ್ಲೂಕು ಗೆಜ್ಜಲಗೆರೆ ರೈಲ್ವೆ ಗೇಟ್ ಬಳಿ ರೈಲು ತಡೆಯಲು ಯತ್ನಿಸಿದ ಮುಖಂಡರನ್ನು ಪೊಲೀಸರು ಬಂಧಿಸಿದರು (ಎಡಚಿತ್ರ) ಮೈಸೂರಿನ ಕೆ.ಆರ್.ವೃತ್ತ ಬಿಕೋ ಎನ್ನುತ್ತಿತ್ತು (ಮಧ್ಯದ ಚಿತ್ರ) ಮಳವಳ್ಳಿಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಸ್ಟಾಲಿನ್ ಭಾವಚಿತ್ರಕ್ಕೆ ಬೆಂಕಿ ಹಚ್ಚಿದರು
– ಪ್ರಜಾವಾಣಿ ಚಿತ್ರಗಳು

ರಸ್ತೆ ತಡೆಗೆ ಯತ್ನಿಸಿದವರು ಪೊಲೀಸ್ ವಶಕ್ಕೆ

ಮೈಸೂರು ಭಾಗದಲ್ಲಿ ಬಂದ್ ಯಶಸ್ವಿ, ರೈತರು– ಪೊಲೀಸರ ನಡುವೆ ಮಾತಿನ ಚಕಮಕಿ • ಸರ್ಕಾರದ ವಿರುದ್ಧ ಕಿಡಿ

ಪ್ರಜಾವಾಣಿ ವಾರ್ತೆ

ಮೈಸೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ವಿವಿಧ ಸಂಘಟನೆಗಳು ಶುಕ್ರವಾರ ಕರೆ ನೀಡಿದ್ದ ರಾಜ್ಯ ಬಂದ್‌ಗೆ ಮೈಸೂರು ಭಾಗದ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಯಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಕೊಡಗಿನಲ್ಲಿ ನೀರಸ ಪ್ರತಿಕ್ರಿಯೆ ದೊರಕಿತು.

ಮಂಡ್ಯ ಜಿಲ್ಲೆಯ ಬೆಂಗಳೂರು–ಮೈಸೂರು ಹೆದ್ದಾರಿ, ರೈಲು ತಡೆಯಲೆತ್ನಿಸಿದ ನೂರಾರು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ಶ್ರೀರಂಗಪಟ್ಟಣ ತಾಲ್ಲೂಕು ಗರುಡನ ಉಕ್ಕಡ ಬಳಿ ರೈತಸಂಘ ಸೇರಿದಂತೆ ವಿವಿಧ ಸಂಘಟನೆಗಳ ಸದಸ್ಯರು ಹೆದ್ದಾರಿ ಸರ್ವೀಸ್ ರಸ್ತೆಯಲ್ಲಿ ಸಭೆ ನಡೆಸುತ್ತಿರುವಾಗಲೇ 500ಕ್ಕೂ ಹೆಚ್ಚು ಕಾರ್ಯಕರ್ತರು ಹೆದ್ದಾರಿಗೆ ನುಗ್ಗಿದರು. ಕಾದು ಕುಳಿತಿದ್ದ ಪೊಲೀಸರು ಅವರನ್ನು ಎಳೆದೊಯ್ದು ಸಾರಿಗೆ ಸಂಸ್ಥೆ ಬಸ್‌ನಲ್ಲಿ ಕೂರಿಸಿದರು. ಜಾನುವಾರುಗಳನ್ನು ಹೆದ್ದಾರಿಗೆ ನುಗ್ಗಿಸಲು ಯತ್ನಿಸಿದವರನ್ನೂ ಎಳೆದು ಹಾಕಿದರು. ಪೊಲೀಸರು–ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು. 'ಸರ್ಕಾರ ಪೊಲೀಸರ ಮೂಲಕ ಹೋರಾಟವನ್ನು ಹತ್ತಿಕ್ಕುತ್ತಿದೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೈತಸಂಘ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಸೇರಿದಂತೆ 250ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು, ಶ್ರೀರಂಗನಾಥ ಕಲ್ಯಾಣ ಮಂಟಪಕ್ಕೆ ಕರೆದೊಯ್ದು ನಂತರ ಬಿಡುಗಡೆ ಮಾಡಿದರು. ದಕ್ಷಿಣ ವಲಯ ಐಜಿ ಬೋರಲಿಂಗಯ್ಯ, ಜಿಲ್ಲಾಧಿಕಾರಿ ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು.

ರೈಲುತಡೆಗೆ ಯತ್ನ: ಮದ್ದೂರಿನ ಗೆಜ್ಜಲಗೆರೆ ಬಳಿ ವಂದೇ ಭಾರತ್, ಭಾಗಮತಿ ಎಕ್ಸ್‌ಪ್ರೆಸ್ ರೈಲು ತಡೆಯಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದರು. ರೈಲ್ವೆ ಗೇಟ್‌ಬಳಿ ರೈಲು ತಡೆಯಲು ಪ್ರತಿಭಟನಕಾರರು ಸಿದ್ಧವಾಗಿದ್ದರು. ಆದರೆ ಪೊಲೀಸರು ಗೇಟ್‌ನ ಎರಡೂ ಕಡೆ ಬ್ಯಾರಿಕೇಡ್ ಹಾಕಿ ಬಂದೋಬಸ್ತ್ ಮಾಡಿದ್ದರು. ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಕಾರರು ರೈಲು ಹಳಿ ಮೇಲೆ ಓಡಿದರು. ಪೊಲೀಸರು ಅವರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಮಣ್ಣು ತಿಂದು, ಸಗಣಿ ನೀರು ಸುರಿದುಕೊಂಡು ಗಮನ ಸೆಳೆದಿದ್ದ ಬಿಜೆಪಿ ಕಾರ್ಯಕರ್ತ ಶಿವಕುಮಾರ್ ಆರಾಧ್ಯ ಶುಕ್ರವಾರ ಹಸಿಮೆಣಸಿನಕಾಯಿ ತಿಂದರು. ಕೆ.ಆರ್. ಪೇಟೆಯಲ್ಲಿ ಸಂಘಟನೆಗಳು ಕೈಗೊಂಡ ನಿರ್ಧಾರದಂತೆ ಬಂದ್ ಸಾಂಕೇತಿಕವಾಗಿ ನಡೆಯಿತು. ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಸ್ಥಳಕ್ಕೆ ಚಿತ್ರ ನಿರ್ದೇಶಕ ಪ್ರೇಮ್, ಚಕ್ರವರ್ತಿ ಸೂಲಿಬೆಲೆ, ಮಂಗಳಮುಖಿಯರು ಬೆಂಬಲ ಸೂಚಿಸಿದರು.



ರಾಜ್ಯ ಬಂದ್ ಬೆಂಬಲಿಸಿ ಮೈಸೂರು– ಬೆಂಗಳೂರು ಹೆದ್ದಾರಿ ಬಂದ್ ಮಾಡಲೆತ್ನಿಸಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೇರಿ ವಿವಿಧ ಸಂಘಟನೆಗಳ ಸದಸ್ಯರನ್ನು ಪೊಲೀಸರು ವಶಕ್ಕೆ ಪಡೆದರು

ಕಾಡಾ ಕಚೇರಿ, ಕಬಿನಿಗೆ ಮುತ್ತಿಗೆ ಯತ್ನ

ಮೈಸೂರಿನಲ್ಲಿ ಹಲವು ಸಂಘಟನೆಗಳ ಸಾವಿರಾರು ಕಾರ್ಯಕರ್ತರು ಬಂದ್, ಪ್ರತಿಭಟನೆಯಲ್ಲಿ ಪ್ರತ್ಯೇಕವಾಗಿ ಪಾಲ್ಗೊಂಡರು. ಬೆಳಿಗ್ಗೆಯಿಂದ ಸಂಜೆವರೆಗೂ ಬಂದ್ ಸಂಪೂರ್ಣವಾಗಿತ್ತು. ಮೈಸೂರಿನಲ್ಲಿ ಕಾಡಾ ಕಚೇರಿಗೆ, ಎಚ್.ಡಿ.ಕೋಟೆ ತಾಲ್ಲೂಕಿನ ಕಬಿನಿ ಜಲಾಶಯಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ರೈತ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.
'ಜನಪ್ರತಿನಿಧಿಗಳಿಗೆ ಬುದ್ಧಿ ಕೊಡಬೇಕು' ಎಂದು ಕೋರಿ ಪ್ರಜ್ಞಾವಂತ ನಾಗರಿಕರ ವೇದಿಕೆ ಸದಸ್ಯರು ಅಗ್ರಹಾರದ ನೂರೊಂದು ಗಣಪತಿ ಗುಡಿಯಲ್ಲಿ ಪೂಜೆ ಮಾಡಿದರು.
ಚಾಮರಾಜನಗರದಲ್ಲಿ ರೈತನ ಬಾಯಿಗೆ ಹನಿ ನೀರು ಬಿಟ್ಟು ಪ್ರತಿಭಟಿಸಲಾಯಿತು. ಕುಣಿದಾಡಿ, ರಸ್ತೆಯಲ್ಲಿ ಉರುಳಾಡಿಯೂ ಹಲವರು ಪ್ರತಿಭಟಿಸಿದರು. ಟೈರ್‌ಗೆ ಬೆಂಕಿ ಹಚ್ಚಲು ಬಿಡಲಿಲ್ಲವೆಂದು ಪೆಟ್ರೋಲ್ ಬಾಟಲ್ ಹಿಡಿದು ಓಡಿದ ರೈತರೊಬ್ಬರನ್ನು ಪೊಲೀಸರು ವಶಕ್ಕೆ ಪಡೆದರು. ಹಾಸನದಲ್ಲಿ ಬಸ್ ತಡೆಯಲು ಮುಂದಾದವರನ್ನೂ ವಶಕ್ಕೆ ಪಡೆದರು.
ಬಂದ್ ನಡುವೆಯೂ, ಮೈಸೂರಿನ ಅರಮನೆಯಲ್ಲಿ ದಸರಾ ಅಂಗವಾಗಿ ಬೀಡುಬಿಟ್ಟಿರುವ ಮಾವುತರು ಮತ್ತು ಕಾವಾಡಿಗಳ ಕುಟುಂಬದವರಿಗೆ ಹೋಳಿಗೆ ಉಪಾಹಾರ ಬಡಿಸುವ ಕಾರ್ಯಕ್ರಮವನ್ನು ಜಿಲ್ಲಾಡಳಿತ ಏರ್ಪಡಿಸಿತ್ತು.



ಹೆದ್ದಾರಿ ತಡೆಯಲೆತ್ನಿಸಿದ ರೈತರನ್ನು ಎಳೆದೊಯ್ದ ಪೊಲೀಸರು

ಸ್ಟಾಲಿನ್ ಚಿತ್ರಕ್ಕೆ ರಕ್ತ...

ಕಸ್ತೂರಿ ಜನಪರ ವೇದಿಕೆ ಸದಸ್ಯರು ಮಂಡ್ಯದ ಜೆ.ಸಿ.ವೃತ್ತದಲ್ಲಿ ಕೈ ರಕ್ತನಾಳವನ್ನು ಕೊಯ್ದುಕೊಂಡು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಭಾವಚಿತ್ರದ ಮೇಲೆ ಹರಿಸಿದರು. 'ರಕ್ತ ಬಿಜಾಸುರ ಸ್ಟಾಲಿನ್‌ಗೆ ರಕ್ತ ಕೊಡುತ್ತೇವೆ, ನೀರು ಕೊಡುವುದಿಲ್ಲ' ಎಂದು ಘೋಷಣೆ ಕೂಗಿದರು.

ತಕ್ಷಣ ಮಧ್ಯಪ್ರವೇಶಿಸಿದ ಪೊಲೀಸರು ಕಾರ್ಯಕರ್ತರ ಕೈಗಳಿಗೆ ಬ್ಯಾಂಡ್ ಸುತ್ತಿ ಉಪಚರಿಸಿದರು. ಇದೇ ವೇಳೆ, ಪ್ರತಿಭಟನಕಾರರು ಸ್ಟಾಲಿನ್ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆಯಲು ಯತ್ನಿಸಿದರು. ಪೊಲೀಸರು ಅದನ್ನು ತಡೆದರು. ಮಳವಳ್ಳಿಯಲ್ಲಿ ಪ್ರತಿಭಟನಕಾರರು ಸ್ಟಾಲಿನ್ ಭಾವಚಿತ್ರಕ್ಕೆ ಬೆಂಕಿ ಹಚ್ಚಿದರು.

ತಾಲ್ಲೂಕಿನ ಬೂದನೂರು ಗ್ರಾಮದಲ್ಲಿ ಪ್ರತಿಭಟನಕಾರರು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಸಂಸದರು, ಕೇಂದ್ರ, ರಾಜ್ಯ ಸರ್ಕಾರಗಳ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಿದರು.

ಸಿ. ಎಂ ನಿಲುವಿಗೆ ಒತ್ತಾಯ

'ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯೂಸೆಕ್ ನೀರು ಹರಿಸಬೇಕು' ಎಂದು ಪುನರುಚ್ಚಾರ ಮಾಡಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯುಆರ್‌ಎ) ಆದೇಶ ಹೊರಬರುತ್ತಿದ್ದಂತೆಯೇಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಮುಖಂಡರು ಮಂಡ್ಯದಲ್ಲಿ ಹೆದ್ದಾರಿ ತಡೆ ಮಾಡಿದರು. 'ಕರ್ನಾಟಕದ ವಿರುದ್ಧ ನಿಲುವು ತಾಳುತ್ತಿರುವ ಪ್ರಾಧಿಕಾರವನ್ನು ರದ್ದು ಮಾಡಬೇಕು' ಎಂದು ಒತ್ತಾಯಿಸಿದರು.

'ಪ್ರಾಧಿಕಾರದ ಆದೇಶದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ತಮ್ಮ ನಿಲುವು ಪ್ರಕಟಿಸಬೇಕು. ಒಂದು ಹನಿ ನೀರನ್ನೂ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು. ಇಲ್ಲದಿದ್ದರೆ ನಮ್ಮ ಹೋರಾಟ ಇನ್ನೂ ದೊಡ್ಡ ಮಟ್ಟದಲ್ಲಿ ನಡೆಯಲಿದೆ' ಎಂದು ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಎಚ್ಚರಿಸಿದರು.

'ಯುವ' ಚಿತ್ರೀಕರಣ ತಡೆಯಲು ಯತ್ನ

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಟ ಯುವ ರಾಜ್‌ಕುಮಾರ್ ಅಭಿನಯದ 'ಯುವ' ಸಿನಿಮಾದ ಚಿತ್ರೀಕರಣ ನಡೆಯುತ್ತಿದೆ ಎಂಬ ಮಾಹಿತಿ ಮೇರೆಗೆ ಧಾವಿಸಿದ ಹೋರಾಟಗಾರರು ಚಿತ್ರೀಕರಣ ನಿಲ್ಲಿಸುವಂತೆ ಒತ್ತಾಯಿಸಿದರು. 'ನಿಮ್ಮ ತಾತಾ ಡಾ.ರಾಜಕುಮಾರ್ ಗೋಕಾಕ್ ಚಳವಳಿಯಲ್ಲಿ ಪಾಲ್ಗೊಂಡಿದ್ದವರು. ಅವರ ಮೊಮ್ಮಗನಾಗಿ ನೀವು ಬಂದ್ ವೇಳೆ ಚಿತ್ರೀಕರಣದಲ್ಲಿ ಪಾಲ್ಗೊಂಡಿರುವುದು ಸರಿಯಲ್ಲ' ಎಂದು ಆಕ್ಷೇಪಿಸಿದರು.

ಅದಕ್ಕೆ ಪ್ರತಿಕ್ರಿಯಿಸಿ ನಟ, 'ಗುರುವಾರದಿಂದ ಚಿತ್ರೀಕರಣ ಆರಂಭಿಸಲಾಗಿದೆ. ಇಂದು ಬಂದ್ ಬೆಂಬಲಿಸಿ ಸ್ಥಗಿತಗೊಳಿಸಿದ್ದೇವೆ. ಲೈಟ್ ರಿಪೇರಿ ಇದ್ದ ಕಾರಣ ಬಂದಿದ್ದೇವೆ. ಹೋರಾಟಕ್ಕೆ ಬೆಂಬಲವಿದೆ' ಎಂದರು.

ಸುದ್ದಿ 2 ನಿಮಿಷ

ನ್ಯಾಯಾಂಗ ನಿಂದನೆ: ವೈದ್ಯೆಗೆ ಒಂದು ದಿನ ಸರ್ಕಾರಿ ಆಸ್ಪತ್ರೆ ಸೇವೆ

ಬೆಂಗಳೂರು: ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದ ವ್ಯಾಜ್ಯವೊಂದರಲ್ಲಿ ಹೈಕೋರ್ಟ್ ನೀಡಿದ್ದ ಆದೇಶ ಪಾಲಿಸದ ವೈದ್ಯೆಯೊಬ್ಬರು ಕ್ರಿಮಿನಲ್ ನ್ಯಾಯಾಂಗ ನಿಂದನೆ ವಿಚಾರಣೆಯಿಂದ ಬಚಾವಾಗಲು; ಆರು ತಿಂಗಳ ಅವಧಿಯಲ್ಲಿ ಪ್ರತಿ ತಿಂಗಳಲ್ಲಿ ಒಂದು ದಿನ ಸರ್ಕಾರಿ ಆಸ್ಪತ್ರೆಯಲ್ಲಿ ಸಮುದಾಯ ಸೇವೆ ಸಲ್ಲಿಸುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ.

ಪತಿಯ ಸುಪರ್ದಿಗೆ 8 ವರ್ಷದ ಪುತ್ರಿಯನ್ನು ಒಪ್ಪಿಸುವಂತೆ ಹೈಕೋರ್ಟ್ ವೈದ್ಯೆಗೆ ಆದೇಶಿಸಿತ್ತು. ನಗರದ ಖಾಸಗಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ 33 ವರ್ಷದ ವೈದ್ಯೆ ಈ ಆದೇಶ ಪಾಲನೆ ಮಾಡಿರಲಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಹೈಕೋರ್ಟ್ ವೈದ್ಯೆಯ ವಿರುದ್ಧ ಸ್ವಯಂಪ್ರೇರಿತ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿಕೊಂಡಿತ್ತು.

ಈ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠಕ್ಕೆ ವೈದ್ಯೆಯು ಬೇಷರತ್ ಕ್ಷಮಾಪಣೆ ಕೋರುವ ಮೂಲಕ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ಕೈಬಿಡುವಂತೆ ಮುಚ್ಚಳಿಕೆಯ ಪ್ರಮಾಣ ಪತ್ರ ಸಲ್ಲಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವೈದ್ಯೆಯ ವಿರುದ್ಧದ ಕ್ರಿಮಿನಲ್ ನ್ಯಾಯಾಂಗ ನಿಂದನೆ ವಿಚಾರಣೆ ಕೈಬಿಟ್ಟಿದೆ.

ರಕ್ತನಾಳ ಕತ್ತರಿಸಿಕೊಂಡ ಹೋರಾಟಗಾರ



ಕಳಸ (ಚಿಕ್ಕಮಗಳೂರು): ಹೋರಾಟಗಾರ ಕನ್ನಡ ರಾಜು ಅವರು ಪ್ರತಿಭಟನೆ ವೇಳೆ ತಮ್ಮ ಕೈ ರಕ್ತನಾಳ ಕತ್ತರಿಸಿಕೊಂಡು ಘೋಷಣೆ ಕೂಗಿದರು.

ಇದ್ದಕ್ಕಿದ್ದಂತೆ ಜೇಬಿನಿಂದ ಬ್ಲೇಡ್ ತೆಗೆದು ಕೈ ರಕ್ತನಾಳ ಕತ್ತರಿಸಿಕೊಂಡರು. ರಕ್ತ ಸುರಿಯತೊಡಗಿದಾಗ 'ರಕ್ತ ಕೊಟ್ಟೇವು, ಕಾವೇರಿ ನೀರು ಕೊಡೆವು' ಎಂದು ಘೋಷಣೆ ಕೂಗಿದರು. ಅವರನ್ನು ತಕ್ಷಣವೇ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ವೈದ್ಯರು ಚಿಕಿತ್ಸೆ ನೀಡಿದ ನಂತರ ರಕ್ತಸ್ರಾವ ನಿಂತಿತು.

ಕಾಫಿ ನಾಡು ಚಿಕ್ಕಮಗಳೂರಿನಲ್ಲೂ ಬಂದ್ ಯಶಸ್ವಿ: ಕರ್ನಾಟಕ ಬಂದ್‌ಗೆ ಚಿಕ್ಕಮಗಳೂರಿನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಬೆಳಿಗ್ಗೆಯಿಂದ ಸಂಜೆ ತನಕ ಅಂಗಡಿಗಳು ಮುಚ್ಚಿದ್ದವು. ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ಶಾಲಾ–ಕಾಲೇಜಿಗೆ ಬೆಳಿಗ್ಗೆಯೇ ವಿದ್ಯಾರ್ಥಿಗಳು ಬಂದಿದ್ದರು. ಬಳಿಕ ರಜೆ ನೀಡಿದ್ದರಿಂದ ವಾಪಸ್ ಮನೆಗೆ ಹೋಗಲು ಬಸ್ ಇಲ್ಲದೆ ಕಷ್ಟ ಅನುಭವಿಸಿದರು. ಮಧ್ಯಾಹ್ನ 3 ಗಂಟೆ ಬಳಿಕ ಬಸ್ ಸಂಚಾರ ಆರಂಭವಾಯಿತು. ಸಂಜೆ ಬಳಿಕ ಅಂಗಡಿಗಳು ತೆರೆದವು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪ್ರತಿಕೃತಿ ದಹಿಸಿ ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಹೋರಾಟಗಾರರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪ್ರತಿಕೃತಿ ದಹಿಸಿದರು.

ಕುಲಪತಿ: ಪ್ರಬಲ ಜಾತಿಯವರ ಪಾರುಪತ್ಯ

ಒಂದನೇ ಪುಟದಿಂದ

'ಅಧಿಕಾರಕ್ಕೆ ಬರುವ ಸರ್ಕಾರಗಳು ಸಾಮಾಜಿಕ ನ್ಯಾಯದ ಬಗ್ಗೆ ಚಿಂತಿಸುವುದೇ ಇಲ್ಲ. ತಮ್ಮ ಜಾತಿ, ಸಿದ್ಧಾಂತಗಳಿಗೆ ಸರಿ ಹೊಂದುವಂತಹ ಕುಲಪತಿಗಳನ್ನೇ ಆಯ್ಕೆ ಮಾಡುತ್ತಾರೆ. ಅದಕ್ಕಾಗಿ ಶೋಧನಾ ಸಮಿತಿಗೂ ತಮಗೆ ಬೇಕಾದವರನ್ನೇ ನೇಮಿಸುತ್ತಾರೆ' ಎನ್ನುತ್ತಾರೆ ವಿಶ್ರಾಂತ ಕುಲಪತಿ ಪಿ.ವಿ.ವೆಂಕಟರಾಮಯ್ಯ.

'ಶೋಧನಾ ಸಮಿತಿ ಶಿಫಾರಸು ಮಾಡಿದ ಮೂವರಲ್ಲೂ ತಮಗೆ ಬೇಕಾದವರನ್ನೇ ನೇಮಿಸಲು ರಾಜ್ಯಪಾಲರಿಗೆ ಮುಖ್ಯಮಂತ್ರಿ ಶಿಫಾರಸು ಮಾಡುತ್ತಾರೆ. ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಹಾಗೂ 2020ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಯಲ್ಲೂ ಮುಖ್ಯಮಂತ್ರಿ ಜತೆ ಚರ್ಚಿಸಿಯೇ ರಾಜ್ಯಪಾಲರು ಕುಲಪತಿಗಳ ಆಯ್ಕೆ ಅಂತಿಮಗೊಳಿಸಬೇಕು ಎನ್ನುವ ನಿಯಮವಿದೆ. ನಿಯಮ ಬಳಸಿಕೊಳ್ಳುವ ಮುಖ್ಯಮಂತ್ರಿ ತಮ್ಮ ಜಾತಿಗಳ ಪ್ರಾಧ್ಯಾಪಕರ ಹೆಸರುಗಳನ್ನು ಶಿಫಾರಸು ಮಾಡುತ್ತಾ ಬಂದಿದ್ದಾರೆ. ಹಾಗಾಗಿ, ರಾಜ್ಯದಲ್ಲಿ ಅಧಿಕಾರ ನಡೆಸಿದ ಮುಖ್ಯಮಂತ್ರಿಯಾದ ಜಾತಿಯವರೇ ಹೆಚ್ಚಿನ ಸಂಖ್ಯೆಯಲ್ಲಿ ನೇಮಕವಾಗುತ್ತಿದ್ದಾರೆ' ಎನ್ನುವುದು ಅವರ ವಿವರಣೆ.

ಜಾತಿ	ಕುಲಪತಿಗಳ ಸಂಖ್ಯೆ
ಲಿಂಗಾಯತ	11
ಒಕ್ಕಲಿಗ	07
ಸಾಮಾನ್ಯ/ಬ್ರಾಹ್ಮಣ	07
ಪರಿಶಿಷ್ಟ ಜಾತಿ	05
ಪರಿಶಿಷ್ಟ ಪಂಗಡ	01
ಹಿಂದುಳಿದ ವರ್ಗಗಳು	06
ಖಾಲಿ ಇರುವ ಸ್ಥಾನಗಳು	04
ಒಟ್ಟು	41

'ಕುಲಪತಿಗಳ ನೇಮಕಾತಿಯಲ್ಲಿ ಜಾತಿ ಹಾಗೂ ಹಣವೇ ಪ್ರಧಾನವಾಗಿದೆ. ಉಳಿದದ್ದೆಲ್ಲವೂ ಗೌಣವಾಗಿದೆ. ಇದರಿಂದ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ತಮ್ಮ ಘನತೆ ಕಳೆದುಕೊಳ್ಳುತ್ತಿವೆ' ಎನ್ನುತ್ತಾರೆ ವಿಶ್ವವಿದ್ಯಾಲಯಗಳ ಪ್ರತಿಭಾವಂತ ಪ್ರಾಧ್ಯಾಪಕರು.

ಸಮಿತಿ ಶಿಫಾರಸಿಗೆ ಪ್ರಾಧಿಕಾರ ಮಣೆ

ಒಂದನೇ ಪುಟದಿಂದ

ಪ್ರಾಧಿಕಾರ ಈ ಹಿಂದೆ ನೀಡಿರುವ ನಿರ್ದೇಶನವನ್ನು ಕರ್ನಾಟಕ ಪೂರ್ಣ ಪ್ರಮಾಣದಲ್ಲಿ ಪಾಲಿಸಿಲ್ಲ. ಪ್ರಾಧಿಕಾರದ ಆದೇಶದ ಪ್ರಕಾರ ನೀರು ಬಿಡುಗಡೆ ಮಾಡಿಲ್ಲ. ಬಾಕಿ ನೀರನ್ನು ಸೇರಿಸಿ 3 ಸಾವಿರ ಕ್ಯೂಸೆಕ್ ಬಿಡುಗಡೆ ಮಾಡುವಂತೆ ಪ್ರಾಧಿಕಾರ ಸೂಚಿಸಿತು.

ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಲ್ಲಿರುವ ನೀರು ಕುಡಿಯುವ ಹಾಗೂ ನೀರಾವರಿಗೆ ಸಾಕಾಗುವುದಿಲ್ಲ. ಈ ಅಂಶವನ್ನು ಪ್ರಾಧಿಕಾರ ಪರಿಗಣಿಸಬೇಕು ಎಂದು ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಮನವಿ ಮಾಡಿದರು.

ರಾಜ್ಯದಲ್ಲಿ 5 ಲಕ್ಷ ಎಕರೆಯಲ್ಲಿ ಬೆಳೆ ಬೆಳೆದು ನಿಂತಿದೆ. ಈಗ ಹೆಚ್ಚಿನ ನೀರು ಅಗತ್ಯ. ಹೀಗಾಗಿ, ಸಂಕಷ್ಟದ ಸೂತ್ರದ ಪ್ರಕಾರ 12.16 ಟಿಎಂಸಿ ಅಡಿ ಬಾಕಿ ಹಾಗೂ ನಿತ್ಯ 12,500 ಕ್ಯೂಸೆಕ್ ನೀರು ಬಿಡುಗಡೆಗೆ ನಿರ್ದೇಶನ ನೀಡಬೇಕು ಎಂದು ತಮಿಳುನಾಡಿನ ಅಧಿಕಾರಿಗಳು ಒತ್ತಾಯಿಸಿದರು. ವಿವರವಾದ ಚರ್ಚೆಯ ನಂತರ ಪ್ರಾಧಿಕಾರವು ಈ ನಿರ್ದೇಶನ ನೀಡಿತು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ರಾಕೇಶ್ ಸಿಂಗ್, 'ತಮಿಳುನಾಡಿಗೆ 12.16 ಟಿಎಂಸಿ ಅಡಿ ಬ್ಯಾಕ್‌ಲಾಗ್ ನೀರನ್ನು ಬಿಡಲು ಸಾಧ್ಯವಿಲ್ಲ ಎಂದು ಕರ್ನಾಟಕವು ಪ್ರಾಧಿಕಾರಕ್ಕೆ ಸ್ಪಷ್ಟವಾಗಿ ತಿಳಿಸಿದೆ' ಎಂದರು.

'ಕನಕಪುರ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಜಲಾಶಯ ನಿರ್ಮಾಣದ ಅಗತ್ಯವನ್ನು ರಾಜ್ಯ ಪ್ರಸ್ತಾಪಿಸಿದ್ದು, ಈ ಬಗ್ಗೆ ಪ್ರಾಧಿಕಾರ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಅವರು ಒತ್ತಾಯಿಸಿದರು.

'ಬಹುಕಾಲದಿಂದ ಬಾಕಿ ಉಳಿದಿರುವ ಮೇಕೆದಾಟು ಯೋಜನೆಯ ಸಮಸ್ಯೆಯನ್ನು ಆದಷ್ಟು ಬೇಗ ಚರ್ಚೆಗೆ ತೆಗೆದುಕೊಳ್ಳುವಂತೆ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗುವುದು' ಎಂದರು.

ಈ ಹಿಂದೆ 12 ಬಾರಿ ಮೇಕೆದಾಟು ವಿಚಾರವನ್ನು ಪ್ರಾಧಿಕಾರದ ಸಭೆಯ ಕಾರ್ಯಸೂಚಿಯಲ್ಲಿ ಪ್ರಸ್ತಾಪಿಸಲಾಗಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಕಾರ್ಯಸೂಚಿಯನ್ನು ಮುಂದೂಡಲಾಗಿದೆ' ಎಂದರು.

ಶಿವರಾಜ್ ಕುಮಾರ್, ದರ್ಶನ್, ಉಪೇಂದ್ರ ಸೇರಿ ಹಲವರು ಭಾಗಿ

ಕಾವೇರಿ ಹೋರಾಟಕ್ಕೆ ಚಿತ್ರರಂಗ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರಿಗಾಗಿ ಶುಕ್ರವಾರ ನಡೆದ ಕರ್ನಾಟಕ ಬಂದ್‌ಗೆ ಬೆಂಬಲವಾಗಿ ಚಲನಚಿತ್ರ ವಾಣಿಜ್ಯ ಮಂಡಳಿ ಹಮ್ಮಿಕೊಂಡಿದ್ದ ಸಾಂಕೇತಿಕ ಪ್ರತಿಭಟನೆಯಲ್ಲಿ ಕನ್ನಡ ಚಿತ್ರರಂಗ ಒಗ್ಗಟ್ಟು ಪ್ರದರ್ಶಿಸಿತು.

ಚಿತ್ರ ನಟರಾದ ಶಿವರಾಜ್‌ಕುಮಾರ್, ದರ್ಶನ್, ಉಪೇಂದ್ರ ಸೇರಿ ಹಲವು ಕಲಾವಿದರು, ನಿರ್ದೇಶಕರು ಪ್ರತಿಭಟನೆಯಲ್ಲಿ ಭಾಗಿಯಾದರು.

ಈ ಹೋರಾಟದ ನೇತೃತ್ವ ವಹಿಸಿದ್ದ ನಟ ಶಿವರಾಜ್‌ಕುಮಾರ್ ಮಾತನಾಡಿ, 'ಯಾವುದೇ ಹೋರಾಟಕ್ಕೆ ಆ ಕಲಾವಿದರು ಬಂದಿಲ್ಲ, ಇವರು ಬಂದಿಲ್ಲ ಎಂದು ದೂರಬೇಡಿ. ನಮಗೆ ತಮಿಳುನಾಡು ಬಗ್ಗೆಯೂ ಪ್ರೀತಿ ಇದೆ. ಅವರೂ ನಮ್ಮ ಪಕ್ಕದ ರಾಜ್ಯದವರೇ. ಕಾವೇರಿ ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಯತ್ನ ಮಾಡಬೇಕು. ಆಗ ಫಲಿತಾಂಶ ಸಿಗುತ್ತದೆ' ಎಂದರು.

'ಕಲಾವಿದರು ಹೋರಾಟಕ್ಕಿಳಿದ ತಕ್ಷಣ ಸಮಸ್ಯೆ ಪರಿಹಾರವಾಗುವುದಿಲ್ಲ. ಕಾವೇರಿ ಸಮಸ್ಯೆ ಪರಿಹಾರವಾಗಲೇಬೇಕು ಎಂದು ಎರಡೂ ಸರ್ಕಾರಗಳನ್ನೂ ಒತ್ತಾಯಿಸಬೇಕು. ಉಭಯ ರಾಜ್ಯದ ನಾಯಕರು ಮಾತಾಡಲಿ. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಲಿ. ಹೋರಾಟದಲ್ಲಿ ನಂಬಿಕೆ, ವಿಶ್ವಾಸ ಇರಬೇಕು' ಎಂದು ಅವರು ತಿಳಿಸಿದರು.

ನಟ ಧ್ರುವ ಸರ್ಜಾ, 'ರಾಜಕೀಯ ಮಾಡಲು ರಾಜಕಾರಣಿಗಳಿದ್ದಾರೆ. ರಾಜಕೀಯಕ್ಕಾಗಿ ಕಲಾವಿದರನ್ನು ಬಳಸಿಕೊಳ್ಳಬೇಡಿ. ಕನ್ನಡ ಚಿತ್ರರಂಗ ಶುದ್ಧವಾಗಿದೆ. ಕೆಟ್ಟ ಸಂಚಿನಿಂದ ಅದನ್ನು ಒಡೆಯಬೇಡಿ. ಕಲಾವಿದರು ಯಾವತ್ತೂ ರೈತರ ಪರ ಇರುತ್ತೇವೆ. ಕನ್ನಡಿಗನಾಗಿ ಹೋರಾಟಕ್ಕೆ ಬೆಂಬಲವಿದೆ' ಎಂದರು.

ನಟಿ ಪೂಜಾ ಗಾಂಧಿ ಸ್ಪಷ್ಟವಾದ ಕನ್ನಡದಲ್ಲಿ ಕವಿ ಪರಮೇಶ್ವರ ಭಟ್ಟರ 'ಕೀಲಿಕೈ' ಕವಿತೆ ಓದಿ ಎಲ್ಲರ ಗಮನ ಸೆಳೆದರು. ಪ್ರದರ್ಶಕ ಕೆ.ವಿ. ಚಂದ್ರಶೇಖರ್ ಕಾವೇರಿ ನದಿ ನೀರು ವಿತರಣೆ ಕುರಿತಂತೆ 'ಪ್ರಜಾವಾಣಿ'ಯ ಆಳ ಅಗಲ ಪುಟದಲ್ಲಿ ಶುಕ್ರವಾರ ಪ್ರಕಟಗೊಂಡ ಬರಹವನ್ನು ಓದುವಂತೆ ಮನವಿ ಮಾಡಿದರು.

ಹಲವರು ಭಾಗಿ: ನಟರಾದ ಶ್ರೀಮುರಳಿ, ದುನಿಯಾ ವಿಜಯ್, ನೀನಾಸಂ ಸತೀಶ್, ವಿನೋದ್ ಪ್ರಭಾಕರ್, ವಿಜಯ್ ರಾಘವೇಂದ್ರ, ಶ್ರುತಿ, ನಿರ್ದೇಶಕ ಓಂ ಸಾಯಿಪ್ರಕಾಶ್, ಹಿರಿಯ ನಟರಾದ ಶ್ರೀನಾಥ್, ಶ್ರೀನಿವಾಸ್ ಮೂರ್ತಿ, ಪದ್ಮ ವಾಸಂತಿ ಸೇರಿದಂತೆ ಹಲವು ನಟ-ನಟಿಯರು ಭಾಗಿಯಾಗಿದರು. ವಾಣಿಜ್ಯ ಮಂಡಳಿ, ನಿರ್ದೇಶಕ ಸಂಘ, ನಿರ್ಮಾಪಕರ ಸಂಘದ ಪ್ರಮುಖರು, ಪದಾಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.



ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿರೋಧಿಸಿ ಬೆಂಗಳೂರಿನಲ್ಲಿರುವ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಬಳಿ ಶುಕ್ರವಾರ ನಡೆದ ಪ್ರತಿಭಟನೆ ವೇಳೆ ಚಿತ್ರ ನಟರಾದ ದರ್ಶನ್ ಹಾಗೂ ಶಿವರಾಜ್ ಕುಮಾರ್ ಚರ್ಚೆಯಲ್ಲಿ ತೊಡಗಿದ್ದರು. ನಟಿಯರಾದ ಗಿರಿಜಾ ಲೋಕೇಶ್, ವಸಿಷ್ಠ ಸಿಂಹ, ಧ್ರುವ ಸರ್ಜಾ, ಉಮಾಶ್ರೀ ಹಾಗೂ ವಾಣಿಜ್ಯ ಮಂಡಳಿಯ ಸದಸ್ಯರು ಇದ್ದರು
– ಪ್ರಜಾವಾಣಿ ಚಿತ್ರ

ಕಾವೇರಿ ನೀರು ಹಂಚಿಕೆ ಸಮಸ್ಯೆಯು ಬಗೆಹರಿಯದ ಕಗ್ಗಂಟಾಗಿದೆ. ಎರಡೂ ಸರ್ಕಾರಗಳು ಇದರ ಬಗ್ಗೆ ಸೂಕ್ತವಾಗಿ ಚರ್ಚಿಸಿ ಕಾವೇರಿ ವಿವಾದ ಬಗೆಹರಿಸಲು ಯತ್ನಿಸಬೇಕು.
ಉಮಾಶ್ರೀ, ನಟಿ

ದಾಳಿಕೋರರು ಪ್ರತಿಭಟನೆ ಮಾಡಿದರೆ ಹಿಂಸೆ ಆಗುತ್ತದೆ. ನಾವು ಮಾಡುವ ಪ್ರತಿಭಟನೆ ಶಾಂತಿ ಮತ್ತು ಸಂಯಮದಿಂದ ಕೂಡಿರಬೇಕು. ಸಂಸತ್ತಿನಲ್ಲಿ ಮಾತ್ರ ಈ ಸಮಸ್ಯೆಗೆ ಪರಿಹಾರ ಸಾಧ್ಯ.
ಹಂಸಲೇಖ, ಸಂಗೀತ ನಿರ್ದೇಶಕ

ನೀರು ಬಿಡಿ ಎಂದು ತಮಿಳುನಾಡಿನವರು ಪ್ರತಿಭಟನೆ ಮಾಡಬೇಕು. ದುರಂತವೆಂದರೆ, ನೀರು ಬಿಡಬೇಡಿ ಎಂದು ನಾವು ಪ್ರತಿಭಟಿಸುತ್ತಿದ್ದೇವೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು
ಉಪೇಂದ್ರ, ನಟ

ಸಿದ್ಧಾರ್ಥ್ ಕ್ಷಮೆ ಯಾಚಿಸಿದ ಶಿವಣ್ಣ

ತಮಿಳು ನಟ ಸಿದ್ಧಾರ್ಥ್ ಸುದ್ದಿಗೋಷ್ಠಿಗೆ ಕನ್ನಡ ಪರ ಸಂಘಟನೆಗಳು ಗುರುವಾರ ಅಡ್ಡಿಪಡಿಸಿರುವುದನ್ನು ನಟ ಶಿವರಾಜ್‌ಕುಮಾರ್ ಖಂಡಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಈ ರೀತಿ ಮಾಡುವುದು ಸರಿಯಲ್ಲ. ಬಸ್ ತಡೆದರೆ, ನಟರನ್ನು ತಡೆದರೆ ಸಮಸ್ಯೆ ಪರಿಹಾರವಾಗುತ್ತದೆಯೇ? ಅವರೊಬ್ಬ ಕಲಾವಿದರಾಗಿ ಚಿತ್ರದ ಪ್ರಚಾರ ಕಾರ್ಯದಲ್ಲಿದ್ದರು. ಅವರನ್ನು ಅವಮಾನಿಸಿದ್ದಕ್ಕಾಗಿ ನಮ್ಮ ಚಿತ್ರರಂಗದ ಪರವಾಗಿ ಸಿದ್ಧಾರ್ಥ್‌ಗೆ ನಾನು ಕ್ಷಮೆ ಕೇಳುತ್ತೇನೆ. ಇನ್ನುಮುಂದೆ ಈ ರೀತಿ ಆಗುವುದಿಲ್ಲ' ಎಂದರು.

ಕಾವೇರಿ ಕಣಿವೆಯಲ್ಲಷ್ಟೇ ಬಂದ್

ಒಂದನೇ ಪುಟದಿಂದ

ಚಿಕ್ಕಮಗಳೂರು ಪೂರ್ಣ ಬಂದ್: ಮಲೆನಾಡು ಜಿಲ್ಲೆಗಳ ಪೈಕಿ ಚಿಕ್ಕಮಗಳೂರಿನಲ್ಲಿ ಬಂದ್ ಕರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಹಾಗೂ ಜಿಲ್ಲೆಯ ಪ್ರಮುಖ ನಗರ, ಪಟ್ಟಣಗಳಲ್ಲಿ ಸಂಪೂರ್ಣ ಬಂದ್ ಆಚರಣೆಯಾಯಿತು. ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಂಪೂರ್ಣ ಬಂದ್ ನಡೆದಿಯಲಿಲ್ಲ. ಪ್ರತಿಭಟನೆ, ಮೆರವಣಿಗೆ ನಡೆಸುವ ಮೂಲಕ ಜನ ಕಾವೇರಿ ಪರ ಹೋರಾಟವನ್ನುಬೆಂಬಲಿಸಿದರು.ದಾವಣಗೆರೆಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ಬಂದ್ ಕರೆಗೆ ಸ್ಪಂದಿಸಲಾಯಿತು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಂದ್ ಕರೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಲ್ಲಿ ವ್ಯಾಪಾರ ವಹಿವಾಟು, ವಾಹನ ಸಂಚಾರ ಎಂದಿನಂತೆಯೇ ಇತ್ತು. ಯಾವುದೇ ಪ್ರತಿಭಟನೆಗಳೂ ನಡೆಯಲಿಲ್ಲ.

ಕಾವೇರಿ ನದಿ ವಿಚಾರದಲ್ಲಿ ನಮ್ಮ ಹೋರಾಟ ನಿರಂತರ. ಇದೇ ಅ. 5ರಂದು ಬೆಂಗಳೂರಿನಿಂದ ಕೆ.ಆರ್.ಎಸ್.ವರೆಗೂ ಬೈಕ್ ರ್‍ಯಾಲಿ ನಡೆಸಿ ಮುತ್ತಿಗೆ ಹಾಕಲಾಗುವುದು
ವಾಟಾಳ್ ನಾಗರಾಜ್, ಕನ್ನಡ ಸಂಘಟನೆಗಳ ಒಕ್ಕೂಟ ಅಧ್ಯಕ್ಷ

ಬಂದ್ ಶಾಂತಿಯುತವಾಗಿ ನಡೆದಿದ್ದು, ಇದಕ್ಕೆ ಸಹಕರಿಸಿದ ಸಾರ್ವಜನಿಕರು, ಸಂಘ ಸಂಸ್ಥೆಗಳು, ಅಹಿತಕರ ಘಟನೆ ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡಿದ ಅಧಿಕಾರಿಗಳಿಗೆ ಧನ್ಯವಾದಗಳು
ಸಿದ್ದರಾಮಯ್ಯ, ಮುಖ್ಯಮಂತ್ರಿ

'ಇಂದೇ ಮರು ಪರಿಶೀಲನಾ ಅರ್ಜಿ ಸಲ್ಲಿಕೆ'

ಒಂದನೇ ಪುಟದಿಂದ

ಸಲಹಾ ಸಮಿತಿ ರಚನೆ: ನೀರಾವರಿ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಮಾಹಿತಿ, ಅಂಕಿಅಂಶ ಸಂಗ್ರಹಿಸಿ, ರಾಜ್ಯ ಸರ್ಕಾರಕ್ಕೆ ಸಲಹೆ ನೀಡಲು ಪರಿಣಿತರ ಸಲಹಾ ಸಮಿತಿ ರಚಿಸಬೇಕೆಂಬ ಸಲಹೆ ಸಭೆಯಲ್ಲಿ ವ್ಯಕ್ತವಾಗಿದೆ. ಸಮಿತಿ ರಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಅವಕಾಶ ನೀಡುವಂತೆ ಒತ್ತಾಯವನ್ನು ತೀವ್ರಗೊಳಿಸುವಂತೆ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಮಾಜಿ ಅಡ್ವೊಕೇಟ್ ಜನರಲ್‌ಗಳು ಸಲಹೆ ನೀಡಿದ್ದಾರೆ. ಅದೇ ರೀತಿ ಮೇಕೆದಾಟು ಯೋಜನೆಗೆ ಅನುಮತಿ ನೀಡುವಂತೆ ಹೆಚ್ಚಿನ ಒತ್ತಾಯ ಮಾಡಲಾಗುವುದು ಎಂದರು.

ಅಗತ್ಯ ಕಂಡುಬಂದಲ್ಲಿ ವಿಧಾನಮಂಡಲದ ವಿಶೇಷ ಅಧಿವೇಶನ ಕರೆಯಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ಎಂ.ಎನ್. ವೆಂಕಟಚಾಲಯ್ಯ, ವಿ. ಗೋಪಾಲಗೌಡ, ಶಿವರಾಜ್ ಪಾಟೀಲ, ಆರ್.ವಿ. ರವೀಂದ್ರನ್, ಪಿ. ವಿಶ್ವನಾಥ್ ಶೆಟ್ಟಿ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಎನ್.ವೇಣುಗೋಪಾಲ ಗೌಡ, ಮಾಜಿ ಅಡ್ವೊಕೇಟ್ ಜನರಲ್‌ಗಳಾದ ಬಿ.ವಿ. ಆಚಾರ್ಯ, ರವಿವರ್ಮ ಕುಮಾರ್, ಉದಯ್ ಹೊಳ್ಳ, ಮಧುಸೂದನ್ ನಾಯಕ್, ವಿಜಯಶಂಕರ್, ಪ್ರಭುಲಿಂಗ ನಾವದಗಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ.ಪರಮೇಶ್ವರ, ಎಚ್.ಕೆ.ಪಾಟೀಲ, ಎನ್. ಚಲುವರಾಯಸ್ವಾಮಿ, ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರ ಎ.ಎಸ್. ಪೊನ್ನಣ್ಣ ಸಭೆಯಲ್ಲಿದ್ದರು.

'ನೀರು ಬಿಡದಿದ್ದರೆ ಜಲಾಶಯ ವಶಕ್ಕೆ'

'ತಮಿಳುನಾಡಿಗೆ ಕಾವೇರಿ ನೀರು ಹರಿಸಬಾರದು ಎಂಬುದು ರಾಜ್ಯ ಸರ್ಕಾರದ ನಿಲುವು. ಆದರೆ, ಆದೇಶ ಪಾಲಿಸದಿದ್ದರೆ ಜಲಾಶಯಗಳನ್ನು ಕೇಂದ್ರ ಸರ್ಕಾರ ತನ್ನ ವಶಕ್ಕೆ ಪಡೆಯುವ ಸಾಧ್ಯತೆಯಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಜಲ ಸಂರಕ್ಷಣಾ ಸಮಿತಿ ನಿಯೋಗದ ಜತೆಗೆ ಶುಕ್ರವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು. 'ಉದ್ದೇಶಪೂರ್ವಕವಾಗಿ ನೀರು ಬಿಡದಿದ್ದರೆ ನ್ಯಾಯಾಂಗ ನಿಂದನೆ ಆಗಲಿದೆ. ಸರ್ಕಾರವನ್ನು ವಜಾಗೊಳಿಸುವ ಪರಿಸ್ಥಿತಿಯೂ ಬರಬಹುದು' ಎಂದೂ ಅವರು ಹೇಳಿದರು.

'ಕೆಟ್ಟ ಮೇಲೆ ಬುದ್ಧಿ ಬರುತ್ತಿದೆ'

ಬೆಂಗಳೂರು: 'ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಕೆಟ್ಟ ಮೇಲೆ ಬುದ್ಧಿ ಬರುತ್ತಿದೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆಮಾತನಾಡಿದ ಅವರು, 'ಕಾನೂನು ತಜ್ಞರು, ರೈತ ಮುಖಂಡರನ್ನು ಕರೆದು ಮಾತುಕತೆ ನಡೆಸುವ ಕೆಲಸವನ್ನು ಸರ್ಕಾರ ಈಗ ಆರಂಭಿಸಿದೆ. ಈ ಕೆಲಸವನ್ನು ಮೊದಲೇ ಮಾಡಬೇಕಿತ್ತು. ಮುಂದಾದರೂ ಪ್ರಾಮಾಣಿಕವಾಗಿ ಕಾನೂನು ಹೋರಾಟ ನಡೆಸಿ, ರಾಜ್ಯದ ವಿರುದ್ಧ ತೀರ್ಮಾನಗಳು ಬರದಂತೆ ತಡೆಯಲಿ' ಎಂದರು.

ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಮಧ್ಯೆ ಹೊಂದಾಣಿಕೆ ಇಲ್ಲ. ಗೃಹ ಸಚಿವರು ಮತ್ತು ಅಧಿಕಾರಿಗಳ ಮಧ್ಯೆಯೂ ಹೊಂದಾಣಿಕೆ ಇಲ್ಲ ಎನ್ನುವುದು ಸಾಬೀತಾಗಿದೆ ಎಂದು ಹೇಳಿದರು.

ಪರಿಹಾರ ವಿತರಣೆಗೆ ಆಗ್ರಹ: ರಾಜ್ಯದಲ್ಲಿ ಬರ ಪರಿಸ್ಥಿತಿ ಇದೆ. ರಾಜ್ಯ ಸರ್ಕಾರ ತಕ್ಷಣವೇ ರೈತರ ನೆರವಿಗೆ ಬರಬೇಕು. ಕೇಂದ್ರ ಸರ್ಕಾರದ ಕಡೆ ಬೆರಳು ತೋರಿಸದೇ ರೈತರಿಗೆ ಪರಿಹಾರ ವಿತರಿಸಬೇಕು ಎಂದು ಆಗ್ರಹಿಸಿದರು.

ಕಪ್ಪುಬಟ್ಟೆ ಧರಿಸಿ ಬಂದ ವಾಟಾಳ್

ಬಂದ್‌ಗೆ ಕರೆ ನೀಡಿದ್ದ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಅವರು ಮೈ ತುಂಬಾ ಕಪ್ಪುಬಣ್ಣದ ಬಟ್ಟೆ ಧರಿಸಿ ಬಂದು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಖಾಲಿ ಕೊಡವೊಂದನ್ನು ತಲೆಯ ಮೇಲೆ ಇರಿಸಿಕೊಂಡು ಪ್ರತಿಭಟನಾ ಮೆರವಣಿಗೆ ನಡೆಸಲು ಮುಂದಾದ ಅವರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು.

ಲೋಕಸಭೆ, ವಿಧಾನಸಭೆ: ಸೂತ್ರವೊಂದನ್ನು ಸಿದ್ಧಪಡಿಸುತ್ತಿರುವ ಕೇಂದ್ರ ಕಾನೂನು ಆಯೋಗ

2029ರಿಂದ ಏಕಕಾಲಕ್ಕೆ ಚುನಾವಣೆ?

ನವದೆಹಲಿ (ಪಿಟಿಐ): 2029ರ ನಂತರದಲ್ಲಿ ಎಲ್ಲ ವಿಧಾನಸಭಾ ಚುನಾವಣೆಗಳನ್ನು ಲೋಕಸಭಾ ಚುನಾವಣೆಯ ಜೊತೆಯಲ್ಲೇ ನಡೆಸುವಂತೆ ಮಾಡಲು ಕೇಂದ್ರ ಕಾನೂನು ಆಯೋಗವು ಸೂತ್ರವೊಂದನ್ನು ಸಿದ್ಧಪಡಿಸುತ್ತಿದೆ ಎಂದು ಮೂಲಗಳು ಹೇಳಿವೆ. ವಿಧಾನಸಭೆಗಳ ಅವಧಿಯನ್ನು ವಿಸ್ತರಿಸುವುದು ಅಥವಾ ತಗ್ಗಿಸುವುದು ಈ ಸೂತ್ರದ ಒಂದು ಭಾಗ.

ಲೋಕಸಭೆ, ರಾಜ್ಯಗಳ ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಬಗ್ಗೆ ಪರಿಶೀಲನೆ ನಡೆಸಲು ಕೇಂದ್ರವು ಉನ್ನತ ಮಟ್ಟದ ಸಮಿತಿಯೊಂದನ್ನು ಈಗಾಗಲೇ ರಚಿಸಿದೆ. ಈಗ ಕೇಂದ್ರವು, ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆಗಳ ಜೊತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನೂ ಏಕಕಾಲಕ್ಕೆ ನಡೆಸುವ ಬಗ್ಗೆ ಪರಿಶೀಲಿಸುವಂತೆ ಕಾನೂನು ಆಯೋಗವನ್ನು ಕೋರುವ ಸಾಧ್ಯತೆ ಇದೆ.

ಲೋಕಸಭೆ, ವಿಧಾನಸಭೆಗಳು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಮತದಾರರ ಒಂದೇ ಪಟ್ಟಿ ಇರುವಂತೆ ಮಾಡಲು ಆಯೋಗವು ಸೂತ್ರವೊಂದನ್ನು ರೂಪಿಸುತ್ತಿದೆ. ಬೇರೆ ಬೇರೆ ಚುನಾವಣೆಗಳಿಗೆ ಪ್ರತ್ಯೇಕವಾಗಿ ಮತದಾರರ ಪಟ್ಟಿ ಸಿದ್ಧಪಡಿಸಲು ಆಗುವ ವೆಚ್ಚವನ್ನು ತಗ್ಗಿಸಲು ಹಾಗೂ ಮಾನವ ಸಂಪನ್ಮೂಲದ ಬಳಕೆಯನ್ನು ಕಡಿಮೆ ಮಾಡಲು ಇದು ನೆರವಾಗುತ್ತದೆ.

ಏಕ ಕಾಲದಲ್ಲಿ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಕಾನೂನು ಆಯೋಗವು ವರದಿಯನ್ನು ಇನ್ನೂ ಅಂತಿಮಗೊಳಿಸಿಲ್ಲ ಎಂದು ಮೂಲಗಳು ಹೇಳಿವೆ.

ಲೋಕಸಭಾ ಚುನಾವಣೆಯ ಜೊತೆಯಲ್ಲಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭಾ ಚುನಾವಣೆಗಳನ್ನು ಕೂಡ ನಡೆಸುವಂತೆ ಆಗಲು ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ಕಾನೂನು ಆಯೋಗವು, ವಿಧಾನಸಭೆಗಳ ಅವಧಿಯನ್ನು ವಿಸ್ತರಿಸುವ ಅಥವಾ ಕಡಿಮೆ ಮಾಡುವ ಸಲಹೆಯನ್ನು ನೀಡುವ ಸಾಧ್ಯತೆ ಇದೆ.

ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಚುನಾವಣೆಯನ್ನು ಹಂತ ಹಂತವಾಗಿ ನಡೆಸುವ ಪದ್ಧತಿಯು ಜಾರಿಯಲ್ಲಿ ಇರುವ ಕಾರಣ, ಮತದಾರರು ತಮ್ಮ ಕ್ಷೇತ್ರದಲ್ಲಿ ಈ ಎರಡು ಚುನಾವಣೆಗಳ ಸಂದರ್ಭದಲ್ಲಿ ಮತ ಚಲಾಯಿಸಲು ಮತಗಟ್ಟೆಗೆ ಎರಡೆರಡು ಬಾರಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಂತೆ ನೋಡಿಕೊಳ್ಳಲು ಕಾನೂನು ಆಯೋಗವು ಆಲೋಚನೆ ನಡೆಸಲಿದೆ.

ಮೊದಲ ಹಂತದಲ್ಲಿ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳನ್ನು ನಡೆಸುವ, ಎರಡನೆಯ ಹಂತದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುವ ಸಲಹೆಯನ್ನು ಕಾನೂನು ಆಯೋಗವು ನೀಡಬಹುದು ಎನ್ನಲಾಗಿದೆ.

ಸಮ್ಮತಿಯ ಲೈಂಗಿಕ ಕ್ರಿಯೆ: ವಯೋಮಿತಿ ತಗ್ಗಿಸಲು ಆಯೋಗ ಅಸಮ್ಮತಿ

ನವದೆಹಲಿ (ಪಿಟಿಐ): ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯು 'ಸಮ್ಮತಿಯ ಲೈಂಗಿಕ ಕ್ರಿಯೆಗೆ ನಿಗದಿ ಮಾಡಿರುವ ವಯಸ್ಸನ್ನು' ತಗ್ಗಿಸುವ ಕೆಲಸ ಮಾಡಬಾರದು ಎಂದು ಕೇಂದ್ರ ಕಾನೂನು ಆಯೋಗವು ಸಲಹೆ ನೀಡಿದೆ.

ಆದರೆ, 16 ವರ್ಷ ಮೇಲ್ಪಟ್ಟ ಹಾಗೂ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಲೈಂಗಿಕ ಸಂಪರ್ಕಕ್ಕೆ 'ಪರೋಕ್ಷವಾಗಿ ಸಮ್ಮತಿಸಿದ್ದ' ಪ್ರಕರಣಗಳಲ್ಲಿ ಶಿಕ್ಷೆ ವಿಧಿಸುವಾಗ, ನ್ಯಾಯಾಂಗವು ಮಾರ್ಗಸೂಚಿ ಆಧರಿಸಿದ ವಿವೇಚನಾ ಅಧಿಕಾರ ಬಳಸುವ ವ್ಯವಸ್ಥೆ ಬೇಕು ಎಂದು ಅದು ಹೇಳಿದೆ.

18 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು ಮಾತ್ರ 'ಲೈಂಗಿಕ ಕ್ರಿಯೆ'ಗೆ ಸಮ್ಮತಿ ನೀಡುವ ಸಾಮರ್ಥ್ಯ ಹೊಂದಿರುತ್ತಾರೆ ಎಂದು ಪೋಕ್ಸೊ ಕಾಯ್ದೆಯು ವ್ಯಾಖ್ಯಾನಿಸಿದೆ.

16 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ, 18 ವರ್ಷದೊಳಗಿನ ಮಕ್ಕಳು ಲೈಂಗಿಕ ಕ್ರಿಯೆಗೆ 'ಪರೋಕ್ಷವಾಗಿ ಸಮ್ಮತಿಸಿದ್ದ' ಪ್ರಕರಣಗಳನ್ನು ನಿಭಾಯಿಸಲು ಕಾನೂನಿಗೆ ತಿದ್ದುಪಡಿ ತರಬೇಕಾದ ಅಗತ್ಯವಿದೆ ಎಂದು ಆಯೋಗವು ಕೇಂದ್ರ ಕಾನೂನು ಸಚಿವಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಹೇಳಿದೆ. 'ಪರೋಕ್ಷ ಸಮ್ಮತಿ'ಯನ್ನು ಕಾನೂನಿನ ಅಡಿಯಲ್ಲಿ 'ಸಮ್ಮತಿ' ಎಂದು ಭಾವಿಸಬಾರದು ಎಂದು ವರದಿಯು ಹೇಳಿದೆ. ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಋತುರಾಜ್ ಅವಸ್ಥಿ ನೇತೃತ್ವದಲ್ಲಿ ಆಯೋಗವು ವರದಿ ಸಿದ್ಧಪಡಿಸಿದೆ.


ಸಮ್ಮತಿಯ ವಯಸ್ಸನ್ನು ತಗ್ಗಿಸುವುದರಿಂದ ಬಾಲ್ಯ ವಿವಾಹ ಮತ್ತು ಮಕ್ಕಳ ಕಳ್ಳಸಾಗಣೆಯನ್ನು ತಡೆಯುವ ಪ್ರಯತ್ನಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ವರದಿ ಎಚ್ಚರಿಸಿದೆ. ಹದಿಹರೆಯದವರ ಪ್ರೀತಿಯನ್ನು ಹತ್ತಿಕ್ಕುವುದು ಕಷ್ಟ, ಲೈಂಗಿಕ ಕ್ರಿಯೆಯ ಹಿಂದೆ ಕ್ರಿಮಿನಲ್ ಉದ್ದೇಶ ಇರಲಿಲ್ಲ ಎಂಬಂತಹ ಪ್ರಕರಣಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು ಎಂದು ಆಯೋಗವು ನ್ಯಾಯಾಲಯಗಳಿಗೆ ಸಲಹೆ ನೀಡಿದೆ.

ಲೈಂಗಿಕ ಸಂಪರ್ಕಕ್ಕೆ 16ರಿಂದ 18 ವರ್ಷದೊಳಗಿನ ಮಕ್ಕಳು ಪರೋಕ್ಷವಾಗಿ ಸಮ್ಮತಿಸಿದ್ದ ಪ್ರಕರಣಗಳನ್ನು, ಪೋಕ್ಸೊ ಅಡಿಯಲ್ಲಿ ನಿರ್ವಹಿಸುವ ಇತರ ಪ್ರಕರಣಗಳಷ್ಟೇ ಕಠಿಣವಾಗಿ ನಿರ್ವಹಿಸಬೇಕಾಗಿಲ್ಲ. ಇಂತಹ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲು ಮಾರ್ಗಸೂಚಿ ಆಧರಿಸಿದ ವಿವೇಚನಾ ಅಧಿಕಾರವನ್ನು ನ್ಯಾಯಾಂಗ ಬಳಸುವಂತಹ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಆಯೋಗ ಹೇಳಿದೆ.

'ಹೀಗೆ ಮಾಡುವುದರಿಂದ ಕಾನೂನು ಸಮತೋಲನದಿಂದ ಕೂಡಿದ್ದಾಗುತ್ತದೆ. ಮಕ್ಕಳ ಹಿತಾಸಕ್ತಿಯನ್ನು ಸರಿಯಾಗಿ ಕಾಯುತ್ತದೆ' ಎಂದು ವರದಿ ಹೇಳಿದೆ.

'ಮಕ್ಕಳ ನಡುವೆ ಹಾಗೂ ಮಕ್ಕಳೊಂದಿಗಿನ ಲೈಂಗಿಕ ಚಟುವಟಿಕೆಗಳನ್ನು ಸಾರಾಸಗಟಾಗಿ ಕ್ರಿಮಿನಲ್ ಅಪರಾಧವೆಂದು ಪರಿಗಣಿಸಿದಾಗ, ಅದು ಮಕ್ಕಳನ್ನು ರಕ್ಷಿಸುವ ಉದ್ದೇಶ ಹೊಂದಿದ್ದರೂ, ಲೈಂಗಿಕ ಕುತೂಹಲದ ಕಾರಣದಿಂದಾಗಿ ಇಂತಹ ಚಟುವಟಿಕೆಗಳಲ್ಲಿ ತೊಡಗಬಹುದಾದ ಹುಡುಗರು ಹಾಗೂ ಹುಡುಗಿಯರ ಬಂಧನಕ್ಕೆ ಅದು ದಾರಿ ಮಾಡಿಕೊಡುತ್ತಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಶಾಂತಕುಮಾರ್ ಪಿಟಿಐ ಅಧ್ಯಕ್ಷ


ಕೆ.ಎನ್. ಶಾಂತಕುಮಾರ್

ನವದೆಹಲಿ (ಪಿಟಿಐ): 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಪ್ರಕಾಶನ ಸಂಸ್ಥೆಯಾಗಿರುವ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಕಂಪನಿಯ ನಿರ್ದೇಶಕ ಕೆ.ಎನ್. ಶಾಂತಕುಮಾರ್ ಅವರು ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ) ಸುದ್ದಿಸಂಸ್ಥೆಯ ನಿರ್ದೇಶಕರ ಮಂಡಳಿಯ ಅಧ್ಯಕ್ಷರಾಗಿ ಒಂದು ವರ್ಷದ ಅವಧಿಗೆ ಶುಕ್ರವಾರ ಆಯ್ಕೆ ಆಗಿದ್ದಾರೆ.

ಸುದ್ದಿಸಂಸ್ಥೆಯ ವಾರ್ಷಿಕ ಮಹಾಸಭೆಯ ನಂತರ ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಶಾಂತಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಹಿಂದುಸ್ಥಾನ್ ಟೈಮ್ಸ್‌ನ ಸಿಇಒ ಪ್ರವೀಣ್ ಸೋಮೇಶ್ವರ್ ಅವರು ಪಿಟಿಐ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶಾಂತಕುಮಾರ್ ಅವರಿಗೂ ಮೊದಲು ಅವೀಕ್ ಸರ್ಕಾರ್ ಅವರು ಸತತ ಎರಡು ಅವಧಿಗಳಿಗೆ ಪಿಟಿಐ ಅಧ್ಯಕ್ಷರಾಗಿದ್ದರು.

'ಪಿಟಿಐ ಸಂಸ್ಥೆಯ ಪಾಲಿಗೆ ಇದು ಪರ್ವಕಾಲ. ಅದರಲ್ಲೂ ಮುಖ್ಯವಾಗಿ ವಿಡಿಯೊ ಸೇವೆಗಳನ್ನು ಈಚೆಗೆ ಆರಂಭಿಸಿದ ನಂತರದಲ್ಲಿ ಅದು ಪರಿವರ್ತನೆಯ ಹಾದಿಯಲ್ಲಿದೆ. ಈ ಹೊತ್ತಿನಲ್ಲಿ ಪಿಟಿಐ ಅಧ್ಯಕ್ಷನಾಗಿರುವುದು ನನ್ನ ಸುಯೋಗ' ಎಂದು ಶಾಂತಕುಮಾರ್ ಅವರು ಹೇಳಿದ್ದಾರೆ.

ಪಿಟಿಐ ನಿರ್ದೇಶಕ ಮಂಡಳಿಯ ಇತರ ಸದಸ್ಯರು: ವಿಜಯ್ ಕುಮಾರ್ ಚೋಪ್ರಾ (ಪಂಜಾಬ್ ಕೇಸರಿ), ವಿನೀತ್ ಜೈನ್ (ಟೈಮ್ಸ್ ಆಫ್ ಇಂಡಿಯಾ), ಎನ್. ರವಿ (ದಿ ಹಿಂದೂ), ವಿವೇಕ್ ಗೋಯಂಕಾ (ಎಕ್ಸ್‌ಪ್ರೆಸ್ ಸಮೂಹ), ಮಹೇಂದ್ರ ಮೋಹನ್ ಗುಪ್ತ (ದೈನಿಕ್ ಜಾಗರಣ್), ರಿಯಾದ್ ಮ್ಯಾಥ್ಯೂ (ಮಲಯಾಳ ಮನೋರಮ), ಎಂ.ವಿ. ಶ್ರೇಯಾಂಸ್ ಕುಮಾರ್ (ಮಾತೃಭೂಮಿ).

ಎಲ್. ಆದಿಮೂಲಂ (ದಿನಮಲಾರ್), ಹೊರ್ಮುಸ್ಜಿ ಎನ್. ಕಾಮಾ (ಬಾಂಬೆ ಸಮಾಚಾರ್), ಹಿರಿಯ ಅರ್ಥಶಾಸ್ತ್ರಜ್ಞ ಪ್ರೊ. ದೀಪಕ್ ನಯ್ಯರ್, ಮಾಜಿ ವಿದೇಶಾಂಗ ಕಾರ್ಯದರ್ಶಿ ಶಿವಶಂಕರ್ ಮೆನನ್, ಹಿರಿಯ ಪತ್ರಕರ್ತ ಟಿ.ಎನ್. ನೈನನ್ ಮತ್ತು ಟಾಟಾ ಸನ್ಸ್‌ನ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಆರ್. ಗೋಪಾಲಕೃಷ್ಣನ್.

ಸಿಬಿಎಫ್‌ಸಿ ವಿರುದ್ಧ ತಮಿಳು ನಟ ವಿಶಾಲ್ ಆರೋಪ

ಪ್ರಮಾಣಪತ್ರಕ್ಕಾಗಿ ಲಂಚ

ನವದೆಹಲಿ (ಪಿಟಿಐ): 'ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ (ಸಿಬಿಎಫ್‌ಸಿ) ಮುಂಬೈ ಕಚೇರಿಯಲ್ಲಿ ತಮ್ಮ ನಟನೆಯ 'ಮಾರ್ಕ್ ಆಂಟನಿ' ಚಿತ್ರದ ಹಿಂದಿ ಅವತರಣಿಕೆಯ ಪ್ರದರ್ಶನ, ಪ್ರಮಾಣಪತ್ರಕ್ಕಾಗಿ ₹ 6.5 ಲಕ್ಷ ಲಂಚ ನೀಡಬೇಕಾಯಿತು' ಎಂದು ತಮಿಳು ನಟ ವಿಶಾಲ್ ಆರೋಪಿಸಿದ್ದಾರೆ.

'ಎಕ್ಸ್' ಜಾಲತಾಣದಲ್ಲಿ ಅವರು ಸಂದೇಶವನ್ನು ಪೋಸ್ಟ್ ಮಾಡಿದ್ದು, 'ಚಿತ್ರದ ಪ್ರದರ್ಶನಕ್ಕೆ ₹ 3 ಲಕ್ಷ, ನಂತರ ಪ್ರಮಾಣಪತ್ರ ಪಡೆಯಲು ₹ 3.5 ಲಕ್ಷ ನೀಡಿದೆವು. ಒಂದೇ ದಿನದಲ್ಲಿ ಪ್ರಮಾಣಪತ್ರ ಪಡೆಯಲು ಲಂಚ ನೀಡಬೇಕು ಎಂದು ಸೂಚಿಸಿದರು. ನಮಗೆ ಬೇರೆ ಆಯ್ಕೆಯೇ ಇರಲಿಲ್ಲ' ಎಂದು ವಿಶಾಲ್ ತಿಳಿಸಿದ್ದಾರೆ.

ಈ ಆರೋಪ ಕುರಿತಂತೆ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ ತನಿಖೆಗೆ ಆದೇಶಿಸಿದೆ. 'ನಟ ವಿಶಾಲ್ ಉಲ್ಲೇಖಿಸಿರುವ ಲಂಚ ಪ್ರಕರಣ ದುರದೃಷ್ಟಕರ. ಭ್ರಷ್ಟಾಚಾರವನ್ನು ಸರ್ಕಾರ ಸಹಿಸುವುದಿಲ್ಲ. ಇದರಲ್ಲಿ ಭಾಗಿ ಆಗಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಸಚಿವಾಲಯವು ಟ್ವೀಟ್ ಮಾಡಿದೆ.


'ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರನ್ನು ತನಿಖೆಗಾಗಿ ಮುಂಬೈಗೆ ಕಳುಹಿಸಲಿದ್ದು, ತ್ವರಿತಗತಿಯ ತನಿಖೆಗೆ ಸೂಚಿಸಲಾಗುವುದು. ಸಿಬಿಎಫ್‌ಸಿ ಸಿಬ್ಬಂದಿಯಿಂದ ಕಿರುಕುಳವಾಗಿರುವ ಇಂತಹ ಇತರೆ ಪ್ರಕರಣಗಳಿದ್ದರೆ ಸಾರ್ವಜನಿಕರು ಮಾಹಿತಿ ನೀಡಬೇಕು' ಎಂದೂ ತಿಳಿಸಿದೆ.

ಸಚಿವರ ಸೂಚನೆ: ಲಂಚ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು, ಮಂಡಳಿಯ ಆಡಳಿತದಲ್ಲಿ ಪಾರದರ್ಶಕತೆ ತರಲು ಮತ್ತು ಉತ್ತರದಾಯಿತ್ವವನ್ನು ನಿಗದಿಪಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ.

'ಆಡಳಿತದಲ್ಲಿ ಪಾರದರ್ಶಕತೆಯನ್ನು ತರಲು ಗರಿಷ್ಠ ಪ್ರಮಾಣದಲ್ಲಿ ತಂತ್ರಜ್ಞಾನವನ್ನು ಬಳಸಬೇಕು. ಚಿತ್ರ ಪ್ರದರ್ಶಿಸಲು ಸಮಯ ನಿಗದಿಗೆ ಆದಾಯ ತೆರಿಗೆ ಇಲಾಖೆಯ ಮಾದರಿಯಲ್ಲಿ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಸಚಿವಾಲಯದ ಕಾರ್ಯದರ್ಶಿ ಅಪೂರ್ವ ಚಂದ್ರ ಅವರಿಗೆ ಸೂಚಿಸಿದ್ದಾರೆ' ಎಂದು ತಿಳಿಸಿವೆ.

ಮುಖ್ಯಾಂಶಗಳು

- ಚಿತ್ರಪ್ರದರ್ಶನ, ಪ್ರಮಾಣ ಪತ್ರಕ್ಕೆ ₹ 6.5 ಲಕ್ಷ – ನಟ ವಿಶಾಲ್
- ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ –ಕೇಂದ್ರ
- ಆಡಳಿತದಲ್ಲಿ ಪಾರದರ್ಶಕ ವ್ಯವಸ್ಥೆ ರೂಪಿಸಿ – ಕೇಂದ್ರ ಸಚಿವರ ಸೂಚನೆ



ಪೂರ್ವಜರಿಗೆ ತರ್ಪಣ

ಪಿತೃಪಕ್ಷ ಆರಂಭಗೊಂಡ ಹಿನ್ನೆಲೆಯಲ್ಲಿ ಭೋಪಾಲ್‌ನಲ್ಲಿ ಹಿಂದೂಗಳು ತಮ್ಮ ಪೂರ್ವಜರಿಗೆ ಶುಕ್ರವಾರ ತರ್ಪಣ ಅರ್ಪಿಸಿದರು –ಪಿಟಿಐ ಚಿತ್ರ

ಕರ್ಫ್ಯೂ ಸಡಿಲ: ಶಾಂತಿ ಕಾಪಾಡಲು ಮನವಿ

ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್ ಕಣಿವೆಯಲ್ಲಿ ಶುಕ್ರವಾರ ಯಾವುದೇ ಹಿಂಸಾಚಾರ ವರದಿಯಾಗಿಲ್ಲ. ಅಗತ್ಯ ವಸ್ತುಗಳು ಮತ್ತು ಔಷಧಿಗಳನ್ನು ಖರೀದಿಸಲು ಜನರಿಗೆ ಅನುಕೂಲವಾಗುವಂತೆ ಅಧಿಕಾರಿಗಳು ಇಂಫಾಲ್ ಪೂರ್ವ ಮತ್ತು ಪಶ್ಚಿಮ ಜಿಲ್ಲೆಗಳಲ್ಲಿ ಬೆಳಿಗ್ಗೆ 5ರಿಂದ 11 ಗಂಟೆಯವರೆಗೆ ಕರ್ಫ್ಯೂ ಸಡಿಲಿಸಿದರು.

ಹಿಂಸಾಚಾರ ವರದಿಯಾಗದ ಕಾರಣ ಸರ್ಕಾರ ಈ ಎರಡು ಜಿಲ್ಲೆಗಳಲ್ಲಿ ಶನಿವಾರ ಬೆಳಿಗ್ಗೆ 5ರಿಂದ ಮಧ್ಯಾಹ್ನ 2ರವರೆಗೆ ಕರ್ಫ್ಯೂ ಸಡಿಲಿಸಿದೆ. ಪ್ರತ್ಯೇಕ ಆದೇಶದಲ್ಲಿ ಬಿಷ್ಣುಪುರ ಜಿಲ್ಲಾಡಳಿತ ತನ್ನ ವ್ಯಾಪ್ತಿಯಲ್ಲಿ ಶನಿವಾರ ಬೆಳಿಗ್ಗೆ 5ರಿಂದ ಸಂಜೆ 5ರವರೆಗೆ ಕರ್ಫ್ಯೂ ಸಡಿಲಿಕೆ ಮಾಡಿದೆ.

ಇಂಫಾಲ್ ಪೂರ್ವದ ಚೆಕಾನ್ ಎಂಬಲ್ಲಿ ಗುರುವಾರ ತಡರಾತ್ರಿ ಗುಂಪೊಂದು ಮನೆಯೊಂದಕ್ಕೆ ಬೆಂಕಿ ಹಚ್ಚಿದ್ದು, ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ರಾಜಧಾನಿಯ ವಿವಿಧ ಸ್ಥಳಗಳಲ್ಲಿ ಭದ್ರತಾ ಪಡೆಗಳು ಮತ್ತು ಪ್ರತಿಭಟನಾಕಾರರ ನಡುವೆ ಗುರುವಾರ ರಾತ್ರಿ ನಡೆದ ಘರ್ಷಣೆಯಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಚರ್ಚಿಸಲು ಸಿಎಪಿಎಫ್‌ನ ಹಿರಿಯ ಅಧಿಕಾರಿಗಳ ಸಭೆ ನಡೆಸಲಾಗಿದೆ. ಶಾಂತಿ ಕಾಪಾಡಲು ಮತ್ತು ಪರಿಸ್ಥಿತಿ ಸಹಜ ಸ್ಥಿತಿಗೆ ತರಲು ಸಹಕರಿಸುವಂತೆ ವಿದ್ಯಾರ್ಥಿಗಳಿಗೆ ಪೊಲೀಸರು ಮನವಿ ಮಾಡಿದ್ದಾರೆ. ಪರಿಸ್ಥಿತಿಯ ಲಾಭ ಪಡೆಯುವ ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರ ಪೂರ್ವಜರ ನಿವಾಸದ ಮೇಲೆ ಗುರುವಾರ ರಾತ್ರಿ ಗುಂಪೊಂದು ದಾಳಿ ನಡೆಸಲು ಯತ್ನಿಸಿದ ಪರಿಣಾಮ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ಹಲವೆಡೆ ಕರ್ಫ್ಯೂ ಜಾರಿಗೊಳಿಸಲಾಗಿತ್ತು.

ಪ್ರಧಾನಿ ಮಧ್ಯಪ್ರವೇಶಿಸಲಿ: ಸಂಸತ್ತಿನಲ್ಲಿ ಭರವಸೆ ನೀಡಿದ ಹೊರತಾಗಿಯೂ ಸಂಘರ್ಷ ಪೀಡಿತ ಮಣಿಪುರದಲ್ಲಿ ಶಾಂತಿ ನೆಲೆಸಿಲ್ಲ. ಈ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ತಕ್ಷಣ ಮಧ್ಯಪ್ರವೇಶಿಸಬೇಕು ಎಂದು ಎನ್‌ಸಿಪಿ (ಶರದ್ ಪವಾರ್ ಬಣ) ಶುಕ್ರವಾರ ಒತ್ತಾಯಿಸಿದೆ.

'ರಾಜ್ಯದಲ್ಲಿ ಹಿಂಸಾಚಾರವನ್ನು ತಡೆಯುವಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಮತ್ತು ಕೇಂದ್ರ ಸರ್ಕಾರ ವಿಫಲವಾಗಿವೆ' ಎಂದು ಪಕ್ಷದ ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರಾಸ್ಟೊ ಹೇಳಿದ್ದಾರೆ.

'ಮಣಿಪುರದ ಪರಿಸ್ಥಿತಿ ಸುಧಾರಿಸಲು ಕೇಂದ್ರ ಸರ್ಕಾರ ಏನು ಮಾಡುತ್ತಿದೆ? ಮಣಿಪುರ ವಿಚಾರವಾಗಿ ಚರ್ಚೆ ನಡೆಸಲು ಸದನದಲ್ಲಿ ಅವಕಾಶ ನೀಡಲಿಲ್ಲ' ಎಂದು ಶಿವಸೇನಾ ನಾಯಕ ಸಂಜಯ್ ರಾವುತ್ ಆರೋಪಿಸಿದ್ದಾರೆ.



ಇಂಫಾಲ್ ಪೂರ್ವ ಜಿಲ್ಲೆಯಲ್ಲಿರುವ ಎನ್‌.ಬಿರೇನ್ ಸಿಂಗ್ ಅವರ ಪೂರ್ವಜರ ನಿವಾಸದ ಮೇಲೆ ಗುಂಪೊಂದು ದಾಳಿ ನಡೆಸಲು ಯತ್ನಿಸಿದ ಹಿನ್ನೆಲೆಯಲ್ಲಿ ಆರ್‌ಎಎಫ್ ಮತ್ತು ಸಿಆರ್‌ಪಿಎಫ್ ಭದ್ರತೆ ಒದಗಿಸಲಾಗಿದೆ –ಪಿಟಿಐ ಚಿತ್ರ

ದಾಳಿ ವರದಿ ಸುಳ್ಳು: ಸ್ಪಷ್ಟನೆ

ಗುವಾಹಟಿ (ರಾಯಿಟರ್ಸ್): 'ಮಣಿಪುರದ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರ ಖಾಸಗಿ ನಿವಾಸದ ಮೇಲೆ ಗುಂಪೊಂದು ದಾಳಿ ನಡೆಸಿದೆ ಎಂಬ ವರದಿ ಸುಳ್ಳು' ಎಂದು ಪೊಲೀಸರು ತಿಳಿಸಿದ್ದಾರೆ.

ಮಾಧ್ಯಮಗಳಲ್ಲಿ ಪ್ರಕಟವಾದ ವರದಿ ಹಿನ್ನೆಲೆಯಲ್ಲಿ ಸ್ಪಷ್ಟನೆ ನೀಡಿರುವ ರಾಜ್ಯ ಪೊಲೀಸರು, 'ಮುಖ್ಯಮಂತ್ರಿ ಅವರ ವೈಯಕ್ತಿಕ ನಿವಾಸದ ಮೇಲೆ ದಾಳಿ ನಡೆದಿದೆ ಎಂಬ ಸುದ್ದಿ ಸುಳ್ಳು ಮತ್ತು ದಾರಿತಪ್ಪಿಸುವಂತಿದೆ. ಈಗಾಗಲೇ ಸಾಕಷ್ಟು ಭದ್ರತೆ ಒದಗಿಸಲಾಗಿದೆ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ .

'ಮೊಬೈಲ್ ಇಂಟರ್‌ನೆಟ್ ಲಭ್ಯವಿಲ್ಲದ ಕಾರಣ, ಜೀವನವು ನರಕವಾಗುತ್ತಿದೆ' ಎಂದು ಇಂಫಾಲ್‌ನ ಕಾಲೇಜು ವಿದ್ಯಾರ್ಥಿಗಳು ಹೇಳಿದ್ದಾರೆ.

ಮೈತೇಯಿ ಸಮುದಾಯಕ್ಕೆ ಸೇರಿದ ಇಬ್ಬರು ವಿದ್ಯಾರ್ಥಿಗಳ ಹತ್ಯೆ ಖಂಡಿಸಿ ಮಣಿಪುರ ರಾಜಧಾನಿ ಇಂಫಾಲ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ರ‍್ಯಾಲಿ ಹಿಂಸಾಚಾರಕ್ಕೆ ತಿರುಗಿತ್ತು.

'ರ‍್ಯಾಂಕ್ ಪಡೆದವರ ವೈಭವೀಕರಣ ಬೇಡ'

ಜೈಪುರ(ಪಿಟಿಐ): ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ತರಬೇತಿ ಪಡೆಯಲು ಬರುವ ವಿದ್ಯಾರ್ಥಿಗಳ ಪೈಕಿ ಅಗ್ರ ಸ್ಥಾನ ಪಡೆದವರನ್ನು ವೈಭವೀಕರಿಸಬಾರದು ಎಂಬುದು ಸೇರಿದಂತೆ ಹಲವು ಮಾರ್ಗಸೂಚಿಗಳನ್ನು ರಾಜಸ್ಥಾನ ಸರ್ಕಾರ ಬಿಡುಗಡೆ ಮಾಡಿದೆ.

9 ಪುಟಗಳಷ್ಟು ಇರುವ ಮಾರ್ಗಸೂಚಿಗಳನ್ನು ರಾಜ್ಯದಲ್ಲಿರುವ ಎಲ್ಲ ತರಬೇತಿ ಕೇಂದ್ರಗಳಿಗೆ ನೀಡಲಾಗಿದೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ತರಬೇತಿ ನೀಡುವ ಕೇಂದ್ರಗಳಿಗೆ ಪ್ರಸಿದ್ಧವಾಗಿರುವ ಕೋಟಾದಲ್ಲಿ ಬಹಳಷ್ಟು ಸಂಖ್ಯೆಯ ವಿದ್ಯಾರ್ಥಿಗಳು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಕುರಿತು, ಪರಿಶೀಲನೆ ನಡೆಸಲು ನೇಮಿಸಿದ್ದ ಶಿಕ್ಷಣ ಕಾರ್ಯದರ್ಶಿ ಭವಾನಿ ಸಿಂಗ್ ದೇಥಾ ನೇತೃತ್ವದ ಸಮಿತಿಯು ಸಲ್ಲಿಸಿರುವ ವರದಿ ಆಧಾರದಲ್ಲಿ ಈ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದೆ.

ತರಬೇತಿ ಅವಧಿಯಲ್ಲಿ ನಡೆಸಲಾಗುವ ಕಿರುಪರೀಕ್ಷೆಗಳ ಅಂಕಗಳನ್ನು ಗೌಪ್ಯವಾಗಿ ಇಡ ಬೇಕು, ವಿದ್ಯಾರ್ಥಿಗಳ ರ‍್ಯಾಂಕ್ ಆಧಾರದಲ್ಲಿ ವಿಶೇಷ ಬ್ಯಾಚ್‌ಗಳನ್ನು ಮಾಡಬಾರದು, ತರಬೇತಿಯಿಂದ ನಿರ್ಗಮಿಸುವುದಕ್ಕೆ ಹಾಗೂ 120 ದಿನಗಳ ಒಳಗಾಗಿ ಶುಲ್ಕ ಮರುಪಾವತಿಗೆ ಅವಕಾಶ ಇರುವಂತೆ ನೀತಿ ರೂಪಿಸಬೇಕು ಎಂಬುದು ಸೇರಿದಂತೆ ಹಲವಾರು ಅಂಶಗಳು ಮಾರ್ಗಸೂಚಿಯಲ್ಲಿವೆ.

ಮಾನನಷ್ಟ ಮೊಕದ್ದಮೆ: ಮೇನಕಾಗೆ ನೋಟಿಸ್

ಕೋಲ್ಕತ್ತ (ಪಿಟಿಐ): ಇಸ್ಕಾನ್ ಸಂಸ್ಥೆಯು ಬಿಜೆಪಿ ಸಂಸದೆ ಮೇನಕಾ ಗಾಂಧಿ ಅವರ ಮೇಲೆ ₹ 100 ಕೋಟಿ ಮೊತ್ತದ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿ ನೋಟಿಸ್ ಕಳುಹಿಸಿದೆ. ಇಸ್ಕಾನ್‌ನ ಗೋಶಾಲೆಗಳಲ್ಲಿ ಹಸುಗಳ ಪೋಷಣೆ, ನಿರ್ವಹಣೆ ಕ್ರಮ ಕುರಿತು ಮೇನಕಾ ಗಾಂಧಿ ಇತ್ತೀಚೆಗೆ ಹೇಳಿಕೆ ನೀಡಿದ್ದರು.

ಇಸ್ಕಾನ್ ವಿರುದ್ಧದ ಆರೋಪಕ್ಕಾಗಿ ಮೇನಕಾ ಗಾಂಧಿ ಅವರಿಗೆ ನೋಟಿಸ್ ಕಳುಹಿಸಲಾಗಿದೆ. ಸಂಸದೆಯ ಆರೋಪ ದುರುದ್ದೇಶದಿಂದ ಕೂಡಿದೆ. ಇದರಿಂದ ಇಸ್ಕಾನ್‌ನ ಭಕ್ತರು, ಬೆಂಬಲಿಗರು, ಹಿತೈಷಿಗಳಿಗೆ ನೋವಾಗಿದೆ ಎಂದು ಇಸ್ಕಾನ್‌ನ ಉಪಾಧ್ಯಕ್ಷ ರಾಧಾರಮಣ ದಾಸ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎನ್‌ಎಚ್‌ಎಐಗೆ ₹ 2 ಲಕ್ಷ ಕೋಟಿ ಆದಾಯ ಸಾಧ್ಯತೆ

ಮುಂಬೈ (ಪಿಟಿಐ): ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರವು (ಎನ್‌ಎಚ್‌ಎಐ) ಸರ್ಕಾರ–ಖಾಸಗಿ ಸಹಭಾಗಿತ್ವದ ಯೋಜನೆಗಳ (ಎಚ್‌ಎಎಂ ಸ್ವತ್ತುಗಳು) ನಗದೀಕರಣದಿಂದ 2024 ರಿಂದ 2027ರ ವರೆಗಿನ ಹಣಕಾಸು ವರ್ಷಗಳ ಅವಧಿಯಲ್ಲಿ ₹ 2 ಲಕ್ಷ ಕೋಟಿಯಷ್ಟು ಆದಾಯ ಹೊಂದಬಹುದಾಗಿದೆ ಎಂದು ವರದಿಯೊಂದು ಹೇಳಿದೆ.

ಪ್ರಾಧಿಕಾರವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಪೈಕಿ ಎಚ್‌ಎಎಂ ಸ್ವತ್ತುಗಳು (ಹೈಬ್ರೀಡ್ ಆ್ಯನ್ಯುಟಿ ಮಾಡೆಲ್) ಹಾಗೂ 'ಇಪಿಸಿ' (ಎಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಅಂಡ್ ಕನ್‌ಸ್ಟ್ರಕ್ಷನ್) ಯೋಜನೆಗಳಿಂದ ನಗದೀಕರಣ ಸಾಧ್ಯವಾಗಲಿದೆ ಎಂದು ಕೇರ್ ಎಡ್ಜ್ ಸಂಸ್ಥೆ ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಲಾಗಿದೆ.

'ಮಧ್ಯಮಾವಧಿಯಲ್ಲಿ ₹ 1.75 ಲಕ್ಷ ಕೋಟಿಯಿಂದ ₹ 2 ಲಕ್ಷ ಕೋಟಿಯಷ್ಟು ನಗದೀಕರಣ ಸಾಧ್ಯ' ಎಂದು ವರದಿಯಲ್ಲಿ ಹೇಳಲಾಗಿದೆ.

2016ರಿಂದ 2023ರ ವರೆಗೆ 62 ಕಂಪನಿಗಳಿಗೆ ಒಟ್ಟು 306 ಎಚ್‌ಎಎಂ ಯೋಜನೆಗಳ ಗುತ್ತಿಗೆ ನೀಡಲಾಗಿದೆ. ಈ ಯೋಜನೆಗಳ ಆಧಾರದ ಮೇಲೆ ಕೇರ್ ಎಡ್ಜ್ ಸಂಸ್ಥೆಯು ಈ ವಿಶ್ಲೇಷಣೆ ಮಾಡಿದೆ.

ಈ ಯೋಜನೆಗಳಡಿ, ₹ 3.35 ಲಕ್ಷ ಕೋಟಿ ವೆಚ್ಚದಲ್ಲಿ ಒಟ್ಟು 12,700 ಕಿ.ಮೀ. ಉದ್ದದ ರಸ್ತೆಯನ್ನು ನಿರ್ಮಿಸಲಾಗುತ್ತದೆ. ಒಟ್ಟು ಋಣಭಾರ 90 ಸಾವಿರ ಕೋಟಿ ಆಗಲಿದೆ.

ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿರುವ ಭಾರತ: ಕೆನಡಾ ಪ್ರಧಾನಿ

'ಭಾರತ ಜತೆ ಬಾಂಧವ್ಯ ಗಟ್ಟಿಗೊಳಿಸಲು ಬದ್ಧ'

ಟೊರಂಟೊ (ಪಿಟಿಐ): ಭಾರತವು ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿರುವ ದೇಶವಾಗಿದ್ದು, ಆ ದೇಶದ ಜೊತೆ ಉತ್ತಮ ಬಾಂಧವ್ಯ ಹೊಂದುವುದನ್ನು ಕೆನಡಾ ಗಂಭೀರವಾಗಿ ಪರಿಗಣಿಸಿದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಹೇಳಿದ್ದಾರೆ.

ಹರದೀಪ್ ಸಿಂಗ್ ನಿಜ್ಜರ್ ಹತ್ಯೆಗೆ ಸಂಬಂಧಿಸಿದ ಸತ್ಯಾಂಶಗಳು ಹೊರಬರುವವರೆಗೂ ಕೆನಡಾಕ್ಕೆ ಭಾರತ ಸಹಕಾರ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ ಎಂದು ಅಲ್ಲಿಯ ನ್ಯಾಷನಲ್ ಪೋಸ್ಟ್ ಪತ್ರಿಕೆ ವರದಿ ಮಾಡಿದೆ.

ಖಾಲಿಸ್ತಾನ ಪರ ಹೋರಾಟಗಾದ ನಿಜ್ಜರ್ ಹತ್ಯೆಯ ನಂತರ ಭಾರತ–ಕೆನಡಾ ಸಂಬಂಧದಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಕುರಿತು ಟ್ರೂಡೊ ಅವರು ಮಾಂಟ್ರಿಯಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಜಾಗತಿಕವಾಗಿ ಭಾರತದ ಮಹತ್ವ ಹೆಚ್ಚುತ್ತಿದೆ. ಹಾಗಾಗಿ ಆ ದೇಶದ ಜೊತೆ ರಚನಾತ್ಮಕವಾಗಿ ತೊಡಗಿಕೊಳ್ಳುವುದು ಕೆನಡಾಕ್ಕೆ ಮುಖ್ಯವಾಗಿದೆ. ಕಳೆದ ವರ್ಷವಷ್ಟೇ ಕೆನಡಾವು ಹಿಂದೂ ಮಹಾಸಾಗರ– ಪೆಸಿಫಿಕ್ ಕಾರ್ಯತಂತ್ರದ ಭಾಗವಾಗಿದೆ. ಹೀಗಾಗಿ ಭಾರತದ ಜೊತೆ ಉತ್ತಮ ಬಾಂಧವ್ಯ ಸ್ಥಾಪಿಸುವುದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ' ಎಂದಿದ್ದಾರೆ.

'ನಿಜ್ಜರ್ ಹತ್ಯೆಯಲ್ಲಿ ಭಾರತ ಏಜೆಂಟರ ಕೈವಾಡವಿದೆ ಎಂದು ಗುಪ್ತಚರ ಸಂಸ್ಥೆಗಳು ಮಾಡಿರುವ ಆರೋಪಗಳನ್ನು ಪರಿಶೀಲಿಸಲು ಭಾರತದ ಸಹಕಾರ ಎಷ್ಟು ಮುಖ್ಯವಾಗುತ್ತದೆ ಎಂಬುದನ್ನು ಆ ದೇಶಕ್ಕೆ ಮನಗಾಣಿಸುವ ವಿಚಾರದಲ್ಲಿ ಅಮೆರಿಕವು ಕೆನಡಾದ ಜೊತೆ ಇದೆ' ಎಂದಿದ್ದಾರೆ.

'ನಮ್ಮ ಎಲ್ಲಾ ಸಹಭಾಗಿ ದೇಶಗಳೊಡನೆ ನಾವು ಕಾನೂನಿಗೆ ಬದ್ಧವಾಗಿ ಜವಾಬ್ದಾರಿಯುತವಾಗಿ ಹೆಜ್ಜೆ ಇಡುತ್ತಿದ್ದೇವೆ. ಭಾರತದ ಜೊತೆಯೂ ನಾವು ಅದೇ ರೀತಿ ನಡೆದುಕೊಳ್ಳುತ್ತಿದ್ದೇವೆ' ಎಂದು ಟ್ರೂಡೊ ಹೇಳಿದ್ದಾರೆ.

ಬೆದರಿಕೆ– ಖಂಡನೆ (ವಾಷಿಂಗ್ಟನ್ ವರದಿ): ಕೆನಡಾದಲ್ಲಿ ಹಿಂದೂ ಸಮುದಾಯದವರ ವಿರುದ್ಧ ನೀಡಲಾಗುತ್ತಿರುವ ದ್ವೇಷಪೂರಿತ ಹೇಳಿಕೆಗಳು ಮತ್ತು ಅವರ ಸುತ್ತ ಹಗೆತನದ ವಾತಾವರಣ ನಿರ್ಮಾಣವಾಗಿರುವುದನ್ನು ಅಮೆರಿಕದಲ್ಲಿನ ಭಾರತೀಯ ಸಮುದಾಯದ ಪ್ರಮುಖರು ಖಂಡಿಸಿದ್ದಾರೆ.

ಹಿಂದೂ ಸಮುದಾಯದ ವಿರುದ್ಧ ನಡೆಯುತ್ತಿರುವ ವಿದ್ಯಮಾನಗಳ ಕುರಿತು ಮೌನ ಕಾಯ್ದುಕೊಳ್ಳುವ ಮೂಲಕ ಅಪರಾಧಗಳನ್ನು ಉತ್ತೇಜಿಸದಂತೆ ಅವರು ಕೆನಡಾಕ್ಕೆ ಆಗ್ರಹಿಸಿದ್ದಾರೆ.

ಗುಜರಾತ್: ಖಾಲಿಸ್ತಾನಿ ಉಗ್ರ ಪನ್ನೂ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಅಹಮದಾಬಾದ್: ಘೋಷಿತ ಖಾಲಿಸ್ತಾನಿ ಉಗ್ರ ಹಾಗೂ ನಿಷೇಧಿತ ಸಂಘಟನೆ ಸಿಖ್ಸ್ ಫಾರ್ ಜಸ್ಟೀಸ್‌ನ (ಎಸ್‌ಜೆಎಫ್) ಗುರುಪತ್ವಂತ್ ಸಿಂಗ್ ಪನ್ನೂ ವಿರುದ್ಧ ಅಹಮದಾಬಾದ್‌ನ ಸೈಬರ್ ಕ್ರೈಂ ಪೊಲೀಸರು ಶುಕ್ರವಾರ ಎಫ್‌ಐಆರ್ ದಾಖಲಿಸಿದ್ದಾರೆ.

'ಏಕದಿನ ವಿಶ್ವ ಕಪ್ ಕ್ರಿಕೆಟ್ ಅಂಗವಾಗಿ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯವನ್ನು 'ವಿಶ್ವ ಟೆರರ್ ಕಪ್' ಆಗಿ ಮಾಡುವುದಾಗಿ ಪೊಲೀಸರು, ವಕೀಲರು ಹಾಗೂ ಪತ್ರಕರ್ತರು ಸೇರಿದಂತೆ ಕನಿಷ್ಠ 60 ಜನರಿಗೆ ಧ್ವನಿಮುದ್ರಿತ ಕರೆಗಳನ್ನು ಮಾಡಿದ್ದ' ಆರೋಪದಡಿ ಪನ್ನೂ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

'ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 26 ಮತ್ತು 27ರ ನಡುವೆ ಗುಜರಾತ್ ಪ್ರವಾಸದಲ್ಲಿದ್ದ ವೇಳೆ ಪನ್ನೂ ಈ ಧ್ವನಿಮುದ್ರಿತ ಕರೆಗಳನ್ನು ಮಾಡಿದ್ದ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸೈಬರ್ ಸೆಲ್‌ನ ಸಬ್ ಇನ್‌ಸ್ಪೆಕ್ಟರ್ ಎಚ್.ಎನ್. ಪ್ರಜಾಪತಿ ಅವರು ನೀಡಿರುವ ದೂರಿನ ಅನ್ವಯ ಈ ಎಫ್‌ಐಆರ್ ದಾಖಲಿಸಲಾಗಿದೆ.

ಐಪಿಸಿ ಸೆಕ್ಷನ್ 121 (ಭಾರತದ ವಿರುದ್ಧ ಯುದ್ಧ ಸಾರುವುದು), 153ಎ (ವಿವಿಧ ಗುಂಪುಗಳ ನಡುವೆ ವೈರತ್ವ ಬೆಳೆಸುವುದು), 120ಬಿ (ಕ್ರಿಮಿನಲ್ ಪಿತೂರಿ), ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ವಿವಿಧ ಸೆಕ್ಷನ್‌ಗಳು ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದೆ.

'ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಅಕ್ಟೋಬರ್ 5ರಂದು ಏಕದಿನ ವಿಶ್ವ ಕಪ್ ಕ್ರಿಕೆಟ್ ಆರಂಭದ ಬದಲಾಗಿ 'ವರ್ಲ್ಡ್ ಟೆರರ್ ಕಪ್'ನ ಆರಂಭವಾಗಲಿದೆ. ಅಹಮದಾಬಾದ್‌ನಲ್ಲಿ ಎಸ್‌ಜೆಎಫ್ ಖಾಲಿಸ್ತಾನ ಬಾವುಟವನ್ನು ಹಾರಿಸಲಿದೆ. ನಿಜ್ಜರ್ ಹತ್ಯೆಗೆ ಸೇಡು ತೀರಿಸಿಕೊಳ್ಳುತ್ತೇವೆ' ಎಂದು ಧ್ವನಿಮುದ್ರಿತ ಕರೆಯಲ್ಲಿ ಹೇಳಲಾಗಿತ್ತು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗದೆ.

'ನಿಮ್ಮ ಮತಪತ್ರಗಳ ವಿರುದ್ಧ ನಾವು ಗುಂಡುಗಳನ್ನು ಬಳಸುತ್ತೇವೆ. ನಿಮ್ಮ ಹಿಂಸೆಯ ವಿರುದ್ಧ ನಾವು ಮತಗಳನ್ನು ಬಳಸುತ್ತೇವೆ. ಇದು ಗುರುಪತ್ವಂತ್ ಸಿಂಗ್ ಪನ್ನೂನಿಂದ ಬಂದ ಸಂದೇಶ' ಎಂಬುದಾಗಿ ಕರೆಯಲ್ಲಿ ಹೇಳಲಾಗಿದೆ ಎಂದೂ ಎಫ್‌ಐಆರ್‌ನಲ್ಲಿದೆ.

'447418343648 ಸಂಖ್ಯೆಯಿಂದ ಬಂದಿದ್ದ ಈ ಧ್ವನಿಮುದ್ರಿತ ಬೆದರಿಕೆ ಕರೆಯನ್ನು ದೇಶದಾದ್ಯಂತ ಅನೇಕ ಜನರು ಸ್ವೀಕರಿಸಿದ್ದಾರೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಗುಜರಾತ್‌ನ ಹಲವು ಪತ್ರಕರ್ತರಿಗೆ ಕೆಲ ತಿಂಗಳ ಹಿಂದೆ ಇದೇ ರೀತಿಯ ಕರೆಗಳನ್ನು ಮಾಡಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

'ನಿಜ್ಜರ್ ಕೊಲೆಗಾರರನ್ನು ಶಿಕ್ಷಿಸಿ'

ನವದೆಹಲಿ (ರಾಯಿಟರ್ಸ್): ನಿಜ್ಜರ್‌ನನ್ನು ಹತ್ಯೆಯ ಆರೋಪಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿ ನೂರಾರು ಸಿಖ್ ಕಾರ್ಯಕರ್ತರು ಪಂಜಾಬ್‌ನ ಅಮೃತಸರದ ಸ್ವರ್ಣ ಮಂದಿರದ ಎದುರು ಶುಕ್ರವಾರ ಪ್ರತಿಭಟನೆ ಹಮ್ಮಿಕೊಂಡಿದ್ದರು.

ಪಂಜಾಬ್‌ಅನ್ನು ಸ್ವತಂತ್ರ್ಯ ದೇಶವನ್ನಾಗಿಸಲು ಹೋರಾಡುತ್ತಿರುವವರ ವಿರುದ್ಧ ಸ್ವೇಚ್ಛಾಚಾರದ ಕಾರ್ಯಾಚರಣೆ ನಡೆಸುವುದನ್ನು ಭಾರತ ನಿಲ್ಲಿಸಬೇಕು ಎಂದು ಅವರು ಆಗ್ರಹಿಸಿದರು.

ಬ್ಲಿಂಕೆನ್ ಒತ್ತಾಯ: ನಿಜ್ಜರ್ ಹತ್ಯೆಯ ತನಿಖೆ ನಡೆಸುತ್ತಿರುವ ಕೆನಡಾಕ್ಕೆ ಭಾರತ ಸಹಕಾರ ನೀಡಬೇಕು ಎಂದು ಅಮೆರಿಕದ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅವರು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರನ್ನು ಗುರುವಾರ ಒತ್ತಾಯಿಸಿದ್ದಾರೆ ಎಂದು ಅಮೆರಿಕ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಐ.ಟಿ ನಿಯಮಕ್ಕೆ ತಿದ್ದುಪಡಿ: ಡಿ.1ಕ್ಕೆ ಆದೇಶ ಪ್ರಕಟ?

ಮುಂಬೈ (ಪಿಟಿಐ): ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಳ್ಳುವ ಸುಳ್ಳು ಸುದ್ದಿ ನಿಯಂತ್ರಿಸುವ ವಿಚಾರವಾಗಿ ಮಾಹಿತಿ ತಂತ್ರಜ್ಞಾನ (ಐ.ಟಿ) ನಿಯಮಗಳಿಗೆ ಈಚೆಗೆ ತಂದಿರುವ ತಿದ್ದುಪಡಿ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಬಾಂಬೆ ಹೈಕೋರ್ಟ್ ಶುಕ್ರವಾರ ಪೂರ್ಣಗೊಳಿಸಿದೆ.

ನ್ಯಾಯಮೂರ್ತಿಗಳಾದ ಗೌತಮ್ ಪಟೇಲ್ ಮತ್ತು ನೀಲಾ ಗೋಖಲೆ ಅವರಿದ್ದ ವಿಭಾಗೀಯ ಪೀಠವು ಡಿಸೆಂಬರ್ 1ರಂದು ಆದೇಶ ನೀಡಲು ಯತ್ನಿಸುವುದಾಗಿ ತಿಳಿಸಿದೆ. ಈ ಪ್ರಕರಣದಲ್ಲಿ ಆದೇಶ ನೀಡುವವರೆಗೆ, ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಮತ್ತು ತಪ್ಪುದಾರಿಗೆ ಎಳೆಯುವ ಪೋಸ್ಟ್‌ಗಳನ್ನು ಗುರುತಿಸಲು ಪ್ರತ್ಯೇಕ ಸತ್ಯಶೋಧನಾ ಘಟಕಕ್ಕೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸುವುದಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ತಿಳಿಸಿದರು.

ಮಹಿಳಾ ಮೀಸಲಾತಿ ಮಸೂದೆಗೆ ಅಂಕಿತ

ನವದೆಹಲಿ (ಪಿಟಿಐ): ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನ ಮೀಸಲಿಡಲು ಅವಕಾಶ ಕಲ್ಪಿಸುವ ಮಹಿಳಾ ಮೀಸಲಾತಿ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದಾರೆ.

ಕಾನೂನು ಸಚಿವಾಲಯ ಶುಕ್ರವಾರ ಈ ಸಂಬಂಧ ಅಧಿಸೂಚನೆ ಹೊರಡಿಸಿದೆ. ಈಗ ಇದು, ಅಧಿಕೃತವಾಗಿ ಸಂವಿಧಾನದ (106ನೇ ತಿದ್ದುಪಡಿ) ಕಾಯ್ದೆಯಾಗಿ ಗುರುತಿಸಲ್ಪಡಲಿದೆ.

ಚಿಕಿತ್ಸೆ ನಿರ್ಲಕ್ಷ್ಯ: ಬಾಲಕಿ ಸಾವು

ಮೈನಪುರಿ/ಲಖನೌ (ಪಿಟಿಐ): ಗಂಭೀರ ಸ್ಥಿತಿಯಲ್ಲಿದ್ದ 17 ವರ್ಷದ ಬಾಲಕಿಗೆ ಸಮರ್ಪಕ ಚಿಕಿತ್ಸೆ ನೀಡದೆ ಬಲವಂತವಾಗಿ ಹೊರಗೆ ದಬ್ಬಿದ್ದರಿಂದ ಆಸ್ಪತ್ರೆಯ ಹೊರಗೆ ಕುಸಿದು ಮೃತಪಟ್ಟಿರುವ ದಾರುಣ ಘಟನೆ ಉತ್ತರ ಪ್ರದೇಶದ ಮೈನಪುರಿಯಲ್ಲಿ ನಡೆದಿದೆ.

ಜ್ವರದಿಂದ ಬಳಲುತ್ತಿದ್ದ ಬಾಲಕಿಯನ್ನು ಮಂಗಳವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುರುವಾರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದರೂ ಚಿಕಿತ್ಸೆ ನೀಡಲು ಸಿಬ್ಬಂದಿ ನಿರಾಕರಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈನಪುರಿ ಜಿಲ್ಲೆಯ ಘಿರೋರ್ ಪಟ್ಟಣದ ರಾಧಾಸ್ವಾಮಿ ಆಸ್ಪತ್ರೆಯಲ್ಲಿ ಈ ಘಟನೆ ನಡೆದಿದೆ.

ರೈಲು ನಿಲುಗಡೆ: ಚಾಲಕರಿಗೆ ಸೂಚನೆ

ನವದೆಹಲಿ (ಪಿಟಿಐ): ಮಥುರಾ ನಿಲ್ದಾಣದಲ್ಲಿ ಚಾಲಕನ ಕರ್ತವ್ಯಲೋಪದಿಂದಾಗಿ ಎಮು ರೈಲು ಪ್ಲಾಟ್‌ಫಾರಂ ಏರಿದ ಘಟನೆ ಬಳಿಕ, ರೈಲ್ವೆ ಇಲಾಖೆಯ ಆಗ್ರಾ ವಿಭಾಗ, ಕಡೇ ನಿಲ್ದಾಣದಲ್ಲಿ ರೈಲು ನಿಲುಗಡೆ ವೇಳೆ ಪಾಲಿಸಬೇಕಾದ ಕ್ರಮ ಕುರಿತಂತೆ ಚಾಲಕರಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದೆ.

ಮೆಮು ಮತ್ತು ಎಮು ರೈಲುಗಳ ನಿಲ್ದಾಣ ಅಥವಾ ನಿಲುಗಡೆ ಮಾಡುವ ಕಡೆಯ ನಿಲ್ದಾಣಕ್ಕೆ ಬಂದಾಗ ಲೋಕೊ ಪೈಲಟ್‌ಗಳು ತಕ್ಷಣವೇ ಪವರ್ ಬ್ರೇಕ್ ಹಾಕಬೇಕು ಮತ್ತು ರಿವರ್ಸರ್ ಅನ್ನು ಶೂನ್ಯಕ್ಕೆ ನಿಲ್ಲಿಸಬೇಕು ಎಂಬುದು ಈ ಸೂಚನೆಗಳಲ್ಲಿ ಪ್ರಮುಖವಾದುದಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಕಾರಾತ್ಮಕ ಧೋರಣೆಯ ವ್ಯಕ್ತಿಗಳು ನಿಮ್ಮ ಶಕ್ತಿಗುಂದಿಸುತ್ತಾರೆ. ನಿಮ್ಮ ಸುತ್ತ ಪ್ರೀತಿ ಮತ್ತು ಆದರಣೆ ಇರುವಂತೆ ನೋಡಿಕೊಳ್ಳಿ.

-ದೀಪಕ್ ಚೋಪ್ರಾ

ಮಣಿಪುರದಲ್ಲಿ ನಿಲ್ಲದ ಹಿಂಸೆ ನಿಭಾಯಿಸುವಲ್ಲಿ ಸೋತ ಸರ್ಕಾರ

ಮಣಿಪುರದಲ್ಲಿ ಇಂಟರ್‌ನೆಟ್ ಸೇವೆಗಳ ಮೇಲೆ ಮತ್ತೆ ನಿಷೇಧ ಹೇರಲಾಗಿದೆ. ಇಂಟರ್‌ನೆಟ್ ಸೇವೆ ಪುನರಾರಂಭಗೊಂಡ 48 ತಾಸುಗಳ ಒಳಗೆ ಮತ್ತೆ ನಿಷೇಧ ಹೇರಿರುವುದು ರಾಜ್ಯವು ಎದುರಿಸುತ್ತಿರುವ ಪರಿಸ್ಥಿತಿ ಎಷ್ಟು ಸಂಕೀರ್ಣವಾಗಿದೆ ಎಂಬುದನ್ನು ತೋರುತ್ತದೆ. ಜೊತೆಗೆ, ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರದ ವೈಫಲ್ಯದತ್ತಲೂ ಬೊಟ್ಟು ಮಾಡುತ್ತದೆ. ಕುಕಿ ಸಮುದಾಯದ ಜನರು ನಡೆಸಿದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿದ ಬಳಿಕ ಮೇ 3ರಂದು ಇಂಟರ್‌ನೆಟ್ ಸೇವೆಯ ಮೇಲೆ ಸರ್ಕಾರವು ನಿಷೇಧ ಹೇರಿತ್ತು. ನಂತರದ ಕೆಲವು ತಿಂಗಳು ಹಿಂಸಾಚಾರ ನಿಲ್ಲದ ಕಾರಣ ಇಂಟರ್‌ನೆಟ್ ನಿಷೇಧವು ಮುಂದುವರಿದಿತ್ತು. ಕಾಶ್ಮೀರದಲ್ಲಿ ಇಂಟರ್‌ನೆಟ್ ಮೇಲೆ ಎರಡು ವರ್ಷ ನಿರಂತರ ನಿಷೇಧ ಹೇರಲಾಗಿತ್ತು; ಅದಾದ ನಂತರ ಮಣಿಪುರದಲ್ಲಿನ ನಿಷೇಧವೇ ಅತೀ ದೀರ್ಘಕಾಲದ ನಿಷೇಧವಾಗಿದೆ. 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ಸುಧಾರಿಸಿದ ಕಾರಣ' ಇಂಟರ್‌ನೆಟ್ ಸೇವೆಯ ಮೇಲಿನ ನಿಷೇಧ ತೆರವುಗೊಳಿಸಲು ನಿರ್ಧರಿಸಲಾಗಿದೆ ಎಂದು ಈ ತಿಂಗಳ 23ರಂದು ಮಣಿಪುರ ಸರ್ಕಾರ ಹೇಳಿತ್ತು. ರಾಜ್ಯದಲ್ಲಿನ ಪರಿಸ್ಥಿತಿ ಮತ್ತು ನಿಷೇಧದ ಪರಿಣಾಮಗಳ ಕುರಿತು ಸರ್ಕಾರಕ್ಕೆ ಸರಿಯಾದ ಗ್ರಹಿಕೆಯೇ ಇರಲಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಇಂಟರ್‌ನೆಟ್ ಮೇಲಿನ ನಿಷೇಧವು ಪರಿಸ್ಥಿತಿಯನ್ನು ಉತ್ತಮಪಡಿಸುವುದರ ಬದಲಿಗೆ ಇನ್ನಷ್ಟು ಹದಗೆಡಿಸಿದೆ ಎಂಬುದು ವಾಸ್ತವ. ಮಾಹಿತಿಯ ಮುಕ್ತ ಹರಿವಿಗೆ ತಡೆ ಒಡ್ಡಿದರೆ, ವದಂತಿಗಳು ಮತ್ತು ತಪ್ಪು ಮಾಹಿತಿ ಹರಿದಾಡುತ್ತವೆ ಹಾಗೂ ಇವು ಶಾಂತಿ ಹದಗೆಡಲು ಕಾರಣವಾಗುತ್ತವೆ. ಆಧಾರವಿಲ್ಲದ ವದಂತಿಗೆ ಪ್ರತಿಕ್ರಿಯೆಯಾಗಿಯೇ ಕುಕಿ ಸಮುದಾಯದ ಇಬ್ಬರು ಮಹಿಳೆಯರನ್ನು ಬೆತ್ತಲಾಗಿಸಿ ಮೆರವಣಿಗೆ ನಡೆಸಿ, ಅವರ ಮೇಲೆ ದೌರ್ಜನ್ಯ ಎಸಗಲಾಯಿತು. ಈ ಘಟನೆಯು ಕೆಲವು ವಾರ ಹೊರಜಗತ್ತಿಗೆ ತಿಳಿಯಲೇ ಇಲ್ಲ.




ಮಾಹಿತಿಯ ಮುಕ್ತ ಹರಿವಿಗೆ ತಡೆ ಒಡ್ಡಿದರೆ, ವದಂತಿಗಳು ಹರಿದಾಡುತ್ತವೆ ಹಾಗೂ ಇವು ಶಾಂತಿ ಹದಗೆಡಲು ಕಾರಣವಾಗುತ್ತವೆ

ಹಿಂಸೆ ಮತ್ತು ಶಾಂತಿಭಂಗದ ಕೃತ್ಯಗಳು ರಾಜ್ಯದಲ್ಲಿ ನಡೆಯುತ್ತಲೇ ಇವೆ. ಇಬ್ಬರು ಯುವಕರ ಮೃತ-ದೇಹಗಳದ್ದು ಎಂದು ಹೇಳಲಾದ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಿಗೇ ವಿದ್ಯಾರ್ಥಿಗಳು ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಈ ಪ್ರತಿಭಟನೆಯು ಹಿಂಸೆಗೆ ತಿರುಗಿದೆ. ಅದರ ಪರಿಣಾಮವಾಗಿ ಇಂಟರ್‌ನೆಟ್ ಮೇಲೆ ಪುನಃ ನಿಷೇಧ ಹೇರಲಾಗಿದೆ. ಮೈತೇಯಿ ಮತ್ತು ಕುಕಿ ಸಮುದಾಯದ ಜನರ ನಡುವಣ ಅಪನಂಬಿಕೆ ಗರಿಷ್ಠ ಮಟ್ಟ ಮುಟ್ಟಿದೆ ಮತ್ತು ಎರಡೂ ಸಮುದಾಯಗಳು ಪರಸ್ಪರ ಸಂವಹನ ಸಾಧ್ಯವೇ ಇಲ್ಲ ಎಂಬ ರೀತಿಯಲ್ಲಿ ದೂರವಾಗಿವೆ. ಈ ವಿಭಜನೆಯು ಎಷ್ಟೊಂದು ದಟ್ಟವಾಗಿದೆ ಎಂದರೆ, ಎರಡೂ ಸಮುದಾಯಗಳು ವಾಸಿಸುವ ಪ್ರದೇಶಗಳ ನಡುವೆ ಮೀಸಲು ಪ್ರದೇಶವನ್ನು ಸೃಷ್ಟಿಸಿ, ಅಲ್ಲಿ ಭದ್ರತಾ ಪಡೆಗಳ ಪಹರೆಯನ್ನೂ ಏರ್ಪಡಿಸಲಾಗಿದೆ. ಆದರೆ, ಈ ವ್ಯವಸ್ಥೆಯನ್ನು ಮೀರಿಯೂ ಹಿಂಸೆ ನಡೆದಿದೆ. ಕೆಲವು ಸಾಮಾಜಿಕ ಸಂಘಟನೆಗಳು ಪ್ರತ್ಯೇಕತಾವಾದಿ ಮತ್ತು ಭಯೋತ್ಪಾದಕ ಮನಃಸ್ಥಿತಿ ಬೆಳೆಸಿಕೊಂಡಿವೆ. ಮೈತೇಯಿ ಸಮುದಾಯದ ಮಹಿಳೆಯರ ಗುಂಪುಗಳು ಮತ್ತು ಸಂಘಟನೆಗಳು ಬೀದಿಗಿಳಿದು ಪ್ರತಿಭಟನೆ ನಡೆಸಿವೆ ಮತ್ತು ಹಿಂಸಾಕೃತ್ಯಗಳನ್ನೂ ಎಸಗಿವೆ. ಭದ್ರತಾ ಪಡೆಗಳು ಅದರಲ್ಲೂ ವಿಶೇಷವಾಗಿ ಅಸ್ಸಾಂ ರೈಫಲ್ಸ್ ಅನ್ನು ಮುಖಾಮುಖಿಯಾಗಿವೆ. ಹಿಂಸೆ ಮತ್ತು ಅಪರಾಧ ಕೃತ್ಯ ಎಸಗಿದ ಆರೋಪದಲ್ಲಿ ಬಂಧನಕ್ಕೆ ಒಳಗಾದ ವ್ಯಕ್ತಿಗಳನ್ನು ಬಿಡುಗಡೆ ಮಾಡಿಸುವುದಕ್ಕೆ ಈ ಗುಂಪುಗಳು ಬಲವಾದ ಪ್ರಯತ್ನ ನಡೆಸಿವೆ.

ಕೇಂದ್ರೀಯ ಪಡೆಗಳು ಮತ್ತು ರಾಜ್ಯ ಪೊಲೀಸ್ ಇಲಾಖೆಯ ನಡುವೆ ಬಿರುಕು ಮೂಡಿದೆ. ರಾಜ್ಯ ಪೊಲೀಸ್ ಇಲಾಖೆ ಮತ್ತು ಎನ್. ಬಿರೇನ್ ಸಿಂಗ್ ನೇತೃತ್ವದ ಸರ್ಕಾರವು ಮೈತೇಯಿ ಸಮುದಾಯದ ಜೊತೆಗೆ ಗುರುತಿಸಿಕೊಂಡಿವೆ. ಈ ಕಾರಣದಿಂದಾಗಿಯೇ ಕುಕಿ ಸಮುದಾಯದ ವಿಶ್ವಾಸವನ್ನು ಕಳೆದುಕೊಂಡಿವೆ. ತಮಗೆ ಪ್ರತ್ಯೇಕ ಆಡಳಿತಾತ್ಮಕ ವಲಯ ಬೇಕು ಎಂದು ಕುಕಿ ಸಮುದಾಯಗಳ ಜನರು ಆಗ್ರಹಿಸಿದ್ದಾರೆ. ಮೈತೇಯಿ ಸಮುದಾಯದ ಪರ ಪೂರ್ವಗ್ರಹ ಹೊಂದಿದೆ ಮತ್ತು ಕುಕಿ ಸಮುದಾಯದ ಭಾವನೆಗಳು ಹಾಗೂ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ ಎಂಬುದು ಗೊತ್ತಾಗುವ ರೀತಿಯ ವರ್ತನೆಯನ್ನು ಸರ್ಕಾರವು ತೋರಿದೆ. ರಾಜ್ಯ ಸರ್ಕಾರವನ್ನು ಬೆಂಬಲಿಸುವುದನ್ನು ಮುಂದುವರಿಸಿರುವ ಕೇಂದ್ರ ಸರ್ಕಾರವು ಸಕ್ರಿಯ ಮಧ್ಯಪ್ರವೇಶ ಮಾಡಿಲ್ಲ. ಕಿತ್ತಾಟದಲ್ಲಿ ತೊಡಗಿರುವ ಎರಡೂ ಸಮುದಾಯದ ನಡುವೆ ಸಂವಹನ ಸಾಧ್ಯವಾಗದೇ ಇದ್ದರೆ, ಬಿರುಕು ಮುಚ್ಚದಿದ್ದರೆ, ಗಾಯಗಳು ಉಪಶಮನ ಆಗದೇ ಇದ್ದರೆ ರಾಜ್ಯದಲ್ಲಿ ಶಾಂತಿ ಸ್ಥಾಪನೆಯ ಸಾಧ್ಯತೆ ಕ್ಷೀಣವೇ ಆಗಿರಲಿದೆ. ಆದರೆ, ಈ ದಿಸೆಯಲ್ಲಿ ಗಂಭೀರ ಪ್ರಯತ್ನ ನಡೆದಿಲ್ಲ. ಇದು ಸಾಧ್ಯವಾಗುವಂತೆ ಮಾಡುವ ರಾಜಕೀಯ ಮತ್ತು ನೈತಿಕ ವಿಶ್ವಾಸಾರ್ಹತೆಯನ್ನು ರಾಜ್ಯ ಸರ್ಕಾರವು ಉಳಿಸಿಕೊಂಡಿಲ್ಲ.

ದಿನದ ಟ್ವೀಟ್


ಶಿಫಾರಸು ಜಾರಿಗೆ ಬರಲಿ



ಡಾ. ಎಂ.ಎಸ್.ಸ್ವಾಮಿನಾಥನ್ ಅವರ ನಿಧನದಿಂದ ಭಾರತ ಹಾಗೂ ಜಾಗತಿಕ ರೈತ ಸಮುದಾಯವು ಒಬ್ಬ ಮಹಾನ್ ಕೃಷಿ ವಿಜ್ಞಾನಿಯನ್ನು ಕಳೆದುಕೊಂಡಿದೆ. ಸ್ವಾಮಿನಾಥನ್ ಸಮಿತಿ ವರದಿಯ ಶಿಫಾರಸುಗಳನ್ನು, ಅದರಲ್ಲೂ ವಿಶೇಷವಾಗಿ, ಕನಿಷ್ಠ ಬೆಂಬಲ ಬೆಲೆಯು ಸರಾಸರಿ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ ಶೇ 50ರಷ್ಟಾದರೂ ಹೆಚ್ಚಿಗೆ ಇರಬೇಕು ಎಂಬುದನ್ನು ಜಾರಿಗೆ ತರುವುದಷ್ಟೇ ಅವರಿಗೆ ಸಲ್ಲಿಸಬಹುದಾದ ಅತ್ಯಂತ ಸೂಕ್ತವಾದ ಗೌರವವಾಗಿದೆ.

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಭಾರತದ ಭ್ರಷ್ಟಾಚಾರ ವಿರೋಧಿ ಕಾರ್ಯತಂತ್ರವು ಅನನ್ಯವಾಗಿದೆ, ಪರಿಣಾಮಕಾರಿಯಾಗಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಆಡಳಿತಾರೂಢ ಪಕ್ಷಕ್ಕೆ ವಿರೋಧ ಪಕ್ಷಗಳ ನಾಯಕರು ಗುರಿಯಾಗುತ್ತಾರೆ, ಅದರಲ್ಲೂ ಕೆಲವರು ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗುವಂಥ ಸಾಕ್ಷ್ಯಗಳ ಸಮೇತ. ಆಡಳಿತದಲ್ಲಿ ಇರುವವರು ವಿರೋಧ ಪಕ್ಷದವರಾದಾಗ ಅವರು ಸಹ ಇದೇ ರೀತಿ ಗುರಿಯಾಗುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆ ಆರೋಗ್ಯಕರವಾಗಿ ಇರಬೇಕೆಂದಾದರೆ, ಯಾರೂ ಹೆಚ್ಚು ಕಾಲ ಆಡಳಿತ ನಡೆಸುವಂತೆ ಇರಬಾರದು.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಬುಧವಾರ, 30-9-1998

• '1ಡಿ' ಉಪಗ್ರಹದ ಯಶಸ್ವೀ ವರ್ಷ

ಬೆಂಗಳೂರು, ಸೆ. 29– ತಾಂತ್ರಿಕ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕು ಹಾಗೂಹೀಗೂ ಕಳೆದ ವರ್ಷ ಗಗನಕ್ಕೇರಿದ್ದ 'ಐಆರ್‌ಎಸ್ 1 ಡಿ' ಉಪಗ್ರಹ ಇದೀಗ ತನ್ನ ಕಕ್ಷೆಯಲ್ಲಿ ಯಶಸ್ವೀ ಒಂದು ವರ್ಷವನ್ನು ಪೂರ್ಣಗೊಳಿಸಿದೆ.

ಭಾರತ ತನ್ನದೇ ಪಿಎಸ್‌ಎಲ್‌ವಿ ರಾಕೆಟ್ ಮೂಲಕ ಉಡಾವಣೆ ಮಾಡಿದ ಮೊದಲ ಕಾರ್ಯನಿರ್ವಾಹಕ ಉಪಗ್ರಹವೆಂಬ ಹೆಗ್ಗಳಿಕೆಯೊಂದಿಗೆ ಕಳೆದ ವರ್ಷ ಸೆಪ್ಟೆಂಬರ್ 29ರಂದು ಶ್ರೀಹರಿಕೋಟ ಬಾಹ್ಯಾಕಾಶ ನೆಲೆಯಿಂದ ಮೇಲಕ್ಕೇರಿತ್ತು. ಆದರೆ ಲೆಕ್ಕಾಚಾರಕ್ಕಿಂತ ಕೊಂಚ ಕಮ್ಮಿ ವೇಗೋತ್ಕರ್ಷದೊಂದಿಗೆ ಪಿಎಸ್‌ಎಲ್‌ವಿ ರಾಕೆಟ್ ಮೇಲಕ್ಕೆ ಚಿಮ್ಮಿತ್ತು. ಇದರ ಪರಿಣಾಮವಾಗಿ, '1ಡಿ' ಉಪಗ್ರಹ ತನ್ನ ಧ್ರುವಪಥದಲ್ಲಿ 817 ಕಿ.ಮೀ ಎತ್ತರದ ವೃತ್ತಾಕಾರದ ಕಕ್ಷೆಯಲ್ಲಿ ಸುತ್ತುವ ಬದಲು ದೀರ್ಘ ವೃತ್ತದ ಕಕ್ಷೆಯಲ್ಲಿ ಸುತ್ತುವಂತಾಗಿತ್ತು.

50 ವರ್ಷಗಳ ಹಿಂದೆ

ಭಾನುವಾರ, 30-9-1973

• ಸರ್ಕಾರಿ ಸಂಸ್ಥೆಗಳಲ್ಲಿ ಸಚಿವರು, ಶಾಸಕರಿಗೆ ಅಧಿಕಾರ ಸ್ಥಾನ ಬೇಡ

ಬೆಂಗಳೂರು, ಸೆ. 29– ಯಾವುದೇ ಸರ್ಕಾರಿ ಸಂಸ್ಥೆ ಅಥವಾ ಮಂಡಳಿಗೆ ಸಚಿವರು ಅಧ್ಯಕ್ಷ-ರಾಗಿರಬಾರದು ಹಾಗೂ ಶಾಸಕರು ಡೈರೆಕ್ಟರು-ಗಳಾಗಿರಬಾರದು ಎಂದು ವಿಧಾನಮಂಡಲದ ಸರ್ಕಾರಿ ಉದ್ಯಮ ಸಮಿತಿಯು ತನ್ನ 3ನೇ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಮಂತ್ರಿಗಳು ಮತ್ತು ಶಾಸಕರು ಇತರ ಸರ್ಕಾರಿ ಸಂಸ್ಥೆಗಳಲ್ಲಿ ಅಧಿಕಾರ ಸ್ಥಾನದಲ್ಲಿರುವುದರ ಸಾಧಕ ಮತ್ತು ಬಾಧಕ ಅಂಶಗಳನ್ನು ದೀರ್ಘವಾಗಿ ವಿಶ್ಲೇಷಿಸಿರುವ ಸಮಿತಿಯು ಅಂಥ ವ್ಯವಸ್ಥೆ ಇರುವುದರಿಂದ ಬಾಧಕ ಅಂಶಗಳೇ ಹೆಚ್ಚು ಎಂಬ ತೀರ್ಮಾನಕ್ಕೆ ಬಂದಿದೆ.

• ನಾಲ್ಕು ಜಿಲ್ಲೆಗಳಿಗೆ ವಿದ್ಯುತ್ ವಿತರಣೆ ಮಾಡುವ ಕೇಂದ್ರ ಪ್ರಾರಂಭ

ಮೈಸೂರು, ಸೆ. 29– ಶರಾವತಿಯಿಂದ 220 ಕಿಲೋವಾಟ್ ವಿದ್ಯುತ್ ಪಡೆಯುವ 1.68 ಕೋಟಿ ರೂ. ವೆಚ್ಚದ ಕೇಂದ್ರವು ನಗರಕ್ಕೆ ಐದು ಮೈಲಿ ದೂರದಲ್ಲಿರುವ ಹೂಟಗಳ್ಳಿಯಲ್ಲಿ ಇಂದು ಕಾರ್ಯಾರಂಭ ಮಾಡಿತು.

ನಾಲ್ಕನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ 15 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಸ್ವೀಕಾರ ನಿಲಯಗಳನ್ನು ಸ್ಥಾಪಿಸುವ ಸಮಗ್ರ ಯೋಜನೆ ಅಂಗವಾಗಿ ಸ್ಥಾಪಿತವಾದ ಹೂಟಗಳ್ಳಿ ನಿಲಯದಿಂದ ಮೈಸೂರು, ಮಂಡ್ಯ, ಹಾಸನ ಮತ್ತು ಕೊಡಗು ಜಿಲ್ಲೆಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುವುದು.

ದೇಹದಲ್ಲಿ ಬೊಜ್ಜು ಹೆಚ್ಚುತ್ತಿದ್ದರೂ ಅಗತ್ಯ ಪೌಷ್ಟಿಕಾಂಶ ಮಾತ್ರ ಸಿಗುತ್ತಿಲ್ಲ

ಬಾಲ್ಯದಲ್ಲೇ ಬೊಜ್ಜು, ಅನಾರೋಗ್ಯಕ್ಕೆ ಸಜ್ಜು



ವಿಶ್ಲೇಷಣೆ

ಡಾ. ಕೆ.ಎಸ್.ಚೈತ್ರಾ

ಗ್ರಾಮೀಣ ಮಕ್ಕಳ ಆರೈಕೆ ಕೇಂದ್ರಗಳಿಂದ ಸಂಗ್ರಹಿಸಿದ ಮಾಹಿತಿ ಪ್ರಕಾರ, ಭಾರತದಲ್ಲಿ ಐದು ವರ್ಷದವರೆಗಿನ 43 ಲಕ್ಷಕ್ಕೂ ಹೆಚ್ಚು ಮಕ್ಕಳಲ್ಲಿ ಅಧಿಕ ತೂಕ ಇರುವುದನ್ನು ಗುರುತಿಸಲಾಗಿದೆ. ದೇಶದಾದ್ಯಂತ ಅಂಗನವಾಡಿ ಕೇಂದ್ರಗಳಲ್ಲಿ ಸಮೀಕ್ಷೆಗೆ ಒಳಗಾದ ಮಕ್ಕಳ ಪೈಕಿ ಶೇಕಡ 6ರಷ್ಟು ಮಕ್ಕಳು ಬೊಜ್ಜು ಹೊಂದಿದ್ದಾರೆ ಎಂದು ಅಂಕಿಅಂಶಗಳು ತಿಳಿಸಿವೆ. ಇದರೊಂದಿಗೆ ತೀವ್ರ ಮತ್ತು ಮಧ್ಯಮ ಪ್ರಮಾಣದ ಅಪೌಷ್ಟಿಕತೆ ಇರುವ ಮಕ್ಕಳ ಪ್ರಮಾಣವೂ ಇಷ್ಟೇ ಇದೆ.

2035ರ ವೇಳೆಗೆ ಬಾಲ್ಯದ ಬೊಜ್ಜು ವಾರ್ಷಿಕವಾಗಿ ಶೇಕಡ 9ರಷ್ಟು ಏರಿಕೆಯಾಗಲಿದೆ ಎನ್ನುವ ವಿಷಯ ನಿಜಕ್ಕೂ ಆತಂಕವನ್ನು ಮೂಡಿಸುತ್ತದೆ. ನಗರ ಪ್ರದೇಶದ ಉಳ್ಳವರ ಮಕ್ಕಳಲ್ಲಿ ಮತ್ತು ಮಧ್ಯ ವಯಸ್ಕರಲ್ಲಿ ಕಾಣಿಸುತ್ತಿದ್ದ ಈ ಬೊಜ್ಜು ಇದೀಗ ನಗರ-ಹಳ್ಳಿ, ಶ್ರೀಮಂತರು-ಬಡವರು, ಮಕ್ಕಳು-ವಯಸ್ಕರು ಎನ್ನುವ ಭೇದವಿಲ್ಲದೆ ಜಗತ್ತಿನೆಲ್ಲೆಡೆ ಕಾಡುತ್ತಿರುವ ಅತಿದೊಡ್ಡ ಆರೋಗ್ಯ ಸಮಸ್ಯೆ. ಈಗಂತೂ ಐದು ವರ್ಷದ ಕೆಳಗಿನ ಮಕ್ಕಳಲ್ಲಿ ಬೊಜ್ಜಿನ ಏರಿಕೆ ತೀವ್ರಗತಿಯಲ್ಲಿದೆ.

ಮಕ್ಕಳು ಗುಂಡುಗುಂಡಾಗಿದ್ದಷ್ಟೂ ಚಂದ ಮತ್ತು ಆರೋಗ್ಯಕರ ಎನ್ನುವ ತಪ್ಪು ನಂಬಿಕೆ ನಮ್ಮದು. ಎರಡು ವರ್ಷದ ಒಳಗಿನ ಮಕ್ಕಳಿಗೆ ಹಾಲುಮೈ ಇರುವುದು ಸಹಜವಾದರೂ ನಂತರ ಬೊಜ್ಜು ಇದ್ದಲ್ಲಿ ಆರೋಗ್ಯದಲ್ಲಿ ಅನೇಕ ರೀತಿಯ ಸಮಸ್ಯೆಗಳಾಗಬಹುದು. ಅಸ್ತಮಾ, ಮಧುಮೇಹ, ಮೂಳೆ ಮತ್ತು ಸಂಧಿ ನೋವು, ಉಸಿರಾಟದಲ್ಲಿ ವ್ಯತ್ಯಾಸ, ಚರ್ಮದ ತೊಂದರೆಗಳು, ಪಾರ್ಶ್ವವಾಯು ಹೀಗೆ ನೂರೆಂಟು ಬಾಧೆಗಳ ಜತೆ ಮಕ್ಕಳಲ್ಲಿ ಬೆಳವಣಿಗೆಯ ಹಂತದಲ್ಲೂ ವ್ಯತ್ಯಾಸವನ್ನು ಕಾಣಬಹುದು. ಬೊಜ್ಜಿರುವ ಮಕ್ಕಳು ಇತರರಿಂದ ಅಪಹಾಸ್ಯಕ್ಕೆ ಒಳಗಾಗಿ ಕೀಳರಿಮೆ ಮತ್ತು ಖಿನ್ನತೆಯಿಂದ ಬಳಲಬಹುದು.

ಬೊಜ್ಜಿಗೆ ಅನೇಕ ಕಾರಣಗಳಿದ್ದರೂ ದೋಷಪೂರಿತ ಆಹಾರ ಪದ್ಧತಿ, ಒತ್ತಡದ ಜೀವನಶೈಲಿ ಮತ್ತು ದೈಹಿಕ ಶ್ರಮವಿಲ್ಲದ ಆರಾಮದಾಯಕ ಜೀವನ ಮುಖ್ಯವಾದವು. ದೇಹದಲ್ಲಿ ಬೊಜ್ಜು ಹೆಚ್ಚುತ್ತಿದೆ, ಆದರೆ ಬೇಕಾದ ಪೌಷ್ಟಿಕಾಂಶ ಸಿಗುತ್ತಿದೆಯೇ? ಇಲ್ಲ! ಏಕೆಂದರೆ ಪೌಷ್ಟಿಕತೆ ಇರುವ ಹಣ್ಣು-ತರಕಾರಿ, ಬೇಳೆ-ಕಾಳುಗಳ ಬೆಲೆ ಗಗನಕ್ಕೇರಿದೆ. ಮನೆಮಟ್ಟಿಗೆ ತರಕಾರಿ ಪೂರೈಸುತ್ತಿದ್ದ ಹಿತ್ತಲು, ಕೈತೋಟಗಳು ಹಳ್ಳಿಗಳಲ್ಲೂ ಮಾಯವಾಗಿ ವಾಣಿಜ್ಯ ಬೆಳೆಗಳು ಆಕ್ರಮಿಸಿಕೊಂಡಿವೆ.

ಕೊಳ್ಳಲು ದುಬಾರಿ, ಅಡುಗೆ ಮಾಡಲು ಸಮಯವಿಲ್ಲ. ಹೀಗಿರುವಾಗ ಮಕ್ಕಳ ಹೊಟ್ಟೆ ತುಂಬಿಸಲು ನೆರವಿಗೆ ಬರುವುದು ಯಾವ ಮೂಲೆಯಲ್ಲಿಯೂ ಸಿಗುವ ಬಣ್ಣ ಬಣ್ಣದ ಸೋಡಾ ಪಾನೀಯ ಮತ್ತು ಆಕರ್ಷಕ ಪ್ಯಾಕ್‌ಗಳಲ್ಲಿ ಇರುವ ಕರಿದ ತಿಂಡಿಗಳು! ಕೊಬ್ಬು, ಸಕ್ಕರೆಯ ಅಂಶ ಹೆಚ್ಚಿರುವ ಇವು ಮಕ್ಕಳ ಬಾಯಿಗೆ ರುಚಿಸುತ್ತವೆ, ಸುಲಭವಾಗಿ ಕಡಿಮೆ ಬೆಲೆಗೆ ದೊರಕುತ್ತವೆ ಮತ್ತು ಸಿದ್ಧಪಡಿಸುವ ಶ್ರಮವಿಲ್ಲ. ಹೀಗಾಗಿ ಮಕ್ಕಳು ಆಹಾರ ತಿಂದಾಗ ಬೊಜ್ಜಿನ ಜೊತೆ ಅಪೌಷ್ಟಿಕತೆಯೂ ಹೆಚ್ಚುತ್ತದೆ!

ಕಬಡ್ಡಿ, ಚಿನ್ನಿದಾಂಡು, ಕುಂಟೆಬಿಲ್ಲೆ, ಲಗೋರಿ, ಮರಕೋತಿ ಆಟ ಇವೆಲ್ಲವೂ ಇಂದಿನ ಬಹುತೇಕ ಮಕ್ಕಳಿಗೆ ಅಪರಿಚಿತ ಪದಗಳು. ತಂತ್ರಜ್ಞಾನದ ನೆರವಿನಿಂದ, ಸುಧಾರಿಸಿದ ಆರ್ಥಿಕ ಮಟ್ಟದಿಂದ ಇಂದು ಎಲ್ಲರ ಕೈಗೂ ಮೊಬೈಲ್ ಫೋನ್, ಮನೆ ಮನೆಯಲ್ಲೂ ಟಿ.ವಿ. ಇದರಿಂದ ಆದ ಅನುಕೂಲಗಳ ಜತೆಗೆ ಅನನುಕೂಲಗಳೂ ಬಹಳಷ್ಟಿವೆ. ಮಕ್ಕಳ ಆಟ ಏನಿದ್ದರೂ ಮೊಬೈಲ್ ಫೋನ್, ವಿಡಿಯೊ ಗೇಮ್‌ಗಳಲ್ಲಿ! ದಿನಗೂಲಿ ಕೆಲಸ ಮಾಡುವ ಅದೆಷ್ಟೋ ತಾಯಂದಿರು ಮರದ ನೆರಳಿನಲ್ಲಿ ಒಂದೆರಡು ವರ್ಷದ ಮಕ್ಕಳ ಕೈಯಲ್ಲಿ ಮೊಬೈಲ್ ಫೋನ್ ಹಿಡಿಸಿ, ಚಿಪ್ಸ್ ಪ್ಯಾಕೆಟ್ ಕೊಟ್ಟು ಗಂಟೆಗಟ್ಟಲೇ ಸುಮ್ಮನಿರಿಸುವುದು ಸಾಮಾನ್ಯ ದೃಶ್ಯವಾಗಿದೆ. ಸ್ಥಳ, ಸನ್ನಿವೇಶ ಬದಲಾದರೂ ಈ ರೀತಿ ಚಟುವಟಿಕೆ ಇಲ್ಲದ, ಬೇಡದ್ದನ್ನು ತಿನ್ನುವ ಜೀವನಶೈಲಿ ಎಲ್ಲೆಡೆ ಕಂಡುಬರುತ್ತದೆ!

ಮಕ್ಕಳಲ್ಲಿ ಬೊಜ್ಜಿನ ಸಮಸ್ಯೆ ತಡೆಗಟ್ಟಲು ಹುಟ್ಟಿನಿಂದಲೇ ಸರಿಯಾದ ಆಹಾರಕ್ರಮದ ರೂಢಿಯಾಗಬೇಕು. ಮಗುವಿಗೆ ಮೊದಲ ಆರು ತಿಂಗಳು ಸ್ತನ್ಯಪಾನದ ನಂತರ ಪೌಷ್ಟಿಕವಾದ ಪೂರಕ ಆಹಾರ ನೀಡಬೇಕು. ಐದು ವರ್ಷದವರೆಗಿನ ಮಕ್ಕಳಿಗೆ, ಸರಿಯಾದ ಆಹಾರವನ್ನು ತಯಾರಿಸುವುದಷ್ಟೇ ಅಲ್ಲ ಸಮಯಕ್ಕೆ ಸರಿಯಾಗಿ ತಿನ್ನುವ ಕ್ರಮವನ್ನು ರೂಢಿ ಮಾಡಿಸಲು ಪೋಷಕರ ಮೇಲ್ವಿಚಾರಣೆ ಅಗತ್ಯ.

ಬೆಳೆಯುವ ಮಕ್ಕಳಿಗೆ ಆಗಾಗ್ಗೆ ಹಸಿವಿನ ಜೊತೆಗೆ ಬಾಯಿರುಚಿಗಾಗಿ ತಿನ್ನುವ ಅಭ್ಯಾಸ ಇರುತ್ತದೆ. ಎರಡು ಊಟಗಳ ನಡುವೆ ಮಕ್ಕಳು ಸೇವಿಸುವುದು ಕರಿದ ತಿನಿಸು, ಬೇಕರಿ ತಿಂಡಿಗಳನ್ನು! ಇದನ್ನು ತಪ್ಪಿಸಿ ಆರೋಗ್ಯ-ಕರವಾದ ತಿಂಡಿಯನ್ನು ತಿನ್ನುವ ಅಭ್ಯಾಸ ಮಾಡಿಸಬೇಕು. ಆದರೆ ಇದು ಈಗಿನ ಬದಲಾದ ಪರಿಸ್ಥಿತಿಯಲ್ಲಿ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಧ್ಯವೇ?

ಪ್ರತಿನಿತ್ಯ ಕೃಷಿ ಅಥವಾ ಕೂಲಿ ಕೆಲಸಕ್ಕೆ ತೆರಳುವ ಅನಿವಾರ್ಯ ದಂಪತಿಗೆ ಇರುವಾಗ ಚಿಕ್ಕ ಮಕ್ಕಳನ್ನು ಕರೆದುಕೊಂಡು ಹೋಗುವುದು ಕಷ್ಟಸಾಧ್ಯ. ಮಗು ಮನೆಯಲ್ಲಿಯೇ ಇರುವ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಅದಕ್ಕೆ ಸೂಕ್ತ ಆಹಾರ ದೊರೆಯುವುದಿಲ್ಲ. ತಾಯಿಗೂ ಸದಾ ಒತ್ತಡದಲ್ಲಿಯೇ ಕೆಲಸ ಮಾಡುವ ಸಂದರ್ಭ ಎದುರಾಗುತ್ತದೆ. ಈ ದಿಸೆಯಲ್ಲಿ ಗ್ರಾಮೀಣ ಭಾಗದ ಕೂಲಿ ಕಾರ್ಮಿಕರ ಮಕ್ಕಳ ಪಾಲನೆಗೆ ತೆರೆಯಲಾಗುತ್ತಿರುವ 'ಕೂಸಿನಮನೆ' ಶಿಶುಪಾಲನಾ ಕೇಂದ್ರ ಉತ್ತಮವಾದ ಯೋಜನೆ. ಗ್ರಾಮೀಣ ಮಹಿಳೆಯರು ಆರು ತಿಂಗಳಿನಿಂದ ಮೂರು ವರ್ಷದ ಒಳಗಿನ ಮಕ್ಕಳನ್ನು ಕೂಸಿನಮನೆಯಲ್ಲಿ ಬಿಡಬಹುದು. ಪ್ರತಿ ಕೇಂದ್ರಕ್ಕೆ ಹತ್ತು ಜನ ತರಬೇತಿ ಹೊಂದಿರುವ ಮಕ್ಕಳ ಆರೈಕೆದಾರರು ಇರಲಿದ್ದು, ಶಿಶುಗಳಿಗೆ ಪೂರಕ ಪೌಷ್ಟಿಕ ಆಹಾರದ ಸೌಲಭ್ಯವನ್ನೂ ಇದು ಒಳಗೊಂಡಿದೆ.

ಬೆಳಗಿನ ತಿಂಡಿಯನ್ನು ತಿನ್ನದೇ ಇರುವುದು ಇಂದಿನ ಮಕ್ಕಳ ಸಾಮಾನ್ಯ ಅಭ್ಯಾಸ. ತಡವಾಗಿ ಮಲಗಿ-ಏಳುವುದು, ಗಡಿಬಿಡಿಯಲ್ಲಿ ಒಂದಿಷ್ಟು ತಿಂದು ಅಥವಾ ತಿನ್ನದೇ ಓಡುವುದು ಇಂದಿನ ಜೀವನಶೈಲಿ. ಆಹಾರ ತಜ್ಞರ ಪ್ರಕಾರ, ನಮ್ಮ ಇಡೀ ದಿನದ ಆಹಾರ ಅಗತ್ಯದ ಶೇಕಡ 25ರಷ್ಟು ಭಾಗವನ್ನು ಬೆಳಗಿನ ತಿಂಡಿ ಒಳಗೊಂಡಿರಬೇಕು. ಬೆಳಗಿನ ತಿಂಡಿ ಸರಿಯಾಗಿ ಸಿಕ್ಕಾಗ ಪೌಷ್ಟಿಕಾಂಶಗಳು ಪೂರೈಕೆಯಾಗಿ ಆ ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಚುರುಕಾಗಿರುತ್ತಾರೆ. ಬೆಳಿಗ್ಗೆ ತಿಂಡಿ ಬಿಟ್ಟಾಗ ನಂತರ ಹಸಿವೆಯಾಗಿ ಮಧ್ಯಾಹ್ನದ ಹೊತ್ತಿಗೆ ಮಿತಿಮೀರಿ ತಿನ್ನುವ ಸಂಭವ ಹೆಚ್ಚು. ಅಲ್ಲದೆ ಮಧ್ಯಮಧ್ಯ ಬಾಯಾಡಿಸುವ ಚಟವು ಬೊಜ್ಜಿಗೆ ಕಾರಣವಾಗುತ್ತದೆ. ಆದ್ದರಿಂದ ಬೆಳಗಿನ ತಿಂಡಿಯನ್ನು ಯಾವುದೇ ಕಾರಣಕ್ಕೂ ತಪ್ಪಿಸಬಾರದು.

ಮೂರು ವರ್ಷದ ಮೇಲಿನ ಮಕ್ಕಳಿಗೆ ಅಂಗನವಾಡಿಗಳಲ್ಲಿ ಪೌಷ್ಟಿಕ ಆಹಾರ ಸಿಗಬೇಕೆಂದು ಸರ್ಕಾರ ಶ್ರಮಿಸುತ್ತಿದೆ. ಪ್ರತಿನಿತ್ಯ ಅಂಗನವಾಡಿಯಲ್ಲಿ ಬೆಳಿಗ್ಗೆ ಮೊಳಕೆಕಾಳು, ಮಧ್ಯಾಹ್ನ ತರಕಾರಿ ಸಾಂಬಾರ್, ವಾರದಲ್ಲಿ ಎರಡು ದಿನ ಮೊಟ್ಟೆ, ಸಂಜೆ ಹಾಲು ಮತ್ತು ಶೇಂಗಾ ಚಿಕ್ಕಿ ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೆ ಆಹಾರದ ಕಚ್ಚಾ ಸಾಮಗ್ರಿಯ ಬೆಲೆ ಹೆಚ್ಚಳ, ಸ್ವಚ್ಛಗೊಳಿಸುವುದು, ಸಾಗಣೆ ಮತ್ತು ನಿರ್ವಹಣೆ, ಆಹಾರದ ಗುಣಮಟ್ಟ, ಪ್ರಮಾಣ, ಸರಬರಾಜಿನ ಕುರಿತು ಬಹಳಷ್ಟು ದೂರುಗಳು ಕೇಳಿಬರುತ್ತಿವೆ. ಅವುಗಳನ್ನು ಗಂಭೀರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದು ಅಗತ್ಯ.

ಹಾಗೆಯೇ ಸಮುದಾಯದೊಂದಿಗೆ ನಿಕಟ ಸಂಪರ್ಕದಲ್ಲಿದ್ದು ಮಕ್ಕಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುವ ಅಂಗನವಾಡಿ ಕಾರ್ಯಕರ್ತೆಯರಿಗೆ ಸರಿಯಾದ ವಿಧಾನದಲ್ಲಿ ಮಕ್ಕಳಿಗೆ ಆಹಾರವನ್ನು ನೀಡುವ ಬಗ್ಗೆ ತರಬೇತಿ ಸಿಗಬೇಕು.

ಮಕ್ಕಳಲ್ಲಿ ಹೆಚ್ಚುತ್ತಿರುವ ಬೊಜ್ಜಿನ ನಿಯಂತ್ರಣಕ್ಕೆ ಮಾತ್ರವಲ್ಲ, ದೈಹಿಕ ಮತ್ತು ಬೌದ್ಧಿಕ ವಿಕಸನಕ್ಕೂ ಸರಿ ಪ್ರಮಾಣದ, ಸಮತೋಲಿತ ಆಹಾರ ಸಿಗಬೇಕು. ಅದನ್ನು ಸಾಧ್ಯವಾಗಿಸುವಲ್ಲಿ ಸರ್ಕಾರದೊಂದಿಗೆ ಸಮುದಾಯವೂ ಜತೆಯಾಗಬೇಕು!



ಚುರುಮುರಿ



ಬಂದ್ ಅಲ್ಲ ಪ್ರತಿಭಟನೆ!

• ಎಸ್.ಬಿ.ರಂಗನಾಥ್

'ಪುಟ್ಟೂ, ಸ್ಕೂಲಿಗೆ ರಜೆ ಅಂತ ಮೊಬೈಲಲ್ಲೇ ಮುಳುಗಿರಬೇಡ. ಅದನ್ನ ತೆಗೆದಿಟ್ಟು ಟೆಕ್ಸ್ಟ್ ಬುಕ್ ಓದಿಕೋ' ಗದರಿಸಿದರು ಮಮ್ಮಿ.

ಕುಮಾರ ಹೇಳಿದ- 'ಮೊಬೈಲಲ್ಲಿ ವಿಡಿಯೊ ಗೇಮ್ ನೋಡ್ತಿಲ್ಲಮ್ಮಾ, ಕಾವೇರಿ ಕರ್ನಾಟಕ ಬಂದ್ ನ್ಯೂಸ್ ಐರ್ತಿದೆ... ಮೊನ್ನೆ ನಡೆದ ಬಂದ್‌ಗೆ ನಮ್ಗೆ ಯಾಕೆ ರಜೆ ಕೊಡಲಿಲ್ಲ?'

'ಅದು ವಿರೋಧ ಪಕ್ಷಗಳು ಬೆಂಬಲಿಸಿದ ಬಂದ್ ಕಣೋ'.

'ಮತ್ತೆ, ಇವತ್ತಿನ ಬಂದ್ ನಡೆಸ್ತಿರೋರು?'

'ಕನ್ನಡ ಸಂಘಟನೆಗಳ ಒಕ್ಕೂಟ. ಇದಕ್ಕೆ ಸರ್ಕಾರದ ಪರೋಕ್ಷ ಬೆಂಬಲವಿದೆ. ನಮ್ಮ ಆಫೀಸಿಗೆ ರಜೆ ಇಲ್ಲ, ನಾನು ಹೋಗ್ಬೇಕು'.

'ನಮ್ಮ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹಮಂತ್ರಿ ಒಬ್ಬೊಬ್ರು ಒಂದೊಂದು ರೀತಿಯ ಹೇಳಿಕೆ ಕೊಡ್ತಿದ್ದಾರೆ!'

'ನಮ್ಮದು ಪ್ರಜಾಪ್ರಭುತ್ವವಲ್ವೇ? ಅದು ಅವರ ಅಭಿವ್ಯಕ್ತಿ ಸ್ವಾತಂತ್ರ್ಯ. ಬಂದ್ ಮಾಡೋಹಾಗಿಲ್ಲ, ಪ್ರತಿಭಟನೆ ಮಾಡಬೌದಂತೆ'.

'ಮಂಡ್ಯದಲ್ಲಿ ರೈತರು ಪಟ್ಟಾಪಟ್ಟಿ ಚೆಡ್ಡಿ ಧರಿಸಿ ಅರೆಬೆತ್ತಲೆ ಮೆರವಣಿಗೆ ಮಾಡಿದರು. ಶ್ರೀರಂಗಪಟ್ಟಣದಲ್ಲಿ ಕಾವೇರಿ ನದಿಗೆ ಮಿನರಲ್ ವಾಟರ್ ಸುರಿದ್ರು. ಮೈಸೂರಲ್ಲಿ ಅಜ್ಜಿ ಉರುಳುಸೇವೆ ಸಲ್ಲಿಸಿದರು. ಆದ್ರೂ ಹೆಚ್ಚಿನ ನೀರು ತಮಿಳುನಾಡಿಗೆ ಹೋಗೋದು ಮಾತ್ರ ನಿಂತಿಲ್ಲ'. ಅಷ್ಟರಲ್ಲಿ ಪಪ್ಪನ ಆಗಮನ.

'ರೀ, ಆಟೊ, ಬಸ್ ಇಲ್ಲ. ಆಫೀಸಿಗೆ ಡ್ರಾಪ್ ಮಾಡಿ, ಬನ್ನಿ'.

'ನಾನು ಬಂದ್‌ಗೆ ಹೋಗ್ಬೇಕು. ನಮ್ಮ ಲೀಡರ್ ಮಾತು ಮೀರೋಹಾಗಿಲ್ಲ'.

'ಮಂಗಳವಾರದ ಬಂದ್‌ಗೆ ಹೋಗಿದ್ದಿರಲ್ರೀ!'

'ಅದಕ್ಕೆ ಕರೆದೊಯ್ದಿದ್ದೂ ನಮ್ಮ ಲೀಡರ್ರೇ. ನಾವು ಪಕ್ಷಾತೀತ ಬಂದ್ ಬೆಂಬಲಿಗರು. ಈಗಿನ ಬಂದ್ ಬೆಂಬಲಿಸಿದರೆ ಹೆಚ್ಚು ಅನುಕೂಲ ಅಂತಾರೆ'.

'ಕೈ ಸರ್ಕಾರ ಬಂದಾಗಲೆಲ್ಲ ಬರಗಾಲ, ಕಾವೇರಿ ಗದ್ದಲ ಶುರುವಾಗುತ್ತೆಂತಾರೆ. ಕಮಲದೋರು ಹೇಗೆ ನಿಭಾಯಿಸುತ್ತಿದ್ರೋ?'

'ಹೋಮ ಹವನ ನಡೆಸಿ, ಪರ್ಜನ್ಯ ಜಪ ಏರ್ಪಡಿಸಿ ಮಳೆ ತರಿಸುತ್ತಿದ್ರು'.

ತಾಯಿ ಮಗ ಸುಸ್ತು!

ಸಂಗತ

ಮಕ್ಕಳ ಪಾಲನೆ: ಅರಿಯಿರಿ ಸೂಕ್ಷ್ಮ

ಮಕ್ಕಳ ಪಾಲನೆಗೆ ಸಿದ್ಧ, ಸರಳ ಸೂತ್ರಗಳಿಲ್ಲ. ಮಕ್ಕಳ ಅನನ್ಯತೆಯನ್ನು ಗೌರವಿಸುವ ಮೂಲಕ ಅವರ ಸಹಜ ಬೆಳವಣಿಗೆಗೆ ಅನುವು ಮಾಡಿಕೊಡಬೇಕು

• ಎಚ್.ಬಿ.ಚಂದ್ರಶೇಖರ್

ಮಕ್ಕಳ ಹಟಮಾರಿತನಕ್ಕೆ ಮಣಿಯದೆ ಅವರನ್ನು ಬೆಳೆಸುವುದು ಹೇಗೆ ಎಂಬ ಬಗ್ಗೆ ಪೋಷಕರಿಗೆ ತಲೆಬಿಸಿ ಸಹಜ. ಮಕ್ಕಳಿಗೆ ಕಠಿಣ ಶಿಸ್ತು ಹೇರುವುದು ಸೂಕ್ತವೇ ಅಥವಾ ಸ್ವಾತಂತ್ರ್ಯ ನೀಡಿ ಮುಕ್ತವಾಗಿ ಬೆಳೆಸುವುದು ಉತ್ತಮವೇ ಎಂಬ ಬಗ್ಗೆ ಗೊಂದಲಗಳು ಇರುತ್ತವೆ.

ಮಕ್ಕಳ ಪಾಲನೆಯು ಒಂದು ಕೌಶಲ ಎನ್ನಬಹುದು. ಅದಕ್ಕೆ ಮನೋವೈಜ್ಞಾನಿಕ ತತ್ವ, ಸಿದ್ಧಾಂತಗಳು ನಮಗೆ ಒಂದಷ್ಟು ನೆರವು, ಒಳನೋಟಗಳನ್ನು ನೀಡಬಹುದಾದರೂ ಅವುಗಳ ನೆರವಿನಿಂದಲೇ ಮಕ್ಕಳ ಪಾಲನೆಯಲ್ಲಿ ಪೂರ್ಣ ಯಶ ಕಂಡುಕೊಳ್ಳಲು ಸಾಧ್ಯವಾಗದು. ವೀಣೆಯ ತಂತಿಯನ್ನು ಅತಿಯಾಗಿ ಬಿಗಿ ಮಾಡಿದರೆ ತಂತಿ ಹರಿಯುತ್ತದೆ ಹಾಗೂ ಅತಿ ಸಡಿಲ ಮಾಡಿದರೆ ನಾದ ಬಾರದು. ತಂತಿ ಹದವಾಗಿದ್ದರೆ ವೀಣಾ ನಾದ ಹೊಮ್ಮುತ್ತದೆ. ಅಂತೆಯೇ ಮಕ್ಕಳ ಪಾಲನೆಯು ಶಿಸ್ತಿನ ನಿಯಮಗಳ ಹೇರಿಕೆ ಅಥವಾ ಯಾವುದೇ ನಿಯಮಗಳಿಲ್ಲದೆ ಅವರನ್ನು ಅವರಿಷ್ಟಕ್ಕೇ ಬೆಳೆಯುವಂತೆ ಬಿಡುವುದರಿಂದ ಫಲ ನೀಡದು.

ಮಕ್ಕಳನ್ನು ಹೇಗೆ ಪಾಲನೆ ಮಾಡಬೇಕು ಎಂಬ ಬಗ್ಗೆ ಮಗು ಹುಟ್ಟುವುದಕ್ಕೆ ಮುಂಚೆಯೇ ಪೋಷಕರಿಗೆ ತರಬೇತಿ ನೀಡುವ ವ್ಯವಸ್ಥೆ ಪಾಶ್ಚಾತ್ಯ ದೇಶಗಳಲ್ಲಿದೆ. ನಮ್ಮ ದೇಶದಲ್ಲಿ ಕೌಟುಂಬಿಕ ವ್ಯವಸ್ಥೆ ಬಲವಾಗಿರುವ ಕುಟುಂಬಗಳಲ್ಲಿ ಈ ವಿಷಯದಲ್ಲಿ ಹೆಚ್ಚಿನ ತೊಂದರೆ ಕಾಣಿಸದು. ಅನುಭವಸ್ಥ ಅಜ್ಜ, ಅಜ್ಜಿ ಹಾಗೂ ಕುಟುಂಬದ ಹಿರಿಯರು ಮಕ್ಕಳೊಂದಿಗೆ ವರ್ತಿಸುವಾಗ ಗಮನಿಸಬೇಕಾದ ಸೂಕ್ಷ್ಮಗಳನ್ನು ಪೋಷಕರಿಗೆ ಪರೋಕ್ಷವಾಗಿ ಕಲಿಸುತ್ತಾರೆ. ಮಕ್ಕಳ ಪಾಲನೆ ಮಾಡುವಲ್ಲಿ ಅಥವಾ ಶಿಕ್ಷಣ ನೀಡುವಲ್ಲಿ ಪ್ರಮುಖವಾಗಿ ನಾಲ್ಕು ಮಾದರಿಗಳನ್ನು ಮನೋ-ವಿಜ್ಞಾನಿಗಳು ಪ್ರತಿಪಾದಿಸುತ್ತಾರೆ. 'ಮಕ್ಕಳಿಗೇನೂ ತಿಳಿಯುವುದಿಲ್ಲವಾದ್ದರಿಂದ ಅವರ ಕುರಿತಾದ ಎಲ್ಲ ವಿಷಯಗಳ ಬಗ್ಗೆ ನಾನೇ ತೀರ್ಮಾನ ಕೈಗೊಳ್ಳುತ್ತೇನೆ' ಎಂಬ 'ಸರ್ವಾಧಿಕಾರಿ' ಧೋರಣೆಯನ್ನು ಕೆಲವರು ಅನುಸರಿಸುತ್ತಾರೆ. ಮಕ್ಕಳ ಬೇಕು, ಬೇಡಗಳು, ಸಮಸ್ಯೆಗಳನ್ನು ಆಲಿಸುವ ಗೋಜಿಗೇ ಹೋಗುವುದಿಲ್ಲ. ಅವರನ್ನು ಸದಾ ಅಂಕೆಯಲ್ಲಿ ಇಟ್ಟುಕೊಂಡು, ಶಿಕ್ಷೆಯ ಮೂಲಕ ನಿಯಂತ್ರಣ ಸಾಧಿಸುತ್ತಾರೆ.

ಹೊರನೋಟಕ್ಕೆ ಈ ವಿಧಾನದಲ್ಲಿ ಯಶಸ್ಸು ದೊರಕುತ್ತಿದೆ ಎಂಬ ಭಾವನೆ ಮೂಡಿದಾಗ್ಯೂ ಆಳದಲ್ಲಿ ಮಕ್ಕಳ ಸೂಕ್ಷ್ಮ ಮನಸ್ಸಿಗೆ ಗಾಸಿಯಾಗಿ, ಪೋಷಕರು ಹಾಗೂ ಶಿಕ್ಷಕರ ಬಗ್ಗೆ ಮನದೊಳಗೆ ದ್ವೇಷ, ಅಸಹನೆಯ ಭಾವನೆಗಳು ಮೊಳೆಯುತ್ತವೆ. ಮಕ್ಕಳಲ್ಲಿ ಆಕ್ರಮಣಕಾರಿ ವರ್ತನೆಗಳು ತಲೆದೋರುವುದಲ್ಲದೆ ಭವಿಷ್ಯದಲ್ಲಿ ತಾವೂ ಸರ್ವಾಧಿಕಾರಿ ಧೋರಣೆಯ ವ್ಯಕ್ತಿತ್ವ ರೂಢಿಸಿಕೊಳ್ಳುತ್ತಾರೆ.

ಇನ್ನು ಕೆಲ ಪೋಷಕರು ಹಾಗೂ ಶಿಕ್ಷಕರು ಮಕ್ಕಳ ಯಾವುದೇ ವರ್ತನೆಗೆ ತಲೆಕೆಡಿಸಿಕೊಳ್ಳದೆ ತಮ್ಮಷ್ಟಕ್ಕೆ ತಾವು ಹಾಗೂ ಮಕ್ಕಳ ಪಾಡಿಗೆ ಮಕ್ಕಳು ಎಂಬ ಧೋರಣೆ ಅನುಸರಿಸುವ ಮೂಲಕ 'ನಿರ್ಲಕ್ಷ್ಯದ ಪಾಲನೆ'ಯ ವಿಧಾನವನ್ನು ಅನುಸರಿಸುತ್ತಾರೆ. ಈ ವಿಧಾನದ ಬಹು ದೊಡ್ಡ ಅಪಾಯವೆಂದರೆ, ಮಕ್ಕಳಿಗೆ ಸರಿ, ತಪ್ಪುಗಳ ವಿವೇಚನೆಯಿಲ್ಲದೆ ತಮಗೆ ಹೇಗೆ ಬೇಕೋ ಹಾಗೆ ಬೆಳೆಯುತ್ತಾ ಹೋಗುತ್ತಾರೆ. ಕೆಲವರು ಉತ್ತಮವಾಗಿ ಬೆಳೆದರೆ, ಇನ್ನು ಕೆಲವರು ಹಾಳಾಗಿಹೋಗುವ ಅಪಾಯವಿರುತ್ತದೆ. ಮಕ್ಕಳಲ್ಲಿ ಅಶಿಸ್ತು, ಅವಿಧೇಯತೆ ಹೆಚ್ಚಾಗಿ ಕಂಡುಬರುವ ಜೊತೆಗೆ ಶೈಕ್ಷಣಿಕ ಪ್ರಗತಿಯಲ್ಲಿಯೂ ಹಿಂದೆ ಬೀಳುತ್ತಾರೆ.

ಮಕ್ಕಳು ಕೇಳಿದ್ದನ್ನೆಲ್ಲಾ ಕೊಡಿಸುವ ಮತ್ತು ಅವರು ಹೇಳಿದ್ದಕ್ಕೆಲ್ಲಾ ಸಮ್ಮತಿಸುವುದನ್ನು ಕಾಣಬಹುದು. ಮಕ್ಕಳ ಯಾವುದೇ ನಿರ್ಧಾರಗಳಲ್ಲಿ ಪಾಲ್ಗೊಳ್ಳದೆ ಎಲ್ಲದಕ್ಕೂ ಸಮ್ಮತಿ ಸೂಚಿಸುವುದರಿಂದ, ಭವಿಷ್ಯದಲ್ಲಿ ಸಮ್ಮತಿ ದೊರೆಯದ ಸಂದರ್ಭಗಳಲ್ಲಿ ಆಕ್ರಮಣಶೀಲ ಪ್ರವೃತ್ತಿ ತೋರುತ್ತಾರೆ.



ಈವರೆಗೆ ಚರ್ಚಿಸಿದ ಮೂರೂ ಪಾಲನಾ ಶೈಲಿಗಳ ಬದಲಿಗೆ ಮಕ್ಕಳ ಆಸೆ, ಆಕಾಂಕ್ಷೆಗಳಿಗೆ ಸೂಕ್ಷ್ಮವಾಗಿ ಶಾಂತ ಸ್ವರೂಪದಿಂದ ಸ್ಪಂದಿಸುವ, ಅವರನ್ನು ಸದಾ ಆಲಿಸುವ, ಗಮನ ನೀಡುವ 'ಅಧಿಕೃತ' ಪಾಲನಾ ಶೈಲಿಯು ಪರಿಣಾಮಕಾರಿ ಎಂದು ಮನೋವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಈ ಶೈಲಿಯಲ್ಲಿ ಮಕ್ಕಳ ವರ್ತನೆಗಳಿಗೆ ಸಂಬಂಧಿಸಿದಂತೆ ಸನ್ನಿವೇಶಕ್ಕೆ ತಕ್ಕಂತೆ ಪಾಲಕರು ಅಥವಾ ಶಿಕ್ಷಕರು ತಮ್ಮ ಪ್ರತಿ-ವರ್ತನೆಗಳನ್ನು ವ್ಯಕ್ತಪಡಿಸುತ್ತಾರೆ. ಮಕ್ಕಳು ಹೀಗೆ ವರ್ತಿಸಿದರೆ ಒಳಿತು ಎಂಬ ಬಗ್ಗೆ ತಮ್ಮ ನಿರೀಕ್ಷೆಗಳನ್ನು ಅವರಿಗೆ ಮೊದಲೇ ವಿವರಿಸಿರುತ್ತಾರೆ. ಆಕಸ್ಮಿಕವಾಗಿ ನಿರೀಕ್ಷೆಗಳಿಗೆ ವ್ಯತಿರಿಕ್ತವಾಗಿ ಮಕ್ಕಳು ವರ್ತಿಸಿದಾಗ್ಯೂ ಸಹನೆ ಕಳೆದುಕೊಳ್ಳದೆ ಸಮಾಧಾನದ ವರ್ತನೆಯಿಂದ ದುಷ್ಪರಿಣಾಮಗಳನ್ನು ವಿವರಿಸುತ್ತಾ, ನಿರಂತರವಾಗಿ ಖಚಿತ ಮನೋಭಾವದಿಂದ ಶ್ರಮಿಸುತ್ತಾರೆ.

ಸ್ವಂತ ನಿರ್ಧಾರ ಕೈಗೊಳ್ಳಲು ಮಕ್ಕಳಿಗೆ ಸಹಾಯ ಮಾಡುವ ಮೂಲಕ ಅವರ ಸ್ವಂತಿಕೆಗೆ ಬೆಲೆ ನೀಡುತ್ತಾರೆ. ಭಿನ್ನತೆಗಳು ತಲೆದೋರಿದಲ್ಲಿ ಪರಸ್ಪರ ಚರ್ಚಿಸಿ, ಒಮ್ಮತದ ನಿರ್ಧಾರಕ್ಕೆ ಬರುವ ಕೊಡು-ಕೊಳ್ಳುವಿಕೆ ವಿಧಾನ ಅನುಸರಿಸುತ್ತಾರೆ. ಇಂತಹ ಪಾಲನಾ ಶೈಲಿಯಲ್ಲಿ ಬೆಳೆದ ಮಕ್ಕಳು ಆತ್ಮಗೌರವ, ಸ್ವನಿಯಂತ್ರಣ, ಸ್ವಯಂಶಿಸ್ತು, ಸಹಕಾರದ ಗುಣಗಳ ಜೊತೆಗೆ ಶೈಕ್ಷಣಿಕವಾಗಿ ಹಾಗೂ ಭವಿಷ್ಯದಲ್ಲಿ ಉತ್ತಮ ಸಾಧನೆಯನ್ನು ತೋರುತ್ತಾರೆ.

ಮಕ್ಕಳ ಪಾಲನೆಗೆ ಸಿದ್ಧ, ಸರಳ ಸೂತ್ರಗಳಿಲ್ಲ. ಅವರ ಅನನ್ಯತೆಯನ್ನು ಗೌರವಿಸುವ ಮೂಲಕ ಅವರ ಸಹಜ ಬೆಳವಣಿಗೆಗೆ ಅನುವು ಮಾಡಿಕೊಡುವ ಜೊತೆಗೆ ಸನ್ನಿ-ವೇಶಗಳಿಗೆ ತಕ್ಕಂತೆ ಸ್ಪಂದಿಸುವ ಪಾಲನಾ ಶೈಲಿಯನ್ನು ಅನುಸರಿಸುವುದು ಸೂಕ್ತವಾದುದು.

ವಾಚಕರ ವಾಣಿ

ಪರಿಸರ ಸಂರಕ್ಷಣೆ: ಶಾಲೆಯಿಂದಲೇ ಆರಂಭವಾಗಲಿ

ಕೆಲವು ಖಾಸಗಿ ಶಾಲೆಗಳಲ್ಲಿ ಅವರು ಸೂಚಿಸಿದ ಅಂಗಡಿಗಳಿಂದಲೇ ಪಠ್ಯಪುಸ್ತಕ ಹಾಗೂ ನೋಟ್ ಪುಸ್ತಕಗಳನ್ನು ಖರೀದಿಸಬೇಕಾದುದು ಕಡ್ಡಾಯ. ಹಾಗೆಯೇ ಇಡೀ ವರ್ಷಕ್ಕೆ, ಅದೂ ಅಗತ್ಯಕ್ಕಿಂತಲೂ ಹೆಚ್ಚಿಗೆ ನೋಟ್ ಪುಸ್ತಕಗಳನ್ನು ಅಲ್ಲಿಯೇ ಖರೀದಿಸಬೇಕಾಗುತ್ತದೆ. ಅಂತಹ ಪುಸ್ತಕಗಳ ಬೆಲೆ ಬಹಳ ಹೆಚ್ಚೇ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಉಳಿದ ಪುಸ್ತಕಗಳನ್ನು ಮುಂದಿನ ತರಗತಿಯಲ್ಲಿ ಉಪಯೋಗಿಸುವಂತೆಯೂ ಇಲ್ಲ, ಏಕೆಂದರೆ ಮತ್ತೆ ಹೊಸ ನೋಟ್ ಪುಸ್ತಕಗಳನ್ನು ಖರೀದಿಸಲೇಬೇಕಾಗುತ್ತದೆ. ಅಂತಹ ಪುಸ್ತಕಗಳನ್ನು ರಫ್ ಪುಸ್ತಕವಾಗಿ ಉಪಯೋಗಿಸುವ ಪದ್ಧತಿಯೂ ಈಗ ಮರೆಯಾಗಿದೆ. ಅಷ್ಟೇಅಲ್ಲ, ಪ್ರತಿ ತರಗತಿಗೂ ಶಾಲೆಯ ಒಂದೊಂದು ಡೈರಿಯನ್ನು ಪ್ರತಿವರ್ಷವೂ ಖರೀದಿಸುವುದು ಕಡ್ಡಾಯ.

ಮಕ್ಕಳ ವಿದ್ಯಾಭ್ಯಾಸವೆಂದು ಮೊದಲೇ ದುಬಾರಿ ಫೀಸು ಭರಿಸುವ ಪೋಷಕರಿಗೆ ಇವೆಲ್ಲ ಅನಗತ್ಯ ಹೆಚ್ಚುವರಿ ವೆಚ್ಚಗಳು. ಮಕ್ಕಳು ಅನಿವಾರ್ಯ ಕಾರಣಗಳಿಗಾಗಿ ರಜೆ ಹಾಕಬೇಕಾಗಿ ಬಂದಾಗ ಶಾಲೆಯ ಡೈರಿಯಲ್ಲೇ ರಜೆಯ ಕಾರಣದ ಒಂದು ಸಾಲು ಬರೆದರಾಯಿತು. ನೆಟ್ಟಗೆ ಒಂದು ರಜೆಯ ಅರ್ಜಿಯನ್ನು ಬರೆಯುವ ಅವಕಾಶ ಮತ್ತು ಅನುಭವವೂ ಇದರಿಂದ ಮರೆಯಾಗಿದೆ. ಹೀಗೆ ಅಗತ್ಯವಿಲ್ಲದ ಲಕ್ಷಾಂತರ ಡೈರಿ ಹಾಗೂ ಹೆಚ್ಚಿನ ನೋಟ್ ಪುಸ್ತಕಗಳ ಮುದ್ರಣದಿಂದಾಗಿ ಕಾಗದ ತಯಾರಿಗೆ ಅಗತ್ಯವಿರುವ ಅದೆಷ್ಟು ಮರಗಳ ಮಾರಣಹೋಮವನ್ನು ನಾವು ಪ್ರತಿವರ್ಷವೂ ಮಾಡುತ್ತಿರಬಹುದು? ಪರಿಸರ ಸಂರಕ್ಷಣೆಗೆ ಅಗತ್ಯವಿರುವ ಮಾರ್ಗಗಳು ಶಾಲೆಯಿಂದಲೇ ಪ್ರಾರಂಭವಾಗಬೇಕು.

ಬಿ.ಎನ್.ಭರತ್, ಬೆಂಗಳೂರು

ವಿದ್ಯಾರ್ಥಿ ವೇತನ: ವಿಳಂಬ ಸಲ್ಲ

ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕೆ ಅನುವಾಗುವಂತೆ ಸರ್ಕಾರವು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ವಿದ್ಯಾರ್ಥಿ ವೇತನವನ್ನು ನೀಡುತ್ತಾ ಬಂದಿದೆ. ಆದರೆ ಈ ವರ್ಷ ಪ್ರಸಕ್ತ ಸಾಲಿನ ಶೈಕ್ಷಣಿಕ ಅವಧಿ ಮುಗಿಯುತ್ತಾ ಬಂದರೂ ಇನ್ನೂ ವಿದ್ಯಾರ್ಥಿ ವೇತನ ಜಮಾ ಆಗಿಲ್ಲ. ಇದರಿಂದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಶುಲ್ಕ ಕಟ್ಟಲು ಸಾಧ್ಯವಾಗುತ್ತಿಲ್ಲ.

ಗ್ರಾಮೀಣ ಭಾಗದ ಬಡ ಕುಟುಂಬಗಳಿಂದ ಬಂದಿರುವ ಹಲವು ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿದ್ಯಾರ್ಥಿ ವೇತನ ಹೆಚ್ಚಿನ ನೆರವನ್ನು ನೀಡುತ್ತಿತ್ತು. ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಶಿಕ್ಷಣ ಸಚಿವರು ಇತ್ತ ಗಮನಹರಿಸಿ, ಕೂಡಲೇ ವಿದ್ಯಾರ್ಥಿ ವೇತನ ಮಂಜೂರು ಮಾಡಬೇಕು. ಇದರಿಂದ ಸಾವಿರಾರು ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗುತ್ತದೆ.

ರೇಣುಕಾರಾಜ್, ಹರನಹಳ್ಳಿ

ಜಾತಿ ಬೆಂಬಲವಿಲ್ಲದ ಅಧಿಕಾರಿಗಳದ್ದು ನಾಯಿಪಾಡೇ?!

'ಯಾರೇ ಮುಖ್ಯಮಂತ್ರಿಯಾದರೂ ಅವರ ಸಮುದಾಯದ ಅಧಿಕಾರಿಗಳಿಗೆ ಒಳ್ಳೆಯ ಸ್ಥಾನ ಕೊಡುತ್ತಾರೆ. ಈಗ ನಮ್ಮ ಸಮುದಾಯದವರು ಮೂಲೆಗುಂಪಾಗಿದ್ದಾರೆ. ಹೀಗಾಗಿ ವೀರಶೈವ ಲಿಂಗಾಯತ ಅಧಿಕಾರಿಗಳ ಸ್ಥಿತಿ ನಾಯಿಪಾಡಾಗಿದೆ' ಎಂದು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಮತ್ತು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಸೆ. 29). ತಮ್ಮ ಸಮುದಾಯದವರು ಮುಖ್ಯಮಂತ್ರಿಗಳಾಗಿದ್ದಾಗ ವೀರಶೈವ ಲಿಂಗಾಯತ ಅಧಿಕಾರಿಗಳಿಗೆ ಆಯಕಟ್ಟಿನ ಸ್ಥಾನ ಇರುತ್ತಿತ್ತು ಎಂಬುದನ್ನೂ ಅವರು ಮುಚ್ಚುಮರೆಯಿಲ್ಲದೆ ಒಪ್ಪಿಕೊಂಡಿದ್ದಾರೆ. ಜಾತಿ ಬೆಂಬಲವಿಲ್ಲದ, ತಮ್ಮ ಜಾತಿಯವರೇ ಮುಖ್ಯಮಂತ್ರಿಯಾಗಿಲ್ಲದ ಜಾತಿಗಳಿಗೆ ಸೇರಿದ ಅಧಿಕಾರಿಗಳದ್ದು ಹಾಗಾದರೆ ನಾಯಿಪಾಡೇ?!

ನಮ್ಮ ಸಂವಿಧಾನದಲ್ಲಿ 'ಜಾತ್ಯತೀತ' ಮತ್ತು 'ಸಮಾಜವಾದ' ಎಂಬ ಪದಗಳನ್ನು ಉಳಿಸಿಕೊಂಡಿದ್ದೇವೆ. ಸಾಂವಿಧಾನಿಕ ಹುದ್ದೆಯನ್ನು ಅಲಂಕರಿಸುವ ಎಲ್ಲರೂ, ಸಂವಿಧಾನಕ್ಕೆ ಬದ್ಧರಾಗಿರುವುದಾಗಿ ಪ್ರತಿಜ್ಞೆಯನ್ನು ಮಾಡುತ್ತಾರೆ. ಆದರೂ ಸಂವಿಧಾನದಲ್ಲಿ ಇಲ್ಲದ ಉಪಮುಖ್ಯಮಂತ್ರಿ ಹುದ್ದೆಗಳನ್ನು ಜಾತಿವಾರು ಸೃಷ್ಟಿಸುವಂತೆ ಬೇಡಿಕೆಯನ್ನೂ ಇಡುತ್ತಾರೆ! ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸಂವಿಧಾನದ ಪ್ರಸ್ತಾವನೆ ಓದುವುದನ್ನು ಕಡ್ಡಾಯಗೊಳಿಸಲಾಗಿದೆ. ಮತದಾರರಿಂದ ಆಯ್ಕೆಯಾಗಿ ಬರುವ ಜನಪ್ರತಿನಿಧಿಗಳು ಇಡೀ ಜನತೆಯ ಹಿತ ಕಾಪಾಡಬೇಕೆ ವಿನಾ ತಮ್ಮ ಸಮುದಾಯ ಅಥವಾ ಜಾತಿಯ ಹಿತವನ್ನು ಮಾತ್ರವಲ್ಲ. ಸಂವಿಧಾನದಲ್ಲಿ ಅಡಕವಾಗಿರುವ ಸದಾಶಯಗಳು ಆಚರಣೆಗೆ ತರುವುದಕ್ಕಾಗಿ ಇವೆಯೇ ಹೊರತು, ವೇದಿಕೆಗಳ ಮೇಲಿನ ಭಾಷಣಗಳಿಗೆ ಸೀಮಿತಗೊಳ್ಳಲು ಅಲ್ಲ ಅಥವಾ ಶಾಲಾಕಾಲೇಜು ವಿದ್ಯಾರ್ಥಿಗಳ ಬಾಯಿಂದ ಪೀಠಿಕೆಯನ್ನು ಹೇಳಿಸಿ, ಸಂವಿಧಾನವನ್ನು ಗೌರವಿಸುತ್ತಿದ್ದೇವೆ ಎಂಬ ಸೋಗಲಾಡಿತನ ಮಾಡುವುದಕ್ಕಲ್ಲ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಕಲೆಗಿದೆ ಭಾಷಾತೀತ, ಜಾತ್ಯತೀತ ಮೌಲ್ಯ

ತಮಿಳು ನಟ ಸಿದ್ಧಾರ್ಥ ಅವರ ಅಭಿನಯದ 'ಚಿಕ್ಕು' ಸಿನಿಮಾದ ಮಾಧ್ಯಮಗೋಷ್ಠಿಗೆ ಕನ್ನಡಪರ ಸಂಘಟನೆಗಳ ಕೆಲ ಕಾರ್ಯಕರ್ತರು ತೆರಳಿ ಗಲಾಟೆ ಮಾಡಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ನಿಜಕ್ಕೂ ಅಕ್ಷಮ್ಯ ಹಾಗೂ ಸ್ವಾಭಿಮಾನಿ ಕನ್ನಡಿಗರು ತಲೆತಗ್ಗಿಸುವಂತೆ ಮಾಡಿದೆ. ಅಲ್ಲದೆ ಮುಜುಗರಕ್ಕೆ ಎಡೆಮಾಡಿಕೊಟ್ಟಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ನಿರ್ಮಾಣಕ್ಕೆ ತಮಿಳಿನ ಹಿರಿಯ ನಟ ಶಿವಾಜಿ ಗಣೇಶನ್ ಹೆಚ್ಚಿನ ದೇಣಿಗೆ ನೀಡಿದ್ದಾರೆ. ಗಾಯಕ ಪಿ.ಬಿ.ಶ್ರೀನಿವಾಸ್ ಅವರನ್ನು 'ನಿಮ್ಮ ಮಾತೃಭಾಷೆ ಯಾವುದು' ಎಂದು ಕೇಳಿದರೆ 'ಕಲೆಯೇ ನನ್ನ ಮಾತೃಭಾಷೆ' ಎನ್ನುತ್ತಿದ್ದರು. ಈ ರೀತಿ ಕಲೆಗೆ ಒಂದು ಭಾಷಾತೀತ, ಜಾತ್ಯತೀತ ಮೌಲ್ಯ ಇದೆ.

ಕನ್ನಡಿಗರ ಹೃದಯ ವೈಶಾಲ್ಯ ಜಾಗತಿಕ ಮಟ್ಟದಲ್ಲಿ ಹೆಸರುವಾಸಿ ಆಗಿರುವುದನ್ನು ಅರಿಯದೆ, ಸಿದ್ಧಾರ್ಥ ಅವರು ಕನ್ನಡದಲ್ಲೇ ವಿನಂತಿ ಮಾಡುತ್ತಿದ್ದರೂ ಗಲಾಟೆ ಮಾಡಿರುವುದು ಸರಿಯಲ್ಲ. ಮುಂದೆ ಇಂತಹ ಭಾಷಾ ದ್ವೇಷ ಉಂಟಾಗದಂತೆ ಕರ್ನಾಟಕ ಸರ್ಕಾರವು ಸಂಬಂಧಪಟ್ಟವರಿಗೆ ತಿಳಿವು, ಎಚ್ಚರಿಕೆ ಮೂಡಿಸಬೇಕಾಗಿದೆ.

ಆರ್.ವೆಂಕಟರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಹು ಆಯಾಮಗಳ ಅಂಕಣ–ಒಳಾಂಗಣ

ಪ್ರಜಾವಾಣಿಯ ಸಂಪಾದಕೀಯ ಬಳಗದವರಿಂದಲೇ ರೂಪುತಳೆದ 'ಭೂ ಬಾಣ', 'ವಿಜ್ಞಾನ ವಿಶೇಷ', 'ದೆಹಲಿ ನೋಟ', 'ಕಡೆಗೋಲು'ವಿನಂತಹ ಅಂಕಣಗಳು ನಾಡಿನ ಜನರ ಪ್ರಜ್ಞೆಯನ್ನು ಎಚ್ಚರಗೊಳಿಸಿವೆ. ರಾಜಕೀಯ, ಸಿನಿಮಾ, ಹೆಣ್ಣನ, ಆರ್ಥಿಕತೆ, ತಂತ್ರಜ್ಞಾನಗಳಂಥ ವಿಷಯ, ವಿಚಾರದ ವಿಸ್ತಾರ ನೀಡಿದ್ದು ಕೂಡ 'ಪ್ರಜಾವಾಣಿ'ಯ ಅಂಕಣಗಳ ವಿಶೇಷವೇ ಆಗಿದೆ



● ರಘುನಾಥ ಚ.ಹ.

ಪತ್ರಿಕೆಯೊಂದರ 'ಅಂಕಣ'ಕಣ ಚೆಲುವು-ಸಮೃದ್ಧಗೊಳ್ಳಲು ನಾಡಿನ ವಿವಿಧ ಕ್ಷೇತ್ರಗಳ ಪ್ರಜ್ಞಾವಂತರ ಬರಹಗಳಷ್ಟೇ ಸಾಲವು; ಅಂತರ್ಜಲ ರೂಪದ ಒಳಗಿನ ಪತ್ರಕರ್ತರು ಕೈಗೂಡಿಸಬೇಕು. ಪತ್ರಿಕೆಯೊಂದರ ಅಂಕಣ ಸೋಪಾನದಲ್ಲಿ 'ನಿಲಯದ ಕಲಾವಿದ'ರ ಸಂಖ್ಯೆ ಹೆಚ್ಚಾಗಿದ್ದವು, ಆ ಪತ್ರಿಕೆಯ ಸಂಪಾದಕೀಯ ವಿಭಾಗದ ಸಮೃದ್ಧಿ ಮತ್ತು ಗಟ್ಟಿತನದ ಸಂಕೇತ. 'ಪ್ರಜಾವಾಣಿ' ತನ್ನ ಆರಂಭದ ದಿನಗಳಿಂದಲೇ ಬಳಗದ ಪತ್ರಕರ್ತರ ಅಂಕಣಗಳಿಗೆ ವೇದಿಕೆಯಾಗುವ ಮೂಲಕ, ಸಂಪಾದಕೀಯ ವಿಭಾಗದ ಸಮೃದ್ಧಿಯನ್ನು ಪ್ರಕಟಗೊಳಿಸುತ್ತಾ ಬಂದಿದೆ. ಈ ಅಂಕಣಕಾರರಲ್ಲಿ ಕೆಲವರು ಪತ್ರಿಕೆಯಾಚೆಗೂ ಉತ್ತಮ ಬರಹಗಾರರಾಗಿ ಗುರುತಿಸಿಕೊಂಡಿದ್ದಾರೆ.

'ಪ್ರಜಾವಾಣಿ' ಬಳಗದ ಅಂಕಣಪರಿತೆಯನ್ನು ಟಿ.ಎಸ್. ರಾಮಚಂದ್ರ ರಾವ್ ಅವರ 'ಭೂ ಬಾಣ'ದಿಂದ ಆರಂಭಿಸಬೇಕು. ಟೀಯೆಸ್ಸಾರ್ ಅವರು 'ಪ್ರಜಾವಾಣಿ' ಸಂಪಾದಕರಾಗಿ ಸೇರ್ಪಡೆಯಾದ ಕೆಲವು ಸಮಯದಲ್ಲೇ ಆರಂಭಗೊಂಡ 'ಭೂ ಬಾಣ', ಅವರು ನಿವೃತ್ತರಾಗುವ ವರೆಗೆ ನಿರಂತರವಾಗಿ ಪ್ರಕಟಗೊಂಡಿತು. ದೈನಿಕದ ಸಂಗತಿಗಳನ್ನು ಓದುಗರಿಗೆ ಕಚಗುಳಿಯಾಗುವಂತೆ 'ಭೂ ಬಾಣ' ಪ್ರಸ್ತುತಪಡಿಸುತ್ತಿತ್ತು. ಸ್ವತಃ ಟೀಯೆಸ್ಸಾರ್ ದಾಖಲಿಸಿರುವಂತೆ, 'ಅಂದಿನಂದಿನ ಸುದ್ದಿಗಳ ಮೇಲೆ ಬಹುಮಟ್ಟಿಗೆ ಶ್ರೀಸಾಮಾನ್ಯನ ನಿರೀಕ್ಷೆ-ಪರೀಕ್ಷೆಗಳ ಕ್ಷ ಕಿರಣದ ಕ್ಯಾಮರಾ ಹಿಡಿಯುವುದು 'ಭೂ ಬಾಣ'ದ ಉದ್ದೇಶ. ಉದ್ದೇಶ ಸ್ಥೂಲಮಟ್ಟಿಗೆ ಯಾದರೂ ಸಫಲವಾಗಿದೆಯೆಂದು ವಾರಕ್ಕೆ ಐದು ದಿವಸ ದಿನಕ್ಕೊಂದು ಬಗೆಯ ಮಸಾಲೆ ಅರೆಯಬೇಕಾದ ಈ ಬಾಣಸಿಗನ ಭಾವನೆ'. ಈ ಅಂಕಣದ ಕೆಲವು ಬರಹಗಳು 1977ರಲ್ಲಿ ಪುಸ್ತಕ ರೂಪದಲ್ಲೂ ಪ್ರಕಟಗೊಂಡಿವೆ.

'ದೈನಂದಿನ ಆಗುಹೋಗುಗಳಿಗೆ ವಿಡಂಬನೆಯ ವ್ಯಾಖ್ಯೆ ನೀಡುವ 'ಭೂ ಬಾಣ' – ನಿಜವಾದ ಅರ್ಥದಲ್ಲಿ ಇಂದಿನ ಕನ್ನಡ ಪತ್ರಿಕೋದ್ಯಮದಲ್ಲಿನ ಏಕಮಾತ್ರ ಕಾಲಂ; ನಮ್ಮ ಸಾರ್ವಜನಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ದೊಡ್ಡವರ ಸಣ್ಣತನಗಳಿಗೆ, ಸಣ್ಣವರ ದೊಡ್ಡತನಗಳಿಗೆ ಹಿಡಿದ ರಾಹುಗನ್ನಡಿ. ಬಾಣದ ಆಘಾತಕ್ಕೆ ಸಿಕ್ಕಿದವರೂ ಮೆಚ್ಚುವ, ಮೆಚ್ಚಬೇಕಾದ ಪ್ರತಿಭೆ ಈ ಕಾಲಮಿಸ್ಟರದು. ಪದಗಳ ರೂಪ ಬದಲಿಸಿ, ಅರ್ಥ ಬದಲಿಸಿ ಅನಿರೀಕ್ಷಿತ ಅರ್ಥಪ್ರಪಂಚವನ್ನೇ ಸೃಷ್ಟಿಸಬಲ್ಲ ಈ ಶಕ್ತಿ ಅದ್ಭುತವಾದದ್ದು; ಸ್ವೋಪಜ್ಞವಾದದ್ದು' ಎನ್ನುವ ಹಾ.ಮಾ. ನಾಯಕರ ಮಾತು 'ಭೂ ಬಾಣ'ದ ಹೆಚ್ಚುಗಾರಿಕೆಗೆ ನಿದರ್ಶನದಂತಿದೆ. ದಿಟ್ಟತನ ಹಾಗೂ ಭಕ್ತಿರಾಹಿತ್ಯದ ಕಾರಣಗಳಿಂದಾಗಿ 'ಭೂ ಬಾಣ'ವನ್ನು ಯು.ಆರ್. ಅನಂತಮೂರ್ತಿ ಮೆಚ್ಚಿಕೊಂಡಿದ್ದರು.



'ಭೂ ಬಾಣ'ದ ಹಿರಿಯ ಸೋದರನ ರೂಪದಲ್ಲಿ ಬಿ. ಪುಟ್ಟಸ್ವಾಮಯ್ಯನವರ 'ಪಾನ್‌ಸುಪಾರಿ' ಅಂಕಣವನ್ನು ಗುರುತಿಸಬೇಕು. ಪುಟ್ಟಸ್ವಾಮಯ್ಯನವರ ನಂತರ 'ಪಾನ್‌ಸುಪಾರಿ' ಜಾಗ ತುಂಬಿದ್ದು 'ಭೂ ಬಾಣ'. ಅದೇ ಕಾಲಕ್ಕೆ 'ಡೆಕ್ಕನ್ ಹೆರಾಲ್ಡ್'ನಲ್ಲಿ ಪ್ರಕಟಗೊಳ್ಳುತ್ತಿದ್ದ ಪೋತೆನ್ ಜೋಸೆಫರ 'ಓವರ್ ಎ ಕಪ್ ಆಫ್ ಟೀ' ಅಂಕಣ ಜನಪ್ರಿಯವಾಗಿತ್ತು. ಆ ಮಾದರಿ ಪ್ರಜಾವಾಣಿಗೂ ಅಗತ್ಯವೆನಿಸಿದಾಗ, ಟೀಯೆಸ್ಸಾರ್ ಅಂಕಣಪರೀಕ್ಷೆಗೆ ತಮ್ಮನ್ನೊಡ್ಡಿಕೊಂಡರು. 'ಅಂತರಂಗ ಬಹಿರಂಗ' ಹೆಸರಿನಲ್ಲಿ 1949 ರಲ್ಲಿ ಪ್ರಾರಂಭವಾದ ಅಂಕಣ, ನಂತರದಲ್ಲಿ 'ರಾಮಬಾಣ'ವಾಯಿತು. ಆ ಹೆಸರೂ ಸರಿ ಕಾಣದ್ದರಿಂದ, ರಾಶಿಯವರ ಸಲಹೆಯಂತೆ 'ಭೂ ಬಾಣ' ಎಂದು ಮರುನಾಮಕರಣ ಹೊಂದಿತು.

ದೆಹಲಿ ನೋಟ ಮತ್ತು ಖೋ ಆಟ

'ದೆಹಲಿ ನೋಟ' ಪ್ರಜಾವಾಣಿಯ ದೆಹಲಿ ಪ್ರತಿನಿಧಿಗಳಿಗೆ ಮೀಸಲಾಗಿದ್ದ ಖೋ ಮಾದರಿಯ ಅಂಕಣ. ಈ ಶೀರ್ಷಿಕೆಯಲ್ಲಿ ಬಿ.ವಿ. ನಾಗರಾಜು, ಎಸ್.ಗಣೇಶನ್, ದಿನೇಶ್ ಅಮಿನ್‌ಮಟ್ಟು, ಡಿ. ಉಮಾಪತಿ ಹಾಗೂ ಹೊನಕೆರೆ ನಂಜುಂಡೇಗೌಡ ಅವರು ಬರೆದ ಅಂಕಣ ಬರಹಗಳು ರಾಷ್ಟ್ರ ರಾಜಕಾರಣದ ಆಳ-ಅಗಲಗಳನ್ನು ಓದುಗರಿಗೆ ಮನವರಿಕೆ ಮಾಡುವ ಪ್ರಯತ್ನಗಳಾಗಿದ್ದವು.

ಕನ್ನಡ ಓದುಗರ ರಾಜಕೀಯ ಸಂವೇದನೆಯನ್ನು ಸೂಕ್ಷ್ಮಗೊಳಿಸಿದ ಬರಹಗಳ ರೂಪದಲ್ಲಿ ದಿನೇಶ್ ಅಮಿನ್‌ಮಟ್ಟು ಅವರ 'ದೆಹಲಿ ನೋಟ' ಹಾಗೂ 'ಅನಾವರಣ' ಅಂಕಣಗಳನ್ನು ಗುರ್ತಿಸಬೇಕು. ಸರಳ, ಸ್ಪಷ್ಟ ಹಾಗೂ ನಿಷ್ಠುರ ಗುಣಗಳಿಂದಾಗಿ ಅವರ ಅಂಕಣಗಳು ಓದುಗರಿಗೆ ಹತ್ತಿರವಾಗಿದ್ದವು. ವಿವೇಕಾನಂದರ ಬದುಕು ಹಾಗೂ ವ್ಯಕ್ತಿತ್ವದ ಅಷ್ಟೇನೂ ಜನಪ್ರಿಯವಲ್ಲದ ಸಂಗತಿಗಳನ್ನು ಪ್ರಸ್ತಾಪಿಸಿದ್ದ ಅವರ ಅಂಕಣ ಬರಹವೊಂದು ಓದುಗರ ನಡುವೆ ದೊಡ್ಡ ಚರ್ಚೆಗೆ ಕಾರಣವಾಗಿತ್ತು.

ರಾಜಕೀಯ ಅಂಕಣಕಾರರಾಗಿ ಗಮನಿಸಲೇಬೇಕಾದ ಮತ್ತೊಂದು ಹೆಸರು ಡಿ. ಉಮಾಪತಿ ಅವರದು. 'ದೆಹಲಿ ನೋಟ' ಹೆಸರಿನಲ್ಲಿ ಅವರು ಬರೆದ ಬರಹಗಳು, ಅದೇ ಹೆಸರಿನಲ್ಲಿ ಪುಸ್ತಕವಾಗಿ ಸಂಕಲನಗೊಂಡಿವೆ. ಜನಸಾಮಾನ್ಯರ ಬದುಕು ವ್ಯವಸ್ಥೆಯ ನಿರ್ಲಕ್ಷ್ಯ ಹಾಗೂ ದರ್ಪದಡಿ ನಲುಗುವುದನ್ನು ಚಿತ್ರಿಸುವ ಉಮಾಪತಿ ಅವರ ಬರಹಗಳು ಓದುಗರ ಸಂವೇದನೆಯನ್ನು ಸೂಕ್ಷ್ಮಗೊಳಿಸುವ ಕೆಲಸವನ್ನು ಮಾಡಿವೆ.

'ಪ್ರಜಾವಾಣಿ'ಯ ಸಂಪಾದಕೀಯ ವಿಭಾಗದ ಸಮೃದ್ಧಿಯನ್ನು ಸೂಚಿಸುವ ಮತ್ತೊಂದು ಅಂಕಣ 'ಲೋಕವಿಹಾರ.' ಡಿ.ವಿ. ರಾಜಶೇಖರ್ ಅವರ ಈ ಅಂಕಣ, ವಿಶ್ವದ ವಿದ್ಯಮಾನಗಳಿಗೆ ಕನ್ನಡ ಪತ್ರಕರ್ತನೊಬ್ಬನ ಪ್ರತಿಕ್ರಿಯೆಯಂತಿತ್ತು. ಅಂತರ್ಜಾಲದ ಸವಲತ್ತು ಇಲ್ಲದಿದ್ದ ದಿನಗಳಲ್ಲಿ, ಅಂತರರಾಷ್ಟ್ರೀಯ ವಿದ್ಯಮಾನಗಳ ಗ್ರಹಿಕೆ ಹಾಗೂ ವಿಶ್ಲೇಷಣೆ ಯಾವುದೇ ಪತ್ರಕರ್ತನಿಗೆ ಸವಾಲೆನ್ನಿಸಿದ್ದ ಸಂದರ್ಭದಲ್ಲಿ, ರಾಜಶೇಖರ್ ಅವರ ಅಂಕಣ ಬರಹಗಳು ಕನ್ನಡದ ಓದುಗನಿಗೆ ಜಾಗತಿಕ ವಿದ್ಯಮಾನಗಳನ್ನು ಪರಿಚಯಿಸುವ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿತ್ತು. ಮೊಬೈಲ್ ಮೂಲಕ ವಿಶ್ವವೇ ಅಂಗೈಗೆ ಬಂದಂತಿರುವ ದಿನಗಳಲ್ಲೂ, 'ಲೋಕವಿಹಾರ'ದ ಬರಹಗಳು ಈಗಲೂ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಮಾದರಿಯಂತಿವೆ. 'ಲೋಕವಿಹಾರ'ದ ಅವಳಿಯಂತಿದ್ದ ಪಿ. ರಾಮಣ್ಣನವರ 'ರಾಷ್ಟ್ರ ವಿಹಾರ' ರಾಷ್ಟ್ರೀಯ ಸಮಾಚಾರಗಳ ವಿಶ್ಲೇಷಣೆಗಳಿಗೆ ಮೀಸಲಾಗಿತ್ತು. ಕೆ. ಶ್ರೀಧರ ಆಚಾರ್ ಅವರ 'ಒಳಧ್ವನಿ' ರಾಜಕೀಯ ವಿಶ್ಲೇಷಣೆಗಳ ಮತ್ತೊಂದು ಜನಪ್ರಿಯ ಅಂಕಣ.

ಪದ್ಮರಾಜ ದಂಡಾವತಿ ಅವರ 'ಪ್ರಜಾವಾಣಿ'ಯಲ್ಲಿನ 'ನಾಲ್ಕನೇ ಆಯಾಮ' ಅಂಕಣ ಬರಹಗಳಲ್ಲಿ ಕೂಡ ರಾಜಕೀಯ ವಿಶ್ಲೇಷಣೆಯಿದೆ. ಎಂಟು ವರ್ಷಗಳಿಗೂ ಹೆಚ್ಚು ಕಾಲ ಪ್ರತಿ ಭಾನುವಾರ ಪ್ರಕಟಗೊಂಡ 'ನಾಲ್ಕನೇ ಆಯಾಮ'ದ ಬರಹಗಳು, ಆರು ಸಂಪುಟಗಳಲ್ಲಿ ಪುಸ್ತಕ ರೂಪದಲ್ಲೂ ಪ್ರಕಟಗೊಂಡಿವೆ. ಸಾಹಿತ್ಯ, ಸಂಸ್ಕೃತಿ, ಭಾಷೆ, ಪತ್ರಿಕೋದ್ಯಮ, ಪ್ರವಾಸ, ಶಿಕ್ಷಣ ಸೇರಿದಂತೆ ಸೂಕ್ಷ್ಮಸಂವೇದಿ ಪತ್ರಕರ್ತನೊಬ್ಬ ಆಸಕ್ತಿ ತಾಳಬಹುದಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಬರಹಗಳು 'ನಾಲ್ಕನೇ ಆಯಾಮ'ದಲ್ಲಿ ಸಂಕಲನಗೊಂಡಿವೆ.



ಆಶಯಪ್ರಧಾನ ಹಾಗೂ ಮಹಿಳಾಪ್ರಧಾನ

ಸಿ.ಜಿ. ಮಂಜುಳಾ ಅವರ 'ಕಡೆಗೋಲು' ಹಾಗೂ ಆರ್. ಪೂರ್ಣಿಮಾ ಅವರ 'ಜೀವನ್ಮುಖಿ', ಸ್ವರೂಪದಲ್ಲಿ ಭಿನ್ನವಾಗಿದ್ದರೂ ಆಶಯಗಳ ದೃಷ್ಟಿಯಿಂದ ಒಟ್ಟಿಗೆ ಗುರ್ತಿಸಬಹುದಾದ ಅಂಕಣಗಳು. ಸ್ತ್ರೀವಾದವನ್ನು ಕೇಂದ್ರವಾಗುಳ್ಳ ಮಂಜುಳಾ ಅವರ 'ಕಡೆಗೋಲು' ಬರಹಗಳು, ಅಕಡೆಮಿಕ್ ಶಿಸ್ತಿಗೆ ಒಳಪಟ್ಟಿದ್ದವು. ಪೂರ್ಣಿಮಾ ಅವರ 'ಜೀವನ್ಮುಖಿ' ಅಂಕಣಗಳ ಕೇಂದ್ರದಲ್ಲಿ ಸ್ತ್ರೀಧ್ವನಿಯಿದ್ದರೂ, ಸಮಕಾಲೀನ ವಿದ್ಯಮಾನಗಳಿಗೆ ಸೃಜನಶೀಲ ಸ್ಪಂದನಗಳ ರೂಪದಲ್ಲೂ ಆ ಬರಹಗಳನ್ನು ಗುರ್ತಿಸಬಹುದು. ಹಳಗನ್ನಡ ಸಾಹಿತ್ಯದ ರಸಪ್ರಸಂಗಗಳ ಕುರಿತ 'ನಲ್ದಾಣ' 'ಸಾಹಿತ್ಯ ಪುರವಣಿ'ಯಲ್ಲಿ ಪ್ರಕಟಗೊಂಡ ಪೂರ್ಣಿಮಾರ ಮತ್ತೊಂದು ಅಂಕಣ.



ಪರಂಪರೆಯ ಮುಂದುವರಿಕೆ

'ಪ್ರಜಾವಾಣಿ'ಯ ನಿಲಯದ ಪತ್ರಕರ್ತರ ಅಂಕಣ ಪರಂಪರೆ ಈಗಲೂ ಮುಂದುವರಿದಿದೆ. ರವೀಂದ್ರ ಭಟ್ಟರ 'ಅನುಸಂಧಾನ', ವೈ.ಗ. ಜಗದೀಶ್‌ರ 'ಗತಿಬಿಂಬ', ನಾನು ಬರೆಯುವ 'ಪಡಸಾಲೆ' ಹಾಗೂ ಆಟೋಟದ ಬಗೆಗಿನ ಗಿರೀಶ ದೊಡ್ಡಮನಿಯವರ ಅಂಕಣಬರಹಗಳು 'ಪ್ರಜಾವಾಣಿ ಅಂಕಣ ಪರಂಪರೆ'ಯ ಮುಂದುವರಿದ ಕೊಂಡಿಗಳಂತಿವೆ.

ಪತ್ರಿಕೆಯೊಂದರ ಅಂಕಣಕಾರರು ನಿರ್ದಿಷ್ಟ ವಿಚಾರಧಾರೆಗೆ ಬದ್ಧರಾಗಿರುವುದು ಸಾಮಾನ್ಯ. ಈ ನಿಟ್ಟಿನಲ್ಲಿ 'ಪ್ರಜಾವಾಣಿ'ಯದು ಭಿನ್ನ ಮಾರ್ಗ. ಎಲ್ಲ ಬಗೆಯ ಅಭಿಪ್ರಾಯಗಳಿಗೂ ವಾಣಿಯಾಗುವ ಪತ್ರಿಕೆಯ ಹಂಬಲ ಅಂಕಣಗಳಲ್ಲೂ ಪ್ರಕಟಗೊಂಡಿದೆ. ಭಿನ್ನ ವಿಚಾರಧಾರೆಗಳ ಅಂಕಣಗಳು ಪತ್ರಿಕೆ ಹಾಗೂ ಪತ್ರಿಕೋದ್ಯಮದ ವಿಶ್ವಾಸಾರ್ಹತೆಯನ್ನು ಪ್ರತಿನಿಧಿಸುವಂತಿವೆ.

'ಪ್ರಜಾವಾಣಿ' ಬಳಗದ ಪತ್ರಕರ್ತರ ಎಲ್ಲ ಅಂಕಣಗಳಲ್ಲಿನ ಸಾಮಾನ್ಯ ಗುಣ, ಓದುಗರೊಂದಿಗೆ ಸಾಧಿಸಿದ ನೇರ ಸಂವಹನ ಹಾಗೂ ವಸ್ತುವೈವಿಧ್ಯ. ಕನ್ನಡ ಮನಸ್ಸುಗಳನ್ನು, ಕನ್ನಡದ ನುಡಿಯನ್ನು ವಿಸ್ತರಿಸಿದ ಅಗ್ಗಳಿಕೆ ಈ ಅಂಕಣಗಳದು.

ಬಹುರುಚಿಗಳ ಬರವಣಿಗೆ


ಎಂ. ನಾಗರಾಜ ಅವರ 'ಉತ್ತರ ದಿಕ್ಕಿನಿಂದ' ಹಾಗೂ ಸುದೇಶ ದೊಡ್ಡಪಾಳ್ಯರ 'ಈಶಾನ್ಯ ದಿಕ್ಕಿನಿಂದ' 'ಪ್ರಜಾವಾಣಿ'ಯ ಎರಡು ವಿಶಿಷ್ಟ ಅಂಕಣಗಳು. ಹೆಸರೇ ಸೂಚಿಸುವಂತೆ ಈ ಅಂಕಣಗಳು ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದ ತವಕ ತಲ್ಲಣಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನಗಳಾಗಿದ್ದವು. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ 'ಚಹಾದ ಜೋಡಿ ಚೂಡಾದ್ಹಾಂಗ' ಹಾಗೂ ವೀರಣ್ಣದಂಡೆಯವರ 'ಕಲ್ಬುರ್ಗಿಯ ಕಲರವ' ಅಂಕಣಗಳ ಸ್ವರೂಪವನ್ನು ನೆನಪಿಸುವಂತಿದ್ದರೂ, ಸ್ವರೂಪದ ದೃಷ್ಟಿಯಿಂದ ಎರಡೂ ಅಂಕಣಗಳು ಸಂಪೂರ್ಣ ಭಿನ್ನವಾಗಿದ್ದವು.

ನಾಗೇಶ ಹೆಗಡೆ ಅವರ 'ವಿಜ್ಞಾನ ವಿಶೇಷ' ಅಂಕಣ ಕನ್ನಡದ ಬಹು ದೀರ್ಘ ಅಂಕಣ ಬರಹಗಳಲ್ಲೊಂದು. 1982ರಲ್ಲಿ ಆರಂಭವಾದ ಈ ಅಂಕಣ, ನಾಲ್ಕು ದಶಕಗಳ ಪಯಣ ಪೂರೈಸಿ ಮುನ್ನಡೆದಿದೆ. ಪತ್ರಿಕೆಯ ಮೂಲಕ ವಿಜ್ಞಾನ ಸಾಹಿತ್ಯವನ್ನು ಜನಪ್ರಿಯ–ಜನಪರಗೊಳಿಸುವಲ್ಲಿ ನಾಗೇಶ ಹೆಗಡೆ ಅವರ ಕೊಡುಗೆ ಮಹತ್ವದ್ದು. 'ಪ್ರಜಾವಾಣಿ' ಸಂಪಾದಕೀಯ ಪುಟದಲ್ಲಿನ 'ವಿಜ್ಞಾನ ವಿಶೇಷ' ಅಂಕಣ ಕನ್ನಡದ ಓದುಗರಲ್ಲಿ ಮೂಡಿಸಿದ ವೈಜ್ಞಾನಿಕ ಎಚ್ಚರ ಸಾಮಾನ್ಯವಾದುದಲ್ಲ. ವಿಜ್ಞಾನದ ಸಂಕೀರ್ಣ ವಿಷಯಗಳನ್ನು ಸರಳವಾಗಿ ಹಾಗೂ ಆಕರ್ಷಕವಾಗಿ ನಿರೂಪಿಸುವುದು ನಾಗೇಶ ಹೆಗಡೆ ಅವರ ವಿಶೇಷ. ಕವಿತೆ–ಕಥೆಗಳಂಥ ಸೃಜನಶೀಲ ಸಾಹಿತ್ಯದಷ್ಟೇ ಅವರ ವಿಜ್ಞಾನ ಬರಹಗಳ ಪ್ರಯೋಗಶೀಲತೆಯನ್ನು ಗುರ್ತಿಸಬಹುದು.

ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆಯೂ 'ಪ್ರಜಾವಾಣಿ' ಬಳಗ ವಿಭಿನ್ನ ಅಂಕಣಗಳನ್ನು ರೂಪಿಸಿದೆ. ಅವುಗಳಲ್ಲಿ ಮುಖ್ಯವಾದುದು, ಎನ್.ಎ.ಎಂ. ಇಸ್ಮಾಯಿಲ್ ಅವರ 'ಇ–ಹೊತ್ತು', ಗಂಗಾಧರ ಮೊದಲಿಯಾರರ 'ಫಿಲ್ಮ್ ಡೈರಿ' ಹಾಗೂ ಶೈಲೇಶ್‌ಚಂದ್ರ ಗುಪ್ತ ಅವರ 'ಅರ್ಥನೋಟ' ಅಂಕಣಗಳು. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗಳನ್ನು ನೆಪವಾಗಿಟ್ಟುಕೊಂಡು ಇಸ್ಮಾಯಿಲ್ ಬರೆಯುತ್ತಿದ್ದ ಒಳನೋಟಗಳ ವಿಶ್ಲೇಷಣೆಗಳು, ಸಮಕಾಲೀನ ಜಗತ್ತನ್ನು ಅರಿಯಲು ಬೆಳಕಿಂಡಿಗಳಂತಿದ್ದವು. ಶೈಲೇಶ್‌ರ ಅಂಕಣ ಬರಹಗಳು ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಶಿಷ್ಟ ರಚನೆಗಳಾಗಿದ್ದವು. 'ಅರ್ಥನೋಟ'ದ ಆಯ್ದ ಬರಹಗಳು ಹಂಪಿ ವಿಶ್ವವಿದ್ಯಾಲಯದಿಂದ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿವೆ. 'ಕಾಸು ಕಿಮ್ಮತ್ತು' ಹಾಗೂ 'ಸರಕು ಸಂಪತ್ತು' ಶೈಲೇಶ್‌ಚಂದ್ರರ ಮತ್ತೆರಡು ಅಂಕಣಗಳು. ಮೊದಲಿಯಾರರ 'ಫಿಲ್ಮ್ ಡೈರಿ' ಕನ್ನಡ ಚಿತ್ರರಂಗದ ಇತಿಹಾಸ–ವರ್ತಮಾನಗಳ ಅನುಸಂಧಾನದಂತಿತ್ತು. ಟೀಯೆಸ್ಸಾರ್ 'ಭೂಬಾಣ' ಮೊದಲಿಯಾರರ ಅಂಕಣಪ್ರಯೋಗದಲ್ಲಿ 'ಚೂಬಾಣ'ವಾಗಿ ಕೆಲವು ಕಾಲ ಚಾಲ್ತಿಯಲ್ಲಿತ್ತು.

ಲಕ್ಷ್ಮಣ ಕೊಡಸೆ ಅವರ 'ಹಾಯಿದೋಣಿ' ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಗತಿಗಳ ಕುರಿತು ಚರ್ಚಿಸುತ್ತಿತ್ತು. ಬಿ.ಎಂ. ಹನೀಫ್ ಅವರ 'ಬಣ್ಣದ ಬುಗುರಿ' ಹಾಗೂ 'ಕನಸು ಕನ್ನಡಿ', ಲೇಖಕರ ಸಾಹಿತ್ಯ–ಸಿನಿಮಾ ಸೇರಿದಂತೆ ಬಹುಮುಖ ಆಸಕ್ತಿಗಳ ವ್ಯಕ್ತರೂಪಗಳಾಗಿದ್ದವು. ಗೋಪಾಲ ಹೆಗಡೆ ಅವರು 'ಕ್ರೀಡಾಂಕಣ' ಹಾಗೂ ಎಂ.ಎ. ಪೊನ್ನಪ್ಪ ಅವರು 'ನೇರ ನೋಟ' ಶೀರ್ಷಿಕೆಯಲ್ಲಿ ಬರೆಯುತ್ತಿದ್ದ ಬರಹಗಳು ಕ್ರೀಡಾಸಕ್ತರ ಮೆಚ್ಚುಗೆ ಗಳಿಸಿದ್ದವು. ಎಸ್. ಸೂರ್ಯಪ್ರಕಾಶ ಪಂಡಿತ್ ಅವರ 'ರಾಮಾಯಣ ರಸಯಾನ'ವು ರಾಮಾಯಣವನ್ನು ಹೊಸ ಬೆಳಕಿನಲ್ಲಿ ನೋಡುವ ಪ್ರಯತ್ನ ಮಾಡಿತು. ಬೆಂಗಳೂರಿನ ಸಮಕಾಲೀನತೆಯನ್ನು ಹಿಡಿದಿಡುವ ನಿಟ್ಟಿನಲ್ಲಿ ಎಸ್.ಆರ್. ರಾಮಕೃಷ್ಣ ಅವರ 'ಸ್ವಪ್ನ ನಗರಿ' ಅತ್ಯಂತ ಮಹತ್ವದ ಅಂಕಣ. 'ಮೆಟ್ರೊ' ಪುರವಣಿಯಲ್ಲಿ ಪ್ರಕಟಗೊಂಡ ಈ ಅಂಕಣ, ಮಹಾನಗರದ ಅನೇಕ ಆಯಾಮಗಳನ್ನು ಪರಿಚಯಿಸಿತು. ಪತ್ರಕರ್ತನ ಕೌತುಕದ ಕಣ್ಣು ಹಾಗೂ ಸಮಾಜಶಾಸ್ತ್ರಜ್ಞನ ಒಳನೋಟಗಳು ಈ ಅಂಕಣವನ್ನು ರೂಪಿಸಿದ್ದವು.

ಸಿನಿ ಬಿಟ್ಸ್


ಯಶ್

ಯಶ್ ಜೊತೆಗೆ ಕೆಜಿಎಫ್–3: ಹೊಂಬಾಳೆ

'ಕೆಜಿಎಫ್' ಕನ್ನಡ ಚಿತ್ರರಂಗದಲ್ಲೊಂದು ದೊಡ್ಡ ಅಧ್ಯಾಯ. ಎರಡು ಭಾಗಗಳ ಸಿನಿಮಾ ಬಂದಮೇಲೆ 'ಚಾಪ್ಟರ್–3' ಬರುತ್ತದೆಯೋ ಇಲ್ಲವೋ, ಈ ಅಧ್ಯಾಯಕ್ಕೂ ಯಶ್ ನಾಯಕರಾಗಿ ಇರುತ್ತಾರೋ ಇಲ್ಲವೋ ಎಂದೆಲ್ಲ ಚರ್ಚೆಗಳು ವರ್ಷಗಳಿಂದಲೂ ನಡೆಯುತ್ತಿವೆ. ಇದೀಗ ನಟ ಯಶ್ ಜೊತೆಗೆ 'ಕೆಜಿಎಫ್–3' ಚಿತ್ರ ಮಾಡುವುದಾಗಿ ಹೊಂಬಾಳೆ ಫಿಲ್ಮ್ಸ್ ಹೇಳಿದೆ.

'ಕೆಜಿಎಫ್–3 ನಮ್ಮ ಸಂಸ್ಥೆಯಿಂದ ಪೈಪ್‌ಲೈನ್‌ನಲ್ಲಿ ಇರುವ ಯೋಜನೆ. 2024ಕ್ಕೆ ಚಿತ್ರೀಕರಣ ಪ್ರಾರಂಭವಾಗಲಿದ್ದು, 2025ಕ್ಕೆ ಬಿಡುಗಡೆಯಾಗಲಿದೆ. ಈ ಬಗ್ಗೆ ನಟ ಯಶ್ ಜೊತೆ ಮೊದಲ ಸುತ್ತಿನ ಮಾತುಕತೆ ಕೂಡ ಮುಗಿದಿದೆ' ಎಂದು ಹೊಂಬಾಳೆಯ ಚಲುವೇಗೌಡ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.


'ಕಾಂತಾರ' ಚಿತ್ರ ತೆರೆಗೆ ಬಂದು ಶನಿವಾರಕ್ಕೆ (ಸೆ.30) ಒಂದು ವರ್ಷವಾಗಲಿದೆ. ಹೀಗಾಗಿ ಹೊಂಬಾಳೆ ಫಿಲ್ಮ್ಸ್ 'ವರಾಹ ರೂಪಂ...' ವಿಡಿಯೋ ಸಾಂಗ್ ಬಿಡುಗಡೆ ಮಾಡುವುದಾಗಿ ಹೇಳಿದೆ. 'ಕಾಂತಾರ–2' ಚಿತ್ರದ ಬಗ್ಗೆ ಈಗಾಗಲೇ ಮಾಹಿತಿ ನೀಡಿತ್ತು. ಇದರ ಚಿತ್ರೀಕರಣ ಪ್ರಾರಂಭವಾಗಲಿದ್ದು, ಜೊತೆಗೆ 'ಸಲಾರ್–2' ಕೆಲಸ ಕೂಡ ಪ್ರಗತಿಯಲ್ಲಿದೆ ಎಂದು ಸಂಸ್ಥೆ ಮಾಹಿತಿ ನೀಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ವರ್ಷಾಂತ್ಯಕ್ಕೆ ತೆರೆಗೆ ಸಲಾರ್

ಪ್ರಭಾಸ್ ನಟನೆಯ 'ಸಲಾರ್' ಸಿನಿಮಾ ಬಿಡುಗಡೆಗೆ ಹೊಂಬಾಳೆ ಫಿಲ್ಮ್ಸ್ ಹೊಸ ಮುಹೂರ್ತ ನಿಗದಿ ಮಾಡಿದೆ. 2023ರ ಡಿ.22ರಂದು 'ಸಲಾರ್' ಬಿಡುಗಡೆಯಾಗಲಿದೆ ಎಂದು ಶುಕ್ರವಾರ ಘೋಷಿಸಿದೆ. ಈ ಹಿಂದೆ ಸೆ.28ರಂದು ಸಿನಿಮಾ ಬಿಡುಗಡೆಗೆ ದಿನಾಂಕ ನಿಗದಿಯಾಗಿತ್ತು. ಕಾರಣಾಂತರಗಳಿಂದ ಬಿಡುಗಡೆ ಮುಂದಕ್ಕೆ ಹೋಗಿತ್ತು. ಅಕ್ಟೋಬರ್‌ನಲ್ಲಿ ಪ್ಯಾನ್ ಇಂಡಿಯಾ ಸಿನಿಮಾಗಳಾದ, ಟೈಗರ್ ಶ್ರಾಫ್ ನಟನೆಯ 'ಗಣಪತ್', ಶಿವರಾಜ್‌ಕುಮಾರ್ ನಟನೆಯ 'ಘೋಸ್ಟ್' ಹಾಗೂ ವಿಜಯ್ ನಟನೆಯ 'ಲಿಯೋ' ತೆರೆಕಾಣುತ್ತಿವೆ. ನವೆಂಬರ್‌ನಲ್ಲಿ ಸಲ್ಮಾನ್ ಖಾನ್ ನಟನೆಯ 'ಟೈಗರ್ 3' ಬಿಡುಗಡೆಯಾಗುತ್ತಿದೆ. ಹೀಗಾಗಿ ಡಿಸೆಂಬರ್‌ನಲ್ಲಿ 'ಸಲಾರ್' ಬಿಡುಗಡೆಗೆ ಮುಹೂರ್ತ ನಿಗದಿಯಾಗಿದೆ. ಡಿಸೆಂಬರ್ 22ರಂದೇ ಶಾರುಕ್ ಖಾನ್ ನಟನೆಯ 'ಡಂಕಿ' ಸಿನಿಮಾ ರಿಲೀಸ್ ಆಗುವ ಸಾಧ್ಯತೆ ಇದೆ. ಆದರೆ ಚಿತ್ರತಂಡದಿಂದ ಈ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಿಲ್ಲ.


ಪ್ರಶಾಂತ್ ನೀಲ್ ಆ್ಯಕ್ಷನ್, ಕಟ್ ಹೇಳಿರುವ 'ಸಲಾರ್', 'ಕೆ.ಜಿ.ಎಫ್.'ನಂತೆ ಎರಡು ಭಾಗಗಳಲ್ಲಿ ತೆರೆಕಾಣುತ್ತಿದೆ. ಸಿನಿಮಾದ ಮೊದಲ ಭಾಗಕ್ಕೆ 'ಸೀಸ್ ಫೈರ್' ಎಂಬ ಅಡಿಬರಹವಿದೆ. ಹೊಂಬಾಳೆ ಫಿಲ್ಮ್ಸ್‌ನಡಿ ನಿರ್ಮಾಪಕ ವಿಜಯ್ ಕಿರಗಂದೂರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಸುಮಾರು ₹400 ಕೋಟಿ ವೆಚ್ಚದಲ್ಲಿ ಸಿನಿಮಾ ನಿರ್ಮಾಣವಾಗಿದೆ.



ಪ್ರಭಾಸ್

ಪದಬಂಧ 5456

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಬರದಲ್ಲಿ ಹೊರದೂಡುವಿಕೆ! (4)
3.ನವಿರಾಗಿ ಪಸರಿಹ ಸುವಾಸನೆ (4)
5.ಸರದ ದರ ನೀಡಿ ತೋರಿದ ಸಲಿಗೆ! (3)
7.ಪದರದೊಳಗೆ ಮೋಕ್ಷ ಕಂಡೀತೇ? (2)
9.ಶಿಷ್ಯನಿಗೆ ವಿದ್ಯೆಯನ್ನು ಕಲಿಸುವವನು (2)
11.ಮರದ ಮೆಟ್ಟು (3)
12.ಮಣ್ಣಿನ ಪಾತ್ರೆಗಳನ್ನು ಮಾಡುವವನು (3)
14.ಮಧುರ ಫಲಗಳನ್ನು ನೀಡುವ ವೃಕ್ಷ (2)
15.ಜನನಿ ನುಡಿದಿರುವ ಸತ್ಯ (2)
17.ಶಿವನ ಇನ್ನೊಂದು ಹೆಸರು (3)
19.ಹೊಗಳಿಕೆಯ ವಿರುದ್ಧ ಪದ (4)
20.ಎಳ್ಳು ನೀರು ಬಿಡುವಿಕೆ (4)

ಮೇಲಿಂದ ಕೆಳಕ್ಕೆ

1.ಸ್ಲೇಟಿನ ಬರೆಯುವ ಸಾಧನ (3)
2.ರಸನಕ್ಕೆ ಅಂಟಿರುವ ದ್ರವ (2)
3.ನಗರದಲ್ಲಿರುವ ಮನುಷ್ಯ (2)
4.ಪುರದ ತುಂಬಾ ಹಬ್ಬಿದ ಸುಳ್ಳು ಸುದ್ದಿ (3)
6.ಧಣಿಗೆ ಆಗಿರುವ ಆಯಾಸ (3)
8.ನೆತ್ತರು ಹರಿಯುವಿಕೆ (5)
9.ಗುಟ್ಟಾಗಿ ಪ್ರವಹಿಸುವುದು (5)
13.ಲಾಂಗೂಲವಿರುವ ಹುಡುಗ! (3)
14.ಮಾತೆ ತೋರಿಸುವ ಪ್ರೀತಿ (3)
16.ಜನರು ಗಲಿಬಿಲಿಯಿಂದ ಏರಿದ ವೇದಿಕೆ! (3)
17.ಅಂಕೆಗೆ ಸಿಕ್ಕದಿರುವಾಗ ಬಂದಿರುವ ಅನುಮಾನ (2)
18 ಕಾಮನ ಪತ್ನಿ (2)

5455ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾದ್ವಾರ 3.ಅಜಗರ
5.ನವದಂಪತಿ 7.ನಸರಿ
9.ಕಾಮನೆ 11.ಪ್ರವಾಹ
13.ಮರಣಕಾಲ
15.ಮುದಿಗೊಡ್ಡು
16.ಮಿಲಾಕತ್ತು

ಮೇಲಿಂದ ಕೆಳಕ್ಕೆ:
1.ಮತದಾನ 2.ರಸನ
4.ಗರತಿ 6.ದಂಡನೆ
8.ಸರಿ 9.ಕಾರಣ
10.ದವಾ
12.ಹಕೀಕತ್ತು 13.ಮಡದಿ
14.ಲಕುಮಿ

ಸುಡೊಕು 5842

					8			5
1		3		6		8	9	4
	8	7	5					
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	


5841 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಸೆಪ್ಟೆಂಬರ್ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಪ್ರತಿಪದ್ ಗಂ. 12-22 ನಕ್ಷತ್ರ: ರೇವತಿ ಗಂ. 21-08 ಯೋಗ: ಧ್ರುವ ಗಂ. 16-27 ಕರಣ: ಕೌಲವ ಗಂ. 12-22, ಕನ್ಯಾ ಮಾಸದ 15ನೇ ದಿನ, ಮಳೆನಕ್ಷತ್ರ: ಹಸ್ತ 1. ರಾಹುಕಾಲ : ಬೆಳಿಗ್ಗೆ 09-00 – 10-30, ಸೂರ್ಯೋದಯ : 06-23 ಸೂರ್ಯಾಸ್ತ : 06-18, ಮುಸ್ಲಿಂ ದಿನಾಂಕ : 14 ರಬಿಉಲ್ಲಾವಲ್, ದಿನ ವಿಶೇಷ : ಟೆಬರ್‌ನ್ಯಾಕಲ್ಸ್ ಮೊದಲ ದಿನ (ಸುಖ್ಕೋತ್) – ಜ್ಯೂಯಿಷ್, ಅದೃಷ್ಟ ಸಂಖ್ಯೆ : 8, 6

ಮೇಷ: ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಶ್ರದ್ಧೆ ಮತ್ತು ಬುದ್ಧಿ ಬಲದಿಂದ ಪ್ರಯತ್ನಕ್ಕೆ ಯಾವುದೇ ರೀತಿ ಚ್ಯುತಿ ಬರುವುದಿಲ್ಲ. ವ್ಯವಹಾರದಲ್ಲಿ ಸಮಂಜಸ ನಿರ್ಧಾರ ಕೈಗೊಳ್ಳುವುದರ ಬಗ್ಗೆ ಗಮನಕೊಡಿ.

ವೃಷಭ: ಅಕ್ಕ-ಪಕ್ಕದವರ ಹಾವಭಾವಗಳಿಂದ ಬೇಸರಗೊಂಡು ಜೀವನದ ಪಾಠವನ್ನು ಕಲಿಯುವುದು ಅಗತ್ಯವೆನಿಸುವುದು. ಬಹಳ ದಿನದ ನಂತರದಲ್ಲಿ ಗುರು ಹಿರಿಯರ ದರ್ಶನ ಭಾಗ್ಯ ದೊರಕುತ್ತದೆ. ಸುಖ ಭೋಜನ ಇರುವುದು.

ಮಿಥುನ: ಮಹಿಳೆಯರಿಗೆ ಉನ್ನತ ಉದ್ಯೋಗ ಹಾಗೂ ಪ್ರಾಪ್ತವಯಸ್ಕರಿಗೆ ವಿವಾಹದ ಶುಭ ಫಲಗಳು ದೊರೆಯಲಿವೆ. ಸದ್ಯದ ಪರಿಸ್ಥಿತಿಯಲ್ಲಿ ಕತ್ತಲೆಯ ಪ್ರಪಂಚದಲ್ಲಿರುವ ಜೀವನಕ್ಕೆ ದೂರದಲ್ಲೊಂದು ಸುಜ್ಯೋತಿ ಕಾಣಲಿದೆ.

ಕರ್ಕಾಟಕ: ವೃತ್ತಿಯಲ್ಲಿ ತಾತ್ಕಾಲಿಕ ಸಮಾಧಾನ ಹೊಂದಿರುವವರು ಕೆಲವು ಬದಲಾವಣೆ ಮಾಡಿಕೊಂಡರೆ ಸಮಾಧಾನ ಸಿಗುವಂತಾಗಲಿದೆ. ವಿವಾಹದ ವಿಚಾರದ ಕಾರ್ಯಗಳಲ್ಲಿನ ವಿಫಲತೆಯಿಂದ ಮನಸ್ಸಿಗೆ ಬೇಸರವಾಗಬಹುದು.

ಸಿಂಹ: ರಕ್ತ ಸಂಬಂಧಿ ಕಾಯಿಲೆಯನ್ನು ಹೊಂದಿದವರು ಅಥವಾ ಅಂಥ ಅನುಮಾನ ಇರುವವರು ಇಂದು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಈ ದಿನ ಎದುರಾಳಿಗಳೊಂದಿಗೆ ಸಂಧಾನ ಮಾಡಿಕೊಳ್ಳುವುದು ಸರಿಯಲ್ಲ.

ಕನ್ಯಾ: ಸ್ನೇಹಿತರಲ್ಲಿ ಮುಕ್ತವಾಗಿ ಮಾತನಾಡುವುದರಿಂದ ಮಾನಸಿಕ ಸಮಾಧಾನ ದೊರೆತು ಹಂತ ಹಂತವಾಗಿ ಅನುಕೂಲಕರ ವಾತಾವರಣದ ಅನುಭವ ದೊರಕಲಿದೆ. ಶುಭ ಸಮಾರಂಭಕ್ಕಾಗಿ ವಸ್ತ್ರಾಭರಣ ಖರೀದಿ ಯೋಗ.

ತುಲಾ: ಬಹಳ ದಿನದಿಂದ ಇದ್ದಂತಹ ಶತ್ರು ಬಾಧೆ ದೇವತಾನುಗ್ರಹದಿಂದ ನಿವಾರಣೆ ಆಗಲಿದೆ. ಸರಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಕಾಲೆಡಗುವ ಪರಿಸ್ಥಿತಿ ನಿಮ್ಮದಾಗಲಿದೆ. ಮಕ್ಕಳಿಗೆ ಶ್ರಮ ವಹಿಸಿ ವಿದ್ಯಾಭ್ಯಾಸ ಮಾಡಲು ತಿಳಿಸಿ.

ವೃಶ್ಚಿಕ: ಸಗಟು ವ್ಯಾಪಾರಿಗಳಿಗೆ ಅಧಿಕ ಲಾಭ. ವ್ಯವಹಾರಕ್ಕೆ ಸಹಾಯವಾಗು-ವಂತಹ ವಾಹನ ಖರೀದಿಯ ಬಗ್ಗೆ ಗಮನಹರಿಸಿ. ವೈದ್ಯರು ತಮ್ಮ ಅಭ್ಯಾಸದಲ್ಲಿ ಹೆಚ್ಚಿನ ಜಾಗ್ರತೆ ವಹಿಸುವುದು ಒಳ್ಳೆಯದು.


ಧನು: ಅಭಿವೃದ್ಧಿಯ ವಿಚಾರದಲ್ಲಿ ವದಂತಿಗಳಿಗೆ ಕಿವಿಗೊಡದೆ ಪ್ರಯತ್ನ ಮುಂದುವರಿಸಿ. ಪೊಲೀಸ್ ಹುದ್ದೆಯಲ್ಲಿರುವವರಿಗೆ ಮಹತ್ವದ ಕಾರ್ಯಾಚರಣೆಗೆ ದೂರ ಸಂಚಾರ ಕಂಡುಬರಲಿದೆ. ಶೀತ ಬಾಧೆ ಉಂಟಾಗುವುದು.

ಮಕರ: ಎಲ್ಲಾ ಕಾರ್ಯದಲ್ಲೂ ಆತ್ಮವಿಶ್ವಾಸವಿರಲಿ . ಅತಿಯಾದ ಆತ್ಮವಿಶ್ವಾಸ ನಿಮ್ಮ ಜಯಕ್ಕೆ ಹೊಡೆತವನ್ನು ನೀಡುವುದು. ದುರ್ಗಾಪರಮೇಶ್ವರಿಯನ್ನು ಆರಾಧಿಸಿ ಶುಭ ಫಲ ಪಡೆಯುವಿರಿ. ಆಸ್ತಿ ಲಭ್ಯವಾಗಲಿದೆ.

ಕುಂಭ: ಪತ್ರಿಕೋದ್ಯಮಿಗಳಿಗೆ ಈ ದಿನದಲ್ಲಿ ಬಿಡುವಿಲ್ಲದ ಕೆಲಸಗಳು ಮತ್ತು ವಿಮರ್ಶಿಸಲು ಕಷ್ಟವಾಗುವಂಥ ಪರಿಸ್ಥಿತಿಗಳು ಎದುರಾಗುತ್ತವೆ. ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಇದು ಸೂಕ್ತಕಾಲ. ಲಾಭ ಗಳಿಸುವಿರಿ.

ಮೀನ: ಮನೋಬಲದಿಂದ ಸಮಸ್ಯೆ ಬಗೆಹರಿಸಿಕೊಳ್ಳುವಿರಿ. ದಾಂಪತ್ಯ ಜೀವನ ಸುಖಮಯವಾಗಿರುತ್ತದೆ. ಕಾರ್ಮಿಕರ ಬೇಡಿಕೆಗಳನ್ನು ಪೂರೈಸುವ ಭರವಸೆ ಮರೆಯದಿರಿ. ಧಾನ್ಯ ವರ್ತಕರಿಗೆ ನಿರೀಕ್ಷಿತ ಲಾಭ ಸಂಪಾದನೆ ಆಗುವುದು.

ಷೇರುಪೇಟೆ ವಹಿವಾಟು ▲ 320



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,523
ಇಂದಿನ ಅಂತ್ಯ	19,638
▲	115
ದಿನದ ಗರಿಷ್ಠ	19,726

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1750 (1750)
ಸೋಯಾ (ರಿಫೈನ್ಡ್)	₹875 (875)
ಸೂರ್ಯಕಾಂತಿ (ರಿಫೈನ್ಡ್)	₹875 (870)
ಪಾಮೋಲಿನ್	₹827 (820)

ವಿನಿಮಯ ದರ

$ ಡಾಲರ್	83.02
£ ಪೌಂಡ್	101.85
€ ಯುರೊ	88.16
¥ ಯೆನ್ (100ಕ್ಕೆ)	56

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹11000
ಎಸಿ	₹6300
ಆರ್‌ಪಿ	₹9900
ಆರ್‌ಸಿ	₹5830

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹263-502
ದ್ವಿತಳಿ (ಬಿ.ವಿ)	₹350-624

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹125

ಮುಂಬೈ ಧಾರಣೆ

ಶೇಂಗಾ

29-09-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1760 (1760)
ಒಂದು ವಾರದ ಡೆಲಿವರಿ	1755 (1755)
ಸೋಯಾ ಕಚ್ಚಾ	835 (835)
ಪಾಮ್ ವಾರದ ಡೆಲಿವರಿ	827(818)
ಸೂರ್ಯಕಾಂತಿ ಎಣ್ಣೆ ಕಚ್ಚಾ	795 (790)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,600 (57,700)
ಬೆಳ್ಳಿ ಕೆ.ಜಿ 71,650 (70,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

2023ರ ಆಗಸ್ಟ್‌ನಲ್ಲಿ ಶೇ 12.1ರಷ್ಟು ಬೆಳವಣಿಗೆ: ವಾಣಿಜ್ಯ ಸಚಿವಾಲಯ

ಮೂಲಸೌಕರ್ಯ:14 ತಿಂಗಳ ಗರಿಷ್ಠ

ಮುಖ್ಯಾಂಶಗಳು

- 2022ರ ಜೂನ್‌ನಲ್ಲಿ ಶೇ 13.2ರಷ್ಟು ಬೆಳವಣಿಗೆ
- ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ತಗ್ಗಿದ ಬೆಳವಣಿಗೆ



ನವದೆಹಲಿ (ಪಿಟಿಐ/ ರಾಯಿಟರ್ಸ್): ದೇಶದ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆಯು 2023ರ ಆಗಸ್ಟ್‌ನಲ್ಲಿ ಶೇ 12.1ರಷ್ಟು ಆಗಿದೆ. ಈ ಮೂಲಕ 14 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ.

ಮುಖ್ಯವಾಗಿ ಕಲ್ಲಿದ್ದಲು, ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ವಲಯಗಳ ಉತ್ಪಾದನೆ ಹೆಚ್ಚಾಗಿರುವುದರಿಂದ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ತಿಳಿಸಿವೆ.

2022ರ ಆಗಸ್ಟ್‌ನಲ್ಲಿ ಈ ವಲಯಗಳು ಶೇ 4.2ರಷ್ಟು ಬೆಳವಣಿಗೆ ಕಂಡಿದ್ದವು. ಈ ವರ್ಷದ ಆಗಸ್ಟ್‌ನಲ್ಲಿ ಆಗಿರುವ ಬೆಳವಣಿಗೆಯು 2022ರ ಜೂನ್ ತಿಂಗಳ ನಂತರದ ಗರಿಷ್ಠ ಮಟ್ಟದ್ದಾಗಿದೆ. 2022ರ ಜೂನ್‌ನಲ್ಲಿ ಶೇ 13.2ರಷ್ಟು ಬೆಳವಣಿಗೆ ಆಗಿತ್ತು.

ಸಂಸ್ಕರಿಸಿದ ಉತ್ಪನ್ನಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಬೆಳವಣಿಗೆಯೂ ಹೆಚ್ಚಾಗಿದೆ.

2023–24ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ 8 ವಲಯಗಳ ಬೆಳವಣಿಗೆಯು ಶೇ 7.7ರಷ್ಟು ಆಗಿದೆ. 2022–23ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಶೇ 10ರಷ್ಟು ಬೆಳವಣಿಗೆ ಕಂಡುಬಂದಿತ್ತು ಎಂದು ಸಚಿವಾಲಯ ತಿಳಿಸಿದೆ.

‘ಸಾಮಾನ್ಯವಾಗಿ ಮುಂಗಾರು ಅವಧಿಯಲ್ಲಿ ನಿರ್ಮಾಣ ಚಟುವಟಿಕೆಗಳು ನಡೆಯುವುದಿಲ್ಲ. ಈ ಬಾರಿ ಮುಂಗಾರು ಮಳೆಯು ವಾಡಿಕೆಗಿಂತಲೂ ಕಡಿಮೆ ಆಗಿರುವುದರಿಂದ ಮೂಲಸೌಕರ್ಯ ವಲಯದಲ್ಲಿ ಚಟುವಟಿಕೆ ಹೆಚ್ಚಾಗಲು ಕಾರಣವಾಯಿತು’ ಎಂದು ಐಸಿಆರ್‌ಎನ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

‘ಮೂಲಸೌಕರ್ಯದ ಉತ್ತಮ ಬೆಳವಣಿಗೆ ಮತ್ತು ರೈಲ್ವೆ ಸರಕು ಸಾಗಣೆ ಹೆಚ್ಚಾಗಿರುವುದರಿಂದ ದೇಶದ ಕೈಗಾರಿಕಾ ಉತ್ಪಾದನೆಯು ಆಗಸ್ಟ್‌ನಲ್ಲಿ ಶೇ 9ರಿಂದ ಶೇ 11ರ ಆಸುಪಾಸಿನಲ್ಲಿ ಇರುವ ಸಾಧ್ಯತೆ ಇದೆ’ ಎಂದೂ ಅವರು ತಿಳಿಸಿದ್ದಾರೆ. ಕೈಗಾರಿಕಾ ಉತ್ಪಾದನೆ ಸೂಚ್ಯಂಕದಲ್ಲಿ (ಐಐಪಿ) ಮೂಲಸೌಕರ್ಯ ವಲಯಗಳ ಪಾಲು ಶೇ 40.27ರಷ್ಟು ಇದೆ.

ಮೂಲಸೌಕರ್ಯ ಅಭಿವೃದ್ಧಿಗಾಗಿ ಸರ್ಕಾರವು ಮಾಡಿರುವ ಬಂಡವಾಳ ವೆಚ್ಚವು ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ₹3.74 ಲಕ್ಷ ಕೋಟಿ ಆಗಿದೆ. ಅಂದರೆ, ವಾರ್ಷಿಕ ಬಜೆಟ್ ಅಂದಾಜಿನ ಶೇ 37.4ರಷ್ಟು. ಹಿಂದಿನ ಇದೇ ಅವಧಿಯಲ್ಲಿ ₹2.52 ಲಕ್ಷ ಕೋಟಿ ವೆಚ್ಚ ಮಾಡಲಾಗಿತ್ತು.

ಸುದ್ದಿ 2 ನಿಮಿಷ

ಬಜೆಟ್ ಅಂದಾಜಿನ ಶೇ 36ಕ್ಕೆ ತಲುಪಿದ ವಿತ್ತೀಯ ಕೊರತೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು 2023–24ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ವಾರ್ಷಿಕ ಬಜೆಟ್ ಅಂದಾಜಿನ ಶೇ 36ರಷ್ಟು ಆಗಿದೆ.

2022–23ರ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ಬಜೆಟ್ ಅಂದಾಜಿನ ಶೇ 32.6ರಷ್ಟು ಇತ್ತು ಎಂದು ಲೆಕ್ಕಪತ್ರಗಳ ಮಹಾ-ನಿಯಂತ್ರಕರು (ಸಿಜಿಎ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.

ಮೌಲ್ಯದ ಲೆಕ್ಕದಲ್ಲಿ ವಿತ್ತೀಯ ಕೊರತೆಯು ಆಗಸ್ಟ್ ತಿಂಗಳ ಅಂತ್ಯಕ್ಕೆ ₹6.42 ಲಕ್ಷ ಕೋಟಿಯಷ್ಟು ಆಗಿದೆ. ವರಮಾನ ಮತ್ತು ವೆಚ್ಚದ ನಡುವಣ ಅಂತರವೇ ವಿತ್ತೀಯ ಕೊರತೆ.

2023–24ನೇ ಹಣಕಾಸು ವರ್ಷಕ್ಕೆ ವಿತ್ತೀಯ ಕೊರತೆಯನ್ನು ಶೇ 5.9ಕ್ಕೆ ತಗ್ಗಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. 2022–23ರಲ್ಲಿ ವಿತ್ತೀಯ ಕೊರತೆಯು ಶೇ 6.4ರಷ್ಟು ಇತ್ತು.

ನಿವ್ವಳ ತೆರಿಗೆ ವರಮಾನವು 2023–24ರ ಏಪ್ರಿಲ್–ಆಗಸ್ಟ್ ಅವಧಿಗೆ ₹8.03 ಲಕ್ಷ ಕೋಟಿ ಆಗಿದೆ. ಬಜೆಟ್ ಅಂದಾಜಿನ ಶೇ 34.5ರಷ್ಟು. 2022–23ರ ಆಗಸ್ಟ್ ಅಂತ್ಯದಲ್ಲಿ ಶೇ 36.2ರಷ್ಟು ಆಗಿತ್ತು.



ಕೇಂದ್ರದ ಒಟ್ಟು ವೆಚ್ಚವು ಬಜೆಟ್ ಅಂದಾಜಿನ ಶೇ 37.1ರಷ್ಟು (₹16.71 ಲಕ್ಷ ಕೋಟಿ) ಆಗಿದೆ. ಹಿಂದಿನ ಅವಧಿಯಲ್ಲಿ ಶೇ 35.2ರಷ್ಟು ಇತ್ತು ಎಂದು ಸಿಜಿಎ ತಿಳಿಸಿದೆ.

ಸೋನಿ–ಜೀ ವಿಲೀನ ಇನ್ನಷ್ಟು ವಿಳಂಬ

ರಾಯಿಟರ್ಸ್: ಸೋನಿ ಪಿಕ್ಚರ್ಸ್ ನೆಟ್‌ವರ್ಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಗಳು ವಿಲೀನ ಪ್ರಕ್ರಿಯೆ ಪೂರ್ಣಗೊಳ್ಳಲು ಇನ್ನೂ ಕೆಲವು ತಿಂಗಳುಗಳು ಹಿಡಿಯಲಿವೆ ಎಂದು ಸೋನಿ ಸಮೂಹವು ಶುಕ್ರವಾರ ತಿಳಿಸಿದೆ.

ಸೆಪ್ಟೆಂಬರ್ ವೇಳೆಗೆ ವಿಲೀನ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯನ್ನು ಕಂಪನಿಗಳು ಹೊಂದಿದ್ದವು. ಆದರೆ, ಸದ್ಯದ ಸ್ಥಿತಿಯನ್ನು ಗಮನಿಸಿದರೆ ಇನ್ನೂ ಕೆಲವು ತಿಂಗಳುಗಳು ಬೇಕಾಗಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಈ ಕುರಿತು ಸೋನಿ ಮತ್ತು ಜೀ ಕಂಪನಿಗಳು ಪ್ರತಿಕ್ರಿಯೆ ನೀಡಿಲ್ಲ. ವಿಲೀನದ ನಂತರ ಕಂಪನಿಯ ಒಟ್ಟು ಮೌಲ್ಯವು ₹83 ಸಾವಿರ ಕೋಟಿಯಷ್ಟು ಆಗಲಿದೆ. 2021ರಲ್ಲಿ ವಿಲೀನದ ಘೋಷಣೆ ಮಾಡಲಾಗಿತ್ತು. ಆಗಸ್ಟ್‌ನಲ್ಲಿ ಅದಕ್ಕೆ ಒಪ್ಪಿಗೆ ದೊರೆತಿದೆ. ಜೀ ಸಮೂಹವು ಹಣಕಾಸು ಸಂಸ್ಥೆಗಳಿಗೆ ಸಾಲ ಬಾಕಿ ಉಳಿಸಿಕೊಂಡಿದೆ. ಇದರ ಜೊತೆಗೆ ಹಲವು ಕಾನೂನು ತೊಡಕುಗಳಿಂದಾಗಿ ವಿಲೀನವು ವಿಳಂಬ ಆಗುತ್ತಿದೆ.

ಹೆಚ್ಚಿನ ಪಿಂಚಣಿ: ವೇತನದ ಮಾಹಿತಿ ಸಲ್ಲಿಕೆಗೆ ಡಿ.31ರವರೆಗೆ ಅವಕಾಶ

ನವದೆಹಲಿ (ಪಿಟಿಐ): ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸುವ ನೌಕರರ ವೇತನದ ಮಾಹಿತಿಗಳನ್ನು ಜಾಲತಾಣಕ್ಕೆ ಅಪ್‌ಲೋಡ್ ಮಾಡಲು ಉದ್ಯೋಗದಾತರಿಗೆ ಡಿಸೆಂಬರ್ 31ರವರೆಗೆ ಅವಕಾಶ ನೀಡಲಾಗಿದೆ.

ವೇತನದ ಮಾಹಿತಿಗಳನ್ನು ಅಪ್‌ಲೋಡ್ ಮಾಡಲು ಶನಿವಾರ ಅಂತಿಮ ದಿನವಾಗಿತ್ತು. ಆದರೆ, ಉದ್ಯೋಗದಾತರು ಮತ್ತು ಉದ್ಯೋಗದಾತರ ಒಕ್ಕೂಟದ ಮನವಿಯ ಮೇರೆಗೆ ಗಡುವನ್ನು ಮೂರು ತಿಂಗಳವರೆಗೆ ವಿಸ್ತರಿಸಲಾಗಿದೆ ಎಂದು ಕಾರ್ಮಿಕ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಶುಕ್ರವಾರದವರೆಗಿನ ಮಾತಿಯ ಪ್ರಕಾರ, ಇನ್ನೂ 5.52 ಲಕ್ಷ ಅರ್ಜಿಗಳನ್ನು ಉದ್ಯೋಗದಾತರು ದೃಢಪಡಿಸಬೇಕಿದೆ. ಹೀಗಾಗಿ ಕೇಂದ್ರೀಯ ಧರ್ಮದರ್ಶಿಗಳ ಮಂಡಳಿಯು ಅನುಕಂಪದ ಆಧಾರದ ಮೇಲೆ ಮನವಿಯನ್ನು ಪರಿಗಣಿಸಿದೆ ಎಂದು ಸಚಿವಾಲಯವು ಹೇಳಿದೆ.

12 ರಿಂದ 15 ತಿಂಗಳುಗಳಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆ

ವೇದಾಂತ ಪುನರ್ ರಚನೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಗರ್ವಾಲ್ ಒಡೆತನದ ವೇದಾಂತ ಲಿಮಿಟೆಡ್ ಸಮೂಹದ ವಹಿವಾಟುಗಳನ್ನು ಪುನರ್‌ರಚನೆ ಮಾಡಲು ಆಡಳಿತ ಮಂಡಳಿಯು ಶುಕ್ರವಾರ ಒಪ್ಪಿಗೆ ನೀಡಿದೆ.

ವೇದಾಂತ ಲಿಮಿಟೆಡ್‌ನ ಲೋಹ, ವಿದ್ಯುತ್, ಅಲ್ಯುಮಿನಿಯಂ, ತೈಲ ಮತ್ತು ಅನಿಲ ವಹಿವಾಟುಗಳನ್ನು ಸಮೂಹದಿಂದ ಪ್ರತ್ಯೇಕಿಸಿ, ಷೇರುಪೇಟೆಯಲ್ಲಿ ಪ್ರತ್ಯೇಕವಾಗಿ ನೋಂದಾಯಿಸಲು ನಿರ್ಧರಿಸಲಾಗಿದೆ.

ವೇದಾಂತ ಲಿಮಿಟೆಡ್‌ನ ಪ್ರತಿ ಒಂದು ಷೇರಿಗೆ ಷೇರುದಾರರು ಹೆಚ್ಚುವರಿಯಾಗಿ 5 ಕಂಪನಿಗಳಲ್ಲಿ ತಲಾ ಒಂದು ಷೇರನ್ನು ಪಡೆಯಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಎಲ್ಲ ಪ್ರಕ್ರಿಯೆಗಳಿಗೆ ಷೇರುದಾರರು ಮತ್ತು ಸಾಲದಾತರ ಒಪ್ಪಿಗೆ ಬೇಕಿದೆ. ಷೇರು ವಿನಿಮಯ ಕೇಂದ್ರಗಳು ಮತ್ತು ನ್ಯಾಯಾಲಯದ ಒಪ್ಪಿಗೆಯೂ ಅಗತ್ಯ. ಇವೆಲ್ಲವೂ 12 ರಿಂದ 15 ತಿಂಗಳುಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಮಾಡಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ನಿರ್ದೇಶಕರ ಸಮಿತಿಯುಕಂಪನಿಯ ನಿರ್ಧಾರವನ್ನು ಕಾರ್ಯಗತಗೊಳಿಸಲು ಸಲಹೆಗಳನ್ನು ನೀಡಲಿದೆ.

ವಹಿವಾಟು ಪುನರ್‌ರಚನೆ ಬಳಿಕ ಹಿಂದುಸ್ತಾನ್ ಜಿಂಕ್, ಸೆಮಿಕಂಡಕ್ಟರ್ ಮತ್ತು ಡಿಸ್‌ಪ್ಲೇ ಹಾಗೂ ಸ್ಟೈನ್‌ಲೆಸ್ ಸ್ಟೀಲ್ ವಹಿವಾಟುಗಳಲ್ಲಿ ವೇದಾಂತ ಲಿಮಿಟೆಡ್ ಶೇ 65ರಷ್ಟು ಷೇರುಪಾಲು ಹೊಂದಲಿದೆ.

ವೇದಾಂತ ಲಿಮಿಟೆಡ್‌ನ ಶೇ 90ಕ್ಕೂ ಅಧಿಕ ಲಾಭವು ಭಾರತದ ಕಾರ್ಯಾಚರಣೆಯಿಂದಲೇ ಬರುತ್ತಿದೆ.

ಕೆಲವೊಂದು ವಹಿವಾಟುಗಳನ್ನು ಪ್ರತ್ಯೇಕಿಸಿ, ನೋಂದಾಯಿಸುವ ಆಯ್ಕೆಗಳನ್ನು ಪರಿಶೀಲಿಸುತ್ತಿರುವುದಾಗಿ ಅನಿಲ್ ಅಗರ್ವಾಲ್ ಕಳೆದ ತಿಂಗಳು ಹೇಳಿದ್ದರು.

ಪ್ರತಿ ಕಂಪನಿಯಲ್ಲಿಜಾಗತಿಕ ಹೂಡಿಕೆದಾರರು, ರಿಟೇಲ್ ಹೂಡಿಕೆದಾರರಿಗೆ ನೇರವಾಗಿ ಬಂಡವಾಳ ಹೂಡಿಕೆ ಮಾಡುವ ಅವಕಾಶಗಳನ್ನು ಕಲ್ಪಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-8405
ಪುತ್ತೂರು	₹4500-7300
ತಿಪಟೂರು	₹7100-8000
ತುರುವೇಕೆರೆ	₹8000-8050

ಜೆಟ್ ಏರ್‌ವೇಸ್‌ನಲ್ಲಿ ₹100 ಕೋಟಿ ಹೂಡಿಕೆ: ಜಲನ್ ಕಲ್‌ರಾಕ್ ಒಕ್ಕೂಟ



ಮುಂಬೈ (ಪಿಟಿಐ): ಆರ್ಥಿಕವಾಗಿ ದಿವಾಳಿ ಆಗಿರುವ ಜೆಟ್ ಏರ್‌ವೇಸ್ ಕಂಪನಿಯ ಪುನಶ್ಚೇತನಕ್ಕಾಗಿ ಹೆಚ್ಚುವರಿ ₹100 ಕೋಟಿ ಹೂಡಿಕೆ ಮಾಡಲಾಗಿದೆ ಎಂದು ಜಲನ್ ಕಾಲ್‌ರಾಕ್ ಒಕ್ಕೂಟವು ಶುಕ್ರವಾರ ಹೇಳಿದೆ.

ಈ ಮೊತ್ತವನ್ನೂ ಒಳಗೊಂಡು ಕಂಪನಿಯ ಪುನಶ್ಚೇತನಕ್ಕಾಗಿ ಒಟ್ಟು ₹350 ಕೋಟಿ ಹೂಡಿಕೆ ಮಾಡಲಾಗಿದೆ. ಜೆಟ್ ಏರ್‌ವೇಸ್‌ನ ಮಾಲೀಕತ್ವವನ್ನು ಹೊಂದಲು ಇದು ದಾರಿ ಮಾಡಿಕೊಟ್ಟಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂದಿನ ವರ್ಷದಿಂದ ವಿಮಾನ ಕಾರ್ಯಾಚರಣೆ ಆರಂಭ ಆಗುವ ನಿರೀಕ್ಷೆ ಇಟ್ಟುಕೊಂಡಿದ್ದು, ಕೆಲವೇ ದಿನಗಳಲ್ಲಿ ಕಾರ್ಯಾಚರಣೆಯ ದಿನಾಂಕದ ಮಾಹಿತಿ ನೀಡಲಾಗುವುದು ಎಂದು ಒಕ್ಕೂಟವು ಹೇಳಿದೆ.

2019ರ ಏಪ್ರಿಲ್ 17ರಿಂದ ಜೆಟ್ ಏರ್‌ವೇಸ್ ಕಾರ್ಯಾಚರಣೆ ಸ್ಥಗಿತಗೊಂಡಿದೆ.

ಜೋಳದ ದರ ₹6,500ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ



ಬೆಳಗಾವಿ: ಜೋಳದ ಧಾರಣೆಯಲ್ಲಿ ಕಳೆದ ಒಂದು ತಿಂಗಳಿನಿಂದ ₹1,000ರಿಂದ ₹1,500ರವರೆಗೆ ಏರಿಕೆಯಾಗಿದೆ. ಬೆಳಗಾವಿ ಸಗಟು ಮಾರುಕಟ್ಟೆಯಲ್ಲಿ ಶುಕ್ರವಾರ ಕ್ವಿಂಟಲ್‌ಗೆ ₹6,000ದಿಂದ ₹6,500ಕ್ಕೆ ಮಾರಾಟ ಆಯಿತು. ಕಳೆದ ತಿಂಗಳು ಕ್ವಿಂಟಲ್‌ಗೆ ₹5,000 ರಿಂದ ₹5,200 ಇತ್ತು.

‘ಚಿಲ್ಲರೆ ಮಾರುಕಟ್ಟೆಯಲ್ಲಿ ಕೂಡ ಕೆ.ಜಿಗೆ ₹55 ಇದ್ದ ದರವು ಈಗ ₹70 ರಿಂದ ₹80ರವರೆಗೆ ಏರಿಕೆ ಆಗಿದೆ. ನವೆಂಬರ್ ವೇಳೆಗೆ ಕೆ.ಜಿಗೆ ₹100 ದಾಟುವ ಸಾಧ್ಯತೆಯಿದೆ’ ಎಂದು ಧಾನ್ಯ ವ್ಯಾಪಾರಿ ಕಿರಣ ಸಾಯಿನಾಕ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜಿಲ್ಲೆಯಲ್ಲಿ ಈ ಬಾರಿ ಮಳೆ ಕೊರತೆಯಿದೆ. ಹೆಚ್ಚಿನ ಕೃಷಿಕರು ಜೋಳವನ್ನು ಮಾರುಕಟ್ಟೆಗೆ ಸಾಗಿಸದೇ ತಮ್ಮಲ್ಲೇ ಸಂಗ್ರಹಿಸಿಕೊಳ್ಳುತ್ತಿದ್ದಾರೆ. ವ್ಯಾಪಾರಿಗಳು ಕೂಡ ಧಾರಣೆ ಇನ್ನಷ್ಟು ಹೆಚ್ಚಬಹುದು ಎಂಬ ಆಸೆಯಿಂದ ಗೋದಾಮಿನಲ್ಲೇ ಧಾನ್ಯ ಸಂಗ್ರಹಿಸಿಕೊಂಡಿದ್ದಾರೆ. ಹೀಗಾಗಿ, ದರವು ನಿರೀಕ್ಷೆಗಿಂತ ಹೆಚ್ಚು ಜಿಗಿತ ಕಂಡಿದೆ’ ಎಂದು ಸಗಟು ವ್ಯಾಪಾರಿ ಸೋಮಪ್ಪ ಕಳಸಣ್ಣವರ ಹೇಳಿದರು.

‘ಮಳೆ ಕೊರತೆ ಕಾರಣ ನೆರೆ ರಾಜ್ಯ ಮತ್ತು ಜಿಲ್ಲೆಗಳಿಂದ ಜೋಳದ ಆವಕ ಕಡಿಮೆಯಾದ ಕಾರಣ ಧಾರಣೆ ಏರಿದೆ’ ಎಂದು ರೈತರಾದ ಸೋಮನಗೌಡ ಭೀಮನಗೌಡರ, ಅಣ್ಣಪ್ಪ ಹಂಪಣ್ಣವರ, ರೈತ ಹೋರಾಟಗಾರ ಬಸನಗೌಡ ಚಿಕ್ಕನಗೌಡರ ಮಾಹಿತಿ ನೀಡಿದರು.

ಎಂಇಐಎಲ್‌ಗೆ ಮಂಗೋಲಿಯಾ ಯೋಜನೆ

ನವದೆಹಲಿ (ಪಿಟಿಐ): ಮಂಗೋಲಿಯಾದಲ್ಲಿ ತೈಲ ಸಂಸ್ಕರಣಾ ಘಟಕ ನಿರ್ಮಾಣ ಮಾಡುವ ₹5,400 ಕೋಟಿ ಮೊತ್ತದ ಯೋಜನೆಯನ್ನು ಭಾರತದ ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಪಡೆದುಕೊಂಡಿದೆ.

ಸರ್ಕಾರಿ ಸ್ವಾಮ್ಯದ ಮಂಗೋಲಿಯಾ ರಿಫೈನರಿಯು ಈ ಯೋಜನೆಯನ್ನು ನೀಡಿದೆ ಎಂದು ಎಂಇಐಎಲ್ ಪ್ರಕಟಣೆಯಲ್ಲಿ ಶುಕ್ರವಾರ ತಿಳಿಸಿದೆ.

ಈ ತೈಲ ಸಂಸ್ಕರಣಾ ಘಟಕವು ವಾರ್ಷಿಕ 15 ಲಕ್ಷ ಟನ್ ಸಾಮರ್ಥ್ಯವನ್ನು ಹೊಂದುವ ನಿರೀಕ್ಷೆ ಮಾಡಲಾಗಿದ್ದು, ಮಂಗೋಲಿಯಾದ ಪೆಟ್ರೋಲ್, ಡೀಸೆಲ್, ವಿಮಾನ ಇಂಧನ ಮತ್ತು ಎಲ್‌ಪಿಜಿ ಬೇಡಿಕೆಯನ್ನು ಈಡೇರಿಸಲಿದೆ ಎಂದು ಹೇಳಿದೆ.

ಬಲೂಚಿಸ್ತಾನ,ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಘಟನೆ: 60ಕ್ಕೂ ಹೆಚ್ಚು ಜನರಿಗೆ ಗಾಯ

ಆತ್ಮಾಹುತಿ ಬಾಂಬ್ ದಾಳಿ: 56 ಮಂದಿ ಸಾವು

ಕರಾಚಿ/ ಪೇಶಾವರ (ಪಾಕಿಸ್ತಾನ) (ಪಿಟಿಐ): ಪಾಕಿಸ್ತಾನದ ಬಲೂಚಿಸ್ತಾನ ಮತ್ತು ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಶುಕ್ರವಾರ ನಡೆದ ಎರಡು ಪ್ರತ್ಯೇಕ ಆತ್ಮಾಹುತಿ ಬಾಂಬ್ ದಾಳಿಯಲ್ಲಿ 56 ಮಂದಿ ಮೃತಪಟ್ಟಿದ್ದು, 62ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಬಲೂಚಿಸ್ತಾನ ಪ್ರಾಂತ್ಯದ ಮಸೀದಿ ಬಳಿ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಕನಿಷ್ಠ 52 ಮಂದಿ ಮೃತಪಟ್ಟಿದ್ದು, 50ಕ್ಕೂ ಹೆಚ್ಚು ಮಂದಿಗೆ ಗಾಯವಾಗಿದೆ.

ಪ್ರವಾದಿ ಮುಹಮ್ಮದ್ ಅವರ ಜನ್ಮದಿನದ ಪ್ರಯುಕ್ತ ಬಲೂಚಿಸ್ತಾನ ಪ್ರಾಂತ್ಯದ ಮಸ್ತುಂಗ್ ಜಿಲ್ಲೆಯ ಅಲ್ ಫಲಾಹ್ ರಸ್ತೆಯ ಮದೀನಾ ಮಸೀದಿಯಲ್ಲಿ ಈದ್ ಮಿಲಾದ್ ಆಚರಿಸುತ್ತಿದ್ದಾಗ ದಾಳಿ ನಡೆದಿದೆ.

ಈ ಕಾರ್ಯಕ್ರಮದ ಭದ್ರತೆಗೆ ನಿಯೋಜನೆಗೊಂಡಿದ್ದ ಮಸ್ತುಂಗ್‌ನ ಡಿಎಸ್‌ಪಿ ಸಾವಿಗೀಡಾಗಿದ್ದಾರೆ. ಡಿಎಸ್‌ಪಿ ಅವರ ಕಾರಿನ ಪಕ್ಕದಲ್ಲೇ ದಾಳಿ ನಡೆದಿದೆ ಎಂದು ನಗರ ಪೊಲೀಸ್ ಠಾಣೆಯ ಠಾಣಾಧಿಕಾರಿ ಮೊಹಮ್ಮದ್ ಜಾವೇದ್ ಲೆಹ್ರಿ ಹೇಳಿದ್ದಾರೆ.

ಇದುವರೆಗೆ ಯಾವುದೇ ಉಗ್ರ ಸಂಘಟನೆ ದಾಳಿಯ ಹೊಣೆ ಹೊತ್ತುಕೊಂಡಿಲ್ಲ. ಅಫ್ಗಾನಿಸ್ತಾನ ಮತ್ತು ಇರಾನ್ ಗಡಿಯಲ್ಲಿರುವ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಐಎಸ್, ತೆಹ್ರಿಕ್–ಇ– ತಾಲಿಬಾನ್ ಪಾಕಿಸ್ತಾನ ಸೇರಿದಂತೆ ವಿವಿಧ ಉಗ್ರಗಾಮಿ ಸಂಘಟನೆಗಳು ಪದೇ ಪದೇ ದಾಳಿ ನಡೆಸುತ್ತಿವೆ.



ಬಲೂಚಿಸ್ತಾನ ಪ್ರಾಂತ್ಯದ ಮಸ್ತುಂಗ್ ಜಿಲ್ಲೆಯ ಮದೀನಾ ಮಸೀದಿ ಬಳಿ ಸಂಭವಿಸಿದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಗಾಯಗೊಂಡವರನ್ನು ಸಿಬ್ಬಂದಿ ಆಸ್ಪತ್ರೆಗೆ ಸಾಗಿಸಿದರು. –ಎಎಫ್‌ಪಿ ಚಿತ್ರ

ತೆಹ್ರಿಕ್–ಎ– ತಾಲಿಬಾನ್ ಪಾಕಿಸ್ತಾನ್ ಸಂಘಟನೆ ಸಹ ತಾನು ದಾಳಿ ಮಾಡಿಲ್ಲ ಎಂದು ಸ್ಪಷ್ಟಪಡಿಸಿದೆ. 'ಇಂಥ ದಾಳಿಗಳು ನಮ್ಮ ನೀತಿಗಳಿಗೆ ವಿರುದ್ಧವಾಗಿವೆ' ಎಂದು ಅದು ಹೇಳಿದೆ.

ಬಲೂಚಿಸ್ತಾನದ ಮಾಹಿತಿ ಸಚಿವ ಜಾನ್ ಅಚಕ್‌ಝೈ ಅವರು, ‘ಶತ್ರುಗಳು ಬಲೂಚಿಸ್ತಾನದಲ್ಲಿ ಧಾರ್ಮಿಕ ಸಹಿಷ್ಣುತೆ ಮತ್ತು ಶಾಂತಿಯನ್ನು ನಾಶ ಮಾಡಲು ಹವಣಿಸುತ್ತಿದ್ದಾರೆ. ಹೀಗಾಗಿಯೇ ಇಂತಹ ದುಷ್ಕೃತ್ಯದಲ್ಲಿ ತೊಡಗಿದ್ದಾರೆ. ರಕ್ಷಣಾ ತಂಡಗಳನ್ನು ಮಸ್ತುಂಗ್‌ಗೆ ಕಳುಹಿಸಲಾಗಿದೆ. ತೀವ್ರ ಗಾಯಗೊಂಡವರನ್ನು ಹೆಚ್ಚಿನ ಚಿಕಿತ್ಸೆಗೆ ಕ್ವೆಟ್ಟಾಕ್ಕೆ ಕಳುಹಿಸಲಾಗಿದೆ’ ಎಂದು ಹೇಳಿದರು.

ಬಲೂಚಿಸ್ತಾನ ಪ್ರಾಂತ್ಯದಲ್ಲಿ ದಾಳಿ ನಡೆದ ಸ್ವಲ್ಪ ಹೊತ್ತಿನಲ್ಲೇ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಹಂಗು ಜಿಲ್ಲೆಯ ದೋಬಾ ಪೊಲೀಸ್ ಠಾಣೆ ಬಳಿಯ ಮಸೀದಿ ಬಳಿ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, ನಾಲ್ವರು ಮೃತಪಟ್ಟಿದ್ದಾರೆ. 12 ಮಂದಿಗೆ ಗಾಯಗಳಾಗಿವೆ. ದಾಳಿ ನಡೆದಾಗ, ಮಸೀದಿಯಲ್ಲಿ 30ರಿಂದ 40 ಮಂದಿ ಇದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

‘ಐವರು ಭಯೋತ್ಪಾದಕರು ದಾವೋಬಾ ಪೊಲೀಸ್ ಠಾಣೆಗೆ ನುಗ್ಗಿ ಗುಂಡಿನ ದಾಳಿ ನಡೆಸಿದ್ದಾರೆ. ಗುಂಡಿನ ಚಕಮಕಿ ವೇಳೆ ಒಬ್ಬ ಭಯೋತ್ಪಾದಕ ಸಾವಿಗೀಡಾಗಿದ್ದಾನೆ. ಮತ್ತೊಬ್ಬ ಮಸೀದಿ ಬಳಿ ತನ್ನನ್ನು ತಾನೇ ಸ್ಫೋಟಿಸಿಕೊಂಡ. ಇದರಿಂದಾಗಿ ಮಸೀದಿಯ ಮೇಲ್ಛಾವಣಿ ಕುಸಿಯಿತು. ಉಳಿದ ಮೂವರು ಪರಾರಿಯಾಗಿದ್ದಾರೆ’ ಎಂದು ಹೇಳಿದ್ದಾರೆ.

ವಿವಿಧ ರಾಜಕೀಯ ಪಕ್ಷಗಳು ದಾಳಿಯನ್ನು ಖಂಡಿಸಿವೆ. ಮಸ್ತುಂಗ್‌ನಲ್ಲಿ ಉಗ್ರರು ಹಲವು ವರ್ಷಗಳಿಂದ ಪದೇ ಪದೇ ದಾಳಿ ನಡೆಸುತ್ತಿದ್ದಾರೆ. ಕಳೆದ 15 ದಿನಗಳ ಹಿಂದೆಯೂ ದಾಳಿ ನಡೆದಿತ್ತು.

ಕರ್ನಾಟಕ ಬ್ಯಾಂಕ್‌ನಲ್ಲಿ ಜಿಎಸ್‌ಟಿ ಸೇವೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹಣೆ– ಪಾವತಿ ಸೇವೆಯನ್ನು ಕರ್ನಾಟಕ ಬ್ಯಾಂಕ್ ಪ್ರಾರಂಭಿಸಿದೆ.

ಗ್ರಾಹಕರು ಬ್ಯಾಂಕ್ ಕೌಂಟರ್ ಮೂಲಕ ನಗದು ವರ್ಗಾವಣೆ, ಕ್ಲಿಯರಿಂಗ್ ವಿಧಾನ ಅಥವಾ ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಜಿಎಸ್‌ಟಿ ಪಾವತಿಸಬಹುದಾಗಿದೆ.

‘ಜಿಎಸ್‌ಟಿ ಪಾವತಿ ವ್ಯವಸ್ಥೆಯು ನಮ್ಮ ಗ್ರಾಹಕಸ್ನೇಹಿ ಸೇವೆಯಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಇದು ಅವರ ವ್ಯವಹಾರಕ್ಕೆ ಅನುಕೂಲ ವಾತಾವರಣವನ್ನು ಒದಗಿಸಿಕೊಡಲಿದೆ. ಇಂಥ ಅನೇಕ ಡಿಜಿಟಲ್ ಸೌಲಭ್ಯಗಳ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಕರ್ನಾಟಕ ಬ್ಯಾಂಕ್ ಕೂಡ ಕೈಜೋಡಿಸುತ್ತಿದೆ’ ಎಂದು ಬ್ಯಾಂಕ್‌ನ ಸಿಇಒ ಶ್ರೀಕೃಷ್ಣನ್ ಎಚ್. ಮಾಹಿತಿ ನೀಡಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶೇಖರ್ ರಾವ್ ಹಾಗೂ ಉನ್ನತ ಅಧಿಕಾರಿಗಳು ಇದ್ದರು.

5 ವರ್ಷದ ಆರ್‌.ಡಿ. ಬಡ್ಡಿದರ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಐದು ವರ್ಷಗಳ ನಿಶ್ಚಿತ ಠೇವಣಿ (ಆರ್.ಡಿ) ಮೇಲಿನ ಬಡ್ಡಿದರವನ್ನು ಡಿಸೆಂಬರ್ ತ್ರೈಮಾಸಿಕಕ್ಕೆ ಶೇ 6.5 ರಿಂದ ಶೇ 6.7ಕ್ಕೆ ಹೆಚ್ಚಳ ಮಾಡಿದೆ. ಆದರೆ, ಇತರ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಕೇಂದ್ರ ಹಣಕಾಸು ಸಚಿವಾಲಯವು ಹೊರಡಿಸಿರುವ ಪ್ರಕಟಣೆಯಂತೆ, ಉಳಿತಾಯ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ 4 ಮತ್ತು ಒಂದು ವರ್ಷ ಅವಧಿ ಠೇವಣಿಯ ಬಡ್ಡಿದರವನ್ನು ಶೇ 6.9ರಷ್ಟರಲ್ಲೇ ಉಳಿಸಿಕೊಳ್ಳಲಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿಯೂ ಇದೇ ಪ್ರಮಾಣದ ಬಡ್ಡಿದರ ಇತ್ತು.

ಎರಡು ಮತ್ತು ಮೂರು ವರ್ಷಗಳ ಅವಧಿ ಠೇವಣಿಗಳ ಮೇಲಿನ ಬಡ್ಡಿದರವು ಶೇ 5ರಷ್ಟು ಮತ್ತು ಐದು ವರ್ಷಗಳ ಅವಧಿ ಠೇವಣಿ ಬಡ್ಡಿದರವು ಶೇ 7.5ರಷ್ಟೇ ಮುಂದುವರಿಯಲಿದೆ.

ಹಿರಿಯ ನಾಗರಿಕರ ಉಳಿತಾಯ ಯೋಜನೆಯ ಬಡ್ಡಿದರದಲ್ಲಿಯೂ (ಶೇ 8.2) ಬದಲಾವಣೆ ಆಗಿಲ್ಲ. ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ (ಶೇ 7.7) ಮತ್ತು ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಯೋಜನೆಯ ಬಡ್ಡಿದರದಲ್ಲಿಯೂ (ಶೇ 7.1) ಬದಲಾವಣೆ ಮಾಡಿಲ್ಲ. ಕಿಸಾನ್ ವಿಕಾಸ ಪ್ರಮಾಣ ಪತ್ರ (ಶೇ 7.5) ಮತ್ತು ಸಕನ್ಯಾ ಸಮೃದ್ಧಿ ಯೋಜನೆಯ (ಶೇ 8) ಬಡ್ಡಿದರವೂ ಬದಲಾಗಿಲ್ಲ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಫ್ಯಾಕ್ಟರಿ	12089-27299	ಚಾಲಿ	36109-40099
ಕೋಕ	15000-25000	ಹಳೆಚಾಲಿ	39699-40899	ಕೋಕ	30189-33109
ಹೊಸತು	28000-45000	ಹೊಸಚಾಲಿ	37699-40411	ಕೆಂಪುಗೋಟು	29099-33099
ಹಳತು	46000-48000	**ಶಿವಮೊಗ್ಗ**		ರಾಶಿ	41969-46299
ಕಾರ್ಕಳ		ಬೆಟ್ಟೆ	30099-53700	ತಟ್ಟಿಬೆಟ್ಟೆ	36699-40479
ಹೊಸತು	30000-45000	ಗೊರಬಲು	16500-36769	**ಶಿರಸಿ**	
ಹಳತು	40000-48500	ರಾಶಿ	40038-48669	ಬೆಟ್ಟೆ	40299-44559
ಕುಮಟ		ಸರಕು	54009-80896	ಬಿಳಿಗೋಟು	25899-35910
ಚಿಪ್ಪು	32569-34699	**ಸಿದ್ದಾಪುರ**		ಚಾಲಿ	37099-41618
ಕೋಕ	20509-33089	ಬಿಳಿಗೋಟು	31679-35609	ಕೆಂಪುಗೋಟು	22899-22899



ಏಷ್ಯನ್ ಕ್ರೀಡಾಕೂಟದ ಪುರುಷರ 50 ಮೀ. ರೈಫಲ್ ತ್ರಿ ಪೊಸಿಷನ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದ ಸ್ವಪ್ನಿಲ್ ಕುಸಾಲೆ, ಐಶ್ವರಿ ಪ್ರತಾಪ್ ಸಿಂಗ್ ಮತ್ತು ಅಖಿಲ್ ಶೆರಾಣ್ –ಪಿಟಿಐ ಚಿತ್ರ

ಕನ್ನಡತಿ ದಿವ್ಯಾಗೆ ಬೆಳ್ಳಿ

ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಭಾರತ ತಂಡ ಬೆಳ್ಳಿ ಗೆದ್ದುಕೊಂಡಿತು. ಇಶಾ ಸಿಂಗ್ (579 ಪಾಯಿಂಟ್), ಪಲಕ್ ಗುಲಿಯಾ (577) ಮತ್ತು ಕನ್ನಡತಿ ದಿವ್ಯಾ ಟಿ.ಎಸ್ (575) ಅವರನ್ನೊಳಗೊಂಡ ತಂಡ 1,731 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಗಳಿಸಿತು.

ಚೀನಾದ ಶೂಟರ್‌ಗಳು 1,736 ಪಾಯಿಂಟ್ಸ್ ಕಲೆಹಾಕಿ ಏಷ್ಯನ್ ದಾಖಲೆಯೊಂದಿಗೆ ಚಿನ್ನ ಗೆದ್ದರೆ, ಮೂರನೇ ಸ್ಥಾನ ಚೀನಾ ತೈಪೆ (1,723) ತಂಡದ ಪಾಲಾಯಿತು.

ಬೆಂಗಳೂರಿನ ದಿವ್ಯಾ ಅವರು ಅಜರ್‌ಬೈಜಾನ್‌ನಲ್ಲಿ ಮೇ ತಿಂಗಳಲ್ಲಿ ನಡೆದಿದ್ದ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಜಯಿಸಿದ್ದರು.



ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಪಲಕ್ ಗುಲಿಯಾ –ಪಿಟಿಐ ಚಿತ್ರ

ಟೆನಿಸ್ ಪುರುಷರ ಡಬಲ್ಸ್‌ನಲ್ಲಿ ರಾಮಕುಮಾರ್–ಸಾಕೇತ್‌ಗೆ ಬೆಳ್ಳಿ

ಹಾಂಗ್‌ಝೌ (ಪಿಟಿಐ): ಎರಡನೇ ಶ್ರೇಯಾಂಕದ ರಾಮಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ ಅವರು ಏಷ್ಯನ್ ಗೇಮ್ಸ್ ಟೆನಿಸ್ ಪುರುಷರ ಡಬಲ್ಸ್‌ನಲ್ಲಿ ಬೆಳ್ಳಿಯ ಪದಕಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು. ಶುಕ್ರವಾರ ನಡೆದ ಫೈನಲ್‌ನಲ್ಲಿ ಚೀನಾ ತೈಪೆಯ ಸು ಯು ಸಿಯು ಮತ್ತು ಜೇಸನ್ ಜಂಗ್ ಅವರು 6-4, 6-4 ನೇರ ಸೆಟ್‌ಗಳಿಂದ ಭಾರತದ ಜೋಡಿಯನ್ನು ಸೋಲಿಸಿ ಚಿನ್ನದ ಪದಕ ಗೆದ್ದುಕೊಂಡರು.

ಮಿಕ್ಸೆಡ್ ಡಬಲ್ಸ್ ವಿಭಾಗದಲ್ಲಿ ರೋಹನ್ ಬೋಪಣ್ಣ– ರುತುಜಾ ಭೋಸಲೆ ಜೋಡಿ ಫೈನಲ್ ತಲುಪಿದೆ. ಆ ಮೂಲಕ ಟೆನಿಸ್‌ನಲ್ಲಿ ಭಾರತಕ್ಕೆ ಚಿನ್ನ ಅಥವಾ ಬೆಳ್ಳಿ ಖಚಿತವಾಗಿದೆ.

ತೈಪೆಯ ಜೋಡಿ ಶ್ರೇಯಾಂಕರಹಿತವಾಗಿತ್ತು. ಆದರೆ ಸು ಯು (182) ಮತ್ತು ಜಂಗ್ (231) ಅವರು ಸಿಂಗಲ್ಸ್‌ನಲ್ಲಿ ಉತ್ತಮ ರ‍್ಯಾಂಕಿಂಗ್ ಹೊಂದಿದ್ದು ಅದು ಅವರ ಆಟದ ಗುಣಮಟ್ಟದಲ್ಲಿ ವ್ಯಕ್ತವಾಯಿತು. ಸು ಅವರು ಪ್ರಬಲ ಸರ್ವ್‌ಗಳ ಜೊತೆ ಬೇಸ್‌ಲೈನ್‌ನಿಂದ ಅಮೋಘ ಆಟವಾಡಿದರು. ಅವರಿಗೆ ಪೂರಕವಾಗಿ ಜಂಗ್ ನೆಟ್ ಬಳಿಯಿಂದ ಅತ್ಯುತ್ತಮ ಹೊಡೆತಗಳನ್ನು ಪ್ರದರ್ಶಿಸಿದರು. ರಾಮಕುಮಾರ್ ಅವರಿಗೆ ಇದು ಏಷ್ಯನ್ ಗೇಮ್ಸ್‌ನಲ್ಲಿ ಮೊದಲ ಪದಕ. ಮೈನೇನಿ ಅವರಿಗೆ ಇದು ಮೂರನೇ ಪದಕ. ಈ ಹಿಂದೆ, 2014ರ ಇಂಚೆಯೊನ್ ಗೇಮ್ಸ್‌ನಲ್ಲಿ ಸನಮ್ ಸಿಂಗ್ ಜೊತೆ ಪುರುಷರ ಡಬಲ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದರು. ಸಾನಿಯಾ ಮಿರ್ಜಾ ಜೊತೆ ಮಿಕ್ಸೆಡ್ ಡಬಲ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು.

ಚಿನ್ನಕ್ಕೆ ಸೆಣಸಾಟ: ರೋಹನ್ ಬೋಪಣ್ಣ– ರುತುಜಾ ಭೋಸಲೆ ಮಿಕ್ಸೆಡ್ ಡಬಲ್ಸ್ ಸೆಮಿಫೈನಲ್‌ನಲ್ಲಿ ಚೀನಾ ತೈಪೆಯ ಚಾನ್ ಹಾವೊ-ಚಿಂಗ್ ಮತ್ತು ಯು ಸಿಯು ಸು ಜೋಡಿಯನ್ನು 6-1, 3-6, 10-4 ರಿಂದ ಸೋಲಿಸಿತು.



ಬೆಳ್ಳಿ ಗೆದ್ದ ರಾಮಕುಮಾರ್ ರಾಮನಾಥನ್– ಸಾಕೇತ್ ಮೈನೇನಿ –ಪಿಟಿಐ ಚಿತ್ರ

ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಭಾರತದ ಅತ್ಯುತ್ತಮ ಸಾಧನೆ • ಈವರೆಗೆ 18 ಪದಕ ಬಾಚಿಕೊಂಡ ಶೂಟರ್‌ಗಳು

ಮುಂದುವರಿದ ಪದಕ ಬೇಟೆ

ಹಾಂಗ್‌ಝೌ (ಪಿಟಿಐ): ಭಾರತದ ಯುವ ಶೂಟರ್‌ಗಳು ಏಷ್ಯನ್ ಕ್ರೀಡಾಕೂಟದಲ್ಲಿ ಮಿಂಚಿನ ಪ್ರದರ್ಶನ ಮುಂದುವರಿಸಿದ್ದು, ಶುಕ್ರವಾರ ಎರಡು ಚಿನ್ನ ಹಾಗೂ ಮೂರು ಬೆಳ್ಳಿ ಪದಕಗಳಿಗೆ ಗುರಿಯಿಟ್ಟರು.

ಹಾಂಗ್‌ಝೌ ಶೂಟಿಂಗ್ ರೇಂಜ್‌ನಲ್ಲಿ ಕಳೆದ ಆರು ದಿನಗಳಲ್ಲಿ ಭಾರತ ಒಟ್ಟು 18 ಪದಕಗಳನ್ನು ಬಗಲಿಗೆ ಹಾಕಿಕೊಂಡಿದೆ. ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಭಾರತದ ಶೂಟರ್‌ಗಳ ಅತ್ಯುತ್ತಮ ಪ್ರದರ್ಶನ ಇದಾಗಿದೆ. 2006ರ ದೋಹಾ ಕೂಟದಲ್ಲಿ 16 ಪದಕಗಳನ್ನು ಜಯಿಸಿದ್ದು ಇದುವರೆಗಿನ ಶ್ರೇಷ್ಠ ಸಾಧನೆ ಎನಿಸಿಕೊಂಡಿತ್ತು.

ಶುಕ್ರವಾರ ನಡೆದ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದ ಸ್ಪರ್ಧೆಯು ಭಾರತದ ಶೂಟರ್‌ಗಳ ಪಾರಮ್ಯಕ್ಕೆ ವೇದಿಯೊದಗಿಸಿತು. ಪಲಕ್ ಗುಲಿಯಾ ಮತ್ತು ಇಶಾ ಸಿಂಗ್ ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿಯ ಪದಕ ಕೊರಳಿಗೇರಿಸಿಕೊಂಡರು.

ಮೊದಲ ಎರಡು ಸ್ಥಾನಗಳಿಗೆ ಭಾರತದ ಇಬ್ಬರು ಸ್ಪರ್ಧಿಗಳ ನಡುವೆ ನಿಕಟ ಪೈಪೋಟಿ ಏರ್ಪಟ್ಟಿತು. 17 ವರ್ಷದ ಪಲಕ್ ಅಂತಿಮವಾಗಿ 242.1 ಪಾಯಿಂಟ್ಸ್‌ಗಳೊಂದಿಗೆ ಚಿನ್ನ ತಮ್ಮದಾಗಿಸಿಕೊಂಡರು. ಇಶಾ ಸಿಂಗ್ 239.7 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನ ಪಡೆದರೆ, ಪಾಕಿಸ್ತಾನದ ಕಿಷ್ಮಾಲಾ ತಲಾತ್ ಕಂಚು ಗೆದ್ದುಕೊಂಡರು. ಹಾಂಗ್‌ಝೌ ಕೂಟದಲ್ಲಿ ಪಾಕ್‌ಗೆ ದೊರೆತ ಮೊದಲ ಪದಕ ಇದು.

ಮುಖ್ಯಾಂಶಗಳು

- ಎರಡು ಚಿನ್ನ ಸೇರಿದಂತೆ ಶೂಟಿಂಗ್‌ನಲ್ಲಿ ಐದು ಪದಕ
- ಪಲಕ್ ಗುಲಿಯಾ, ಇಶಾ ಸಿಂಗ್ ಮಿಂಚು
- ಪುರುಷರ 50 ಮೀ. ರೈಫಲ್ ತ್ರಿ ಪೊಸಿಷನ್ ತಂಡಕ್ಕೆ ಬಂಗಾರ

ಫೈನಲ್‌ನಲ್ಲಿ ಮೊದಲ ಅವಕಾಶದಲ್ಲಿ ಕೇವಲ 9.1 ಪಾಯಿಂಟ್ಸ್ ಕಲೆಹಾಕಿದ್ದ ಪಲಕ್, ಆ ಬಳಿಕ ಲಯ ಕಂಡುಕೊಂಡು ನಿಖರ ಗುರಿ ಹಿಡಿಯುವಲ್ಲಿ ಯಶ ಕಂಡರು.

‘ಮೊದಲ ಶಾಟ್‌ನಲ್ಲಿ 9.1 ಪಾಯಿಂಟ್ಸ್ ದೊರೆತಾಗ ಅಲ್ಪ ನರ್ವಸ್ ಆಗಿದ್ದೆ. ಆದರೆ ಇನ್ನೂ 23 ಅವಕಾಶಗಳು ಇದ್ದು, ಎದೆಗುಂದುವ ಅಗತ್ಯವಿಲ್ಲ ನನ್ನಲ್ಲೇ ಹೇಳಿಕೊಂಡು ಆತ್ಮವಿಶ್ವಾಸ ಮರಳಿ ಪಡೆದೆ’ ಎಂದು ಪಲಕ್ ಪ್ರತಿಕ್ರಿಯಿಸಿದರು. ಅಂತರರಾಷ್ಟ್ರೀಯ ಸ್ಪರ್ಧೆಯ ಸೀನಿಯರ್ ವಿಭಾಗದಲ್ಲಿ ಅವರಿಗೆ ದೊರೆತ ಮೊದಲ ಪದಕ ಇದು.



ಮಹಿಳೆಯರ 10 ಮೀ. ಏರ್ ಪಿಸ್ತೂಲ್ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದ (ಎಡದಿಂದ) ದಿವ್ಯಾ ಟಿ.ಎಸ್, ಇಶಾ ಸಿಂಗ್ ಮತ್ತು ಪಲಕ್ ಗುಲಿಯಾ –ಪಿಟಿಐ ಚಿತ್ರ

ಶೂಟಿಂಗ್‌ನಲ್ಲಿ ಭಾರತಕ್ಕೆ ಎರಡನೇ ಚಿನ್ನ, ಪುರುಷರ 50 ಮೀ. ರೈಫಲ್ ತ್ರಿ ಪೊಸಿಷನ್ ಸ್ಪರ್ಧೆಯಲ್ಲಿ ಲಭಿಸಿತು. ಐಶ್ವರಿ ಪ್ರತಾಪ್ ಸಿಂಗ್ (591 ಪಾಯಿಂಟ್ಸ್), ಸ್ವಪ್ನಿಲ್ ಕುಸಾಲೆ (591) ಮತ್ತು ಅಖಿಲ್ ಶೆರಾಣ್ (587) ಅವರನ್ನೊಳಗೊಂಡ ತಂಡ 1,769 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನಿಯಾಯಿತು.

ಆತಿಥೇಯ ಚೀನಾ (1,763) ಎರಡನೇ ಸ್ಥಾನಕ್ಕೆ ಜಾರಿದರೆ, ದಕ್ಷಿಣ ಕೊರಿಯಾ (1,748) ಶೂಟರ್‌ಗಳು ಕಂಚಿನ ಪದಕ ಗೆದ್ದುಕೊಂಡರು. ಭಾರತ ತಂಡವು ಚಿನ್ನ ಗೆಲ್ಲುವ ಹಾದಿಯಲ್ಲಿ ಎಂಟು ಪಾಯಿಂಟ್ಸ್‌ಗಳ ಭಾರಿ ಅಂತರದಿಂದ ವಿಶ್ವ ದಾಖಲೆಯನ್ನೂ ತನ್ನದಾಗಿಸಿಕೊಂಡಿತು.

ವೈಯಕ್ತಿಕ ವಿಭಾಗದಲ್ಲಿ ಕೈತಪ್ಪಿದ ಚಿನ್ನ: ಐಶ್ವರಿ ಮತ್ತು ಸ್ವಪ್ನಿಲ್ ಅವರು 50 ಮೀ. ರೈಫಲ್ ತ್ರಿ ಪೊಸಿಷನ್ ಸ್ಪರ್ಧೆಯ ವೈಯಕ್ತಿಕ ವಿಭಾಗದ ಅರ್ಹತಾ ಸುತ್ತಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆದು ಫೈನಲ್ ಪ್ರವೇಶಿಸಿದರೂ, ಚಿನ್ನ ಗೆಲ್ಲುವ ಅವಕಾಶ ಕಳೆದುಕೊಂಡರು.

22 ವರ್ಷದ ಐಶ್ವರಿ 459.7 ಪಾಯಿಂಟ್ಸ್‌ಗಳೊಂದಿಗೆ ಬೆಳ್ಳಿ ಪದಕ ಜಯಿಸಿದರೆ, ಚೀನಾದ ಡು ಲಿನ್‌ಶು (460.6) ಅವರು ಏಷ್ಯನ್ ಗೇಮ್ಸ್ ದಾಖಲೆಯೊಂದಿಗೆ ಚಿನ್ನಕ್ಕೆ ಗುರಿಯಿಟ್ಟರು. ಕಂಚಿನ ಪದಕ ಚೀನಾದವರೇ ಆದ ತಾಯಿನ್ ಜಿಯಾಮಿಂಗ್ (448.3) ಅವರ ಪಾಲಾಯಿತು.

ಫೈನಲ್ ಸುತ್ತಿನ ಅರ್ಧಹಾದಿಯವರೆಗೆ ಮುನ್ನಡೆಯಲ್ಲಿದ್ದ ಸ್ವಪ್ನಿಲ್ ನಾಲ್ಕನೇ ಸ್ಥಾನಕ್ಕೆ ಕುಸಿತ ಕಂಡರು. ಒಂದು ಶಾಟ್‌ನಲ್ಲಿ ಅವರಿಗೆ ಕೇವಲ 7.6 ಪಾಯಿಂಟ್ಸ್ ಲಭಿಸಿದ್ದು, ಪದಕ ಕನಸಿಗೆ ಅಡ್ಡಿಯಾಗಿ ಪರಿಣಮಿಸಿತು. ಕೊನೆಯ ಎರಡು ಅವಕಾಶಗಳಲ್ಲಿ 10.5 ಮತ್ತು 10.1 ಪಾಯಿಂಟ್ಸ್ ಕಲೆಹಾಕಿದರಾದರೂ, ಅದು ಕಂಚಿನೆಡೆಗೆ ಕೊಂಡೊಯ್ಯಲು ಸಾಕಾಗಲಿಲ್ಲ.

ಪ್ರಧಾನಿ ಅಭಿನಂದನೆ: ಭಾರತದ ಪದಕ ವಿಜೇತರನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಅಭಿನಂದಿಸಿದ್ದು, ಶೂಟಿಂಗ್‌ನಲ್ಲಿ ಭಾರತಕ್ಕೆ ಮತ್ತೊಂದು ವಿಶೇಷ ಕ್ಷಣ ಎಂದು ‘ಎಕ್ಸ್’ನಲ್ಲಿ ಬಣ್ಣಿಸಿದ್ದಾರೆ.

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	105	63	32	200
2	ಜಪಾನ್	27	35	37	99
3	ದಕ್ಷಿಣ ಕೊರಿಯಾ	26	28	48	102
4	ಭಾರತ	8	12	13	33
5	ಥಾಯ್ಲೆಂಡ್	8	3	9	20
6	ಉಜ್ಬೇಕಿಸ್ತಾನ	7	10	15	32
7	ಹಾಂಗ್‌ಕಾಂಗ್	5	13	18	36
8	ಚೀನಾ ತೈಪೆ	5	6	9	20
9	ಇರಾನ್	3	10	10	23
10	ಉತ್ತರ ಕೊರಿಯಾ	3	6	4	13

72 ವರ್ಷಗಳ ಬಳಿಕ ಮಹಿಳೆಯರ ವಿಭಾಗದಲ್ಲಿ ಪದಕ

ಕಿರಣ್‌ಗೆ ಶಾಟ್‌ಪಟ್ ಕಂಚು

ಹಾಂಗ್‌ಝೌ (ಪಿಟಿಐ): ಕಿರಣ್ ಬಾಲಿಯಾನ್ ಅವರು ಏಷ್ಯನ್ ಕ್ರೀಡಾಕೂಟದ ಮಹಿಳೆಯರ ಶಾಟ್‌ಪಟ್ ಸ್ಪರ್ಧೆಯಲ್ಲಿ 72 ವರ್ಷಗಳ ಬಿಡುವಿನ ಬಳಿಕ ಭಾರತಕ್ಕೆ ಪದಕ ತಂದುಕೊಟ್ಟ ಸಾಧನೆ ಮಾಡಿದರು.

ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ಅವರು ಕಬ್ಬಿಣದ ಗುಂಡನ್ನು 17.36 ಮೀ. ಎಸೆದರು. ಈ ಮೂಲಕ ಅಥ್ಲೆಟಿಕ್ಸ್‌ನಲ್ಲಿ ಭಾರತದ ಪದಕ ಬೇಟೆಗೆ ಚಾಲನೆ ನೀಡಿದರು.

ಏಷ್ಯನ್ ಗೇಮ್ಸ್‌ನ ಮಹಿಳೆಯರ ಶಾಟ್‌ಪಟ್‌ನಲ್ಲಿ ಪದಕ ಗೆದ್ದ ಭಾರತದ ಎರಡನೇ ಕ್ರೀಡಾಪಟು ಎಂಬ ಗೌರವ 24 ವರ್ಷದ ಕಿರಣ್‌ಗೆ ಒಲಿಯಿತು. 1951ರಲ್ಲಿ ನವದೆಹಲಿಯಲ್ಲಿ ನಡೆದಿದ್ದ ಚೊಚ್ಚಲ ಕೂಟದಲ್ಲಿ ಬಾರ್ಬರಾ ವೆಬ್‌ಸ್ಟರ್ ಅವರು ಕಂಚು ಗೆದ್ದಿದ್ದರು.

ಕಿರಣ್ ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನ 17.92 ಮೀ. ಆಗಿದೆ. ಸೆ.10 ರಂದು ಚಂಡೀಗಡದಲ್ಲಿ ನಡೆದಿದ್ದ ಇಂಡಿಯನ್ ಗ್ರ್ಯಾನ್ ಪ್ರಿ ಕೂಟದಲ್ಲಿ ಅವರಿಂದ ಈ ಸಾಧನೆ ಮೂಡಿಬಂದಿತ್ತು.

ಚೀನಾದ ಗಾಂಗ್ ಲಿಜಿಯಾವೊ (19.58 ಮೀ.) ಮತ್ತು ಸೊಂಗ್ ಜಿಯಾಯುವಾನ್ (18.92 ಮೀ.) ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು. ಕಣದಲ್ಲಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ಮನ್‌ಪ್ರೀತ್ ಕೌರ್ (16.25 ಮೀ.) ಐದನೇ ಸ್ಥಾನ ಗಳಿಸಿದರು.

‘ಇತಿಹಾಸದ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ (1951ರ ಬಳಿಕ ಪದಕ ಗೆದ್ದ ಮೊದಲ ಕ್ರೀಡಾಪಟು). ವೈಯಕ್ತಿಕ ಶ್ರೇಷ್ಠ ಪ್ರದರ್ಶನ ನೀಡಬೇಕೆಂಬ ಗುರಿ ಇಟ್ಟುಕೊಂಡಿದ್ದೆ. ಅದು ಸಾಧ್ಯವಾಗದಿದ್ದರೂ, ಪದಕ ಗೆಲ್ಲಲು ಯಶಸ್ವಿಯಾದದ್ದು ಸಂತಸ ಉಂಟುಮಾಡಿದೆ’ ಎಂದು ಕಿರಣ್ ಪ್ರತಿಕ್ರಿಯಿಸಿದರು.

ಮಹಿಳೆಯರ 400 ಮೀ. ಓಟದಲ್ಲಿ ಐಶ್ವರ್ಯಾ ಮಿಶ್ರಾ 52.73 ಸೆ.ಗಳೊಂದಿಗೆ ಫೈನಲ್ ಪ್ರವೇಶಿಸಿದರು. ಆದರೆ ಹಿಮಾಂಶಿ ಮಲಿಕ್ (57.82 ಮೀ.) ಹೀಟ್ಸ್‌ನಲ್ಲಿ ಐದನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಲು ವಿಫಲರಾದರು.

ಪುರುಷರ 400 ಮೀ. ಓಟದಲ್ಲಿ ಮೊಹಮ್ಮದ್ ಅಜ್ಮಲ್ ಅವರು ಹೀಟ್ಸ್‌ನಲ್ಲಿ 45.76 ಸೆ.ಗಳೊಂದಿಗೆ ಫೈನಲ್ ಪ್ರವೇಶಿಸಿದರೆ, ಮೊಹಮ್ಮದ್ ಅನಾಸ್ ಯಹ್ಯಾ (46.29 ಸೆ.), ಪದಕ ಸುತ್ತು ತಲುಪುವಲ್ಲಿ ಎಡವಿದರು.

ಮಹಿಳೆಯರ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ತಾನ್ಯಾ ಚೌಧರಿ (60.50 ಮೀ.ದೂರ) ಮತ್ತು ರಚನಾ ಕುಮಾರಿ (58.13 ಮೀ.) ಅವರು ಕ್ರಮವಾಗಿ ಏಳು ಹಾಗೂ ಒಂಬತ್ತನೇ ಸ್ಥಾನ ಪಡೆದರು.

ಪ್ರಿಯಾಂಕಾಗೆ ಐದನೇ ಸ್ಥಾನ: ಬೆಳಿಗ್ಗೆ ನಡೆದ ಮಹಿಳೆಯರ 20 ಕಿ.ಮೀ. ನಡಿಗೆ ಸ್ಪರ್ಧೆಯಲ್ಲಿ ಪ್ರಿಯಾಂಕಾ ಗೋಸ್ವಾಮಿ ಅವರು 1 ಗಂಟೆ. 43.7 ಸೆ. ಗಳೊಂದಿಗೆ ಐದನೇ ಸ್ಥಾನ ಗಳಿಸಿದರು. ಪುರುಷರ ವಿಭಾಗದಲ್ಲಿ ಆಕಾಶ್‌ದೀಪ್ ಸಿಂಗ್ (1 ಗಂಟೆ 27.33 ನಿ.) ಐದನೇ ಸ್ಥಾನ ತಮ್ಮದಾಗಿಸಿಕೊಂಡರು.



17.36 ಮೀಟರ್ ಸಾಧನೆ

ಕಿರಣ್ ಬಾಲಿಯಾನ್ –ಪಿಟಿಐ ಚಿತ್ರ

ಬಾಕ್ಸಿಂಗ್: ಸೆಮಿಗೆ ನಿಖತ್, ಒಲಿಂಪಿಕ್ಸ್‌ಗೂ ಅರ್ಹತೆ

ಹ್ವಾಂಗ್‌ಝೌ (ಪಿಟಿಐ): ಎರಡು ವರ್ಷ ಕೆಳಗೆ ಟೋಕಿಯೊ ಒಲಿಂಪಿಕ್ಸ್ ಕಳೆದುಕೊಂಡಿದ್ದ ಬೇಸರದಲ್ಲಿದ್ದ ತೆಲಂಗಾಣದ ಛಲಗಾತಿ ಬಾಕ್ಸರ್ ನಿಖತ್ ಝರೀನ್ ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವುದು ಮೊದಲ ಗುರಿಯಾಗಿತ್ತು. ಶುಕ್ರವಾರ, ಏಷ್ಯನ್ ಗೇಮ್ಸ್ ಸೆಮಿಫೈನಲ್ ತಲುಪುವ ಮೂಲಕ ಅವರು ಅದನ್ನು ಸಾಧಿಸಿಯೇಬಿಟ್ಟರು.

27 ವರ್ಷದ ನಿಖತ್ ಅವರು 50 ಕೆ.ಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಜೋರ್ಡಾನ್‌ನ ಎದುರಾಳಿ ನಾಸರ್ ಹನ್ನನ್ ಅವರನ್ನು ಸೋಲಿಸಲು ಹೆಚ್ಚು ಬೆವರುಹರಿಸಲಿಲ್ಲ. ಮೊದಲ ಸುತ್ತಿನಲ್ಲೇ ‘ಆರ್‌ಬಿಸಿ’ (ರೆಫ್ರಿ ಸ್ಟಾಪ್ಸ್ ಕಂಟೆಸ್ಟ್) ಆಧಾರದಲ್ಲಿ ಅವರು ಜಯಗಳಿಸಿದರು. ಪಂದ್ಯ ಮೂರೇ ನಿಮಿಷಗಳಲ್ಲಿ ಇತ್ಯರ್ಥಗೊಂಡಿತು. ಕರಾರುವಾಕ್ ಪಂಚ್‌ಗಳ ಮೂಲಕ ತಕ್ಷಣವೇ ಮೇಲುಗೈ ಸಾಧಿಸಿದರು.

ಎರಡು ಬಾರಿಯ ವಿಶ್ವ ಚಾಂಪಿಯನ್, ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಮತ್ತು ಈಗ ಏಷ್ಯನ್ ಕ್ರೀಡಾಕೂಟದ ಪದಕ ವಿಜೇತೆ ಸಹ ಆಗುವ ಹಾದಿಯಲ್ಲಿ ನಿಖತ್ ಯಶಸ್ವಿಯಾಗಿದ್ದಾರೆ.

‘ಕ್ವಾರ್ಟರ್‌ಫೈನಲ್‌ನಲ್ಲಿ ಗೆದ್ದು ಒಲಿಂಪಿಕ್ ಕೋಟಾ ದೊರೆತಿರುವುದರಿಂದ ತುಂಬಾ ಖುಷಿಯಾಗಿದೆ. ಒಲಿಂಪಿಕ್ ಕೋಟಾದ ಗುರಿ ಕೊನೆಗೂ ಸಾಕಾರಗೊಂಡಿದೆ’ ಎಂದು ಸಂತಸ ವ್ಯಕ್ತಪಡಿಸಿದರು.

ಬಾಕ್ಸಿಂಗ್ ದಂತಕತೆ ಎನಿಸಿರುವ ಎಂಸಿ ಮೇರಿ ಕೋಮ್ ಅವರ ನೆರಳಿನಲ್ಲಿ ನಿಖತ್ ಅವರು ತಮ್ಮ ಅವಕಾಶಕ್ಕಾಗಿ ಸಹನೆಯಿಂದ ಕಾಯಬೇಕಾಗಿತ್ತು. ಆದರೆ ತಮಗೆ ಅವಕಾಶ ದೊರೆತ ನಂತರ ಮಾತ್ರ ಅವರು ಹಿಂತಿರುಗಿಯೇ ನೋಡಿಲ್ಲ. ಆರು ಬಾರಿಯ ವಿಶ್ವ ಚಾಂಪಿಯನ್ ಮೇರಿಕೋಮ್ ಅವರಿಗೆ ಸೂಕ್ತ ಉತ್ತರಾಧಿಕಾರಿ ಆಗುತ್ತಿದ್ದಾರೆ.



ನಿಖತ್ ಝರೀನ್ –ಪಿಟಿಐ ಚಿತ್ರ

ನಿಖತ್ ಭಾನುವಾರ ನಡೆಯುವ ಸೆಮಿಫೈನಲ್‌ನಲ್ಲಿ ಎರಡು ಬಾರಿಯ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಚುಥಾಮತ್ ರಕ್ಸತ್ (ಥಾಯ್ಲೆಂಡ್) ಅವರನ್ನು ಎದುರಿಸುವರು. ವಿಶ್ವ ಚಾಂಪಿಯನ್ ಷಿಪ್ ಕಂಚಿನ ಪದಕ ವಿಜೇತೆ ಪರ್ವಿನ್ ಅವರು ಸ್ಥಳೀಯ ಫೆವರೇಟ್ ಝಿಚುನ್ ಷು ಅವರನ್ನು 16ರ ಸುತ್ತಿನಲ್ಲಿ 5-0ಯಿಂದ ಸೋಲಿಸಿ ಅಭಿಯಾನ ಆರಂಭಿಸಿದರು.

80 ಕೆ.ಜಿ. ವಿಭಾಗದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಲಕ್ಷ್ಯ ಚಾಹರ್ 1-4 ರಿಂದ ಕಿರ್ಗಿಸ್ತಾನದ ಒಮುರ್ಬೆಕ್ ಬೆಕ್ಸಿಗಿಟ್ ಎದುರು ಸೋಲನುಭವಿಸಿದರು.

ಸ್ಕ್ವಾಷ್: ಚಿನ್ನದ ಪದಕಕ್ಕಾಗಿ ಭಾರತ –ಪಾಕ್ ಹಣಾಹಣಿ

ಮಹಿಳೆಯರಿಗೆ ಕಂಚು: ಫೈನಲ್‌ಗೆ ಪುರುಷರು

ಹಾಂಗ್‌ಝೌ (ಪಿಟಿಐ): ಶುಕ್ರವಾರ ಭಾರತದ ಪದಕಗಳ ಪಟ್ಟಿಯಲ್ಲಿ ಸ್ಕ್ವಾಷ್ ಕ್ರೀಡಾಪಟುಗಳೂ ತಮ್ಮ ಹೆಜ್ಜೆಗುರುತು ಮೂಡಿಸಿದರು.

ಭಾರತ ಮಹಿಳೆಯರ ತಂಡವು ಕಂಚಿನ ಪದಕ ಜಯಿಸಿದರೆ, ಪುರುಷರ ತಂಡವು ಫೈನಲ್‌ಗೆ ಲಗ್ಗೆ ಇಟ್ಟಿತು.

ಜೋಶ್ನಾ ಚಿಣ್ಣಪ್ಪ ಮತ್ತು ತನ್ವಿ ಜೋಡಿಯು ಸೆಮಿಫೈನಲ್‌ನಲ್ಲಿ ಹಾಂಗ್‌ಕಾಂಗ್ ವಿರುದ್ಧ ಸೋತಿತು. ಹಾಂಗ್‌ಕಾಂಗ್ ತಂಡದ ಜೋಷ್ನಾ ಟಿಝಿ ಲಾಕ್ ಹೊ 3-2 ರಿಂದ (7-11, 11-7, 9-11, 11-6, 11-8) ಅವರ ವಿರುದ್ಧ ಗೆದ್ದರು. ತನ್ವಿ 0-3ರಿಂದ ಸಿನ್ ಯೂಕ್ ಚಾನ್ ವಿರುದ್ಧ ಸೋತರು. ಇನ್ನೊಂದು ಪಂದ್ಯದಲ್ಲಿ 15 ವರ್ಷದ ಅನಾಹತ್ 0-3ರಿಂದ ಲೀ ಕಾ ಯೀ ವಿರುದ್ಧ ಸೋಲನುಭವಿಸಿದರು.

ಫೈನಲ್‌ಗೆ ಪುರುಷರ ತಂಡ: ಪುರುಷರ ವಿಭಾಗದಲ್ಲಿ ಭಾರತವು 2-0ಯಿಂದ ಹಾಲಿ ಚಾಂಪಿಯನ್ ಮಲೇಷ್ಯಾ ತಂಡವನ್ನು ಸೋಲಿಸಿ, ಫೈನಲ್ ಪ್ರವೇಶಿಸಿತು.

ಸೌರವ್ ಘೋಷಾಲ್ ಮತ್ತು ಅಭಯ್ ಸಿಂಗ್ ಅವರು ತಮ್ಮ ಪಂದ್ಯಗಳನ್ನು ಗೆದ್ದು ತಂಡವನ್ನು ಫೈನಲ್ ತಲುಪಿಸಿದರು. ಇದರೊಂದಿಗೆ ಚಿನ್ನದ ಪದಕ ಜಯದ ಅವಕಾಶ ಲಭಿಸಿದೆ.



ಕಂಚಿನ ಪದಕ ಗೆದ್ದ ಭಾರತ ಮಹಿಳೆಯರ ಸ್ಕ್ವಾಷ್ ತಂಡದ ಅನಾಹತ್ ಸಿಂಗ್, ತನ್ವಿ, ದೀಪಿಕಾ ಪಳ್ಳಿಕಲ್ ಮತ್ತು ಜೋಶ್ನಾ ಚಿಣ್ಣಪ್ಪ –ಪಿಟಿಐ ಚಿತ್ರ

ಚಿನ್ನದ ಪದಕ ಸುತ್ತಿನಲ್ಲಿ ಭಾರತ ತಂಡವು ಪಾಕಿಸ್ತಾನ ವಿರುದ್ಧ ಆಡಲಿದೆ. ಸೆಮಿಫೈನಲ್‌ನಲ್ಲಿ ಅಭಯ್ ಸಿಂಗ್ 3-1 (11-3 12-10 9-11 11-6) ರಿಂದ ಮೊಹಮ್ಮದ್ ಅದೀನ್ ಇದ್ರಾಕೀ ಬಿನ್ ಬತಿಯಾರ್ ವಿರುದ್ಧ ಗೆದ್ದರು.

ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಸೌರವ್ 3-1ರಿಂದ (11-8 11-6 12-10 11-3) ಏಯನ್ ಯೋವ್ ಎನ್‌ಜಿ ವಿರುದ್ಧ ಗೆದ್ದರು.

ಎರಡು ನೇರ ಗೇಮ್‌ಗಳಲ್ಲಿ ಗೆದ್ದ ಕಾರಣ ಮೂರನೇ ಸುತ್ತಿನ ಅವಶ್ಯಕತೆ ಬೀಳಲಿಲ್ಲ. ಆದ್ದರಿಂದ ಮಹೇಶ್ ಮನಗಾಂವ್ಕರ್ ಮತ್ತು ಮೊಹಮ್ಮದ್ ಸೈಫಿಕ್ ಬಿನ್ ಮೊಹಮ್ಮದ್ ಕಮಾಲ್ ನಡುವಣ ಪಂದ್ಯ ನಡೆಯಲಿಲ್ಲ.


ಗಾಲ್ಫ್: 2ನೇ ಸ್ಥಾನದಲ್ಲಿ ಅದಿತಿ

ಹಾಂಗ್‌ಝೌ (ಪಿಟಿಐ): ಭಾರತದ ಗಾಲ್ಫರ್ ಅದಿತಿ ಅಶೋಕ್ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಪದಕದ ಭರವಸೆ ಮೂಡಿಸಿದ್ದು, ಮಹಿಳೆಯರ ವಿಭಾಗದಲ್ಲಿ ಎರಡನೇ ಸುತ್ತಿನ ಬಳಿಕ ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ.

ಇಲ್ಲಿನ ವೆಸ್ಟ್ ಲೇಕ್ ಇಂಟರ್‌ನ್ಯಾಷನಲ್ ಕೋರ್ಸ್‌ನಲ್ಲಿ ಶುಕ್ರವಾರ ನಡೆದ ಎರಡನೇ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಬೆಂಗಳೂರಿನ ಅದಿತಿ ಒಟ್ಟು 66 ಸ್ಟ್ರೋಕ್‌ಗಳನ್ನು ಬಳಸಿಕೊಂಡರು. ಮೊದಲ ಸುತ್ತಿನಲ್ಲಿ 67 ಸ್ಟ್ರೋಕ್‌ಗಳನ್ನು ತೆಗೆದುಕೊಂಡಿದ್ದ ಅವರು ಇದೀಗ ಒಟ್ಟು 133 ಸ್ಕೋರ್ ಹೊಂದಿದ್ದಾರೆ.

ಮೊದಲ ಸ್ಥಾನದಲ್ಲಿರುವ ಥಾಯ್ಲೆಂಡ್‌ನ ಅರ್ಪಿಚಯ ಯುಬೊಲ್ (67-65) ಅವರಿಗಿಂತ ಅದಿತಿ, ಒಂದು ಸ್ಟ್ರೋಕ್‌ನಿಂದ ಹಿಂದಿದ್ದಾರೆ. ಮಹಿಳೆಯರ ತಂಡ ವಿಭಾಗದಲ್ಲಿ ಭಾರತವು ಚೀನಾ ಮತ್ತು ಥಾಯ್ಲೆಂಡ್ ಬಳಿಕ ಮೂರನೇ ಸ್ಥಾನದಲ್ಲಿದೆ. ಭಾರತದ ಮಹಿಳಾ ಗಾಲ್ಫರ್‌ಗಳು ಏಷ್ಯನ್ ಕ್ರೀಡಾಕೂಟದಲ್ಲಿ ಒಮ್ಮೆಯೂ ಪದಕ ಗೆದ್ದುಕೊಂಡಿಲ್ಲ.

ಪ್ರಣವಿ ಅರಸ್ (68-71) ಅವರು ಜಂಟಿ 10ನೇ ಹಾಗೂ ಅವನಿ ಪ್ರಶಾಂತ್ (72-69) ಜಂಟಿ 15ನೇ ಸ್ಥಾನದಲ್ಲಿದ್ದಾರೆ.



ಅದಿತಿ ಅಶೋಕ್

ಆದರೆ ಭಾರತದ ಪುರುಷರು ಸುಧಾರಿತ ಪ್ರದರ್ಶನ ನೀಡಲು ವಿಫಲರಾದರು. ಅನಿರ್ಬನ್ ಲಾಹಿರಿ (65- 67) 9ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಎಸ್‌ಎಸ್‌ಪಿ ಚೌರಾಸಿಯಾ (67-72) 10 ಕ್ರಮಾಂಕಗಳಷ್ಟು ಕುಸಿತ ಕಂಡು ಜಂಟಿ 19ನೇ ಸ್ಥಾನದಲ್ಲಿದ್ದಾರೆ. ಭಾರತ ಪುರುಷರ ತಂಡ ಜಂಟಿ 6ನೇ ಸ್ಥಾನದಲ್ಲಿದೆ.

ಚೆಸ್: ಭಾರತ ತಂಡಗಳ ಶುಭಾರಂಭ

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳಾ ತಂಡಗಳು ಏಷ್ಯನ್ ಕ್ರೀಡಾಕೂಟದ ಚೆಸ್‌ನಲ್ಲಿ ಶುಕ್ರವಾರ ಸುಲಭ ಗೆಲುವಿನೊಡನೆ ಅಭಿಯಾನ ಆರಂಭಿಸಿದವು. ಪುರುಷರ ತಂಡ 3.5-0.5ರಿಂದ ಮಂಗೋಲಿಯಾ ತಂಡವನ್ನು ಮಣಿಸಿದರೆ, ಮಹಿಳಾ ತಂಡ ಇಷ್ಟೇ ಅಂತರದಿಂದ ಫಿಲಿಪೀನ್ಸ್ ತಂಡದ ಮೇಲೆ ಜಯಗಳಿಸಿತು.

ವೈಯಕ್ತಿಕ ವಿಭಾಗದ ಪಂದ್ಯಗಳು ರ‍್ಯಾಪಿಡ್ ಮಾದರಿಯಲ್ಲಿ ನಡೆದಿದ್ದವು. ತಂಡ ವಿಭಾಗದ ಸ್ಪರ್ಧೆಗಳು ‘ಸಾಂಪ್ರದಾಯಿಕ’ (ಕ್ಲಾಸಿಕಲ್) ಮಾದರಿಯಲ್ಲಿ ನಡೆಯುತ್ತಿವೆ.

ಜಿಎಂಗಳಾದ ಅರ್ಜುನ್ ಇರಿಗೇಶಿ, ವಿದಿತ್ ಗುಜರಾತಿ ಮತ್ತು ಆರ್.ಪ್ರಜ್ಞಾನಂದ ಅವರು ಮಂಗೋಲಿಯಾದ ಎದುರಾಳಿಗಳ ಮೇಲೆ ಸುಲಭ ಜಯಗಳಿಸಿದರು. ಆದರೆ ಟಾಪ್ ಬೋರ್ಡ್‌ನಲ್ಲಿ ಜಿಎಂ ಡಿ.ಗುಕೇಶ್ ತಮಗಿಂತ ಕೆಳಕ್ರಮಾಂಕದ ಬಿಲ್ಗುನ್ ಸುಮಿಯ ಜತೆ ಡ್ರಾ ಮಾಡಿಕೊಂಡಿದ್ದು ಅನಿರೀಕ್ಷಿತ ಎನಿಸಿತು. ಭಾರತ ಪುರುಷರ ತಂಡ ಅಗ್ರ ಶ್ರೇಯಾಂಕ ಗಳಿಸಿದೆ.

ಮಹಿಳಾ ವಿಭಾಗದಲ್ಲಿ ಆರ್.ವೈಶಾಲಿ, ಬಿ.ಸವಿತಾ ಶ್ರೀ, ದ್ರೋಣವಲ್ಲಿ ಹಾರಿಕಾ ಅವರು ಫಿಲಿಪೀನ್ಸ್ ಎದುರಾಳಿಗಳ ಎದುರು ತಮ್ಮ ಪಂದ್ಯಗಳನ್ನು ಗೆದ್ದುಕೊಂಡರೆ, ಮೂರನೇ ಬೋರ್ಡ್‌ನಲ್ಲಿ ವಂತಿಕಾ ಅಗರವಾಲ್ ಜೇನ್ ಜೊಡಿಲಿನ್ ಫ್ರೋಂಡಾ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.


ಬ್ಯಾಡ್ಮಿಂಟನ್: ನೇಪಾಳ ವಿರುದ್ಧ 3–0 ಜಯ

ಪುರುಷರ ತಂಡಕ್ಕೆ ಪದಕ ಖಚಿತ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ ತಂಡ ಅಷ್ಟೇನೂ ಪ್ರಬಲವಲ್ಲದ ನೇಪಾಳ ತಂಡವನ್ನು 3-0 ಯಿಂದ ಸೋಲಿಸಿ ಏಷ್ಯನ್ ಕ್ರೀಡಾಕೂಟದ ಬ್ಯಾಡ್ಮಿಂಟನ್‌ನಲ್ಲಿ ಶುಕ್ರವಾರ ಸೆಮಿಫೈನಲ್ ತಲುಪಿತು. ಆ ಮೂಲಕ 37 ವರ್ಷಗಳ ನಂತರ ಪದಕ ಖಚಿತಪಡಿಸಿಕೊಂಡಿತು.

ಲಕ್ಷ್ಯಸೇನ್ 21-5, 21-8 ರಿಂದ ಪ್ರಿನ್ಸ್ ದಹಲ್ ವಿರುದ್ಧ ಜಯಗಳಿಸಿ 1-0 ಮುನ್ನಡೆ ಒದಗಿಸಿದರು. ಕಿದಂಬಿ ಶ್ರೀಕಾಂತ್ 21-4, 21-13 ರಿಂದ ಸುನೀಲ್ ಜೋಶಿ ಅವರನ್ನು ಸೋಲಿಸಿ ಮುನ್ನಡೆ ಹೆಚ್ಚಿಸಿದರು. ಮಿಥುನ್ ಮಂಜುನಾಥ ಸಹ ನೇರ ಗೇಮ್‌ಗಳಲ್ಲಿ ಬಿಷ್ಣು ಕುತ್ವಾಲ್ ಅವರನ್ನು ಸೋಲಿಸಿದರು. ಭಾರತ ತಂಡ ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

ಸೆಮಿಫೈನಲ್‌ನಲ್ಲಿ ಸೋತ ತಂಡಗಳಿಗೂ ಕಂಚಿನ ಪದಕ ನೀಡಲಾಗುತ್ತದೆ.



ಲಕ್ಷ್ಯಸೇನ್

ಭಾರತ ಈ ಹಿಂದೆ ಕೊನೆಯ ಬಾರಿ, 1986ರ ಸೋಲ್ ಗೇಮ್ಸ್‌ನಲ್ಲಿ ಪುರುಷರ ತಂಡ ವಿಭಾಗದಲ್ಲಿ ಪದಕ ಗೆದ್ದಿತ್ತು. ಆ ಬಾರಿ ಸೈಯ್ಯದ್ ಮೋದಿ ನೇತೃತ್ವದ ತಂಡ ಕಂಚಿನ ಪದಕ ಗೆದ್ದುಕೊಂಡಿತ್ತು.

ಆದರೆ ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ನಿರಾಸೆ ಕಾದಿತ್ತು. ಪಿ.ವಿ.ಸಿಂಧು ನೇತೃತ್ವದ ತಂಡ 0-3 ರಲ್ಲಿ ಪ್ರಬಲ ಥಾಯ್ಲೆಂಡ್‌ಗೆ ಶರಣಾಯಿತು. ಸಿಂಧು 21-14, 15-21, 14-21 ರಿಂದ ವಿಶ್ವದ 12ನೇ ನಂಬರ್ ಆಟಗಾರ್ತಿ ಪರ್ಣಪವಿ ಚೊಚುವಾಂಗ್ ಅವರಿಗೆ ಮೊದಲ ಸಿಂಗಲ್ಸ್‌ನಲ್ಲಿ ಸೋತರು. ಉಳಿದ ಇಬ್ಬರು ಆಟಗಾರ್ತಿಯರು ನೇರ ಗೇಮ್‌ಗಳಲ್ಲಿ ಸೋತರು.

ಟ್ರಿಸಾ ಜೋಲಿ- ಗಾಯತ್ರಿ ಗೋಪಿಚಂದ್ 19-21, 5-21ರಲ್ಲಿ ಹತ್ತನೇ ಕ್ರಮಾಂಕದ ಜೊಂಗಕೊಲ್ಫನ್ ಕಿಟ್ಟಿತರಕುಲ್- ರವಿಂದ ಪ್ರಜೊಂಗ್‌ಜೈ ಅವರಿಗೆ ಸೋತರು. ಅಸ್ಮಿತಾ ಚಲಿಹ ಅವರು ಬುಸಾನನ್ ಒಂಗ್ಬಮ್‌ರುಂಗ್‌ಫಾನ್ ಅವರಿಗೆ ಶರಣಾದರು.

ಟಿಟಿ: ಮಣಿಕಾ ಬಾತ್ರಾಗೆ ರೋಚಕ ಗೆಲುವು

ಹಾಂಗ್‌ಝೌ (ಪಿಟಿಐ): ಕಾಮನ್ವೆಲ್ತ್ ಕ್ರೀಡೆಗಳ ಸ್ವರ್ಣಪದಕ ವಿಜೇತೆ ಮಣಿಕಾ ಬಾತ್ರಾ ಅವರು ಏಷ್ಯನ್ ಗೇಮ್ಸ್ ಟೇಬಲ್ ಟೆನಿಸ್ ಮಹಿಳೆಯರ ಸಿಂಗಲ್ಸ್‌ನಲ್ಲಿ ಶುಕ್ರವಾರ ಎಂಟರ ಘಟ್ಟಕ್ಕೆ ಮುನ್ನಡೆದರು. ಆದರೆ ಪುರುಷರ ವಿಭಾಗದಲ್ಲಿ ಭಾರತದ ಅನುಭವಿಗಳಾದ ಎ.ಶರತ್ ಕಮಲ್ ಮತ್ತು ಜಿ.ಸತ್ಯನ್ ಅವರ ಸವಾಲು ಪ್ರಿಕ್ವಾರ್ಟರ್‌ಫೈನಲ್‌ಗೇ ಅಂತ್ಯಗೊಂಡಿತು.

ಪುರುಷರ ಸಿಂಗಲ್ಸ್‌ನಲ್ಲಿ ಶರತ್ ವೀರೋಚಿತ ಪ್ರದರ್ಶನ ನೀಡಿದರೂ, ಚೀನಾ ತೈಪೆಯ ಚಿ ಯುವಾನ್ ಚುವಾಂಗ್ ಎದುರು ಗೆಲುವು ಸಾಧ್ಯವಾಗಲಿಲ್ಲ. ತೈಪೆಯ ಆಟಗಾರ 11-7, 12-10, 9-11, 11-5, 10-12, 6-11, 11-8ರಲ್ಲಿ ಜಯಗಳಿಸಿದರು. ಎರಡು ಗೇಮ್‌ಗಳ ಹಿನ್ನಡೆಯಿಂದ ಚೇತರಿಸಿಕೊಂಡ ಶರತ್ ನಂತರ 3-3 ಸಮ ಮಾಡಿಕೊಂಡರೂ, ನಿರ್ಣಾಯಕ ಗೇಮ್‌ನಲ್ಲಿ ಸಮಚಿತ್ತದಿಂದ ಆಟವಾಡಲು ಆಗಲಿಲ್ಲ. ಜಿ.ಸತ್ಯನ್ 3-11, 3-11, 6-11, 3-11 ರಿಂದ ಚೀನಾದ ಚಿಕಿನ್ ವಾಂಗ್ ಎದುರು ಸೋಲನುಭವಿಸಿದರು.

ಮಿಶ್ರಫಲ: ಮಹಿಳೆಯರ ಡಬಲ್ಸ್‌ನಲ್ಲಿ ಭಾರತಕ್ಕೆ ಇಂದು ಮಿಶ್ರಫಲ. ಸುತೀರ್ಥ ಮುಖರ್ಜಿ- ಐಹಿಕಾ ಮುಖರ್ಜಿ 11-8, 11-7, 11-4 ರಿಂದ ಥಾಯ್ಲೆಂಡ್‌ನ ಜಿನ್ನಿಪಾ-ವಾನ್ವಿಸಾ ಎದುರು ಜಯ ಗಳಿಸಿದರು. ಆದರೆ ಶ್ರೀಜಾ ಅಕುಲಾ- ದಿವ್ಯಾ ಚಿತಳೆ ಹೊರಬಿದ್ದರು. ಅವರು ಮಿವಾ ಹರಿಮೊಟೊ- ಮಿಯು ಕಿಹಾರಾ 11-3, 11-5, 11-8 ರಿಂದ ಮಣಿದರು.

ಸಿಂಗಲ್ಸ್‌ನಲ್ಲಿ ಹಿರಿಯ ಆಟಗಾರ್ತಿ ಮಣಿಕಾ ಅವರ ವೀರೋಚಿತ ಗೆಲುವು ಭಾರತದ ಪಾಳೆಯದಲ್ಲಿ ಹರುಷ ಮೂಡಿಸಿತು. ತೀವ್ರ ಸೆಣಸಾಟ ಕಂಡ 16ರ ಘಟ್ಟದ ಪಂದ್ಯದಲ್ಲಿ ಮಣಿಕಾ 11-7, 6-11, 12-10, 11-13, 12-10, 11-6ರಲ್ಲಿ ಥಾಯ್ಲೆಂಡ್‌ನ ಸುತಾಸಿನಿ ಸವೆಟ್ಟಬಟ್ ಅವರನ್ನು ಹಿಮ್ಮೆಟ್ಟಿಸಿದರು. ಶನಿವಾರ ನಡೆಯುವ ಕ್ವಾರ್ಟರ್ ಫೈನಲ್‌ನಲ್ಲಿ ಅವರು ವಿಶ್ವದ ಮೂರನೇ ಕ್ರಮಾಂಕದ ಆಟಗಾರ್ತಿ, ಚೀನಾದ ಯಿದಿ ವಾಂಗ್ ಅವರನ್ನು ಎದುರಿಸಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಭಾರತದ ಮಾನವ್ ಠಕ್ಕರ್ ಮತ್ತು ಮನುಷ್ ಉತ್ಪಲ್‌ಭಾಯ್ ಶಾ ಜೋಡಿ 3-2 ರಿಂದ (3-11, 11-9, 11-6, 5-11, 11-8 ರಿಂದ ಸಿಂಗಪುರದ ಐಸಾಕ್ ಕ್ವೆಕ್ ಯಾಂಗ್- ಯೆ ಎನ್ ಕೊಯೆನ್ ಪಾಂಗ್ ಜೋಡಿಯನ್ನು ಮಣಿಸಿ ಎಂಟರ ಘಟ್ಟ ತಲುಪಿತು. ಆದರೆ, ಇನ್ನೊಂದು ಜೋಡಿ ಶರತ್- ಸತ್ಯನ್, ಚೀನಾದ ಚುಕಿನ್ ವಾಂಗ್- ಫಾನ್ ಝೆನ್‌ಡಾಂಗ್ ಎದುರು ಸೋಲನುಭವಿಸಿತು.

ಹಾಕಿ: ಮಲೇಷ್ಯಾ ವಿರುದ್ಧ ಭರ್ಜರಿ ಜಯ ಸಾಧಿಸಿದ ಸವಿತಾ ಬಳಗ

ಮಹಿಳಾ ತಂಡದ ಗೆಲುವಿನ ಓಟ

ಹಾಂಗ್‌ಝೌ (ಪಿಟಿಐ): ಭಾರತದ ವನಿತೆಯರ ಹಾಕಿ ತಂಡವು ತನ್ನ ಗೆಲುವಿನ ಓಟ ಮುಂದುವರಿಸಿತು.

ಶುಕ್ರವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 6–0ಯಿಂದ ಮಲೇಷ್ಯಾ ವಿರುದ್ಧ ಗೆದ್ದಿತು. ಗುಂಪಿನ ಮೊದಲ ಪಂದ್ಯದಲ್ಲಿಯೂ ಭಾರತವು ಸಿಂಗಪುರ ವಿರುದ್ಧ ಅಮೋಘ ಜಯ ಸಾಧಿಸಿತ್ತು.

ಮೋನಿಕಾ (7ನೇ ನಿಮಿಷ), ದೀಪ್ ಗ್ರೇಸ್ ಎಕ್ಕಾ (8ನೇ ನಿ), ನವನೀತ್ ಕೌರ್ (11ನೇ ನಿ), ವೈಷ್ಣವಿ ವಿಠಲ್ ಫಾಲ್ಕೆ (15ನೇ ನಿ), ಸಂಗೀತಾ ಕುಮಾರಿ (24ನೇ ನಿ) ಮತ್ತು ಲಾಲ್‌ರೆಮಿಸಿಯಾಮಿ (50ನಿ) ಗೋಲುಗಳನ್ನು ಗಳಿಸಿದರು.

ಮಲೇಷ್ಯಾದ ರಕ್ಷಣಾ ಗೋಡೆಯನ್ನು ಮೊದಲ ಕ್ವಾರ್ಟರ್‌ನಲ್ಲಿಯೇ ಭಾರತದ ಆಟಗಾರ್ತಿಯರು ನುಚ್ಚುನೂರು ಮಾಡಿದರು. ಇದೊಂದೇ ಅವಧಿಯಲ್ಲಿ ನಾಲ್ಕು ಗೋಲುಗಳನ್ನು ದಾಖಲಿಸಿದರು.

ಮೋನಿಕಾ ಏಳನೇ ನಿಮಿಷದಲ್ಲಿ ಗೋಲು ಖಾತೆ ತೆರೆದರು. ಅವರು ಫೀಲ್ಡ್ ಗೋಲು ಹೊಡೆದರು. ಒಂದು ನಿಮಿಷದ ನಂತರ ದೀಪ್ ಗ್ರೇಸ್ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ದಾಖಲಿಸಿದರು. ಮೂರು ನಿಮಿಷಗಳ ನಂತರ ನವನೀತ್ ಕೂಡ ಗೋಲು ಗಳಿಸಿದರು.

15ನೇ ನಿಮಿಷದಲ್ಲಿ ಭಾರತಕ್ಕೆ ಮತ್ತೊಂದು ಪೆನಾಲ್ಟಿ ಕಾರ್ನರ್ ಲಭಿಸಿತು. ಅದನ್ನೂ ಗೋಲಿನಲ್ಲಿ ಪರಿವರ್ತಿಸಿದ ವೈಷ್ಣವಿ ಮಿಂಚಿದರು.

27ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿಯನ್ನೂ ಫಲಪ್ರದವಾಗಿಸಿಕೊಳ್ಳುವ ದೀಪಿಕಾ ಅವರ ಪ್ರಯತ್ನಕ್ಕೆ ಮಲೇಷ್ಯಾದ ಗೋಲ್‌ಕೀಪರ್ ಎಬಿ ಮಷಿತಾ ಅಡ್ಡಗಾಲು ಹಾಕಿದರು. ಎರಡನೇ ಕ್ವಾರ್ಟರ್‌ನಲ್ಲಿ ಕೇವಲ ಒಂದು ಗೋಲು ಮಾತ್ರ ಭಾರತಕ್ಕೆ ಒಲಿಯಿತು. ದ್ವಿತೀಯಾರ್ಧದಲ್ಲಿ ಒಂದು ಗೋಲು ಹೊಡೆದರು. ಭಾನುವಾರ ನಡೆಯಲಿರುವ ಮೂರನೇ ಪಂದ್ಯದಲ್ಲಿ ಭಾರತ ತಂಡವು ಕೊರಿಯಾ ಎದುರು ಸೆಣಸಲಿದೆ.



ಭಾರತದ ದೀಪ್ ಗ್ರೇಸ್ ಎಕ್ಕಾ ಗೋಲು ಗಳಿಸಿದಾಗ ಅಭಿನಂದಿಸಿದ ಸಹ ಆಟಗಾರ್ತಿಯರು –ಪಿಟಿಐ ಚಿತ್ರ



ಹ್ಯಾಂಡ್‌ಬಾಲ್: ಚೀನಾಕ್ಕೆ ಜಯ

ಹಾಂಗ್‌ಝೌ (ಪಿಟಿಐ): ಭಾರತ ವನಿತೆಯರ ತಂಡದವರು, ಏಷ್ಯನ್ ಕ್ರೀಡಾಕೂಟದ ಮಹಿಳೆಯರ ಹ್ಯಾಂಡ್‌ಬಾಲ್ ಟೂರ್ನಿಯ 'ಬಿ' ಗುಂಪಿನ ಸ್ಪರ್ಧೆಯಲ್ಲಿ ಆತಿಥೇಯ ಚೀನಾ ಎದುರು 30–37 ರಲ್ಲಿ ಸೋತರೂ ಹೋರಾಟ ಪ್ರದರ್ಶಿಸಿದರು. ವಿರಾಮದ ವೇಳೆ ಚೀನಾ 18–12ರಲ್ಲಿ ಮುಂದಿತ್ತು.

'ಬಿ' ಗುಂಪಿನಲ್ಲಿ ಭಾರತ ತನ್ನ ಮೊದಲು ಪಂದ್ಯದಲ್ಲಿ ಜಪಾನ್ ತಂಡಕ್ಕೂ ಸೋತಿತ್ತು. ನಂತರ ಹಾಂಗ್‌ಕಾಂಗ್ ಎದುರು 'ಡ್ರಾ' ಸಾಧಿಸಲಷ್ಟೇ ಶಕ್ತವಾಗಿತ್ತು.

ಇನ್ನೊಂದೆಡೆ ಈ ಪಂದ್ಯ ಆಡುವ ಮೊದಲು ಆತಿಥೇಯ ತಂಡ, ನೇಪಾಳ ಮತ್ತು ಹಾಂಗ್‌ಕಾಂಗ್ ತಂಡಗಳ ಎದುರು ಜಯಗಳಿಸಿತ್ತು.

ಅಂಧರ ಕ್ರಿಕೆಟ್‌ನಲ್ಲಿ ಜಯ: ಆಟಗಾರರಿಗೆ ಸನ್ಮಾನ

ಬೆಂಗಳೂರು: ಐಬಿಎಸ್‌ಎ ವಿಶ್ವ ಕ್ರಿಕೆಟ್ ಟೂರ್ನಿಯಲ್ಲಿ (ಕ್ರಿಕೆಟ್ ಫಾರ್ ಬ್ಲೈಂಡ್) ಚಿನ್ನದ ಪದಕ ಗೆದ್ದಿರುವ ಭಾರತದ ಮಹಿಳಾ ಅಂಧರ ಕ್ರಿಕೆಟ್ ತಂಡ ಹಾಗೂ ಬೆಳ್ಳಿ ಪದಕ ಗೆದ್ದ ಪುರುಷರ ಕ್ರಿಕೆಟ್ ತಂಡದ ಕರ್ನಾಟಕದ ಆಟಗಾರರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಅಭಿನಂದಿಸಿದರು.

ಮಹಿಳಾ ತಂಡದ ನಾಯಕಿ, ರಾಜ್ಯದ ಯು.ವರ್ಷಾ, ಆಟಗಾರ್ತಿಯರಾದ ದೀಪಿಕಾ, ಗಂಗವ್ವ ಮತ್ತು ಪುರುಷರ ತಂಡದ ಆಟಗಾರರಾದ ಜೆ.ಪ್ರಕಾಶ್, ಸುನೀಲ್ ಕುಮಾರ್, ಬಸಪ್ಪ ಒಡ್ಡಗೋಲ್ ಅವರನ್ನು ಸನ್ಮಾನಿಸಿದರು.

ಕ್ರೀಡಾಪಟುಗಳ ಜತೆ ಸಂವಾದ ನಡೆಸಿದ ಸಿಎಂ, ಕ್ರಿಕೆಟ್ ತರಬೇತಿ, ಮೈದಾನದಲ್ಲಿ ಬಾಲ್ ಗುರುತಿಸುವ ವಿಧಾನ ಮಾಹಿತಿ ಪಡೆದುಕೊಂಡರು.

ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ನೇತೃತ್ವದಲ್ಲಿ ಸಲ್ಲಿಸಿದ ಮನವಿ ಸ್ವೀಕರಿಸಿದ ಅವರು ಪ್ರತ್ಯೇಕವಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕ್ರಿಕೆಟ್ ಅಸೋಸಿಯೇಷನ್ ಫಾರ್ ಬ್ಲೈಂಡ್ ಇಂಡಿಯಾದ ಅಧ್ಯಕ್ಷ ಮಹಾಂತೇಶ್, ಕ್ಯಾಬಿ ಅಧ್ಯಕ್ಷ ಬೂಸೇಗೌಡ ಇದ್ದರು.

ರಾಜ್ಯಪಾಲದಿಂದ ಸನ್ಮಾನ: ರಾಜ್ಯಪಾಲ ಥಾವರಚಂದ್ ಗೆಹ್ಲೋತ್ ಅವರು ರಾಜಭವನದಲ್ಲಿ ಚಿನ್ನದ ಪದಕ ವಿಜೇತ ಮಹಿಳಾ ತಂಡದ ಆಟಗಾರರಿಗೆ ತಲಾ ₹ 51,000 ಮತ್ತು ಬೆಳ್ಳಿ ಪದಕ ವಿಜೇತ ಪುರುಷರ ತಂಡದ ಆಟಗಾರರಿಗೆ ತಲಾ ₹ 41,000 ನಗದು ಬಹುಮಾನವನ್ನು ಘೋಷಿಸಿ, ಸನ್ಮಾನಿಸಿದರು.



ಐಬಿಎಸ್‌ಎ ವಿಶ್ವ ಕ್ರಿಕೆಟ್ ಪಂದ್ಯಾವಳಿಯಲ್ಲಿ ಜಯಿಸಿದ ಚಿನ್ನದ ಪದಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವೀಕ್ಷಿಸಿದರು

ಮಳೆಯ ನಡುವೆ ಐದು ಕೂಟ ದಾಖಲೆ

ರಾಜ್ಯ ಜೂನಿಯರ್, ಯೂತ್ ಅಥ್ಲೆಟಿಕ್ಸ್: ತುಷಾರ್‌ಗೆ ಡಬಲ್ ಚಿನ್ನದ ಸಂಭ್ರಮ

• ವಿಕ್ರಂ ಕಾಂತಿಕೆರೆ

ಮಂಗಳೂರು: ಆಗಾಗ್ಗೆ ಸುರಿಯುತ್ತಿದ್ದ ಧಾರಾಕಾರ ಮಳೆಯ ನಡುವೆ ಛಲ ಬಿಡದೆ 'ಬಲ' ಪ್ರದರ್ಶಿಸಿದ ಅಥ್ಲೀಟ್‌ಗಳು ಲೋಕನಾಥ ಬೋಳಾರ್ ಸ್ಮಾರಕ ರಾಜ್ಯ ಜೂನಿಯರ್ ಮತ್ತು ಯೂತ್ ಅಥ್ಲೆಟಿಕ್ ಕೂಟದ ಮೂರನೇ ದಿನವಾದ ಶುಕ್ರವಾರ ಐದು ಕೂಟ ದಾಖಲೆಗಳನ್ನು ನಿರ್ಮಿಸಿದರು.

ಮಂಗಳಾ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ 23 ವರ್ಷದೊಳಗಿನ ಪುರುಷರ ಲಾಂಗ್ ಜಂಪ್‌ನಲ್ಲಿ ಹಾಸನದ ಪುರುಷೋತ್ತಮ್ ಹೊಸ ದಾಖಲೆ ಬರೆದರು.

20 ವರ್ಷದೊಳಗಿನ ಮಹಿಳೆಯರ 1500 ಮೀ ಓಟದಲ್ಲಿ ಬೆಂಗಳೂರಿನ ಪ್ರಿಯಾಂಕಾ, 16 ವರ್ಷದೊಳಗಿನ ಬಾಲಕಿಯರ 2000 ಮೀಟರ್ಸ್ ಓಟದಲ್ಲಿ ದಕ್ಷಿಣ ಕನ್ನಡದ ಚರಿಷ್ಮಾ, 300 ಮೀ ಓಟದಲ್ಲಿ ದಕ್ಷಿಣ ಕನ್ನಡದ ರೀತುಶ್ರೀ ಮತ್ತು 16 ವರ್ಷದೊಳಗಿನ ಬಾಲಕರ 80 ಮೀ ಹರ್ಡಲ್ಸ್‌ನಲ್ಲಿ ಬೆಂಗಳೂರಿನ ವೀರೇಶ್ ಪಿ. ಚಿನ್ನದೊಂದಿಗೆ ದಾಖಲೆ ಬರೆದರು.

ಕೂಟದ ಮೊದಲ ದಿನ 800 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದಿದ್ದ ತುಷಾರ್ ಶುಕ್ರವಾರ ಮತ್ತೊಮ್ಮೆ ಪಾರಮ್ಯ ಮೆರೆದರು. ಯಾದಗಿರಿಯ ಸೂರ್ಯ ಮತ್ತು ಬೆಂಗಳೂರಿನ ರೋಹಿತ್ ಅವರಿಂದ ಪೈಪೋಟಿ ಎದುರಿಸಿದ ತುಷಾರ್ ಅಂತಿಮ ಕ್ಷಣದಲ್ಲಿ ಗೆದ್ದು ಸಂಭ್ರಮಿಸಿದರು.

3ನೇ ದಿನದ ಫಲಿತಾಂಶಗಳು (ಚಿನ್ನ ಮಾತ್ರ): ಪುರುಷರು: 23 ವರ್ಷದೊಳಗಿನವರು: 400 ಮೀ: ಮಹಾಂತೇಶ್ ಸಿದ್ದಪ್ಪ (ದ.ಕ.). ಕಾಲ: 47.99 ಸೆ; 1500 ಮೀ: ತುಷಾರ್ ವಸಂತ್ ಬಿ (ಬೆಳಗಾವಿ). ಕಾಲ: 4 ನಿ 2.34 ಸೆ; 110 ಮೀ ಹರ್ಡಲ್ಸ್: ಸುಶಾಂತ್ ಎಂ.ಡಿ (ಉಡುಪಿ). ಕಾಲ: 14.91 ಸೆ; ಲಾಂಗ್‌ಜಂಪ್: ಪುರುಷೋತ್ತಮ್ (ಹಾಸನ). ಅಂತರ: 7.41ಮೀ (ಕೂಟ ದಾಖಲೆ. ಹಿಂದಿನ ದಾಖಲೆ: ಆರ್ಯ ಎಸ್: 7.31 ಮೀ; 2022); 20 ವರ್ಷದೊಳಗಿನವರು: 400 ಮೀ: ರಿಹಾನ್ ಸಿ.ಎಚ್ (ಬೆಂಗಳೂರು). ಕಾಲ: 48.36 ಸೆ; 1500 ಮೀ: ಲೋಕೇಶ್ ಕೆ (ಯಾದಗಿರಿ). ಕಾಲ: 4ನಿ 7.15 ಸೆ; 110 ಮೀ ಹರ್ಡಲ್ಸ್: ಅಂಕಿತ್ ಜೋಗಿ (ಉಡುಪಿ). ಕಾಲ: 15.65 ಸೆ; ಲಾಂಗ್‌ಜಂಪ್: ಸುಹಾನ್ ಎಸ್ ಸುವರ್ಣ (ದ.ಕ.). ಅಂತರ: 7.14 ಮೀ; ಡಿಸ್ಕಸ್ ಥ್ರೋ: ವರುಣ್ ಡಿ.ಸಿ (ದ.ಕ). ದೂರ: 43.76 ಮೀ; **ಬಾಲಕರು:** 18 ವರ್ಷದೊಳಗಿನವರು: 400 ಮೀ: ಪ್ರತೀಕ್ ಡಿ (ಬೆಂಗಳೂರು). ಕಾಲ: 49.88 ಸೆ; 1500 ಮೀ: ಚಿಂತನ್ ಎಚ್.ವಿ (ಕೊಡಗು). ಕಾಲ: 4ನಿ 6.89ಸೆ; 3000 ಮೀ: ನಿಖಿಲ್ ಸಿ (ಶಿವಮೊಗ್ಗ). ಕಾಲ: 9ನಿ 22.71 ಸೆ, 110 ಮೀ ಹರ್ಡಲ್ಸ್: ಚೈತನ್ಯ ಶ್ರೀಧರ್ (ಬೆಳಗಾವಿ). ಕಾಲ: 14.82 ಸೆ; 10000 ಮೀ ವೇಗ ನಡಿಗೆ: ದರ್ಶನ್ ಭರಮಪ್ಪ (ದಕ್ಷಿಣ ಕನ್ನಡ). ಕಾಲ: 54 ನಿ 41.53 ಸೆ; ಲಾಂಗ್‌ಜಂಪ್: ಉಜ್ವಲ್ ಕೆ.ಪೂಜಾರಿ (ದ.ಕ.). ಅಂತರ: 6.28ಮೀ; 16 ವರ್ಷದೊಳಗಿನವರು: 300 ಮೀ: ಮೋನಿಶ್ ಚಂದ್ರಶೇಖರ್ (ಬೆಂಗಳೂರು). ಕಾಲ: 36.61 ಸೆ; 80 ಮೀ ಹರ್ಡಲ್ಸ್: ವೀರೇಶ್ ಪಿ (ಬೆಂಗಳೂರು). ಕಾಲ: 11.1 ಸೆ (ಕೂಟ ದಾಖಲೆ: ಹಿಂದಿನ ದಾಖಲೆ: ತೇಜಲ್ ಕೆ.ಪಿ: 11.7ಸೆ, 2022); ಲಾಂಗ್‌ಜಂಪ್: ಹರ್ಷಿತ್ (ಉಡುಪಿ). ಅಂತರ: 5.67 ಮೀ; ಡಿಸ್ಕಸ್ ಥ್ರೋ: ಅಭಿಜಿತ್ ಟಿ.ನಾಯಕ್ (ಚಾಮರಾಜನಗರ). ದೂರ: 39.34ಮೀ; ಜಾವೆಲಿನ್: ಪುಷ್ಪಕ್ ನೆಲ್ವಾಡೆ (ಬೀದರ್). ದೂರ: 58.12ಮೀ; 14 ವರ್ಷದೊಳಗಿನವರು: 600 ಮೀ: ಅರ್ಜುನ್ ರಾಥೋಡ್ (ವಿಜಯಪುರ). ಕಾಲ: 1ನಿ 33.52 ಸೆ; ಲಾಂಗ್ ಜಂಪ್: ಸುಧಾಂಶು ರಾವ್ (ಬೆಂಗಳೂರು). ಅಂತರ: 5.10 ಮೀ; ಹೈಜಂಪ್: ದಕ್ಷ್ ಎಂ (ಬೆಂಗಳೂರು). ಎತ್ತರ: 1.54ಮೀ; ಜಾವೆಲಿನ್ ಥ್ರೋ: ಶರತ್ ಕೆ.ಜೆ (ಶಿವಮೊಗ್ಗ). ದೂರ: 7 ಮೀ. **ಮಹಿಳೆಯರು:** 23 ವರ್ಷದೊಳಗಿನವರು: 400 ಮೀ: ಮೇಘಾ ರೇವಣಸಿದ್ದಯ್ಯ (ಧಾರವಾಡ). ಕಾಲ: 57.64 ಸೆ; ಹ್ಯಾಮರ್ ಥ್ರೋ: ವೀಕ್ಷಾ (ಉಡುಪಿ). ದೂರ: 37.24 ಮೀ; 20 ವರ್ಷದೊಳಗಿನವರು: 400 ಮೀ: ಶ್ರೇಯಾ ರಾಜೇಶ್ (ಬೆಂಗಳೂರು). ಕಾಲ: 57.18 ಸೆ; 1500 ಮೀ: ಪ್ರಿಯಾಂಕಾ (ಬೆಂಗಳೂರು). ಕಾಲ 4ನಿ 37.94 ಸೆ (ಕೂಟ ದಾಖಲೆ. ಹಿಂದಿನ ದಾಖಲೆ: ಶ್ರದ್ಧಾರಾಣಿ ದೇಸಾಯಿ: 4 ನಿ 42 ಸೆ; 2012); 3000 ಮೀ: ಆರಾಧನಾ (ಬೆಂಗಳೂರು). ಕಾಲ: 9ನಿ 54.81 ಸೆ; 100 ಮೀ ಹರ್ಡಲ್ಸ್: ಕೆ.ಪಿ.ಜಸ್ಮಿತಾ (ಉಡುಪಿ). ಕಾಲ: 16.57 ಸೆ; ಲಾಂಗ್‌ಜಂಪ್: ದಿಶಾ ಗಣಪತಿ (ಮೈಸೂರು). ಅಂತರ: 5.39 ಮೀ; ಡಿಸ್ಕಸ್ ಥ್ರೋ: ರೋಷಿನಿ (ಚಾಮರಾಜನಗರ). ದೂರ: 40.52 ಮೀ; ಹ್ಯಾಮರ್ ಥ್ರೋ: ರೇವತಿ ಚಂದ್ರ (ಉಡುಪಿ). ದೂರ: 30.66ಮೀ; **ಬಾಲಕಿಯರು:** 18 ವರ್ಷದೊಳಗಿನವರು: 400 ಮೀ: ಗೀತಾ ಸಿ (ದ.ಕ.). ಕಾಲ: 58.81 ಸೆ; 1500 ಮೀ: ಸೀಮಾ ಮಹಾಂತೇಶ್ (ಹಾಸನ). ಕಾಲ: 5ನಿ 18.61 ಸೆ; 3000 ಮೀ: ಪ್ರಣತಿ (ಬೆಂಗಳೂರು). ಕಾಲ: 10ನಿ 37.50ಸೆ; ಲಾಂಗ್‌ಜಂಪ್: ಭುವನಾ ಸಾರಯ್ಯ (ವಿಜಯಪುರ). ಅಂತರ: 5.11ಮೀ; ಹ್ಯಾಮರ್ ಥ್ರೋ: ಸ್ಪೃಹಾ ನಾಯಕ್ (ಬೆಳಗಾವಿ). ದೂರ: 38.55 ಮೀ; 16 ವರ್ಷದೊಳಗಿನವರು: 300 ಮೀ: ರೀತುಶ್ರೀ (ದ.ಕ.). ಕಾಲ: 40.95 ಸೆ (ಕೂಟ ದಾಖಲೆ. ಹಿಂದಿನ ದಾಖಲೆ: 41.3 ಸೆ. ಉನ್ನತಿ ಅಯ್ಯಪ್ಪ; 2021); 2000 ಮೀ: ಚರಿಷ್ಮಾ (ದ.ಕ.). ಕಾಲ: 6ನಿ 51.64 ಸೆ (ಕೂಟ ದಾಖಲೆ. ಹಿಂದಿನ ದಾಖಲೆ: ಭವ್ಯಾ ಬಿ.ಯು: 6ನಿ 53.2 ಸೆ; 2019); 80 ಮೀ ಹರ್ಡಲ್ಸ್: ಎಂ.ಎಂ. ಜನ್ಯ ಬೊಳ್ಳಮ್ಮ (ಕೊಡಗು). ಕಾಲ:12.98ಸೆ; ಲಾಂಗ್‌ಜಂಪ್: ಅವನಿ ಗಣೇಶ್ (ಉಡುಪಿ). ಅಂತರ: 4.87 ಮೀ; ಡಿಸ್ಕಸ್ ಥ್ರೋ: ತೇಜಸ್ವಿನಿ ಸಿ (ಮೈಸೂರು). ದೂರ: 31.28 ಮೀ; ಜಾವೆಲಿನ್ ಥ್ರೋ: ಅಹರ್ನಿಶಿ ಕೆ.ವಿ (ಬೆಂಗಳೂರು). ದೂರ: 22.37 ಮೀ; 14 ವರ್ಷದೊಳಗಿನವರು: 600 ಮೀ: ಗೌರಿ ಪೂಜಾರಿ (ಬೆಳಗಾವಿ). ಕಾಲ: 1ನಿ 42.11ಸೆ; ಲಾಂಗ್‌ಜಂಪ್: ಚೇತನಾ ಭಾಸ್ಕರ್ (ಬೆಂಗಳೂರು). ಅಂತರ: 4.78 ಮೀ; ಹೈಜಂಪ್: ಚಿನ್ಮಯಿ (ದ.ಕ.). ಎತ್ತರ: 1.30 ಮೀ; ಜಾವೆಲಿನ್ ಥ್ರೋ: ನೇಹಾ ಆರ್ (ಬೆಂಗಳೂರು). ದೂರ: 21.5 ಮೀ.



16 ವರ್ಷದೊಳಗಿನ ಬಾಲಕಿಯರ ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದ ಕೊಡಗಿನ ಎಂ.ಎಂ. ಜನ್ಯ ಬೊಳ್ಳಮ್ಮ ಮುನ್ನುಗ್ಗಿದ ಪರಿ –ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್

ವಿಶ್ವಕಪ್ ಟೂರ್ನಿಗೆ ಸಿದ್ಧತೆ: ಗುವಾಹಟಿಯಲ್ಲಿ ಪಂದ್ಯ

ಭಾರತ–ಇಂಗ್ಲೆಂಡ್ ಮುಖಾಮುಖಿ ಇಂದು

ಗುವಾಹಟಿ (ಪಿಟಿಐ): ಈ ಬಾರಿಯ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಆತಿಥ್ಯ ವಹಿಸುತ್ತಿರುವ ಭಾರತ ತಂಡವು ಶನಿವಾರ ನಡೆಯಲಿರುವ ಅಭ್ಯಾಸ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಸೆಣಸಲಿದೆ.

ಈ ಪಂದ್ಯದಲ್ಲಿ ಇಂಗ್ಲೆಂಡ್‌ನ ಬಲಿಷ್ಠ ಬ್ಯಾಟರ್‌ಗಳ ಎದುರು ಭಾರತದ ಬೌಲಿಂಗ್ ಪಡೆಯು ತಮ್ಮ ಸಾಮರ್ಥ್ಯವನ್ನು ಪರೀಕ್ಷಿಸಿಕೊಳ್ಳುವ ಅವಕಾಶ ದೊರೆಯಲಿದೆ.

ಅಭ್ಯಾಸ ಪಂದ್ಯಗಳಲ್ಲಿ ತಂಡದ ಹನ್ನೊಂದು ಆಟಗಾರರನ್ನು ಕಣಕ್ಕಿಳಿಸುವ ನಿಯಮ ಸಡಿಲಿಸಲಾಗಿರುತ್ತದೆ. ಇದರಿಂದಾಗಿ ಎಲ್ಲ ಆಟಗಾರರನ್ನೂ ಪರೀಕ್ಷಿಸುವ ಅವಕಾಶ ಉಭಯ ತಂಡಗಳಿಗೆ ಸಿಗಲಿದೆ.

ಇತ್ತೀಚಿನ ದಿನಗಳಲ್ಲಿ ಇಂಗ್ಲೆಂಡ್ ಮೂರು ಮಾದರಿಗಳಲ್ಲಿಯೂ ಆಕ್ರಮಣಶೀಲ ಬ್ಯಾಟಿಂಗ್ ಮೂಲಕ ಎದುರಾಳಿಗಳ ನಿದ್ದೆಗೆಡಿಸಿದೆ.

ಬೆನ್ ಸ್ಟೋಕ್ಸ್, ಹ್ಯಾರಿ ಬ್ರೂಕ್ಸ್, ಡೇವಿಡ್ ಮಲಾನ್, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಆಲ್‌ರೌಂಡರ್ ಮೋಯಿನ್ ಅಲಿ ಅವರು ಟೆಸ್ಟ್ ಪಂದ್ಯಗಳಲ್ಲಿಯೂ ತಮ್ಮ ಬಿರುಸಿನ ಆಟವಾಡಿ ಗಮನ ಸೆಳೆದಿದ್ದಾರೆ. ಇಲ್ಲಿಯೂ ಅದೇ ತಂತ್ರಗಾರಿಕೆಯನ್ನು ಮುಂದುವರಿಸುವ ಸಾಧ್ಯತೆಗಳಿವೆ. ಅದನ್ನು ತಡೆಯುವ ಸವಾಲು ಭಾರತದ ಬೌಲರ್‌ಗಳಿಗೆ ಇದೆ.

ಇಂಗ್ಲೆಂಡ್ ತಂಡದಲ್ಲಿ ಎಂಟನೇ ಕ್ರಮಾಂಕದವರೆಗೂ ಬ್ಯಾಟರ್‌ಗಳು ಇದ್ದಾರೆ. ರವೀಂದ್ರ ಜಡೇಜ, ಕುಲದೀಪ್ ಯಾದವ್ ಮತ್ತು ಆರ್. ಅಶ್ವಿನ್ ಅವರ ಸ್ಪಿನ್ ಬೌಲಿಂಗ್ ಎದುರಿಸುವ ಅಭ್ಯಾಸವೂ ಇಂಗ್ಲೆಂಡ್ ಬ್ಯಾಟರ್‌ಗಳಿಗೆ ಇಲ್ಲಿ ಆಗಲಿದೆ.

ಬಾಂಗ್ಲಾದೇಶಕ್ಕೆ ಗೆಲುವು: ಶುಕ್ರವಾರ ನಡೆದ ಅಭ್ಯಾಸ ಪಂದ್ಯದಲ್ಲಿ ಬಾಂಗ್ಲಾದೇಶ ತಂಡ 7 ವಿಕೆಟ್‌ಗಳಿಂದ ಶ್ರೀಲಂಕಾ ತಂಡದ ವಿರುದ್ಧ ಗೆದ್ದಿತು.



ಭಾರತ ತಂಡದ ಕೆ.ಎಲ್‌ ರಾಹುಲ್ ಮತ್ತು ಮೊಹಮ್ಮದ್ ಸಿರಾಜ್

ಸಂಕ್ಷಿಪ್ತ ಸುದ್ದಿ

ಸೈಕ್ಲಿಂಗ್: ಡೇವಿಡ್‌ಗೆ 11ನೇ ಸ್ಥಾನ

ಹಾಂಗ್‌ಝೌ (ಪಿಟಿಐ): ಭಾರತದ ಇಸೋ ಅಲ್ಬೆನ್ ಮತ್ತು ಡೇವಿಡ್ ಬೆಕ್ಯಾಮ್ ಇಲ್ಕಾಟೊಚೂಂಗೋ ಅವರು ಏಷ್ಯನ್ ಕ್ರೀಡಾಕೂಟದ ಸೈಕ್ಲಿಂಗ್‌ನಲ್ಲಿ ಪದಕ ಜಯಿಸುವಲ್ಲಿ ವಿಫಲರಾದರು.

ಪುರುಷರ ವಿಭಾಗದ 7–12 ಫೈನಲ್‌ನಲ್ಲಿ ಅಲ್ಬೆನ್ ಮತ್ತು ಡೇವಿಡ್ ಅವರು ಕ್ರಮವಾಗಿ 10 ಮತ್ತು 11ನೇ ಸ್ಥಾನ ಪಡೆದರು.

ಅಲ್ಬೆನ್ +0.651 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಡೇವಿಡ್ 1.096 ಸೆಕಂಡುಗಳಲ್ಲಿ ಪೂರೈಸಿದರು.

ಇ ಸ್ಪೋರ್ಟ್ಸ್: ಭಾರತಕ್ಕೆ ನಿರಾಶೆ

ಹಾಂಗ್‌ಝೌ (ಪಿಟಿಐ): ಭಾರತದ ಇ ಸ್ಪೋರ್ಟ್ಸ್ ತಂಡವು ಏಷ್ಯಾನ್ ಕ್ರೀಡಾಕೂಟದಲ್ಲಿ ಒಂದೂ ಪದಕ ಜಯಿಸದೇ ನಿರಾಶೆ ಅನುಭವಿಸಿತು.

ಡಿಒಟಿಎ 2 ವಿಭಾಗದ ರೋಚಕ ಸ್ಪರ್ಧೆಯಲ್ಲಿ ದರ್ಶನ್ ಬಾಟಾ (ಎ35) ನಾಯಕತ್ವದ ತಂಡ ಸ್ಪರ್ಧಿಸಿತ್ತು. ಅದರಲ್ಲಿ ಕ್ರಿಷ್ ಗುಪ್ತಾ, ಅಭಿಷೇಕ್ ಯಾದವ್, ಕೇತನ್ ಗೋಯಲ್ ಮತ್ತು ಶುಭಮನ್ ಗೋಲಿ 0–1ರಿಂದ ಕಿರ್ಗಿಸ್ತಾನದ ವಿರುದ್ಧ ಸೋಲನುಭವಿಸಿತು.

ಇ ಸ್ಪೋರ್ಟ್ಸ್‌ನಲ್ಲಿದ್ದ ಒಟ್ಟು ಏಳು ವಿಭಾಗಗಳ ಪೈಕಿ ಭಾರತ ತಂಡವು ನಾಲ್ಕರಲ್ಲಿ ಭಾಗವಹಿಸಿತ್ತು. ಡಿಒಟಿಎ–2, ಲೀಗ್ ಆಫ್ ಲೆಜೆಂಡ್ಸ್, ಇಎ ಸ್ಪೋರ್ಟ್ಸ್ ಇಎ ಸ್ಪೋರ್ಟ್ಸ್ ಎಫ್‌ಸಿ ಆನ್‌ಲೈನ್ ಮತ್ತು ಸ್ಟ್ರೀತ್ ಫೈಟರ್ ವಿ ಚಾಂಪಿಯನ್ ವಿಭಾಗಗಲ್ಲಿ ಭಾಗವಹಿಸಿತು.

ಬ್ಯಾಸ್ಕೆಟ್‌ಬಾಲ್: ಮಹಿಳಾ ತಂಡಕ್ಕೆ ಜಯ

ಹಾಂಗ್‌ಝೌ (ಪಿಟಿಐ): ಭಾರತದ ಮಹಿಳೆಯರ ತಂಡ ಏಷ್ಯನ್ ಕ್ರೀಡಾಕೂಟದ 5x5 ಬ್ಯಾಸ್ಕೆಟ್‌ಬಾಲ್ ಗುಂಪು ಹಂತದ ಪಂದ್ಯದಲ್ಲಿ 68-62 ರಿಂದ ಮಂಗೋಲಿಯಾ ವಿರುದ್ಧ ಗೆಲುವು ದಾಖಲಿಸಿತು.

ಮೊದಲ ಪಂದ್ಯದಲ್ಲಿ ಇಂಡೊನೇಷ್ಯಾ ವಿರುದ್ಧ ಗೆಲುವು ಸಾಧಿಸಿದ್ದ ಭಾರತ, ಭಾನುವಾರ ಚೀನಾ ತಂಡವನ್ನು ಎದುರಿಸಲಿದೆ.

ಪುರುಷರ 3x3 ಬ್ಯಾಸ್ಕೆಟ್‌ಬಾಲ್ ತಂಡವು ಗುಂಪು ಹಂತದ ಪಂದ್ಯದಲ್ಲಿ 15–18ರಿಂದ ಚೀನಾ ವಿರುದ್ಧ ಸೋತಿತು. 'ಸಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿರುವ ಭಾರತ ತಂಡವು ಶನಿವಾರ ಇರಾನ್ ವಿರುದ್ಧ ಸೆಣಸಲಿದೆ.

ಬ್ಯಾಡ್ಮಿಂಟನ್: ಭಾರತಕ್ಕೆ ಸೋಲು

ನವದೆಹಲಿ: ಅಮೆರಿಕದಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಲೇಷ್ಯಾ ತಂಡಕ್ಕೆ 0–3 ರಿಂದ ಮಣಿಯುವ ಮೂಲಕ ಭಾರತ ತಂಡದ ಸವಾಲು ಅಂತ್ಯಗೊಂಡಿದೆ.

ಬಳಿಕ ಐದನೇ ಮತ್ತು ಆರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ 0–3ರಿಂದ ಭಾರತ ತಂಡವು ಜಪಾನ್ ತಂಡಕ್ಕೆ ಮಣಿಯಿತು.

ಟೂರ್ನಿಯ ಏಳನೇ ಮತ್ತು ಎಂಟನೇ ಸ್ಥಾನದ ನಿರ್ಣಯಕ್ಕಾಗಿ ಭಾರತವು ಥಾಯ್ಲೆಂಡ್ ತಂಡವನ್ನು ಎದುರಿಸಲಿದೆ.